<tr><td>ಅ</td><td>ಬಂಗಾರಪೇಟೆ ಕ್ಷೇತ್ರದಲ್ಲಿರುವ ಒಟ್ಟು ಸಣ್ಣ ನೀರಾವರಿ ಕೆರೆಗಳೆಷ್ಟು; (ಕೆರೆಗಳವಾರು ಮತ್ತು ಗ್ರಾಮವಾರು ವಿವರ ನೀಡುವುದು)</td><td>ಬಂಗಾರಪೇಟೆ ಕ್ಷೇತ್ರದಲ್ಲಿ ಒಟ್ಟು 7 ಸಣ್ಣ ನೀರಾವರಿ ಕೆರೆಗಳಿದ್ದು, ವಿವರಗಳನ್ನು ಅನುಬಂಧ-1ರಲ್ಲಿ ಕೆರೆಗಳವಾರು ಮತ್ತು ಗ್ರಾಮವಾರು ನೀಡಲಾಗಿದೆ.</td></tr>
<tr><td>ಆ</td><td>ಕಳೆದ ಮೂರು ವರ್ಷಗಳಲ್ಲಿ ಬಂಗಾರಪೇಟೆ ಕ್ಷೇತ್ರಕ್ಕೆ ಕೆರೆ ಅಭಿವೃದ್ಧಿಪಡಿಸಲು ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ವರ್ಷವಾರು ವಿವರ ನೀಡುವುದು).</td><td>ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.</td></tr>
<tr><td>ಇ</td><td>ಕಳೆದ ಮೂರು ವರ್ಷಗಳಲ್ಲಿ ಎಸ್.ಸಿ.ಪಿ / ಟಿ.ಎಸ್.ಪಿ ಅಡಿಯಲ್ಲಿ ಚೆಕ್ ಡ್ಯಾಂ ಮತ್ತು ಇತರೆ ಕಾರ್ಯಕ್ರಮದಡಿಯಲ್ಲಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ;</td><td>ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ.</td></tr>
<tr><td>ಈ</td><td>ಬಂಗಾರಪೇಟೆ ತಾಲ್ಲೂಕಿನಲ್ಲಿ ಕೆರೆ ಕಾಲುವೆಗಳ ನಿರ್ವಹಣೆಯಲ್ಲದೆ ಅತಿಯಾದ ಮಳೆಯಿಂದಾಗಿ ಕಾಲುವೆಗಳು ಮುಚ್ಚಿಹೋಗಿ ಜಮೀನು / ಹೊಲಗಳ ಮೇಲೆ ನೀರು ಹಾದು ಹೋಗಿ ಎಷ್ಟು ಎಕರೆ ಪ್ರದೇಶದಲ್ಲಿ ಬೆಳೆ ನಷ್ಟವಾಗಿದೆ ಹಾಗೂ ನಷ್ಟ ಪರಿಹಾರ ನೀಡಲಾಗುವುದೇ? (ವಿವರ ನೀಡುವುದು)</td><td>ಬಂಗಾರಪೇಟೆ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದಾಗಿ 9828 ಹೆಕ್ಟೇರ್ ಕೃಷಿ ಬೆಳೆ ಮತ್ತು 823 ಹೆಕ್ಟೇರ್ ತೋಟಗಾರಿಕೆ ಬೆಳೆಗಳು ಹಾನಿಯಾಗಿರುತ್ತವೆ.

ಪ್ರಕೃತಿ ವಿಕೋಪದಿಂದಾಗಿ ಶೇ. 33 ಕ್ಕಿಂತ ಹೆಚ್ಚಿನ ಬೆಳೆ ಹಾನಿಗೆ ತುತ್ತಾದ ಕೃಷಿಕರಿಗೆ ಕೇಂದ್ರ ಸರ್ಕಾರದ SDRF/NDRF ಮಾರ್ಗ ಸೂಚಿಗಳ ಪ್ರಕಾರ ಗರಿಷ್ಟ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ಪ್ರತಿ ಹೆಕ್ಟೇರ್‌ಗೆ ಈ ಕೆಳಕಂಡ ದರದಲ್ಲಿ ಇನ್‌ಪುಟ್ ಸಬ್ಸಿಡಿಯನ್ನು ನೀಡಲಾಗುತ್ತಿದೆ.
<table><tr><td>ಬೆಳೆ ವಿಧ</td><td>ಇನ್‌ಪುಟ್ ಸಬ್ಸಿಡಿ (ಪ್ರತಿ ಹೆಕ್ಟೇರ್‌ಗೆ)</td></tr><tr><td>ಮಳೆಯಾಶ್ರಿತ ಬೆಳೆ</td><td>ರೂ.6800/-</td></tr><tr><td>ನೀರಾವರಿ ಬೆಳೆ</td><td>ರೂ.13500/-</td></tr><tr><td>ಬಹುವಾರ್ಷಿಕ ಬೆಳೆ</td><td>ರೂ.18000/-</td></tr></table>ಈ ವರೆಗೆ ಬೆಳೆಹಾನಿಯಾದ 1608 ರೈತರಿಗೆ ರೂ.70.53 ಲಕ್ಷ ಇನ್‌ಪುಟ್ ಸಬ್ಸಿಡಿಯನ್ನು ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗಿದೆ.</td></tr>
</table>

ಕಡತ ಸಂಖ್ಯೆ:MID 387LAQ 2021

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು
ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

ಶ್ರೀ ಎಸ್. ಎನ್. ನಾರಾಯಣಸ್ವಾಮಿ (ಬಂಗಾರಪೇಟೆ) ಮಾನ್ಯ ವಿಧಾನಸಭೆ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:264ಕ್ಕೆ ಅನುಬಂಧ-1

ಕ್ರ ಸಂ	ಜಿಲ್ಲೆ	ತಾಲ್ಲೂಕು	ವಿಧಾನ ಸಭಾ ಕ್ಷೇತ್ರ	ಗ್ರಾಮ	ಸಣ್ಣ ನೀರಾವರಿ ಕೆರೆಗಳ ಹೆಸರು	ಷರಾ
1	2	3	4	5	6	7
ಬಂಗಾರಪೇಟೆ						
1	ಕೋಲಾರ	ಬಂಗಾರಪೇಟೆ	ಬಂಗಾರಪೇಟೆ	ಬೂದಿಕೋಟೆ	ಬೂದಿಕೋಟೆ ಕೆರೆ	..
2	ಕೋಲಾರ	ಬಂಗಾರಪೇಟೆ	ಬಂಗಾರಪೇಟೆ	ತಮಟಮಾಕನಹಳ್ಳಿ	ತಮಟಮಾಕನಹಳ್ಳಿ ಕೆರೆ	..
3	ಕೋಲಾರ	ಬಂಗಾರಪೇಟೆ	ಬಂಗಾರಪೇಟೆ	ಕೊಪ್ಪ	ಕೊಪ್ಪ ದೊಡ್ಡ ಕೆರೆ	..
4	ಕೋಲಾರ	ಬಂಗಾರಪೇಟೆ	ಬಂಗಾರಪೇಟೆ	ಬೋಡಗುರ್ಕಿ	ಬೋಡಗುರ್ಕಿ ಹೊಸ ಕೆರೆ	..
5	ಕೋಲಾರ	ಬಂಗಾರಪೇಟೆ	ಬಂಗಾರಪೇಟೆ	ಮಾರ್ಕಂಡೇಯ	ಮಾರ್ಕಂಡೇಯ ಕೆರೆ	..
6	ಕೋಲಾರ	ಬಂಗಾರಪೇಟೆ	ಬಂಗಾರಪೇಟೆ	ಕಾಮಸಮುದ್ರ	ಕಾಮಸಮುದ್ರ ಕೆರೆ	..
7	ಕೋಲಾರ	ಬಂಗಾರಪೇಟೆ	ಬಂಗಾರಪೇಟೆ	ಮುಷ್ಟ್ರಹಳ್ಳಿ	ಮುಷ್ಟ್ರಹಳ್ಳಿ ಕೆರೆ	..

ಅನುಬಂಧ-2ರ ಘೋಷ್ವಾರೆ

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ. ಎಸ್.ಎನ್.ನಾರಾಯಣ ಸ್ವಾಮಿ ಕೆ.ಎಂ (ಬಂಗಾರಪೇಟೆ) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:264ಕ್ಕೆ ಉತ್ತರ.

ರೂ.ಲಕ್ಷಗಳಲ್ಲಿ

ಕ್ರ ಸಂ	ವರ್ಷ	ಲೆಕ್ಕ ಶೀರ್ಷಿಕೆ	ಕಾಮಗಾರಿಗಳ ಸಂಖ್ಯೆ	ಬಿಡುಗಡೆ ಮಾಡಿದ ಅನುದಾನ (ವೆಚ್ಚ)						ಒಟ್ಟು ಅನುದಾನ	ಒಟ್ಟು ವೆಚ್ಚ	ಷರಾ
				2018-19 ಅನುದಾನ	2018-19 ವೆಚ್ಚ	2019-20 ಅನುದಾನ	2019-20 ವೆಚ್ಚ	2020-21 ಅನುದಾನ	2020-21 ವೆಚ್ಚ			
1	2	3	4	6	7	8	9	10	11	12	13	14
1	2018-19	4702 ಪ್ರಧಾನ ಕಾಮಗಾರಿ	11	22.37	22.37	40.99	40.99	27.90	27.90	91.26	91.26	
2	2019-20	2019-20 ನೇ ಸಾಲಿನಲ್ಲಿ ಬಂಗಾರಪೇಟೆ ಕ್ಷೇತ್ರದಲ್ಲಿ ಯಾವುದೇ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ										
3	2020-21	2020-21 ನೇ ಸಾಲಿನಲ್ಲಿ ಬಂಗಾರಪೇಟೆ ಕ್ಷೇತ್ರದಲ್ಲಿ ಯಾವುದೇ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ										

ಅನುಬಂಧ-2

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ. ಎಸ್.ಎನ್.ನಾರಾಯಣ ಸ್ವಾಮಿ ಕೆ.ಎಂ (ಬಂಗಾರಪೇಟೆ) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:264ಕ್ಕೆ ಉತ್ತರ.

ರೂ.ಲಕ್ಷಗಳಲ್ಲಿ

(3)

ಕ್ರ ಸಂ	ಜಿಲ್ಲೆ	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಬಿಡುಗಡೆ ಮಾಡಿದ ಅನುದಾನ (ವೆಚ್ಚ)						ಒಟ್ಟು ಅನುದಾನ	ಒಟ್ಟು ವೆಚ್ಚ	ಷರಾ
						2018-19 ಅನುದಾನ	2018-19 ವೆಚ್ಚ	2019-20 ಅನುದಾನ	2019-20 ವೆಚ್ಚ	2020-21 ಅನುದಾನ	2020-21 ವೆಚ್ಚ			
1	2	3	4	5	6	7	8	9	10	11	12	13	14	15
2018-19 ನೇ ಸಾಲಿನ ಕಾಮಗಾರಿಗಳು														
1	ಕೋಲಾರ	ಬಂಗಾರಪೇಟೆ/ ಕೆ.ಜಿ.ಎಫ್	4702 ಪ್ರಧಾನ ಕಾಮಗಾರಿ	ಬಂಗಾರಪೇಟೆ ತಾಲ್ಲೂಕು ಅಂಗಳ ದೊಡ್ಡಕೆರೆಗ ಬರುವ ಕೊಳ್ಳದ ಕಾಲುವೆಯ ಆರಂಬದಿಂದ ಕೆರೆಯವರೆಗೆ ಅಭಿವೃದ್ಧಿಪಡಿಸುವ ಕಾಮಗಾರಿ	100.00	0.00	0.00	0.00	0.00	0.00	0.00	0.00	0.00	ಕಾಮಗಾರಿ ಪೂರ್ಣಗೊಂಡಿದ್ದು, ಅಂತಿಮ ಬಿಲ್ಲನ್ನು ಪಾವತಿಸಬೇಕಾಗಿದೆ.
				ಒಟ್ಟು	**100.00**	**0.00**	**0.00**	**0.00**	**0.00**	**0.00**	**0.00**	**0.00**	**0.00**	
2	ಕೋಲಾರ	ಬಂಗಾರಪೇಟೆ	4702 ಪ್ರಧಾನ ಕಾಮಗಾರಿ	ಪಿರೂಪಾಕ್ಷಪುರಂ ಕೆರೆ ಅಭಿವೃದ್ಧಿ ಕಾಮಗಾರಿ	110.00	11.53	11.53	0.00	0.00	0.00	0.00	11.53	11.53	ಕಾಮಗಾರಿ ಪೂರ್ಣಗೊಂಡಿದೆ.
3	ಕೋಲಾರ	ಬಂಗಾರಪೇಟೆ	4702 ಪ್ರಧಾನ ಕಾಮಗಾರಿ	ಕಸಬಾ ಹೋಬಳಿ ಕುಪ್ಪನಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ	40.00	10.84	10.84	0.00	0.00	21.61	21.61	32.45	32.45	ಕಾಮಗಾರಿ ಪೂರ್ಣಗೊಂಡಿದೆ.
				ಒಟ್ಟು	**150.00**	**22.37**	**22.37**	**0.00**	**0.00**	**21.61**	**21.61**	**43.98**	**43.98**	
4	ಕೋಲಾರ	ಬಂಗಾರಪೇಟೆ	4702 ಪ್ರಧಾನ ಕಾಮಗಾರಿ	ಕಸಬಾ ಹೋಬಳಿ, ತೊರಗನದೊಡ್ಡಿ ದೊಡ್ಡಕೆರೆ ಕಟ್ಟು ಮರು ನಿರ್ಮಾಣ ಕಾಮಗಾರಿ.	25.00	0.00	0.00	20.99	20.99	0.00	0.00	20.99	20.99	ಕಾಮಗಾರಿ ಪೂರ್ಣಗೊಂಡಿದೆ.
5	ಕೋಲಾರ	ಬಂಗಾರಪೇಟೆ	4702 ಪ್ರಧಾನ ಕಾಮಗಾರಿ	ಬೂದಿಕೋಟೆ ಹೋಬಳಿ, ಗುಟ್ಟೂರು ಕೆರೆ ಕಟ್ಟೆ ದುರಸ್ಥಿ ಮರು ನಿರ್ಮಾಣ ಕಾಮಗಾರಿ.	25.00	0.00	0.00	0.00	0.00	0.00	0.00	0.00	0.00	ಕಾಮಗಾರಿ ಪ್ರಗತಿಯಲ್ಲಿದೆ
				ಒಟ್ಟು	**50.00**	**0.00**	**0.00**	**20.99**	**20.99**	**0.00**	**0.00**	**20.99**	**20.99**	
6	ಕೋಲಾರ	ಬಂಗಾರಪೇಟೆ	ರಾಜ ಕಾಲುವೆ / ಪೋಷಕ ಕಾಲುವೆ	ಕೊಪ್ಪ ದೊಡ್ಡ ಕೆರೆಯ ಅಂಗಳ ಮತ್ತು ರಾಜ ಕಾಲುವೆಯ/ಪೋಷಕ ಕಾಲುವೆ ಒತ್ತುವರಿ ತೆರವು ಹಾಗೂ ದುರಸ್ತಿ ಕಾಮಗಾರಿ	40.00									
7	ಕೋಲಾರ	ಬಂಗಾರಪೇಟೆ	ರಾಜ ಕಾಲುವೆ / ಪೋಷಕ ಕಾಲುವೆ	ಪೋಡಗುರ್ಕಿ ಹೊಸ ಕೆರೆಯ ಅಂಗಳ ಮತ್ತು ರಾಜ ಕಾಲುವೆಯ/ಪೋಷಕ ಕಾಲುವೆ ಒತ್ತುವರಿ ತೆರವು ಹಾಗೂ ದುರಸ್ತಿ ಕಾಮಗಾರಿ	3.50									
8	ಕೋಲಾರ	ಬಂಗಾರಪೇಟೆ	ರಾಜ ಕಾಲುವೆ / ಪೋಷಕ ಕಾಲುವೆ	ತಿಮ್ಮಸಂದ್ರ ಬಾಲನಕೆರೆಯ ಅಂಗಳ ಮತ್ತು ರಾಜ ಕಾಲುವೆಯ/ಪೋಷಕ ಕಾಲುವೆ ಒತ್ತುವರಿ ತೆರವು ಹಾಗೂ ದುರಸ್ತಿ ಕಾಮಗಾರಿ	5.60	0.00	0.00	20.00	20.00	6.29	6.29	26.29	26.29	ಕಾಮಗಾರಿ ಪೂರ್ಣಗೊಂಡಿದ್ದು.
9	ಕೋಲಾರ	ಬಂಗಾರಪೇಟೆ	ರಾಜ ಕಾಲುವೆ / ಪೋಷಕ ಕಾಲುವೆ	ಸುಂದರ ಪಾಳ್ಯ ದೊಡ್ಡಕೆರೆಯ ಅಂಗಳ ಮತ್ತು ರಾಜ ಕಾಲುವೆಯ/ಪೋಷಕ ಕಾಲುವೆ ಒತ್ತುವರಿ ತೆರವು ಹಾಗೂ ದುರಸ್ತಿ ಕಾಮಗಾರಿ	3.50									
10	ಕೋಲಾರ	ಬಂಗಾರಪೇಟೆ	ರಾಜ ಕಾಲುವೆ / ಪೋಷಕ ಕಾಲುವೆ	ಸಂಘಸ ಹಳ್ಳಿ ದೊಡಕೆರೆಯ ಅಂಗಳ ಮತ್ತು ರಾಜ ಕಾಲುವೆಯ/ಪೋಷಕ ಕಾಲುವೆ ಒತ್ತುವರಿ ತೆರವು ಹಾಗೂ ದುರಸ್ತಿ ಕಾಮಗಾರಿ	3.50									
11	ಕೋಲಾರ	ಬಂಗಾರಪೇಟೆ	ರಾಜ ಕಾಲುವೆ / ಪೋಷಕ ಕಾಲುವೆ	ರಾಮಸಾಗರಕೆರೆಯ ಅಂಗಳ ಮತ್ತು ರಾಜ ಕಾಲುವೆಯ/ಪೋಷಕ ಕಾಲುವೆ ಒತ್ತುವರಿ ತೆರವು ಹಾಗೂ ದುರಸ್ತಿ ಕಾಮಗಾರಿ	15.00									
				ಒಟ್ಟು	**71.10**	**0.00**	**0.00**	**20.00**	**20.00**	**6.29**	**6.29**	**26.29**	**26.29**	
2019-20 ನೇ ಸಾಲಿನ ಕಾಮಗಾರಿಗಳು														
1	ಕೋಲಾರ	ಬಂಗಾರಪೇಟೆ	4702 ಪ್ರಧಾನ ಕಾಮಗಾರಿ- ಕೆರೆಗಳ ಆಧುನೀಕರಣ	ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲ್ಲೂಕು, ಕಸಬಾ ಹೋಬಳಿ, ಪಾಕರಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ.	70.00	-	-	-	-	-	-	-	-	ಕಾಮಗಾರಿ ಪ್ರಾರಂಭಿಸಬೇಕಾಗಿದೆ.
2		ಬಂಗಾರಪೇಟೆ		ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲ್ಲೂಕು, ಬೂದಿಕೋಟೆ ಹೋಬಳಿ, ರಾಮಚಂದ್ರರಾಯನ ಕೆರೆ ಅಭಿವೃದ್ಧಿ ಕಾಮಗಾರಿ.	50.00	-	-	-	-	-	-	-	-	
				ಒಟ್ಟು	**120.00**	**0.00**	**0.00**	**0.00**	**0.00**	**0.00**	**0.00**	**0.00**	**0.00**	
2020-21 ನೇ ಸಾಲಿನಲ್ಲಿ ಬಂಗಾರಪೇಟೆ ಕ್ಷೇತ್ರದಲ್ಲಿ ಯಾವುದೇ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ														

ಅನುಬಂಧ-3ರ ಘೋಷ್ವಾರೆ

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ. ಎಸ್.ಎನ್.ನಾರಾಯಣ ಸ್ವಾಮಿ ಕೆ.ಎಂ (ಬಂಗಾರಪೇಟೆ) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:264ಕ್ಕೆ ಉತ್ತರ.

ರೂ.ಲಕ್ಷಗಳಲ್ಲಿ

ಕ್ರ ಸಂ	ವರ್ಷ	ಲೆಕ್ಕ ಶೀರ್ಷಿಕೆ	ಕಾಮಗಾರಿಗಳ ಸಂಖ್ಯೆ	ಬಿಡುಗಡೆ ಮಾಡಿದ ಅನುದಾನ (ವೆಚ್ಚ)						ಒಟ್ಟು ಅನುದಾನ	ಒಟ್ಟು ವೆಚ್ಚ	ಷರಾ
				2018-19 ಅನುದಾನ	2018-19 ವೆಚ್ಚ	2019-20 ಅನುದಾನ	2019-20 ವೆಚ್ಚ	2020-21 ಅನುದಾನ	2020-21 ವೆಚ್ಚ			
1	2	3	4	6	7	8	9	10	11	12	13	14
1	2018-19	ನಬಾರ್ಡ್-22	1	21.89	21.89	0.00	0.00	0.00	0.00	21.89	21.89	
		ಎಸ್.ಸಿ.ಪಿ	23	78.68	78.68	134.73	134.73	0.00	0.00	213.41	213.41	
		ಟಿ.ಎಸ್.ಪಿ	10	11.12	11.12	85.07	85.07	1.71	1.71	97.90	97.90	
		4702 ಪ್ರಧಾನ ಕಾಮಗಾರಿ	15	90.25	90.25	81.44	81.44	27.90	27.90	199.59	199.59	
ಒಟ್ಟು			**49**	**201.94**	**201.94**	**301.24**	**301.24**	**29.61**	**29.61**	**532.79**	**532.79**	
2	2019-20	4702 ಪ್ರಧಾನ ಕಾಮಗಾರಿ	4	0.00	0.00	0.00	0.00	0.00	0.00	0.00	0.00	
		ಎಸ್.ಸಿ.ಪಿ	5	0.00	0.00	0.00	0.00	45.60	45.60	45.60	45.60	
		ಟಿ.ಎಸ್.ಪಿ	1	0.00	0.00	0.00	0.00	30.22	30.22	30.22	30.22	
ಒಟ್ಟು			**10**	**0.00**	**0.00**	**0.00**	**0.00**	**75.82**	**75.82**	**75.82**	**75.82**	
3	2020-21	2020-21 ನೇ ಸಾಲಿನಲ್ಲಿ ಬಂಗಾರಪೇಟೆ ಕ್ಷೇತ್ರದಲ್ಲಿ ಯಾವುದೇ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ										
ಜುಮ್ಲಾ ಒಟ್ಟು			**59**	**201.94**	**201.94**	**301.24**	**301.24**	**105.43**	**105.43**	**608.61**	**608.61**	

(4)

ಅನುಬಂಧ-3

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ. ಎಸ್.ಎನ್.ನಾರಾಯಣ ಸ್ವಾಮಿ ಕೆ.ಎಂ (ಬಂಗಾರಪೇಟೆ) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:264ಕ್ಕೆ ಉತ್ತರ.

ರೂ.ಲಕ್ಷಗಳಲ್ಲಿ

ಕ್ರ ಸಂ	ಜಿಲ್ಲೆ	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ಗುತ್ತಿಗೆ ಮೊತ್ತ	ಬಿಡುಗಡೆ ಮಾಡಿದ ಅನುದಾನ (ವೆಚ್ಚ) 2018-19 ಅನುದಾನ	2018-19 ವೆಚ್ಚ	2019-20 ಅನುದಾನ	2019-20 ವೆಚ್ಚ	2020-21 ಅನುದಾನ	2020-21 ವೆಚ್ಚ	ಒಟ್ಟು ಅನುದಾನ	ಒಟ್ಟು ವೆಚ್ಚ	ಷರಾ
1	2	3	4	5	7	8	9	10	11	12	13	14	15	16
				2018-19 ನೇ ಸಾಲಿನ										
1	Kolar	Bangarpet / Bangarpet	ನಬಾರ್ಡ್-22	Construction of "Check Dam"Across Markandeya halla near gullahalli village, Budikote Hobali	58.20	21.89	21.89	0.00	0.00	0.00	0.00	21.89	21.89	ಕಾಮಗಾರಿ ಪೂರ್ಣಗೊಂಡಿದೆ
				ಒಟ್ಟು	**58.20**	**21.89**	**21.89**	**0.00**	**0.00**	**0.00**	**0.00**	**21.89**	**21.89**	
1	ಕೋಲಾರ	ಬಂಗಾರಪೇಟೆ ಬಂಗಾರಪೇಟೆ	ಎಸ್.ಸಿ.ಪಿ	ಮಾರ್ಕಂಡೇಯ ಹಳ್ಳಕ್ಕೆ ಅಡ್ಡಲಾಗಿ ಶ್ರೀರಂಗಬಂಡಹಳ್ಳಿ ಹತ್ತಿರ ಚೆಕ್ ಡ್ಯಾಂ ನಿರ್ಮಾಣ	23.40	0.00	0.00	0.00	0.00	0.00	0.00	0.00	0.00	ಕಾಮಗಾರಿ ಪೂರ್ಣಗೊಂಡಿದೆ
2	ಕೋಲಾರ	ಕೋಲಾರ/ ಬಂಗಾರಪೇಟೆ	ಎಸ್.ಸಿ.ಪಿ	ಶ್ರೀ ಕೃಷ್ಣಪ್ಪ ಬಿನ್ ವೆಂಕಟರಾಮಪ್ಪ, ಜಾಮನಹಳ್ಳಿ ಗ್ರಾಮ, ಇವರ ಸ.ನಂ.28 ರ 3.00 ಎಕರೆ ಜಮೀನಿಗೆ ಕೊಳವೆ ಬಾವಿ ಸೌಲಭ್ಯ ಒದಗಿಸಿಕೊಡುವುದು.	20.21	0.00	0.00	0.00	0.00	0.00	0.00	0.00	0.00	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ.
3	ಕೋಲಾರ	ಬಂಗಾರಪೇಟೆ/ ಬಂಗಾರಪೇಟೆ	ಎಸ್.ಸಿ.ಪಿ	ಶ್ರೀ ಬಿ.ಮುನಿಯಪ್ಪ ಬಿನ್ ಬೋಡೆಪ್ಪ, ಒತ್ತಲಹಳ್ಳಿ ಗ್ರಾಮ ಇವರ ಸ.ನಂ.60 ರ 3.00 ಎಕರೆ ಜಮೀನಿಗೆ ಕೊಳವೆ ಬಾವಿ ಸೌಲಭ್ಯ ಒದಗಿಸಿಕೊಡುವುದು.		0.00	0.00	0.00	0.00	0.00	0.00	0.00	0.00	
4	ಕೋಲಾರ	ಬಂಗಾರಪೇಟೆ/ ಬಂಗಾರಪೇಟೆ	ಎಸ್.ಸಿ.ಪಿ	ಶ್ರೀ ವೆಂಕಟೇಶಪ್ಪ ಬಿನ್ ತಿರುಮಲಪ್ಪ, ಶಿವಲಿಂಗ ಗ್ರಾಮ, ಇವರ ಸ.ನಂ.24 ರ 3.00 ಎಕರೆ ಜಮೀನಿಗೆ ಕೊಳವೆ ಬಾವಿ ಸೌಲಭ್ಯ ಒದಗಿಸಿಕೊಡುವುದು.		0.00	0.00	0.00	0.00	0.00	0.00	0.00	0.00	
5	ಕೋಲಾರ	ಬಂಗಾರಪೇಟೆ/ ಬಂಗಾರಪೇಟೆ	ಎಸ್.ಸಿ.ಪಿ	ಶ್ರೀ ಮುನಿವೆಂಕಟಪ್ಪ ಬಿನ್ ಮುನಿವೆಂಕಟಪ್ಪ, ದೊಡ್ಡಕಳವಂಚಿ ಗ್ರಾಮ, ಇವರ ಸ.ನಂ.20 ರ 3.00 ಎಕರೆ ಜಮೀನಿಗೆ ಕೊಳವೆ ಬಾವಿ ಸೌಲಭ್ಯ ಒದಗಿಸಿಕೊಡುವುದು.		0.00	0.00	0.00	0.00	0.00	0.00	0.00	0.00	
				ಒಟ್ಟು	**43.61**	**0.00**	**0.00**	**0.00**	**0.00**	**0.00**	**0.00**	**0.00**	**0.00**	
6	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಎಸ್.ಸಿ.ಪಿ	ಬೂದಿಕೋಟೆ ಹೋಬಳಿ, ಪೂಜಾರ್ಲಹಳ್ಳಿ ಗ್ರಾಮದ ಹತ್ತಿರ ಮಾರ್ಕಂಡೇಯ ಹಳ್ಳಕ್ಕೆ ಅಡ್ಡಲಾಗಿ "ಚೆಕ್ ಡ್ಯಾಂ" ನಿರ್ಮಾಣ ಕಾಮಗಾರಿ	57.96	22.92	22.92	0.00	0.00	0.00	0.00	22.92	22.92	ಕಾಮಗಾರಿ ಪೂರ್ಣಗೊಂಡಿದೆ
7	ಕೋಲಾರ	ಬಂಗಾರಪೇಟೆ / ಕೋಲಾರ	ಎಸ್.ಸಿ.ಪಿ	ಕೋಲಾರ ವಿಧಾನ ಸಭಾ ಕ್ಷೇತ್ರ, ಕಾಮಸಮುದ್ರ ಹೋಬಳಿ, ಅಪ್ಪೇನಹಳ್ಳಿ ಗ್ರಾಮದ ಹತ್ತಿರ "ಚೆಕ್ ಡ್ಯಾಂ" ನಿರ್ಮಾಣ ಕಾಮಗಾರಿ	8.17	0.70	0.70	0.00	0.00	0.00	0.00	0.70	0.70	ಕಾಮಗಾರಿ ಪೂರ್ಣಗೊಂಡಿದೆ
8	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಎಸ್.ಸಿ.ಪಿ	ಕೋಲಾರ ವಿಧಾನ ಸಭಾ ಕ್ಷೇತ್ರ, ಹುತ್ತೂರು ಹೋಬಳಿ, ದೊಡ್ಡಹಳ್ಳಿ ಗ್ರಾಮದ ಹತ್ತಿರ "ಚೆಕ್ ಡ್ಯಾಂ" ನಿರ್ಮಾಣ ಕಾಮಗಾರಿ	9.18	1.00	1.00	0.00	0.00	0.00	0.00	1.00	1.00	ಕಾಮಗಾರಿ ಪೂರ್ಣಗೊಂಡಿದೆ
9	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಎಸ್.ಸಿ.ಪಿ	ಬೂದಿಕೋಟೆ ಹೋಬಳಿ, ಚಂಬೇನಹಳ್ಳಿ ಹತ್ತಿರ ಮಾರ್ಕಂಡೇಯ ಹಳ್ಳಕ್ಕೆ ಅಡ್ಡಲಾಗಿ "ಚೆಕ್ ಡ್ಯಾಂ" ನಿರ್ಮಾಣ ಕಾಮಗಾರಿ.	71.55	15.17	15.17	0.00	0.00	0.00	0.00	15.17	15.17	ಕಾಮಗಾರಿ ಪೂರ್ಣಗೊಂಡಿದೆ
10	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಎಸ್.ಸಿ.ಪಿ	ಬಂಗಾರಪೇಟೆ ತಾ॥ ಬೂದಿಕೋಟೆ ಹೋಬಳಿ, ಉಪಾಸಪುರ ಹತ್ತಿರ ಶಿಥಿಲಗೊಂಡಿರುವ ಬಿಡ್ಡಪ್ಪಿನ ಪುನರ್ ನಿರ್ಮಾಣ ಕಾಮಗಾರಿ.		26.77	26.77	0.00	0.00	0.00	0.00	26.77	26.77	ಕಾಮಗಾರಿ ಪೂರ್ಣಗೊಂಡಿದೆ
11	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಎಸ್.ಸಿ.ಪಿ	ಬಂಗಾರಪೇಟೆ ತಾ॥ ಆರ್.ಪೇಟೆ ಹೋಬಳಿ, ಬೆಂಗನೂರು ಗ್ರಾಮದ ಹತ್ತಿರ "ಚೆಕ್ ಡ್ಯಾಂ" ನಿರ್ಮಾಣ ಕಾಮಗಾರಿ	21.77	0.00	0.00	0.00	0.00	0.00	0.00	0.00	0.00	ಕಾಮಗಾರಿ ಪೂರ್ಣಗೊಂಡಿದೆ
12	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಎಸ್.ಸಿ.ಪಿ	ಬಂಗಾರಪೇಟೆ ತಾ॥ ಕೀಲುಕೊಪ್ಪ ಹತ್ತಿರ "ಚೆಕ್ ಡ್ಯಾಂ" ನಿರ್ಮಾಣ ಕಾಮಗಾರಿ		0.00	0.00	0.00	0.00	0.00	0.00	0.00	0.00	ಕಾಮಗಾರಿ ಪೂರ್ಣಗೊಂಡಿದೆ
13	ಕೋಲಾರ	ಬಂಗಾರಪೇಟೆ / ಕೋಲಾರ	ಎಸ್.ಸಿ.ಪಿ	ಕೋಲಾರ ವಿಧಾನ ಸಭಾ ಕ್ಷೇತ್ರ, ಕುರುಬರಹಳ್ಳಿ ಹತ್ತಿರ "ಚೆಕ್ ಡ್ಯಾಂ" ನಿರ್ಮಾಣ ಕಾಮಗಾರಿ		2.00	2.00	0.00	0.00	0.00	0.00	2.00	2.00	ಕಾಮಗಾರಿ ಪೂರ್ಣಗೊಂಡಿದೆ
14	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಎಸ್.ಸಿ.ಪಿ	ಬಂಗಾರಪೇಟೆ ತಾ॥ ಕಳ್ಳೀಪುರ ಗ್ರಾಮದ ಹತ್ತಿರ "ಚೆಕ್ ಡ್ಯಾಂ" ನಿರ್ಮಾಣ ಕಾಮಗಾರಿ	10.40	1.00	1.00	0.00	0.00	0.00	0.00	1.00	1.00	ಕಾಮಗಾರಿ ಪೂರ್ಣಗೊಂಡಿದೆ
15	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಎಸ್.ಸಿ.ಪಿ	ಬಂಗಾರಪೇಟೆ ತಾ॥ ಚಿಕ್ಕಹೊಸಹಳ್ಳಿ ಗ್ರಾಮದ ಹತ್ತಿರ "ಚೆಕ್ ಡ್ಯಾಂ" ನಿರ್ಮಾಣ ಕಾಮಗಾರಿ	7.62	7.62	7.62	0.00	0.00	0.00	0.00	7.62	7.62	ಕಾಮಗಾರಿ ಪೂರ್ಣಗೊಂಡಿದೆ
16	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಎಸ್.ಸಿ.ಪಿ	ಬಂಗಾರಪೇಟೆ ತಾ॥ ಕಾಮಸಮುದ್ರ ಹೋಬಳಿ, ದೊಡ್ಡಯಳಚಮಂದೆ ಗ್ರಾಮದ ಹತ್ತಿರ "ಚೆಕ್ ಡ್ಯಾಂ" ನಿರ್ಮಾಣ ಕಾಮಗಾರಿ	7.46	1.00	1.00	0.00	0.00	0.00	0.00	1.00	1.00	ಕಾಮಗಾರಿ ಪೂರ್ಣಗೊಂಡಿದೆ

ಕ್ರ ಸಂ	ಜಿಲ್ಲೆ	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ಗುತ್ತಿಗೆ ಮೊತ್ತ	ಬಿಡುಗಡೆ ಮಾಡಿದ ಅನುದಾನ (ವೆಚ್ಚ)						ಒಟ್ಟು ಅನುದಾನ	ಒಟ್ಟು ವೆಚ್ಚ	ಷರಾ
						2018-19 ಅನುದಾನ	2018-19 ವೆಚ್ಚ	2019-20 ಅನುದಾನ	2019-20 ವೆಚ್ಚ	2020-21 ಅನುದಾನ	2020-21 ವೆಚ್ಚ			
1	2	3	4	5	7	8	9	10	11	12	13	14	15	16
17	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಎಸ್.ಸಿ.ಪಿ	ಬಂಗಾರಪೇಟೆ ತಾ॥ ಆರ್.ಪೇಟೆ ಹೋಬಳಿ. ಚಲಗಾಸಹಳ್ಳಿ ಗ್ರಾಮದ ಹತ್ತಿರ "ಚೆಕ್ ಡ್ಯಾಂ" ನಿರ್ಮಾಣ ಕಾಮಗಾರಿ	6.86	0.50	0.50	0.00	0.00	0.00	0.00	0.50	0.50	ಕಾಮಗಾರಿ ಪೂರ್ಣಗೊಂಡಿದೆ
				ಒಟ್ಟು	200.97	78.68	78.68	0.00	0.00	0.00	0.00	78.68	78.68	
18	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಎಸ್.ಸಿ.ಪಿ	ಆರ್.ಪೇಟೆ ಹೋಬಳಿ. ಮಾವಹಳ್ಳಿ ಗ್ರಾಮದ ಸರ್ವೆ ನಂ:192ರಲ್ಲಿ ಇಂಗುಕೆರೆ ನಿರ್ಮಾಣ ಕಾಮಗಾರಿ	54.06	0.00	0.00	60.54	60.54	0.00	0.00	60.54	60.54	ಕಾಮಗಾರಿ ಪೂರ್ಣಗೊಂಡಿದೆ
19	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಎಸ್.ಸಿ.ಪಿ	ಕಸಬಾ ಹೋಬಳಿ. ಪಾಕರಹಳ್ಳಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ	19.60	0.00	0.00	21.95	21.95	0.00	0.00	21.95	21.95	ಕಾಮಗಾರಿ ಪೂರ್ಣಗೊಂಡಿದೆ
20	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಎಸ್.ಸಿ.ಪಿ	ಹುತ್ತೂರು ಹೋಬಳಿ. ಜಂಗಮಬಸಪುರ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ	7.87	0.00	0.00	8.81	8.81	0.00	0.00	8.81	8.81	ಕಾಮಗಾರಿ ಪೂರ್ಣಗೊಂಡಿದೆ
21	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಎಸ್.ಸಿ.ಪಿ	ಕಸಬಾ ಹೋಬಳಿ. ಹಂಚಾಳ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ	19.22	0.00	0.00	21.49	21.49	0.00	0.00	21.49	21.49	ಕಾಮಗಾರಿ ಪೂರ್ಣಗೊಂಡಿದೆ
22	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಎಸ್.ಸಿ.ಪಿ	ಗಜಗ-ಕೊಮ್ಮೇನಹಳ್ಳಿ ಗ್ರಾಮಗಳ ಮಧ್ಯೆ ಇರುವ ಇಂಗು ಕೆರೆ ನಿರ್ಮಾಣ ಕಾಮಗಾರಿ.	13.70	0.00	0.00	14.88	14.88	0.00	0.00	14.88	14.88	ಕಾಮಗಾರಿ ಪೂರ್ಣಗೊಂಡಿದೆ
23	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಎಸ್.ಸಿ.ಪಿ	ರಾ॥ಪೇಟೆ ಹೋಬಳಿ ಮಾವಹಳ್ಳಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ	6.30	0.00	0.00	7.06	7.06	0.00	0.00	7.06	7.06	ಕಾಮಗಾರಿ ಪೂರ್ಣಗೊಂಡಿದೆ
				ಒಟ್ಟು	120.75	0.00	0.00	134.73	134.73	0.00	0.00	134.73	134.73	
				ಎಸ್.ಸಿ.ಪಿ ಒಟ್ಟು	365.33	78.68	78.68	134.73	134.73	0.00	0.00	213.41	213.41	
1	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಟಿ.ಎಸ್.ಪಿ	ಬಂಗಾರಪೇಟೆ ತಾ॥ ಬಲಮಂದೆ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣದ ಕಾಮಗಾರಿ	8.77	0.70	0.70	0.00	0.00	0.00	0.00	0.70	0.70	ಕಾಮಗಾರಿ ಪೂರ್ಣಗೊಂಡಿದೆ
2	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಟಿ.ಎಸ್.ಪಿ	ಬಂಗಾರಪೇಟೆ ತಾ॥ ಕುಪ್ಪನಹಳ್ಳಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣದ ಕಾಮಗಾರಿ	9.70	1.00	1.00	0.00	0.00	0.00	0.00	1.00	1.00	ಕಾಮಗಾರಿ ಪೂರ್ಣಗೊಂಡಿದೆ
3	ಕೋಲಾರ	ಬಂಗಾರಪೇಟೆ / ಬಂಗಾರಪೇಟೆ	ಟಿ.ಎಸ್.ಪಿ	ಬಂಗಾರಪೇಟೆ ತಾ॥ ಸೂಲಿಕುಂಟೆ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣದ ಕಾಮಗಾರಿ	7.90	7.42	7.42	0.00	0.00	0.00	0.00	7.42	7.42	ಕಾಮಗಾರಿ ಪೂರ್ಣಗೊಂಡಿದೆ
4	ಕೋಲಾರ	ಬಂಗಾರಪೇಟೆ / ಕೋಲಾರ	ಟಿ.ಎಸ್.ಪಿ	ಕಾಮಸಮುದ್ರ ಹೋಬಳಿ. ತನಿಮಡಗು ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣದ ಕಾಮಗಾರಿ	8.88	1.00	1.00	0.00	0.00	0.00	0.00	1.00	1.00	ಕಾಮಗಾರಿ ಪೂರ್ಣಗೊಂಡಿದೆ
5	ಕೋಲಾರ	ಬಂಗಾರಪೇಟೆ / ಕೋಲಾರ	ಟಿ.ಎಸ್.ಪಿ	ಆರ್.ಪೇಟೆ ಹೋಬಳಿ. ಕಾಮಾಂಡಹಳ್ಳಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣದ ಕಾಮಗಾರಿ	9.98	1.00	1.00	0.00	0.00	0.00	0.00	1.00	1.00	ಕಾಮಗಾರಿ ಪೂರ್ಣಗೊಂಡಿದೆ
				ಒಟ್ಟು	45.23	11.12	11.12	0.00	0.00	0.00	0.00	11.12	11.12	
6	ಕೋಲಾರ	ಬಂಗಾರಪೇಟೆ/ ಬಂಗಾರಪೇಟೆ	ಟಿ.ಎಸ್.ಪಿ	ಕಾಮಸಮುದ್ರ ಹೋಬಳಿ ಅರಿಮಾನಹಳ್ಳಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ	16.82	0.00	0.00	17.00	17.00	1.71	1.71	18.71	18.71	ಕಾಮಗಾರಿ ಪೂರ್ಣಗೊಂಡಿದೆ
7	ಕೋಲಾರ	ಬಂಗಾರಪೇಟೆ/ ಬಂಗಾರಪೇಟೆ	ಟಿ.ಎಸ್.ಪಿ	ಡಿ.ಕೆ.ಹಳ್ಳಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ	38.71	0.00	0.00	43.14	43.14	0.00	0.00	43.14	43.14	ಕಾಮಗಾರಿ ಪೂರ್ಣಗೊಂಡಿದೆ
8	ಕೋಲಾರ	ಬಂಗಾರಪೇಟೆ/ ಬಂಗಾರಪೇಟೆ	ಟಿ.ಎಸ್.ಪಿ	ಮಾವಹಳ್ಳಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ	12.77	0.00	0.00	14.28	14.28	0.00	0.00	14.28	14.28	ಕಾಮಗಾರಿ ಪೂರ್ಣಗೊಂಡಿದೆ
9	ಕೋಲಾರ	ಬಂಗಾರಪೇಟೆ/ ಬಂಗಾರಪೇಟೆ	ಟಿ.ಎಸ್.ಪಿ	ಕಾಮಂಡಹಳ್ಳಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ	9.53	0.00	0.00	10.65	10.65	0.00	0.00	10.65	10.65	ಕಾಮಗಾರಿ ಪೂರ್ಣಗೊಂಡಿದೆ
10	ಕೋಲಾರ	ಬಂಗಾರಪೇಟೆ/ ಬಂಗಾರಪೇಟೆ	ಟಿ.ಎಸ್.ಪಿ	ಯಲುವಹಳ್ಳಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ಸಹಿತ ಕೆಳಗಾಲುವೆ ನಿರ್ಮಾಣ ಕಾಮಗಾರಿ	63.19	0.00	0.00	0.00	0.00	0.00	0.00	0.00	0.00	ಕಾಮಗಾರಿ ಪೂರ್ಣಗೊಂಡಿದೆ
				ಒಟ್ಟು	141.02	0.00	0.00	85.07	85.07	1.71	1.71	86.78	86.78	
				ಟಿ.ಎಸ್.ಪಿ ಒಟ್ಟು	186.25	11.12	11.12	85.07	85.07	1.71	1.71	97.90	97.90	
1	ಕೋಲಾರ	ಬಂಗಾರಪೇಟೆ/ ಕೆ.ಜಿ.ಎಫ್	4702 ಪ್ರಧಾನ ಕಾಮಗಾರಿ	ಬಂಗಾರಪೇಟೆ ತಾಲ್ಲೂಕು ಅಂಗಳ ದೊಡ್ಡಕೆರೆಗೆ ಬರುವ ಕೊಳ್ಳದ ಕಾಲುವೆಯ ಆರಂಬದಿಂದ ಕೆರೆಯವರೆಗೆ ಅಭಿವೃದ್ಧಿಪಡಿಸುವ ಕಾಮಗಾರಿ	82.27	0.00	0.00	0.00	0.00	0.00	0.00	0.00	0.00	ಕಾಮಗಾರಿ ಪೂರ್ಣಗೊಂಡಿದ್ದು, ಅಂತಿಮ ಬಿಲ್ಲನ್ನು ಪಾವತಿಸಬೇಕಾಗಿದೆ.
2	ಕೋಲಾರ	ಬಂಗಾರಪೇಟೆ ಬಂಗಾರಪೇಟೆ	4702 ಪ್ರಧಾನ ಕಾಮಗಾರಿ	ಕೋಲಾರ ಜಿಲ್ಲೆ. ಬಂಗಾರಪೇಟೆ ತಾಲ್ಲೂಕು. ಬಂಗಾರಪೇಟೆ ದೊಡ್ಡಕೆರೆಯ ಅಭಿವೃದ್ಧಿ ಕಾಮಗಾರಿ.	46.23	0.00	0.00	0.00	0.00	0.00	0.00	0.00	0.00	ಕಾಮಗಾರಿ ಪೂರ್ಣಗೊಂಡಿದೆ.
				ಒಟ್ಟು	128.50	0.00	0.00	0.00	0.00	0.00	0.00	0.00	0.00	

ಕ್ರ	ಜಿಲ್ಲೆ	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ಗುತ್ತಿಗೆ ಮೊತ್ತ	ಬಿಡುಗಡೆ ಮಾಡಿದ ಅನುದಾನ (ವೆಚ್ಚ)						ಒಟ್ಟು ಅನುದಾನ	ಒಟ್ಟು ವೆಚ್ಚ	ಷರಾ
						2018-19 ಅನುದಾನ	2018-19 ವೆಚ್ಚ	2019-20 ಅನುದಾನ	2019-20 ವೆಚ್ಚ	2020-21 ಅನುದಾನ	2020-21 ವೆಚ್ಚ			
1	2	3	4	5	7	8	9	10	11	12	13	14	15	16
3	ಕೋಲಾರ	ಬಂಗಾರಪೇಟೆ	4702 ಪ್ರಧಾನ ಕಾಮಗಾರಿ	ಕಸಬಾ ಹೋಬಳಿ ಕುಪ್ಪನಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ	32.79	10.84	10.84	0.00	0.00	21.61	21.61	32.45	32.45	ಕಾಮಗಾರಿ ಪೂರ್ಣಗೊಂಡಿದೆ. ಕಾಲಾವಧಿ ವಿಸ್ತರಣೆ ಪ್ರಸ್ತಾವನೆಯನ್ನು ಸ.ಕಾ.ಇಂ. ಸ.ನೀ.&ಅಂ.ಅ.ಉಪ ವಿಭಾಗ ಕೋಲಾರ ರವರಿಂದ ಸ್ವೀಕೃತವಾಗಬೇಕಾಗಿರುತ್ತದೆ.
				ಒಟ್ಟು	32.79	10.84	10.84	0.00	0.00	21.61	21.61	32.45	32.45	
4	ಕೋಲಾರ	ಬಂಗಾರಪೇಟೆ	4702 ಪ್ರಧಾನ ಕಾಮಗಾರಿ	ಕಸಬಾ ಹೋಬಳಿ, ತೊರಗನದೊಡ್ಡಿ ದೊಡ್ಡಕೆರೆ ಕಟ್ಟೆ ಮರು ನಿರ್ಮಾಣ ಕಾಮಗಾರಿ.	17.59	0.00	0.00	20.99	20.99	0.00	0.00	20.99	20.99	ಕಾಮಗಾರಿ ಪೂರ್ಣಗೊಂಡಿದೆ.
5	ಕೋಲಾರ	ಬಂಗಾರಪೇಟೆ	4702 ಪ್ರಧಾನ ಕಾಮಗಾರಿ	ಬೂದಿಕೋಟೆ ಹೋಬಳಿ, ಗುಟ್ಟೂರು ಕೆರೆ ಕಟ್ಟೆ ದುರಸ್ಥಿ ಮರು ನಿರ್ಮಾಣ ಕಾಮಗಾರಿ.	18.75	0.00	0.00	0.00	0.00	0.00	0.00	0.00	0.00	ಕಾಮಗಾರಿ ಪ್ರಗತಿಯಲ್ಲಿದೆ
				ಒಟ್ಟು	36.34	0.00	0.00	20.99	20.99	0.00	0.00	20.99	20.99	
6	ಕೋಲಾರ	ಬಂಗಾರಪೇಟೆ	4702 ಪ್ರಧಾನ ಕಾಮಗಾರಿ	ವೆಂಗಸಂದ್ರ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ	75.87	15.00	15.00	0.00	0.00	0.00	0.00	15.00	15.00	ಕಾಮಗಾರಿ ಪೂರ್ಣಗೊಂಡಿದೆ.
7	ಕೋಲಾರ	ಬಂಗಾರಪೇಟೆ	4702 ಪ್ರಧಾನ ಕಾಮಗಾರಿ	ತಾತೇಪಲ್ಲಿ ಗ್ರಾಮದ ಶ್ರೀ ಸುಬ್ರಮಣಿನಾಯ್ಡುರವರ ಜಮೀನಿನ ಪಾಲಾರ್ ನದಿಗೆ ಅಡ್ಡಲಾಗಿ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ		18.77	18.77	0.00	0.00	0.00	0.00	18.77	18.77	ಕಾಮಗಾರಿ ಪೂರ್ಣಗೊಂಡಿದೆ.
8	ಕೋಲಾರ	ಬಂಗಾರಪೇಟೆ	4702 ಪ್ರಧಾನ ಕಾಮಗಾರಿ	ಕದರೇನಹಳ್ಳಿ ಹತ್ತಿರ ಚೆಕ್ ಡ್ಯಾಂ" ನಿರ್ಮಾಣ ಕಾಮಗಾರಿ	101.19	45.64	45.64	0.00	0.00	0.00	0.00	45.64	45.64	ಕಾಮಗಾರಿ ಪೂರ್ಣಗೊಂಡಿದೆ.
				ಒಟ್ಟು	177.06	79.41	79.41	0.00	0.00	0.00	0.00	79.41	79.41	
9	ಕೋಲಾರ	ಬಂಗಾರಪೇಟೆ	4702 ಪ್ರಧಾನ ಕಾಮಗಾರಿ	ಕಾಮಸಮುದ್ರಂ ಹೋಬಳಿ ಮುಷ್ಟ್ರಹಳ್ಳಿ ಗ್ರಾಮದ ಹತ್ತಿರ ಎಲ್.ಎಲ್.ಸಿ / ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	36.32	0.00	0.00	40.45	40.45	0.00	0.00	40.45	40.45	ಕಾಮಗಾರಿ ಪೂರ್ಣಗೊಂಡಿದೆ.
				ಒಟ್ಟು	36.32	0.00	0.00	40.45	40.45	0.00	0.00	40.45	40.45	
1	ಕೋಲಾರ	ಬಂಗಾರಪೇಟೆ	ರಾಜ ಕಾಲುವೆ / ಪೋಷಕ ಕಾಲುವೆ	ಕೊಪ್ಪ ದೊಡ್ಡ ಕೆರೆಯ ಅಂಗಳ ಮತ್ತು ರಾಜ ಕಾಲುವೆಯ/ಪೋಷಕ ಕಾಲುವೆ ಒತ್ತುವರಿ ತೆರವು ಹಾಗೂ ದುರಸ್ತಿ ಕಾಮಗಾರಿ	50.87	0.00	0.00	20.00	20.00	6.29	6.29	26.29	26.29	ಕಾಮಗಾರಿ ಪೂರ್ಣಗೊಂಡಿದ್ದು ಅಂತಿಮ ಬಿಲ್ಲು ಸ್ವೀಕೃತವಾಗಿರುತ್ತದೆ ಕಾಲಾವಧಿ ವಿಸ್ತರಣೆ ಪ್ರಸ್ತಾವನೆಯನ್ನು ಸ.ಕಾ.ಇಂ. ಸ.ನೀ.&ಅಂ.ಅ.ಉಪ ವಿಭಾಗ ಕೋಲಾರ ರವರಿಂದ ಸ್ವೀಕೃತವಾಗಬೇಕಾಗಿರುತ್ತದೆ.
2	ಕೋಲಾರ	ಬಂಗಾರಪೇಟೆ	ರಾಜ ಕಾಲುವೆ / ಪೋಷಕ ಕಾಲುವೆ	ಬೋಡಗುರ್ಕಿ ಹೊಸ ಕೆರೆಯ ಅಂಗಳ ಮತ್ತು ರಾಜ ಕಾಲುವೆಯ/ಪೋಷಕ ಕಾಲುವೆ ಒತ್ತುವರಿ ತೆರವು ಹಾಗೂ ದುರಸ್ತಿ ಕಾಮಗಾರಿ										
3	ಕೋಲಾರ	ಬಂಗಾರಪೇಟೆ	ರಾಜ ಕಾಲುವೆ / ಪೋಷಕ ಕಾಲುವೆ	ತಿಮ್ಮಸಂದ್ರ ಬಾಲಸಕೆರೆಯ ಅಂಗಳ ಮತ್ತು ರಾಜ ಕಾಲುವೆಯ/ಪೋಷಕ ಕಾಲುವೆ ಒತ್ತುವರಿ ತೆರವು ಹಾಗೂ ದುರಸ್ತಿ ಕಾಮಗಾರಿ										
4	ಕೋಲಾರ	ಬಂಗಾರಪೇಟೆ	ರಾಜ ಕಾಲುವೆ / ಪೋಷಕ ಕಾಲುವೆ	ಸುಂದರ ಪಾಳ್ಯ ದೊಡ್ಡಕೆರೆಯ ಅಂಗಳ ಮತ್ತು ರಾಜ ಕಾಲುವೆಯ/ಪೋಷಕ ಕಾಲುವೆ ಒತ್ತುವರಿ ತೆರವು ಹಾಗೂ ದುರಸ್ತಿ ಕಾಮಗಾರಿ										
5	ಕೋಲಾರ	ಬಂಗಾರಪೇಟೆ	ರಾಜ ಕಾಲುವೆ / ಪೋಷಕ ಕಾಲುವೆ	ಸಂಘಸ ಹಳ್ಳಿ ದೊಡಕೆರೆಯ ಅಂಗಳ ಮತ್ತು ರಾಜ ಕಾಲುವೆಯ/ಪೋಷಕ ಕಾಲುವೆ ಒತ್ತುವರಿ ತೆರವು ಹಾಗೂ ದುರಸ್ತಿ ಕಾಮಗಾರಿ										
6	ಕೋಲಾರ	ಬಂಗಾರಪೇಟೆ	ರಾಜ ಕಾಲುವೆ / ಪೋಷಕ ಕಾಲುವೆ	ರಾಮಸಾಗರಕೆರೆಯ ಅಂಗಳ ಮತ್ತು ರಾಜ ಕಾಲುವೆಯ/ಪೋಷಕ ಕಾಲುವೆ ಒತ್ತುವರಿ ತೆರವು ಹಾಗೂ ದುರಸ್ತಿ ಕಾಮಗಾರಿ										
				ಒಟ್ಟು	50.87	0.00	0.00	20.00	20.00	6.29	6.29	26.29	26.29	
				4702 ಪ್ರಧಾನ ಕಾಮಗಾರಿ ಒಟ್ಟು	461.88	90.25	90.25	81.44	81.44	27.90	27.90	199.59	199.59	
					2019-20 ನೇ ಸಾಲಿನ									
1	ಕೋಲಾರ	ಬಂಗಾರಪೇಟೆ	4702 ಪ್ರಧಾನ ಕಾಮಗಾರಿ- ಕೆರೆಗಳ ಆಧುನೀಕರಣ	ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲ್ಲೂಕು, ಕಸಬಾ ಹೋಬಳಿ, ಪಾಕರಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ.	-	-	-	-	-	-	-	-	-	ಈ ಕಛೇರಿಯ ಪತ್ರ ಸಂಖ್ಯೆ:-1236/2020-21/ದಿನಾಂಕ:22/07/2020 ರಂದು ಅ.ಇಂ ರವರಿಗೆ ಆರ್ಥಿಕ ಇಲಾಖೆಯಿಂದ ಅನುಮತಿ ಕೋರಿ ಸಲ್ಲಿಸಿದೆ
2		ಬಂಗಾರಪೇಟೆ		ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲ್ಲೂಕು, ಬೂದಿಕೋಟೆ ಹೋಬಳಿ, ರಾಮಚಂದ್ರರಾಯನ ಕೆರೆ ಅಭಿವೃದ್ಧಿ ಕಾಮಗಾರಿ.	-	-	-	-	-	-	-	-	-	
				ಒಟ್ಟು	0.00	0.00	0.00	0.00	0.00	0.00	0.00	0.00	0.00	

(8)

ಕ್ರ ಸಂ	ಜಿಲ್ಲೆ	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ಗುತ್ತಿಗೆ ಮೊತ್ತ	ಬಿಡುಗಡೆ ಮಾಡಿದ ಅನುದಾನ (ವೆಚ್ಚ) 2018-19 ಅನುದಾನ	2018-19 ವೆಚ್ಚ	2019-20 ಅನುದಾನ	2019-20 ವೆಚ್ಚ	2020-21 ಅನುದಾನ	2020-21 ವೆಚ್ಚ	ಒಟ್ಟು ಅನುದಾನ	ಒಟ್ಟು ವೆಚ್ಚ	ಷರಾ
1	2	3	4	5	7	8	9	10	11	12	13	14	15	16
3	ಕೋಲಾರ	ಬಂಗಾರಪೇಟೆ	4702 ಪ್ರಧಾನ ಕಾಮಗಾರಿ-ಅಣೆಕಟ್ಟು ಪಿಕಪ್ ಮತ್ತು ಬಂಧಾರ (ಸರಣಿ ಪಿಕಪ್ ನಿರ್ಮಾಣ) 4702-00-101-5-01-139	ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲ್ಲೂಕು, ಬೊಂಡೇನಹಳ್ಳಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	-	-	-	-	-	-	-	-	-	ಅನಿರ್ಭಂಧಿತ ಅತಿ ಅಂತರ್ಜಲ ಜಿಲ್ಲೆಗಳೆಂದು ವರ್ಗೀಕರಿಸಿರುವ ಪ್ರದೇಶಗಳಲ್ಲಿ ಸರಣಿಯಲ್ಲಿ ಚೆಕ್ ಡ್ಯಾಂ ನಿರ್ಮಾಣ ಕೈಗೊಳ್ಳಲು ರೂ.500.00 ಲಕ್ಷಗಳಿಗೆ ಅನುಮೋದನೆ ದೊರೆತಿದ್ದು, ಅದರಲ್ಲಿ ಬಂಗಾರಪೇಟೆ ತಾಲ್ಲೂಕಿನ ಕಾಮಗಾರಿಗಳಿಗೆ ಕ್ರಿಯಾ ಯೋಜನೆ ಅನುಮೋದನೆ ಕೋರಿ ಅ.ಇಂ ರವರಿಗೆ ಸಲ್ಲಿಸಿದೆ.
4		ಬಂಗಾರಪೇಟೆ		ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲ್ಲೂಕು, ಕಾಮಸಮುದ್ರ ಹೋಬಳಿ ಕುರ್ಲಹಳ್ಳಿ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	-	-	-	-	-	-	-	-	-	
				ಒಟ್ಟು	0.00	0.00	0.00	0.00	0.00	0.00	0.00	0.00	0.00	
1	ಕೋಲಾರ	ಬಂಗಾರಪೇಟೆ/ ಬಂಗಾರಪೇಟೆ	ವಿಶೇಷ ಘಟಕ ಯೋಜನೆ	ಬೂದಿಕೋಟೆ ಹೋಬಳಿ, ಬೂದಿಕೋಟೆ ಹತ್ತಿರ ಹಳ್ಳಕ್ಕೆ ಅಡ್ಡಲಾಗಿ ಎಲ್.ಎಲ್.ಸಿ / ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	45.22	0.00	0.00	0.00	0.00	0.00	0.00	0.00	0.00	ಕಾಮಗಾರಿ ಪೂರ್ಣಗೊಂಡಿದೆ
2	ಕೋಲಾರ	ಬಂಗಾರಪೇಟೆ/ ಬಂಗಾರಪೇಟೆ	ವಿಶೇಷ ಘಟಕ ಯೋಜನೆ	ಕಸಬಾ ಹೋಬಳಿ, ಮಾದಮಂಗಲ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	26.20	0.00	0.00	0.00	0.00	0.00	0.00	0.00	0.00	ಕಾಮಗಾರಿ ಪೂರ್ಣಗೊಂಡಿದೆ
3	ಕೋಲಾರ	ಬಂಗಾರಪೇಟೆ/ ಬಂಗಾರಪೇಟೆ	ವಿಶೇಷ ಘಟಕ ಯೋಜನೆ	ಕಸಬಾ ಹೋಬಳಿ, ಅಲಗಾನಹಳ್ಳಿ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	20.26	0.00	0.00	0.00	0.00	0.00	0.00	0.00	0.00	ಕಾಮಗಾರಿ ಪೂರ್ಣಗೊಂಡಿದೆ
4	ಕೋಲಾರ	ಬಂಗಾರಪೇಟೆ/ ಬಂಗಾರಪೇಟೆ	ವಿಶೇಷ ಘಟಕ ಯೋಜನೆ	ಕಸಬಾ ಹೋಬಳಿ, ಜಲಗಾನಹಳ್ಳಿ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	20.46	0.00	0.00	0.00	0.00	22.92	22.92	22.92	22.92	ಕಾಮಗಾರಿ ಪೂರ್ಣಗೊಂಡಿದೆ
5	ಕೋಲಾರ	ಬಂಗಾರಪೇಟೆ/ ಬಂಗಾರಪೇಟೆ	ವಿಶೇಷ ಘಟಕ ಯೋಜನೆ	ಕಸಬಾ ಹೋಬಳಿ, ಮಾವಹಳ್ಳಿ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	20.53	0.00	0.00	0.00	0.00	22.68	22.68	22.68	22.68	ಕಾಮಗಾರಿ ಪೂರ್ಣಗೊಂಡಿದೆ
				ಒಟ್ಟು	132.67	0.00	0.00	0.00	0.00	45.60	45.60	45.60	45.60	
1	ಕೋಲಾರ	ಬಂಗಾರಪೇಟೆ/ ಬಂಗಾರಪೇಟೆ	ಗಿರಿಜನ ಉಪ-ಯೋಜನೆ	ಬಂಗಾರಪೇಟೆ ತಾಲ್ಲೂಕು, ಕಸಬಾ ಹೋಬಳಿ, ಮಂಚಹಳ್ಳಿ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ.	27.06	0.00	0.00	0.00	0.00	30.22	30.22	30.22	30.22	ಕಾಮಗಾರಿ ಪೂರ್ಣಗೊಂಡಿದೆ
				ಒಟ್ಟು	27.06	0.00	0.00	0.00	0.00	30.22	30.22	30.22	30.22	
				2019-20 ಒಟ್ಟು	159.73	0.00	0.00	0.00	0.00	75.82	75.82	75.82	75.82	

2020-21 ನೇ ಸಾಲಿನಲ್ಲಿ ಬಂಗಾರಪೇಟೆ ಕ್ಷೇತ್ರದಲ್ಲಿ ಯಾವುದೇ ಎಸ್.ಸಿ.ಪಿ / ಟಿ.ಎಸ್.ಪಿ ಅಡಿಯಲ್ಲಿ ಚೆಕ್ ಡ್ಯಾಂ ಮತ್ತು ಇತರೆ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	265
2.	ಮಾನ್ಯ ಸದಸ್ಯರ ಹೆಸರು	ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ)
3.	ಉತ್ತರಿಸಬೇಕಾದ ದಿನಾಂಕ	14/12/2021
4.	ಉತ್ತರಿಸುವವರು	ಮಾನ್ಯ ಕಾರ್ಮಿಕ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿನ ನೋಂದಾಯಿತ ಕಾರ್ಮಿಕರ ಸಂಖ್ಯೆ ಎಷ್ಟು ಹಾಗೂ ಅವರುಗಳಿಗೆ ಒದಗಿಸಲಾಗುತ್ತಿರುವ ಸೌಲಭ್ಯಗಳೇನು?	ಇಲಾಖೆಯಲ್ಲಿ ಯಾವುದೇ ಕಾರ್ಮಿಕರನ್ನು ನೊಂದಣಿ ಮಾಡುವ ಯೋಜನೆಗಳು ಜಾರಿಯಲ್ಲಿರುವುದಿಲ್ಲ. ಇಲಾಖೆಯ ಅಧೀನದಲ್ಲಿ ಬರುವ ವಿವಿಧ ಮಂಳಿಗಳಿಂದ ಸೌಲಭ್ಯ ಪಡೆಯಲು ಕಾರ್ಮಿಕರ ನೊಂದಣಿ ಮಾಡಲಾಗುತ್ತಿದ್ದು, ಮಂಡಳಿವಾರು ವಿವರ ಈ ಕೆಳಗಿನಂತಿದೆ. **ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ** ಈ ಮಂಡಳಿಯಲ್ಲಿ ಇದುವರೆಗೂ 26,73,298 ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಫಲಾನುಭವಿಗಳಾಗಿ ನೋಂದಣಿಯಾಗಿರುತ್ತಾರೆ. ಮಂಡಳಿ ವತಿಯಿಂದ ನೋಂದಾಯಿತ ಫಲಾನುಭವಿಗಳಿಗೆ ಮತ್ತು ಅವರ ಅವಲಂಬಿತರಿಗೆ ವಿತರಿಸಲಾಗುತ್ತಿರುವ ಸೌಲಭ್ಯದ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ. **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ** ಈ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ನೋಂದಾಯಿತರಾದ ಅಸಂಘಟಿತ ಕಾರ್ಮಿಕರ ಸಂಖ್ಯೆ ಈ ಕೆಳಕಂಡಂತಿದೆ:

ಕ್ರ.ಸಂ.	ಯೋಜನೆ ಹೆಸರು	ಕಾರ್ಮಿಕರ ಸಂಖ್ಯೆ
1	ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ	240745
2	ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ	8,40,561
3	ಕೋವಿಡ್-19ರ ಮೊದಲನೇ ಅಲೆಯ ವಿಶೇಷ ಪ್ಯಾಕೇಜ್ ಕೋರಿ ಅರ್ಜಿ ಸಲ್ಲಿಸಿದ ಕಾರ್ಮಿಕರು	1,41,502
4	ಕೋವಿಡ್-19ರ ಎರಡನೇ ಅಲೆಯ ವಿಶೇಷ ಪ್ಯಾಕೇಜ್ ಕೋರಿ ಅರ್ಜಿ ಸಲ್ಲಿಸಿದ ಕಾರ್ಮಿಕರು	14,52,943

(1) <u>ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-</u> ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಯೋಜನೆಯಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

(ಅ) ಅಪಘಾತ ಪರಿಹಾರ ಸೌಲಭ್ಯ : ಯೋಜನೆಯಡಿ, ಅಪಘಾತದಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ರೂ. 5 ಲಕ್ಷದ ಪರಿಹಾರ. ಸಂಪೂರ್ಣ ಶಾಶ್ವತ ದುರ್ಬಲತೆ ಪ್ರಕರಣಗಳಲ್ಲಿ ರೂ.2 ಲಕ್ಷದ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದವರಿಗೆ ರೂ.1 ಲಕ್ಷದವರೆಗೆ ಚಿಕಿತ್ಸಾ ವೆಚ್ಚದ ಮರುಪಾವತಿ ನೀಡಲಾಗುತ್ತಿದೆ.

(ಆ) ಶೈಕ್ಷಣಿಕ ಧನ ಸಹಾಯ : ಅಪಘಾತದಿಂದ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ರೂ.10,000/-ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ.

(ಇ) ಶ್ರಮ ಸಮ್ಮಾನ ಪ್ರಶಸ್ತಿ :
ಪ್ರತಿ ವರ್ಷ ಮಾರ್ಚ್ 01 ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಮಿಕ ಸಮ್ಮಾನ ದಿನಾಚರಣೆ ಆಚರಿಸಿ, ಉತ್ತಮ ಹಾಗೂ ಸುರಕ್ಷತಾ ಚಾಲನೆ ಮಾಡಿದ ತ್ರಿಚಕ್ರ ಹಾಗೂ ನಾಲ್ಕು ಚಕ್ರದ ವಾಹನ ಚಾಲಕರಿಗೆ ಪ್ರತಿ ಜಿಲ್ಲೆಗೆ ಪ್ರತ್ಯೇಕವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

(ಈ) ಅಪಘಾತ ಜೀವ ರಕ್ಷಕ:- ಅಪಘಾತ ಜೀವರಕ್ಷಕ ಕಾರ್ಯಕ್ರಮದಡಿ ಅಪಘಾತಕ್ಕೊಳಗಾದ ಗಾಯಾಳುಗಳನ್ನು ರಕ್ಷಿಸುವ ಜೀವರಕ್ಷಕರನ್ನಾಗಿಸುವ ಉದ್ದೇಶದಿಂದ ಚಾಲಕರಿಗೆ ಪ್ರಥಮ ಚಿಕಿತ್ಸಾ ತರಬೇತಿಯನ್ನು ನೀಡಲಾಗುತ್ತಿದೆ. ಹಾಗೂ ತರಬೇತಿ ಪಡೆದ ಚಾಲಕರಿಗೆ ಪ್ರಥಮ ಚಿಕಿತ್ಸಾ ಕಿಟ್ ಹಾಗೂ ಪ್ರಮಾಣ ಪತ್ರ ನೀಡಲಾಗುವುದು.

(2) <u>ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-</u>
ಈ ಯೋಜನೆಯಡಿ 11 ಅಸಂಘಟಿತ ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"ರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದೆ.

- ಪ್ರತಿ ವರ್ಷ ಮಾರ್ಚ್ 01 ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಮಿಕ ಸಮ್ಮಾನ ದಿನಾಚರಣೆ ಆಚರಿಸಿ, ಸದರಿ 11 ಅಸಂಘಟಿತ ವಲಯಗಳಲ್ಲಿ ವಿಶೇಷ ಸಾಧನೆ ಮಾಡಿದ ಕಾರ್ಮಿಕರನ್ನು ಗುರುತಿಸಿ, ಪ್ರತಿಯೊಂದು ಜಿಲ್ಲೆಗೆ ಪ್ರತಿಯೊಂದು ವಲಯಕ್ಕೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ

ಈ ಮಂಡಳಿಯಲ್ಲಿ ಸಂಘಟಿತ ಕಾರ್ಮಿಕರಿಗಾಗಿ ಕಲ್ಯಾಣ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಮಂಡಳಿಗೆ ರೂ.20:40 ರ ಅನುಪಾತದಲ್ಲಿ ವಂತಿಕೆ ಪಾವತಿಸುವ ಕಾರ್ಮಿಕರಿಗೆ ಕಲ್ಯಾಣ ಯೋಜನೆಗಳಡಿ ಸೌಲಭ್ಯಗಳನ್ನು ನೀಡಲಾಗುವುದು. ಮಂಡಳಿ ವತಿಯಿಂದ ಸಂಘಟಿತ ಕಾರ್ಮಿಕರನ್ನು ನೊಂದಾಯಿಸುವ ವ್ಯವಸ್ಥೆ ಇರುವುದಿಲ್ಲ.

<u>**ಮಂಡಳಿಯಿಂದ ಅನುಷ್ಠಾನಗೊಳಿಸಿರುವ ಕಲ್ಯಾಣ ಯೋಜನೆಗಳು**</u> -

1) ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ
2) ಕಾರ್ಮಿಕರಿಗೆ ವೈದ್ಯಕೀಯ ನೆರವು
3) ಕಾರ್ಮಿಕರಿಗೆ ಅಪಘಾತ ಧನ ಸಹಾಯ
4) ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ

5) ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ

6) ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ

7) ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೋಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ

ಆ) ಕೋಲಾರ ಜಿಲ್ಲೆಯಲ್ಲಿ ಎಷ್ಟು ಕಾರ್ಮಿಕರು ತಮ್ಮ ಮಕ್ಕಳನ್ನು ನೋಂದಾಯಿಸಿದ್ದಾರೆ (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಈ ಮಂಡಳಿಯಲ್ಲಿ ಮಕ್ಕಳನ್ನು ನೋಂದಾಯಿಸಲು ಯಾವುದೇ ಯೋಜನೆ ಇರುವುದಿಲ್ಲ. ಆದರೆ, ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಧನಸಹಾಯವನ್ನು ನೀಡಲಾಗುತ್ತಿದೆ.

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ

ಈ ಮಂಡಳಿಯಲ್ಲಿ ಕಾರ್ಮಿಕರ ಮಕ್ಕಳನ್ನು ನೋಂದಾಯಿಸುವ ಯಾವುದೇ ಪ್ರಕ್ರಿಯೆ ಇರುವುದಿಲ್ಲ

ಇ) ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಇಲಾಖೆಯ ವತಿಯಿಂದ ಯಾವ ಯಾವ ವಿಭಾಗದವರಿಗೆ ಎಷ್ಟು ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ ಎಲ್ಲಾ ವಿಭಾಗದ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಬಿಡುಗಡೆ ಮಾಡಲಾದ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ವಿದ್ಯಾರ್ಥಿ ವೇತನ ಮೊತ್ತವೆಷ್ಟು?

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಈ ಮಂಡಳಿಯಿಂದ ನೀಡಲಾಗುವ ವಿವಿಧ ಶೈಕ್ಷಣಿಕ ಧನಸಹಾಯಗಳ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ತರಗತಿ (ಉತ್ತೀರ್ಣಕ್ಕೆ)	ವಾರ್ಷಿಕ ಸಹಾಯಧನ	
		ಗಂಡು	ಹೆಣ್ಣು
1.	ನರ್ಸರಿ	3,000	4,000
2.	1 ರಿಂದ 4ನೇ ತರಗತಿ	3,000	4,000
3.	5 ರಿಂದ 8ನೇ ತರಗತಿ	5,000	6,000
4.	9 ಹಾಗೂ 10ನೇ ತರಗತಿ	10,000	11,000
5.	ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ	10,000	14,000
6.	ಐಟಿಐ	12,000	15,000
7.	ಪದವಿ ಪ್ರತಿ ವರ್ಷಕ್ಕೆ	15,000	20,000
8.	ಸ್ನಾತಕೋತ್ತರ ಪದವಿ ಸೇರ್ಪಡೆಗೆ	20,000	20,000
	ಪ್ರತಿ ವರ್ಷಕ್ಕೆ	20,000	25,000
9.	ಇಂಜಿನಿಯರಿಂಗ್‌ಕೋರ್ಸ್ ಬಿಇ/ ಬಿ.ಟೆಕ್ ಸೇರ್ಪಡೆಗೆ	25,000	25,000
	ಪ್ರತಿ ವರ್ಷಕ್ಕೆ	25,000	30,000
10.	ವೈದ್ಯಕೀಯಕೋರ್ಸ್‌ಗೆ ಸೇರ್ಪಡೆಗೆ	30,000	30,000
	ಪ್ರತಿ ವರ್ಷಕ್ಕೆ	40,000	50,000
11.	ಡಿಪ್ಲೋಮಾ	15,000	20,000
12.	ಎಂ.ಟೆಕ್ / ಎಂ.ಇ	30,000	35,000
13.	ಎಂ.ಡಿ (ವೈದ್ಯಕೀಯ)	45,000	55,000
14.	ಪಿಹೆಚ್‌ಡಿ (ಪ್ರತಿ ವರ್ಷಕ್ಕೆ) ಗರಿಷ್ಠ 03 ವರ್ಷ	25,000	30,000

ಮಂಡಳಿಯಲ್ಲಿ ಈವರೆಗೆ 6,73,704 ಫಲಾನುಭವಿಗಳಿಗೆ ಅವರ ಮಕ್ಕಳ ಶೈಕ್ಷಣಿಕ ಧನ ಸಹಾಯಕ್ಕಾಗಿ ಒಟ್ಟು ರೂ.419.45 ಕೋಟಿಯಷ್ಟು ಮೊತ್ತವನ್ನು ಪಾವತಿಸಲಾಗಿರುತ್ತದೆ.

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ

ಈ ಮಂಡಳಿಯು ಜಾರಿಗೊಳಿಸುತ್ತಿರುವ ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯಡಿ 2018-19ನೇ ಸಾಲಿನಿಂದ ಅಪಘಾತದ ಕಾರಣ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ 10,000/- ರೂ.ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದ್ದು, ಈವರೆಗೆ 618 ಫಲಾನುಭವಿ ವಿದ್ಯಾರ್ಥಿಗಳಿಗೆ ಒಟ್ಟು ರೂ.61,80,000/-ಗಳ ಸೌಲಭ್ಯ ನೀಡಲಾಗಿದೆ.

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ

ಈ ಮಂಡಳಿಗೆ ರೂ.20:40 ರ ಅನುಪಾತದಲ್ಲಿ ವಂತಿಕೆ ಪಾವತಿಸುವ ಕಾರ್ಮಿಕರಿಗೆ ಮತ್ತು ಅವರ ಅವಲಂಬಿತರಿಗೆ ಕಲ್ಯಾಣ ಯೋಜನೆಗಳಡಿ ಸೌಲಭ್ಯಗಳನ್ನು ನೀಡಲಾಗುವುದು.

ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ: ಪ್ರೌಢ ಶಾಲೆ, (8 ರಿಂದ 10ನೇ ತರಗತಿವರೆಗೆ) ರೂ.3,000/- ಪಿಯುಸಿ/ ಡಿಪ್ಲೊಮಾ/ ಐಟಿಐ/ ಟಿಸಿಹೆಚ್ ಶಿಕ್ಷಣಕ್ಕಾಗಿ ರೂ.4,000/- ಪದವಿ ಶಿಕ್ಷಣಕ್ಕಾಗಿ ರೂ. 5,000/ ಸ್ನಾತಕೋತ್ತರ ಶಿಕ್ಷಣಕ್ಕಾಗಿ ರೂ.6,000/- ಇಂಜನಿಯರಿಂಗ್/ ವೈದ್ಯಕೀಯ ಶಿಕ್ಷಣಕ್ಕಾಗಿ ರೂ. 10,000/- ಗಳ ಪ್ರೋತ್ಸಾಹ ಧನ ನೀಡಲಾಗುವುದು.

2020-21ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯಲ್ಲಿ 319 ವಿದ್ಯಾರ್ಥಿಗಳು ಶೈಕ್ಷಣಿಕ ಧನ ಸಹಾಯದ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ.

ತರಗತಿ ವಿವರ	ವಿದ್ಯಾರ್ಥಿಗಳ ಸಂಖ್ಯೆ	ಮೊತ್ತ
ಪ್ರೌಢ ಶಾಲೆ	92	2,76,000
ಪಿಯುಸಿ/ ಡಿಪ್ಲೊಮಾ/ ಐಟಿಐ	130	5,20,000
ಪದವಿ ಶಿಕ್ಷಣ	88	4,40,000
ಇಂಜಿನೀಯರಿಂಗ್/ ವೈದ್ಯಕೀಯ	9	90,000
ಒಟ್ಟು	319	13,26,000

ಕಾಇ 512 ಎಲ್‌ಇಟಿ 2021

(ಅರಬೈಲ್ ಶಿವರಾಮ ಹೆಬ್ಬಾರ್)
ಕಾರ್ಮಿಕ ಸಚಿವರು

ವಿಧಾನ ಸಭೆ ಮಾನ್ಯ ಸದಸ್ಯರಾದ ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ (ಬಂಗಾರಪೇಟೆ)
ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 265ಕ್ಕೆ ಅನುಬಂಧ

ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಸಿಗುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳು

1. **ಪಿಂಚಣಿ ಸೌಲಭ್ಯ:** ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆಮಾಸಿಕ ರೂ.2,000/-
2. **ಕುಟುಂಬ ಪಿಂಚಣಿ ಸೌಲಭ್ಯ:** ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ **ರೂ.**1000/-
3. **ದುರ್ಬಲತೆ ಪಿಂಚಣಿ:** ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃಅಂಗವಿಕಲತೆ ಹೊಂದಿದ್ದರೆ ಮಾಸಿಕ **ರೂ.2,000/-** ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ **ರೂ.2,00,000/-** ದವರೆಗೆಅನುಗ್ರಹ ರಾಶಿ ಸಹಾಯಧನ.
4. **ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ** ಮರುಪಾವತಿ ಸೌಲಭ್ಯ(ಈಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)
5. **ಟ್ರೈನಿಂಗ್-ಕಮ್-ಟೂಲ್‌ಕಿಟ್‌ಸೌಲಭ್ಯ (ಶ್ರಮ ಸಾಮರ್ಥ್ಯ) : ರೂ.**30,000/- **ವರೆಗೆ**
6. **ಶ್ರಮ ಸಂಸಾರ ಸಾಮರ್ಥ್ಯತರಬೇತಿ ಸೌಲಭ್ಯ:** ನೋಂದಾಯಿತ ಫಲಾನುಭವಿಯಅವಲಂಭಿತರಿಗೆ(ಈಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)
7. **ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ): ರೂ.2,00,000/-** ದವರೆಗೆ ಮುಂಗಡ ಸೌಲಭ್ಯ
8. **ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್):** ಮಹಿಳಾ ಫಲಾನುಭವಿಯ ಮೊದಲ ಎರಡು ಮಕ್ಕಳಿಗೆ ಹೆಣ್ಣು ಮಗುವಿನ ಜನನಕ್ಕೆರೂ. 30,000/- ಮತ್ತುಗಂಡು ಮಗುವಿನ ಜನನಕ್ಕೆರೂ.20,000/-
9. **ಶಿಶು ಪಾಲನಾ ಸೌಲಭ್ಯ:**
10. **ಅಂತ್ಯಕ್ರಿಯೆವೆಚ್ಚ :ರೂ.4,000/-** ಹಾಗೂ ಅನುಗ್ರಹ ರಾಶಿ **ರೂ.50,000/-**ಸಹಾಯಧನ
11. **ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ): ಫಲಾನುಭವಿಯಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:**

ಕ್ರ.ಸಂ	ತರಗತಿ (ಉತ್ತೀರ್ಣಕ್ಕೆ)	ವಾರ್ಷಿಕ ಸಹಾಯಧನ	
		ಗಂಡು	ಹೆಣ್ಣು
1	ನರ್ಸರಿ	3,000	4,000
2	1 ರಿಂದ 4ನೇ ತರಗತಿ	3,000	4,000
3	5 ರಿಂದ 8ನೇ ತರಗತಿ	5,000	6,000
4	9 ಹಾಗೂ 10ನೇ ತರಗತಿ	10,000	11,000
5	ಪ್ರಥಮ ಪಿಯುಸಿ ಮತ್ತು ದ್ವಿತೀಯಪಿ.ಯು.ಸಿ	10,000	14,000
6	ಐಟಿಐ	12,000	15,000
7	ಪದವಿ ಪ್ರತಿ ವರ್ಷಕ್ಕೆ	15,000	20,000
8	ಸ್ನಾತಕೋತ್ತರ ಪದವಿ ಸೇರ್ಪಡೆಗೆ	20,000	20,000
	ಪ್ರತಿ ವರ್ಷಕ್ಕೆ	20,000	25,000
9	ಇಂಜಿನಿಯರಿಂಗ್‌ಕೋರ್ಸ್ ಬಿಇ/ ಬಿ.ಟೆಕ್ ಸೇರ್ಪಡೆಗೆ	25,000	25,000
	ಪ್ರತಿ ವರ್ಷಕ್ಕೆ	25,000	30,000

10	ವೈದ್ಯಕೀಯಕೋರ್ಸ್‌ಗೆ ಸೇರ್ಪಡೆಗೆ	30,000	30,000
	ಪ್ರತಿ ವರ್ಷಕ್ಕೆ	40,000	50,000
11	ಡಿಪ್ಲೋಮಾ	15,000	20,000
12	ಎಂ.ಟೆಕ್ / ಎಂ.ಇ	30,000	35,000
13	ಎಂ.ಡಿ (ವೈದ್ಯಕೀಯ)	45,000	55,000
14	ಪಿಹೆಚ್‌ಡಿ (ಪ್ರತಿ ವರ್ಷಕ್ಕೆ) ಗರಿಷ್ಠ 03 ವರ್ಷ	25,000	30,000

12. **ವೈದ್ಯಕೀಯ ಸಹಾಯಧನ (ಕಾರ್ಮಿಕಆರೋಗ್ಯ ಭಾಗ್ಯ):** ನೋಂದಾಯಿತ ಫಲಾನುಭವಿ ಹಾಗೂ ಅವರಅವಲಂಭಿತರಿಗೆರೂ.300/- ರಿಂದರೂ.10,000/-ವರೆಗೆ
13. **ಅಪಘಾತ ಪರಿಹಾರ:** ಮರಣ ಹೊಂದಿದ್ದಲ್ಲಿರೂ.5,00,000/-, ಸಂಪೂರ್ಣ ಶಾಶ್ವತದುರ್ಬಲತೆಯಾದಲ್ಲಿ **ರೂ.2,00,000/-** ಮತ್ತುಭಾಗಶಃ ಶಾಶ್ವತದುರ್ಬಲತೆಯಾದಲ್ಲಿ **ರೂ.1,00,000/-**
14. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕಚಿಕಿತ್ಸಾ ಭಾಗ್ಯ):** ಹೃದ್ರೋಗ, ಕಿಡ್ನಿಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದತೊಂದರೆಗೆ ಸಂಬಂಧಿತಚಿಕಿತ್ಸೆ, ಮೂತ್ರ ಪಿಂಡದಲ್ಲಿನಕಲ್ಲುತೆಗೆಯುವಚಿಕಿತ್ಸೆ, ಮೆದುಳಿನ ರಕ್ತಸ್ರಾವದಚಿಕಿತ್ಸೆ, ಅಲ್ಸರ್‌ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್‌ಚಿಕಿತ್ಸೆ, ಇತರೆಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ **ರೂ.2,00,000/-**ವರೆಗೆ
15. **ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್):** ಫಲಾನುಭವಿ ಅಥವಾಅವರಇಬ್ಬರು ಮಕ್ಕಳ ಮದುವೆಗೆತಲಾ **ರೂ.50,000/-**
16. **ಫಲಾನುಭವಿಗಳ ಮಕ್ಕಳು ಐಎಎಸ್ / ಕೆಎಎಸ್ ಪರಿಕ್ಷೆಗಳಲ್ಲಿ ಭಾಗವಹಿಸಲು ತರಬೇತಿ**
17. **ಬಿಎಂಟಿಸಿ ಬಸ್ ಪಾಸ್ ಸೌಲಭ್ಯ:** ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತಕಟ್ಟಡಕಾರ್ಮಿಕರಿಗೆ
18. **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ:** ರಾಜ್ಯದಾದ್ಯಂತ ವಿದ್ಯಾಭ್ಯಾಸದಲ್ಲಿತೊಡಗಿರುವ ನೋಂದಾಯಿತಕಾರ್ಮಿಕರಇಬ್ಬರು ಮಕ್ಕಳಿಗೆ (ಈಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)
19. **ತಾಯಿ ಮಗು ಸಹಾಯ ಹಸ್ತ:** ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕರೂ.6,000/- ಗಳ ಸಹಾಯಧನ

ಕರ್ನಾಟಕ ವಿಧಾನ ಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 266

2] ಮಾನ್ಯ ಸದಸ್ಯರ ಹೆಸರು : ಶ್ರೀ ಎಸ್.ಎನ್.ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ)

3] ಉತ್ತರಿಸುವ ದಿನಾಂಕ : 14/12/2021

4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕೆ.ಜಿ.ಎಫ್.ನಲ್ಲಿರುವ ಪೊಲೀಸ್ ಅಧೀಕ್ಷಕರ (SP) ಕಛೇರಿಯನ್ನು ಸ್ಥಳಾಂತರ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವ ಕಾರಣಕ್ಕಾಗಿ ಮಾಡಲಾಗುತ್ತಿದೆ;	ಸದ್ಯ ಇಂತಹ ಪ್ರಸ್ತಾವನೆ ಇರುವುದಿಲ್ಲ.
ಆ)	ಸದರಿ ಕಛೇರಿಯ ಸಿಬ್ಬಂದಿಯನ್ನು ಸ್ಥಳಾಂತರ ಮಾಡಿದಲ್ಲಿ ಅವರ ವಯೋವೃದ್ಧರಾದ ತಂದೆ-ತಾಯಿಯರ ಆರೋಗ್ಯ ಮತ್ತು ಮಕ್ಕಳ ಶಾಲೆ ಹಾಗೂ ವಿದ್ಯಾಭ್ಯಾಸದ ಸಂಬಂಧ ಉಂಟಾಗುವ ಸಮಸ್ಯೆಗಳ ಬಗ್ಗೆ ಚಿಂತಿಸಲಾಗಿದೆಯೇ;	ಪರಿಶೀಲಿಸಲಾಗುವುದು.
ಇ)	ಸಾಲ ಮಾಡಿ ಸ್ವಂತ ಮನೆ ಮಾಡಿಕೊಂಡಿರುವವರ ಕುಟುಂಬದ ಪರಿಸ್ಥಿತಿಯನ್ನು ಅವಲೋಕಿಸಲಾಗಿದೆಯೇ? (ವಿವರ ನೀಡುವುದು)	

ಸಂಖ್ಯೆ: ಹೆಚ್‌ಡಿ 175 ಪಿಓಪಿ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.	267
ಮಾನ್ಯ ಸದಸ್ಯರ ಹೆಸರು	ಶ್ರೀ ಎಸ್.ಎನ್.ನಾರಾಯಣಸ್ವಾಮಿ ಕೆ.ಎಂ (ಬಂಗಾರಪೇಟೆ)
ಉತ್ತರಿಸಬೇಕಾದ ದಿನಾಂಕ	14-12-2021
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕೋಲಾರ ಜಿಲ್ಲೆಯಲ್ಲಿ ಸಿಎಲ್-2, ಸಿಎಲ್-5, ಸಿಎಲ್-9 ಸನ್ನದು ಮಳಿಗೆಗಳನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ:	1992ನೇ ಸಾಲಿನಿಂದ ಹೊಸದಾಗಿ ಸಿಎಲ್-2, ಸಿಎಲ್-9 ಸನ್ನದನ್ನು ನೀಡಲು ನಿರ್ಬಂಧವಿರುವುದರಿಂದ ಅಬಕಾರಿ ಇಲಾಖೆಯಿಂದ ಯಾವುದೇ ಹೊಸ ಸಿಎಲ್-2 ಮತ್ತು ಸಿಎಲ್-9 ಸನ್ನದಿಗೆ ಮಂಜೂರಾತಿ ನೀಡಲಾಗುತ್ತಿಲ್ಲ. ಪ್ರಸ್ತುತ ಸಿಎಲ್-5 ಸನ್ನದು ಪರವಾನಗಿಗಳನ್ನು ಸಭೆಗಳಿಗೆ, ಸಾರ್ವಜನಿಕ ಮನರಂಜನಾ ಕಾರ್ಯಕ್ರಮಗಳಿಗೆ ಮತ್ತು ಇತರೆ ಸಾರ್ವಜನಿಕ ಸಭೆ ಮತ್ತು ಸಮಾರಂಭಗಳಿಗೆ ವಿಶೇಷ ಸಂದರ್ಭಗಳಲ್ಲಿ ಒಂದು ದಿನದ ಸೀಮಿತ ಅವಧಿಗೆ ಮಾತ್ರ ನೀಡಲಾಗುತ್ತಿದೆ.
ಆ)	ಇದ್ದಲ್ಲಿ, ಯಾವ ಕಾಲಮಿತಿಯಲ್ಲಿ ಪ್ರಾರಂಭಿಸಲಾಗುತ್ತದೆ; ಮಳಿಗೆಗಳನ್ನು ಪ್ರಾರಂಭಿಸಲು ಇರುವ ಮಾನದಂಡಗಳೇನು:	ಉದ್ಭವಿಸುವುದಿಲ್ಲ.
ಇ)	ಬಂಗಾರಪೇಟೆ ಕ್ಷೇತ್ರದಲ್ಲಿ ಪ್ರತಿ ಗ್ರಾಮದ ಚಿಲ್ಲರೆ ಅಂಗಡಿಗಳಲ್ಲಿ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಈ)	ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಸರ್ಕಾರದ ಜರುಗಿಸಿರುವ ಕ್ರಮಗಳೇನು? (ವಿವರ ನೀಡುವುದು)	ಅಕ್ರಮವಾಗಿ ಮದ್ಯ ಮಾರಾಟ ಮಾಡುವವರನ್ನು ಪತ್ತೆ ಹಚ್ಚಿ ಅಂತಹವರ ವಿರುದ್ಧ ಅಬಕಾರಿ ಕಾಯಿದೆ ಮತ್ತು ನಿಯಮಗಳನ್ವಯ ಪ್ರಕರಣಗಳನ್ನು ದಾಖಲು ಮಾಡಲಾಗುತ್ತಿದೆ. ಈ ಸಂಬಂಧ ಕಳೆದ ಮೂರು ವರ್ಷಗಳಲ್ಲಿ ಒಟ್ಟು 487 ಪ್ರಕರಣಗಳನ್ನು ದಾಖಲಿಸಿ ತತ್ಸಂಬಂಧವಾಗಿ 487 ಆರೋಪಿಗಳ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆಯಡಿಯಲ್ಲಿ ಕ್ರಮ ಜರುಗಿಸಲಾಗಿರುತ್ತದೆ. ಮೊಕದ್ದಮೆಗಳ ವಿವರಗಳು

ಕೆಳಕಂಡಂತಿದೆ.

ಅಬಕಾರಿ ವರ್ಷ	ಕಲಂ 15–ಎ ರಡಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ	ದಸ್ತಗಿರಿಯಾದ ಆರೋಪಿಗಳ ಸಂಖ್ಯೆ
2019–20	163	163
2020–21	221	221
2021–22 (ಅಕ್ಟೋಬರ್–2021 ರವರೆಗೆ)	103	103
ಒಟ್ಟು	**487**	**487**

ಅಕ್ರಮವಾಗಿ ಮದ್ಯ ಮಾರಾಟ ಮಾಡುವುದನ್ನು ತಡೆಗಟ್ಟಲು ಅಬಕಾರಿ ಕಾಯ್ದೆ ಮತ್ತು ತತ್ಸಂಬಂಧ ನಿಯಮಗಳ ಜಾರಿಗೊಳಿಸುವಿಕೆ ಕ್ರಮಗಳನ್ನು ಚುರುಕುಗೊಳಿಸಲಾಗಿದೆ. ಅಲ್ಲದೆ ಈ ಕುರಿತು ಪೊಲೀಸ್ ಇಲಾಖೆಯೂ ಸಹ ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದು, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆಯುವ ಸಮನ್ವಯ ಸಮಿತಿ ಸಭೆಯಲ್ಲೂ ಅಬಕಾರಿ ಅಕ್ರಮ ಕುರಿತು ಅಗತ್ಯ ನಿರ್ದೇಶನಗಳನ್ನು ನೀಡಲಾಗುತ್ತಿದೆ. ಅಬಕಾರಿ ಇಲಾಖೆಯ ಸಿಬ್ಬಂದಿಯು ಸದಾ ಕಾಲ ಜಾಗೃತರಾಗಿದ್ದು ನಿರಂತರ ಗಸ್ತು ಕಾರ್ಯ ನಡೆಸಿ, ಅಕ್ರಮ ಮದ್ಯ ಮಾರಾಟವಾಗದಂತೆ ಎಚ್ಚರಿಕೆ ವಹಿಸುವಂತೆ ನಿರ್ದೇಶಿಸಲಾಗಿದೆ.

ಆಇ 116 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)

ಅಬಕಾರಿ ಸಚಿವರು

(1)

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 268
2. ಸದಸ್ಯರ ಹೆಸರು : ಡಾ|| ಅಜಯ್ ಧರ್ಮಸಿಂಗ್.
3. ಉತ್ತರಿಸಬೇಕಾದ ದಿನಾಂಕ : 14-12-2021
4. ಉತ್ತರಿಸುವ ಸಚಿವರು : ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಜೇವರ್ಗಿ ತಾಲ್ಲೂಕಿನ ಅವರಾದ ಕೆರೆ ಭಾಗಶ: ಪೂರ್ಣಗೊಂಡಿದ್ದು, ಇನ್ನುಳಿದ ಕಾಮಗಾರಿಗಳಿಗೆ ರೂ.300.00 ಲಕ್ಷಗಳ ಅನುದಾನ ಬಿಡುಗಡೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ;	ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಅವರಾದ ಕೆರೆ ನಿರ್ಮಾಣ ಕಾಮಗಾರಿಯ ರೂ.500.00 ಲಕ್ಷ ಮೊತ್ತದ ಅಂದಾಜು ಪಟ್ಟಿಗೆ 2016-17ನೇ ಸಾಲಿನಲ್ಲಿ "ವಿಶೇಷ ಅಭಿವೃದ್ಧಿ ಯೋಜನೆ" ಲೆಕ್ಕ ಶೀರ್ಷಿಕೆ ಅಡಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಕಾಮಗಾರಿಯನ್ನು ದಿನಾಂಕ:28-04-2021 ರಂದು ಪೂರ್ಣಗೊಳಿಸಲಾಗಿರುತ್ತದೆ. ಸದರಿ ಕಾಮಗಾರಿಗೆ ರೂ.583.13 ಲಕ್ಷ ವೆಚ್ಚ ಮಾಡಲಾಗಿರುತ್ತದೆ. ಸದರಿ ಕೆರೆ ನಿರ್ಮಾಣದಿಂದ 210.00 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಪ್ರಸ್ತುತ ಸದರಿ ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿ ಇರುವುದಿಲ್ಲ.
ಆ	ಈ ತಾಲ್ಲೂಕಿನ ಕೆರೆ ತುಂಬುವ ಕಾಮಗಾರಿಗಳಿಗಾಗಿ ತಾಂತ್ರಿಕ ತಿರುವಳಿ ಪಡೆಯಲಾಗಿದ್ದು, ಪ್ರಸ್ತುತ ಯಾವ ಹಂತದಲ್ಲಿದೆ ?	ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಹರವಾಳ ಗ್ರಾಮದ ಹತ್ತಿರ ಭೀಮಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಿಸಿ, ಸದರಿ ಬ್ರಿಡ್ಜ್ ಕಂ ಬ್ಯಾರೇಜಿನ ಮೇಲ್ಭಾಗದಲ್ಲಿ 0.114 ಟಿ.ಎಂ.ಸಿ. ನೀರನ್ನು ಏತ ನೀರಾವರಿ ಯೋಜನೆ ಮೂಲಕ ಜೇವರ್ಗಿ ತಾಲೂಕಿನ (1) ಹೆಗ್ಗಿನಾಳ ಕೆರೆ, (3) ಹಾಲಗಡ್ಲಾ ಕೆರೆ, (3) ಆಂದೋಲಾ ಕೆರೆ, (4) ಆಂದೋಲಾ ಸಣ್ಣ ಕೆರೆ, (5) ಸೈದಾಪೂರ ಕೆರೆ, (6) ಬೆಣ್ಣೂರ ಕೆರೆ, (7) ಸುಂಬಡ ಕೆರೆ, (8) ಮಳ್ಳಿ ಕೆರೆ, (9) ಇಜೇರಿ ಕೆರೆ, (10) ಸಾತಖೇಡ ಕೆರೆ, (11) ಮಾರಡಗಿ ದೊಡ್ಡ ಕೆರೆ, (12) ಮಾರಡಗಿ ಸಣ್ಣ ಕೆರೆ, (13) ನೇರಡಗಿ ಕೆರೆ (14) ಪಾದಗಟಹಳ್ಳಿ ಕೆರೆ,(15) ಬಿಳವಾರ ಕೆರೆ, (16) ಬೇಳಿಬೆಟ್ಟ ಕೆರೆ, (17) ಆಲೂರು ಕೆರೆ, (18) ವರವಿ ಕೆರೆ, (19) ಕರಕಳ್ಳಿ ಕೆರೆ, (20) ಬೆಣ್ಣೂರು ಕೆರೆ, (21) ನೆಲೋಗಿ ಕೆರೆ ಮತ್ತು (22) ಯಡ್ರಾಮಿ ಕೆರೆಗಳನ್ನು ತುಂಬಿಸುವ ಕಾಮಗಾರಿಯ ರೂ.30629.00 ಲಕ್ಷ ಮೊತ್ತದ ವಿಸ್ತೃತ ಯೋಜನಾ ವರದಿಯನ್ನು ದಿನಾಂಕ:07.11.2020 ರಂದು ಜರುಗಿದ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ 9ನೇ ಸಭೆಯಲ್ಲಿ ಮಂಡಿಸಿ ತಿರುವಳಿ ಪಡೆಯಲಾಗಿರುತ್ತದೆ.

		ಪ್ರಸ್ತುತ ಆರ್ಥಿಕ ಪರಿಸ್ಥಿತಿಯಲ್ಲಿ ಇಲಾಖೆಗೆ ಒದಗಿಸಲಾಗುವ ಅನುದಾನದ ಲಭ್ಯತೆ ಮೇರೆಗೆ ಕಾಮಗಾರಿಯನ್ನು ಕೈಗೊಳ್ಳುವ ಕುರಿತು ಪರಿಶೀಲಿಸಲಾಗುವುದು.
ಇ	ಈ ತಾಲ್ಲೂಕಿನಲ್ಲಿ 2019-20 ರಲ್ಲಿ ಎಷ್ಟು ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ ಹಾಗೂ ಪ್ರಸ್ತುತ ಯಾವ ಹಂತದಲ್ಲಿವೆ; (ಸಂಪೂರ್ಣ ವಿವರ ನೀಡುವುದು)	ಅನುಬಂಧ-1 ರಲ್ಲಿ ನೀಡಲಾಗಿದೆ.
ಈ	ಜೇವರ್ಗಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯಡಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ. ಕಾಮಗಾರಿಗಳಿಗೆ ಅನುಮೋದನೆ ನೀಡದೇ ಇರಲು ಕಾರಣಗಳೇನು; ಯಾವ ಕ್ರಮ ಕೈಗೊಳ್ಳಲಾಗಿದೆ;	ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯಡಿ ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಅನುದಾನ ಒದಗಿಸುವುದು ಅವಶ್ಯಕವಾಗಿರುವುದರಿಂದ ಆದ್ಯತೆ ನೀಡಬೇಕಾಗಿದ್ದು, ಅದರಂತೆ ಅನುದಾನ ಒದಗಿಸಲಾಗಿದೆ.
ಉ	ಈ ತಾಲ್ಲೂಕಿನಲ್ಲಿ ಭೀಮಾ ನದಿಯಿಂದ ಪ್ರತಿ ವರ್ಷ ಪ್ರವಾಹ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಇದೆಯೇ; 2019-20,2020-21, 2021-22ನೇ ಸಾಲಿನಲ್ಲಿ ಪ್ರವಾಹದಿಂದ ಹಾನಿಗೊಳಗಾದ ಕಾಮಗಾರಿಗಳಿಗೆ ಸಣ್ಣ ನೀರಾವರಿ ಇಲಾಖೆಯಿಂದ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ; ಮಂಜೂರು ಮಾಡದೆ ಇದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?	ಸರ್ಕಾರದ ಗಮನಕ್ಕೆ ಬಂದಿದೆ. 2019-20ನೇ ಸಾಲಿನಲ್ಲಿ ಜೇವರ್ಗಿ ಮತಕ್ಷೇತ್ರದಲ್ಲಿನ ಸಣ್ಣ ನೀರಾವರಿ ಯೋಜನೆಗಳಿಗೆ ಹಾನಿಯಾಗಿರುವುದಿಲ್ಲ. 2020-21ನೇ ಸಾಲಿನಲ್ಲಿ ಪ್ರವಾಹದಿಂದ ಹಾನಿಗೊಳಗಾದ ಸಣ್ಣ ನೀರಾವರಿ ಯೋಜನೆಗಳ ಪುನರುಜ್ಜೀವನ ಕಾಮಗಾರಿಗಳಿಗಾಗಿ ರೂ. 58.92 ಲಕ್ಷ ಅನುದಾನ ಒದಗಿಸಲಾಗಿದೆ. ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. 2021-22ನೇ ಸಾಲಿನಲ್ಲಿ ಜೇವರ್ಗಿ ತಾಲ್ಲೂಕಿನಲ್ಲಿ ಪ್ರವಾಹದಿಂದ ಒಟ್ಟು 15 ಸಣ್ಣ ನೀರಾವರಿ ಯೋಜನೆಗಳು ಹಾನಿಗೊಳಗಾಗಿದ್ದು, ಅವುಗಳ ಪುನರುಜ್ಜೀವನ ಕಾಮಗಾರಿಗಳಿಗಾಗಿ ರೂ. 375.00 ಲಕ್ಷ ತಗಲುಬಹುದೆಂದು ಅಂದಾಜಿಸಲಾಗಿದೆ. ಅನುದಾನ ಲಭ್ಯತೆಯನ್ನು ಆಧರಿಸಿ ಕಾಮಗಾರಿಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.

ಕಡತ ಸಂಖ್ಯೆ: ಎಂ ಐ ಡಿ/389/ಎಲ್‌ಎಕ್ಯೂ/2021

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು
ಮತ್ತು ಶಾಸನ ರಚನೆ ಹಾಗೂ
ಸಣ್ಣ ನೀರಾವರಿ ಸಚಿವರು.

(1)

ಶ್ರೀ ಡಾ॥ ಅಜಯ ಧರ್ಮಸಿಂಗ (ಜೇವರ್ಗಿ) ಮಾನ್ಯ ವಿಧಾನ ಸಭೆ ಸದಸ್ಯರು ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 268 ಕ್ಕೆ ಅನುಬಂಧ-1

2019-20ನೇ ಸಾಲಿನಲ್ಲಿ ಜೇವರ್ಗಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ ಅಡಿ ಮಂಜೂರಾದ ಕಾಮಗಾರಿಗಳ ವಿವರ

ರೂ.ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ತಾಲೂಕು	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ವೆಚ್ಚ	ಷರಾ
1	2	3	4	6	7
1	ಜೇವರ್ಗಿ	ವಿಶೇಷ ಘಟಕ ಯೋಜನೆ	ಸಿಗರತಳ್ಳಿ ಗ್ರಾಮದ ಮಲ್ಲಿಕಾರ್ಜುನ ತಂದೆ ಮಲ್ಲಪ್ಪ ಸರ್ವೆ ನಂ. 24ರ ಜಮೀನುಗಳಿಗೆ ತೆರೆದ ಬಾವಿ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುವುದು.	9.12	ಕಾಮಗಾರಿ ಪೂರ್ಣಗೊಂಡಿದೆ
2	ಜೇವರ್ಗಿ	ವಿಶೇಷ ಘಟಕ ಯೋಜನೆ	ಇಟಗಾ ಗ್ರಾಮದ ಗೌತಮಬುದ್ಧ ತಂದೆ ರಾವಣ್ಣ ಹರಿಜನ ಸರ್ವೆ ನಂ. 64ರ ಜಮೀನುಗಳಿಗೆ ನದಿಯಿಂದ ಪೈಪ್‌ಲೈನ್ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುವುದು.	6.7	ಕಾಮಗಾರಿ ಪೂರ್ಣಗೊಂಡಿದೆ
3	ಜೇವರ್ಗಿ	ವಿಶೇಷ ಘಟಕ ಯೋಜನೆ	ರಾಸಣಗಿ ಗ್ರಾಮದ ಪ್ರಭುನಂದ ತಂದೆ ಭೀಮರಾಯ ಸರ್ವೆ ನಂ. 15ರ ಜಮೀನುಗಳಿಗೆ ಪೈಪ್‌ಲೈನ್ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುವುದು.	6.8	ಕಾಮಗಾರಿ ಪೂರ್ಣಗೊಂಡಿದೆ
4	ಜೇವರ್ಗಿ	ವಿಶೇಷ ಘಟಕ ಯೋಜನೆ	ಜನಾಪೂರ ಗ್ರಾಮದ ಬಸಪ್ಪ ತಂದೆ ಜಯಪ್ಪ ಬಡಿಗೇರ ಸರ್ವೆ ನಂ. 5ರ ಜಮೀನುಗಳಿಗೆ ಪೈಪ್‌ಲೈನ್ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುವುದು.	6.96	ಕಾಮಗಾರಿ ಪೂರ್ಣಗೊಂಡಿದೆ
5	ಜೇವರ್ಗಿ	ವಿಶೇಷ ಘಟಕ ಯೋಜನೆ	ಮದರಿ ಗ್ರಾಮದ ಚಂದ್ರಶೇಖರ ತಂದೆ ಭೀಮರಾಯ ಸರ್ವೆ ನಂ. 145ರ ಜಮೀನುಗಳಿಗೆ ಪೈಪ್‌ಲೈನ್ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುವುದು.	5.43	ಕಾಮಗಾರಿ ಪೂರ್ಣಗೊಂಡಿದೆ

(2)

ಕ್ರಮ ಸಂಖ್ಯೆ	ತಾಲೂಕು	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ವೆಚ್ಚ	ಷರಾ
1	2	3	4	6	7
			ಒಟ್ಟು	35.01	
5					
1	ಜೇವರ್ಗಿ	ಗಿರಿಜನ ಉಪ ಯೋಜನೆ	ಹಾಲಗಡ್ಲಾ ಗ್ರಾಮದ ಬಸವರಾಜ ತಂದೆ ತಿಪ್ಪಣ್ಣ ಸರ್ವೆ ನಂ. 113ರ ಜಮೀನುಗಳಿಗೆ ಪೈಪ್‌ಲೈನ್ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುವುದು.	8.08	ಕಾಮಗಾರಿ ಪೂರ್ಣಗೊಂಡಿದೆ
2	ಜೇವರ್ಗಿ	ಗಿರಿಜನ ಉಪ ಯೋಜನೆ	ಹಾಲಗಡ್ಲಾ ಗ್ರಾಮದ ಭೀಮಪ್ಪಾ ತಂದೆ ಹಣಮಂತ ಸರ್ವೆ ನಂ. 123ರ ಜಮೀನುಗಳಿಗೆ ನದಿಯಿಂದ ಪೈಪ್‌ಲೈನ್ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುವುದು.	6.24	ಕಾಮಗಾರಿ ಪೂರ್ಣಗೊಂಡಿದೆ
3	ಜೇವರ್ಗಿ	ಗಿರಿಜನ ಉಪ ಯೋಜನೆ	ಹಾಲಗಡ್ಲಾ ಗ್ರಾಮದ ಹಣಮಂತರಾಯ ತಂದೆ ಲಕ್ಷ್ಮಣ ಸರ್ವೆ ನಂ. 106ರ ಜಮೀನುಗಳಿಗೆ ನದಿಯಿಂದ ಪೈಪ್‌ಲೈನ್ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುವುದು.	7.61	ಕಾಮಗಾರಿ ಪೂರ್ಣಗೊಂಡಿದೆ
4	ಜೇವರ್ಗಿ	ಗಿರಿಜನ ಉಪ ಯೋಜನೆ	ಹಾಲಗಡ್ಲಾ ಗ್ರಾಮದ ಲಕ್ಷ್ಮಿಬಾಯಿ ಗಂಡ ಬಸಣ್ಣ ಕವಲದಾರ ಸರ್ವೆ ನಂ. 137ರ ಜಮೀನುಗಳಿಗೆ ಪೈಪ್‌ಲೈನ್ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುವುದು.	7.62	ಕಾಮಗಾರಿ ಪೂರ್ಣಗೊಂಡಿದೆ
			ಒಟ್ಟು	29.55	
4			ಜೇವರ್ಗಿ ಮತಕ್ಷೇತ್ರದ ಒಟ್ಟು :	64.56	
9					

(3)

ಶ್ರೀ ಡಾ॥ ಅಜಯ ಧರ್ಮಸಿಂಗ (ಜೇವರ್ಗಿ) ಮಾನ್ಯ ವಿಧಾನ ಸಭೆ ಸದಸ್ಯರು ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 268 ಕ್ಕೆ

ಅನುಬಂಧ-2

2020-21ನೇ ಸಾಲಿನಲ್ಲಿ ಜೇವರ್ಗಿ ತಾಲ್ಲೂಕಿನಲ್ಲಿ ಪ್ರವಾಹದಿಂದ ಹಾನಿಗೊಳಗಾದ ಯೋಜನೆಗಳ ಪುನಶ್ಚೇತನಕ್ಕಾಗಿ ಒದಗಿಸಲಾದ ಅನುದಾನದ ವಿವರ

ರೂ.ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ವೆಚ್ಚ	ಷರಾ
1	2	3	4	6	7
2020-21ನೇ ಸಾಲಿನಲ್ಲಿ ಪ್ರವಾಹದಿಂದ ಹಾನಿಗೊಳಗಾದ ಕಾಮಗಾರಿಗಳು					
1	ಜೇವರ್ಗಿ	4702-00-101-1-07-139 ಕೆರೆಗಳ ಆಧುನೀಕರಣ	ಪ್ರವಾಹದಿಂದ ಹಾನಿಗೊಳಗಾದ ಹೆಗ್ಗಿನಾಳ ಕೆರೆ ಪುನರುಜ್ಜೀವನ ಕಾಮಗಾರಿ	0.00	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ
2	ಜೇವರ್ಗಿ	4702-00-101-1-07-139 ಕೆರೆಗಳ ಆಧುನೀಕರಣ	ಪ್ರವಾಹದಿಂದ ಹಾನಿಗೊಳಗಾದ ಹಾಲಗಡ್ಲಾ ಕೆರೆ ಪುನರುಜ್ಜೀವನ ಕಾಮಗಾರಿ	0.00	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ
3	ಜೇವರ್ಗಿ	4702-00-101-1-07-139 ಕೆರೆಗಳ ಆಧುನೀಕರಣ	ಪ್ರವಾಹದಿಂದ ಹಾನಿಗೊಳಗಾದ ಸೈದಾಪೂರ ಕೆರೆ ಪುನರುಜ್ಜೀವನ ಕಾಮಗಾರಿ	0.00	ಕಾಮಗಾರಿ ಭೌತಿಕವಾಗಿ ಪೂರ್ಣಗೊಂಡಿದೆ
4	ಜೇವರ್ಗಿ	4702-00-101-5-01-139 ಅಣೆಕಟ್ಟು ಮತ್ತು ಪಿಕಪ್ -ಪ್ರಧಾನ ಕಾಮಗಾರಿಗಳು	ಪ್ರವಾಹದಿಂದ ಹಾನಿಗೊಳಗಾದ ನೆಲೋಗಿ ಬಿ.ಸಿ.ಬಿ. ಪುನರುಜ್ಜೀವನ ಕಾಮಗಾರಿ	14.98	ಕಾಮಗಾರಿ ಪೂರ್ಣಗೊಂಡಿದೆ

(4)

ಕ್ರಮ ಸಂಖ್ಯೆ	ತಾಲೂಕು	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ವೆಚ್ಚ	ಷರಾ
1	2	3	4	6	7
5	ಜೇವರ್ಗಿ	4702-00-101-5-01-139 ಅಣೆಕಟ್ಟು ಮತ್ತು ಪಿಕಪ್ -ಪ್ರಧಾನ ಕಾಮಗಾರಿಗಳು	ಪ್ರವಾಹದಿಂದ ಹಾನಿಗೊಳಗಾದ ಜೇವರ್ಗಿ ಬಿ.ಸಿ.ಬಿ. ಪುನರುಜ್ಜೀವನ ಕಾಮಗಾರಿ	14.99	ಕಾಮಗಾರಿ ಪೂರ್ಣಗೊಂಡಿದೆ
6	ಜೇವರ್ಗಿ	4702-00-101-5-01-139 ಅಣೆಕಟ್ಟು ಮತ್ತು ಪಿಕಪ್ -ಪ್ರಧಾನ ಕಾಮಗಾರಿಗಳು	ಪ್ರವಾಹದಿಂದ ಹಾನಿಗೊಳಗಾದ ಕಡಕೋಳ ಬಿ.ಸಿ.ಬಿ. ಪುನರುಜ್ಜೀವನ ಕಾಮಗಾರಿ	8.99	ಕಾಮಗಾರಿ ಪೂರ್ಣಗೊಂಡಿದೆ
7	ಜೇವರ್ಗಿ	4702-00-101-5-01-139 ಅಣೆಕಟ್ಟು ಮತ್ತು ಪಿಕಪ್ -ಪ್ರಧಾನ ಕಾಮಗಾರಿಗಳು	ಪ್ರವಾಹದಿಂದ ಹಾನಿಗೊಳಗಾದ ಜಂಬ್ರಾಳ ಬಿ.ಸಿ.ಬಿ. ಪುನರುಜ್ಜೀವನ ಕಾಮಗಾರಿ	19.96	ಕಾಮಗಾರಿ ಪೂರ್ಣಗೊಂಡಿದೆ
			ಒಟ್ಟು	58.92	

ಶ್ರೀ ಡಾ॥ ಅಜಯ ಧರ್ಮಸಿಂಗ (ಜೇವರ್ಗಿ) ಮಾನ್ಯ ವಿಧಾನ ಸಭೆ ಸದಸ್ಯರು ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 268 ಕ್ಕೆ ಅನುಬಂಧ–3

2021–22ನೇ ಸಾಲಿನಲ್ಲಿ ಜೇವರ್ಗಿ ತಾಲ್ಲೂಕಿನಲ್ಲಿ ಪ್ರವಾಹದಿಂದ ಹಾನಿಗೊಳಗಾದ ಯೋಜನೆಗಳ ವಿವರ

ರೂ.ಲಕ್ಷಗಳಲ್ಲಿ

ಕ್ರಮ ಸಂಖ್ಯೆ	ಜಿಲ್ಲೆ	ತಾಲೂಕು	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಷರಾ
1	2	3	4	5	6
1	ಕಲಬುರಗಿ	ಜೇವರ್ಗಿ	ಸೊನ್ನ ಜಿನಗು ಕೆರೆ ದುರಸ್ತಿ ಹಾಗೂ ಪುನಶ್ಚೇತನ	30.00	ಕೆರೆಯ ಏರಿ, ಅಪ್ರೋಚ್ ಹಾಳಾಗಿರುತ್ತವೆ.
2	ಕಲಬುರಗಿ	ಜೇವರ್ಗಿ	ಬೆಣ್ಣೂರ ಜಿನಗು ಕೆರೆ ದುರಸ್ತಿ ಹಾಗೂ ಪುನಶ್ಚೇತನ	20.00	ಕೆರೆಯ ಏರಿ, ಅಪ್ರೋಚ್ ಹಾಳಾಗಿರುತ್ತವೆ.
3	ಕಲಬುರಗಿ	ಜೇವರ್ಗಿ	ಮಳ್ಳಿ ಬಿಸಿಬಿ ದುರಸ್ತಿ ಹಾಗೂ ಪುನಶ್ಚೇತನ	20.00	ಮೇಲ್ಭಾಗದಲ್ಲಿ ಹೂಳು ಶೇಖರಣೆಯಾಗಿರುತ್ತದೆ ಹಾಗೂ ಮೇಲ್ಭಾಗ ಮತ್ತು ಕೆಳಭಾಗದ ಬದಿಗಳು ಹಾಳಾಗಿರುತ್ತವೆ.
4	ಕಲಬುರಗಿ	ಜೇವರ್ಗಿ	ಸುಂಬಡ ಕಾಚಾಪುರ ಬ್ಯಾರೇಜ್ ದುರಸ್ತಿ ಹಾಗೂ ಪುನಶ್ಚೇತನ	20.00	ಮೇಲ್ಭಾಗದಲ್ಲಿ ಹೂಳು ಶೇಖರಣೆಯಾಗಿರುತ್ತದೆ ಹಾಗೂ ಮೇಲ್ಭಾಗ ಮತ್ತು ಕೆಳಭಾಗದ ಬದಿಗಳು ಹಾಳಾಗಿರುತ್ತವೆ.
5	ಕಲಬುರಗಿ	ಜೇವರ್ಗಿ	ಅರಳಗುಂಡಗಿ ಬಿಸಿಬಿ –1 ದುರಸ್ತಿ ಹಾಗೂ ಪುನಶ್ಚೇತನ	20.00	ಮೇಲ್ಭಾಗದಲ್ಲಿ ಹೂಳು ಶೇಖರಣೆಯಾಗಿರುತ್ತದೆ ಹಾಗೂ ಮೇಲ್ಭಾಗ ಮತ್ತು ಕೆಳಭಾಗದ ಬದಿಗಳು ಹಾಳಾಗಿರುತ್ತವೆ.

(6)

ಕ್ರಮ ಸಂಖ್ಯೆ	ಜಿಲ್ಲೆ	ತಾಲೂಕು	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಷರಾ
1	2	3	4	5	6
6	ಕಲಬುರಗಿ	ಜೇವರ್ಗಿ	ಅರಳಗುಂಡಗಿ ಜಂಬ್ರಾಳ ಬಿಸಿಬಿ ದುರಸ್ತಿ ಹಾಗೂ ಪುನಶ್ಚೇತನ	25.00	ಮೇಲ್ಭಾಗದಲ್ಲಿ ಹೂಳು ಶೇಖರಣೆಯಾಗಿರುತ್ತದೆ ಹಾಗೂ ಮೇಲ್ಭಾಗ ಮತ್ತು ಕೆಳಭಾಗದ ಬದಿಗಳು ಹಾಳಾಗಿರುತ್ತವೆ.
7	ಕಲಬುರಗಿ	ಜೇವರ್ಗಿ	ಬಳುಂಡಗಿ ಬಿಸಿಬಿ ದುರಸ್ತಿ ಹಾಗೂ ಪುನಶ್ಚೇತನ	45.00	ಮೇಲ್ಭಾಗದಲ್ಲಿ ಹೂಳು ಶೇಖರಣೆಯಾಗಿರುತ್ತದೆ ಹಾಗೂ ಮೇಲ್ಭಾಗ ಮತ್ತು ಕೆಳಭಾಗದ ಬದಿಗಳು ಹಾಳಾಗಿರುತ್ತವೆ.
8	ಕಲಬುರಗಿ	ಜೇವರ್ಗಿ	ನೇಲೋಗಿ ಕಲ್ಲೂರ ಬಿಸಿಬಿ ದುರಸ್ತಿ ಹಾಗೂ ಪುನಶ್ಚೇತನ	30.00	ಮೇಲ್ಭಾಗದಲ್ಲಿ ಹೂಳು ಶೇಖರಣೆಯಾಗಿರುತ್ತದೆ ಹಾಗೂ ಮೇಲ್ಭಾಗ ಮತ್ತು ಕೆಳಭಾಗದ ಬದಿಗಳು ಹಾಳಾಗಿರುತ್ತವೆ.
9	ಕಲಬುರಗಿ	ಜೇವರ್ಗಿ	ಕಟ್ಟಿಸಂಗಾವಿ ಬ್ಯಾರೇಜ್ ದುರಸ್ತಿ ಹಾಗೂ ಪುನಶ್ಚೇತನ	30.00	ಮೇಲ್ಭಾಗದಲ್ಲಿ ಹೂಳು ಶೇಖರಣೆಯಾಗಿರುತ್ತದೆ ಹಾಗೂ ಮೇಲ್ಭಾಗ ಮತ್ತು ಕೆಳಭಾಗದ ಬದಿಗಳು ಹಾಳಾಗಿರುತ್ತವೆ.
10	ಕಲಬುರಗಿ	ಜೇವರ್ಗಿ	ರಾಜವಾಳ ಬಿಸಿಬಿ ದುರಸ್ತಿ ಹಾಗೂ ಪುನಶ್ಚೇತನ	25.00	ಮೇಲ್ಭಾಗದಲ್ಲಿ ಹೂಳು ಶೇಖರಣೆಯಾಗಿರುತ್ತದೆ ಹಾಗೂ ಮೇಲ್ಭಾಗ ಮತ್ತು ಕೆಳಭಾಗದ ಬದಿಗಳು ಹಾಳಾಗಿರುತ್ತವೆ.
11	ಕಲಬುರಗಿ	ಜೇವರ್ಗಿ	ರಾಜವಾಳ ಬಿಸಿಬಿ ದುರಸ್ತಿ ಹಾಗೂ ಪುನಶ್ಚೇತನ	10.00	ಮೇಲ್ಭಾಗದಲ್ಲಿ ಹೂಳು ಶೇಖರಣೆಯಾಗಿರುತ್ತದೆ ಹಾಗೂ ಮೇಲ್ಭಾಗ ಮತ್ತು ಕೆಳಭಾಗದ ಬದಿಗಳು ಹಾಳಾಗಿರುತ್ತವೆ.

(7)

ಕ್ರಮ ಸಂಖ್ಯೆ	ಜಿಲ್ಲೆ	ತಾಲೂಕು	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಷರಾ
1	2	3	4	5	6
12	ಕಲಬುರಗಿ	ಜೇವರ್ಗಿ	ಹಂಚಿನಾಳ ಬಿಸಿಬಿ ದುರಸ್ತಿ ಹಾಗೂ ಪುನಶ್ಚೇತನ	15.00	ಮೇಲ್ಭಾಗದಲ್ಲಿ ಹೂಳು ಶೇಖರಣೆಯಾಗಿರುತ್ತದೆ ಹಾಗೂ ಮೇಲ್ಭಾಗ ಮತ್ತು ಕೆಳಭಾಗದ ಬದಿಗಳು ಹಾಳಾಗಿರುತ್ತವೆ.
13	ಕಲಬುರಗಿ	ಜೇವರ್ಗಿ	ಭೂತನಾಳ ಬಿಸಿಬಿ ದುರಸ್ತಿ ಹಾಗೂ ಪುನಶ್ಚೇತನ	25.00	ಮೇಲ್ಭಾಗದಲ್ಲಿ ಹೂಳು ಶೇಖರಣೆಯಾಗಿರುತ್ತದೆ ಹಾಗೂ ಮೇಲ್ಭಾಗ ಮತ್ತು ಕೆಳಭಾಗದ ಬದಿಗಳು ಹಾಳಾಗಿರುತ್ತವೆ.
14	ಕಲಬುರಗಿ	ಜೇವರ್ಗಿ	ಬಿರಾಳ ಬಿಸಿಬಿ ದುರಸ್ತಿ ಹಾಗೂ ಪುನಶ್ಚೇತನ	30.00	ಮೇಲ್ಭಾಗದಲ್ಲಿ ಹೂಳು ಶೇಖರಣೆಯಾಗಿರುತ್ತದೆ ಹಾಗೂ ಮೇಲ್ಭಾಗ ಮತ್ತು ಕೆಳಭಾಗದ ಬದಿಗಳು ಹಾಳಾಗಿರುತ್ತವೆ.
15	ಕಲಬುರಗಿ	ಜೇವರ್ಗಿ	ನೆಲೋಗಿ ಬಿಸಿಬಿ ದುರಸ್ತಿ ಹಾಗೂ ಪುನಶ್ಚೇತನ	30.00	ಮೇಲ್ಭಾಗದಲ್ಲಿ ಹೂಳು ಶೇಖರಣೆಯಾಗಿರುತ್ತದೆ ಹಾಗೂ ಮೇಲ್ಭಾಗ ಮತ್ತು ಕೆಳಭಾಗದ ಬದಿಗಳು ಹಾಳಾಗಿರುತ್ತವೆ.
			ಒಟ್ಟು	375.00	

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 269
ಸದಸ್ಯರ ಹೆಸರು	: ಡಾ:ಅಜಯ್ ಧರ್ಮಸಿಂಗ್ (ಜೇವರ್ಗಿ)
ಉತ್ತರಿಸುವ ದಿನಾಂಕ	: 14.12.2021
ಉತ್ತರಿಸುವ ಸಚಿವರು	: ಜಲ ಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಜೇವರ್ಗಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಭಾರಿ ಮಳೆಯಿಂದಾಗಿ ರೈತರು ತಮ್ಮ ಹಳ್ಳಿಗಳಿಂದ ನಾಲಾಗಳಿಗೆ ಹೋಗಲು ಸಂಪರ್ಕ ಸೇತುವೆಗಳಿಲ್ಲದೆ ಪ್ರತಿನಿತ್ಯ ತೊಂದರೆಗೆ ಒಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;	ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ವ್ಯಾಪ್ತಿಯಡಿಯಲ್ಲಿ ಅನುಷ್ಠಾನಗೊಳಿಸುತ್ತಿರುವ ನೀರಾವರಿ ಯೋಜನೆಗಳ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ನಾಲೆಗಳನ್ನು ದಾಟಲು ಅವಶ್ಯಕ ಸೇತುವೆ / ಅಡ್ಡ ಮೋರಿಗಳನ್ನು ನಿರ್ಮಿಸಲಾಗಿರುವುದರೊಂದಿಗೆ ಕಾಲುವೆ ಜಾಲಗಳಡಿ ಸರಿ ಸುಮಾರು ಪ್ರತಿ 500 ಮೀ.ಗೆ ಒಂದೊಂದು ಸಿ.ಟಿ.ಸಿ. / ಸೇತುವೆ ನಿರ್ಮಾಣಗೊಳಿಸಿ ಅಚ್ಚುಕಟ್ಟು ಕ್ಷೇತ್ರದಲ್ಲಿಯ ಹಳ್ಳಿಗಳ ರೈತರಿಗೆ ತಮ್ಮ ಹೊಲಗಳಿಗೆ ಹೋಗಲು ಸೂಕ್ತ ಸಂಪರ್ಕ ವ್ಯವಸ್ಥೆ ಕಲ್ಪಿಸಲಾಗಿರುವುದರಿಂದ ರೈತರುಗಳಿಗೆ ಆಗುವ ತೊಂದರೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗಿದೆ.
ಆ)	ಬಂದಿದ್ದಲ್ಲಿ, ಇಂತಹ ಎಷ್ಟು ಪ್ರಕರಣಗಳಿವೆ; (ಸಂಪೂರ್ಣ ವಿವರ ನೀಡುವುದು);	
ಇ)	ಈ ಕಾಮಗಾರಿಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣ ಗೊಳಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	

ಸಂಖ್ಯೆ: ಜಸಂಇ 123 ಡಬ್ಲ್ಯೂಬಿಎಂ 2021

(ಗೋವಿಂದ ಎಂ.ಕಾರಜೋಳ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 271

2] ಮಾನ್ಯ ಸದಸ್ಯರ ಹೆಸರು : ಡಾ॥ ಅಜಯ್ ಧರ್ಮ ಸಿಂಗ್ (ಜೇವರ್ಗಿ)

3] ಉತ್ತರಿಸುವ ದಿನಾಂಕ : 14/12/2021

4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಅಪರಾಧ ಪ್ರಕರಣಗಳ ತ್ವರಿತ ಪತ್ತೆಗೆ ಇರುವ ಪ್ರಯೋಗಾಲಯಗಳೆಷ್ಟು ; (ವಿವರ ನೀಡುವುದು)	ರಾಜ್ಯ ನ್ಯಾಯ ವಿಜ್ಞಾನ ಪ್ರಯೋಗಾಲಯ-1 (ಬೆಂಗಳೂರು) ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ-7 (ಮೈಸೂರು, ಮಂಗಳೂರು, ದಾವಣಗೆರೆ, ಬೆಳಗಾವಿ, ಹುಬ್ಬಳ್ಳಿ, ಬಳ್ಳಾರಿ ಮತ್ತು ಕಲಬುರಗಿ). ಹುಬ್ಬಳ್ಳಿ ಮತ್ತು ಬಳ್ಳಾರಿ ಪ್ರಾನ್ಯಾವಿಪ್ರ ಪ್ರಾರಂಭಿಸಲು ಆದೇಶ ಹೊರಡಿಸಲಾಗಿದ್ದು, ಶೀಘ್ರದಲ್ಲಿಯೇ ಕಾರ್ಯರಂಭ ಮಾಡಲು ಕ್ರಮ ಕೈಗೊಳ್ಳಲಾಗುವುದು.
ಆ)	ಪ್ರಕರಣಗಳ ತ್ವರಿತ ಪತ್ತೆ ಮತ್ತು ತನಿಖೆಯ ವೇಗ ಹೆಚ್ಚಿಸಲು ವಿಧಿ ವಿಜ್ಞಾನ ಪ್ರಯೋಗಾಲಯಗಳನ್ನು ರಾಜ್ಯದ ಇತರೆ ಜಿಲ್ಲೆಗಳಲ್ಲಿ ಸ್ಥಾಪಿಸುವ ಉದ್ದೇಶವಿದೆಯೇ ;	ಪ್ರಕರಣಗಳ ತ್ವರಿತ ಪತ್ತೆ ಮತ್ತು ತನಿಖೆಯ ವೇಗ ಹೆಚ್ಚಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ವಿಧಿ ವಿಜ್ಞಾನ ಪ್ರಯೋಗಾಲಯ ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.
ಇ)	ಸದರಿ ಪ್ರಯೋಗಾಲಯದ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ?	1) 01 ಜಂಟಿ ನಿರ್ದೇಶಕರು (ತಾಂತ್ರಿಕ) ಹುದ್ದೆಯನ್ನು ನಿಯೋಜನೆ ಮೇಲೆ ಭರ್ತಿ ಮಾಡಲು ದಿನಾಂಕ: 05.10.2021ರಂದು ಅನುಮತಿ ನೀಡಲಾಗಿರುತ್ತದೆ. 2) 01 ಉಪ ನಿರ್ದೇಶಕರ ಹುದ್ದೆಯನ್ನು, 06 ಸಹಾಯಕ ನಿರ್ದೇಶಕರ ಹುದ್ದೆಯನ್ನು ಹಾಗೂ 20 ಹಿರಿಯ ವೈಜ್ಞಾನಿಕ ಅಧಿಕಾರಿ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ದಿನಾಂಕ: 05.10.2021ರಲ್ಲಿ ಅನುಮತಿ ನೀಡಲಾಗಿರುತ್ತದೆ. 3) 10 ಸಹಾಯಕ ನಿರ್ದೇಶಕರ ನೇಮಕಾತಿ ಮಾಡಲು 22.06.2021ರಲ್ಲಿ ಅನುಮತಿ ನೀಡಲಾಗಿದ್ದು, ಕೆ.ಪಿ.ಎಸ್.ಸಿ.ಯಿಂದ ನೇರ

		ನೇಮಕಾತಿ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. 4) 84 ವೈಜ್ಞಾನಿಕ ಅಧಿಕಾರಿ ನೇಮಕಾತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/21/ಪಿಇಐ/2021-PS_A, ದಿನಾಂಕ: 07.05.2021ರಲ್ಲಿ ಅನುಮತಿಸಲಾಗಿದ್ದು, ದಿನಾಂಕ: 05.12.2021 ರಂದು ಲಿಖಿತ ಪರೀಕ್ಷೆ ಮುಗಿದಿರುತ್ತದೆ. 5) 206 Scene of Crime Officer (SOCO) ಹುದ್ದೆಗಳನ್ನು ನೇಮಕಾತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/75/ಪಿಓಪಿ/2021, ದಿನಾಂಕ: 12.07.2021ರಲ್ಲಿ ಅನುಮತಿ ನೀಡಿದ್ದು, ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಸಂಖ್ಯೆ: ಹೆಚ್‌ಡಿ 181 ಪಿಓಪಿ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು.

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	272
2.	ಮಾನ್ಯ ಸದಸ್ಯರ ಹೆಸರು	ಡಾ॥ ಅಜಯ್ ಧರ್ಮ ಸಿಂಗ್ (ಜೇವರ್ಗಿ)
3.	ಉತ್ತರಿಸಬೇಕಾದ ದಿನಾಂಕ	14/12/2021
4.	ಉತ್ತರಿಸುವವರು	ಮಾನ್ಯ ಕಾರ್ಮಿಕ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಸಂಗ್ರಹವಾಗಿರುವ ಸುಂಕದ ಮೊತ್ತವನ್ನು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ಹಾಗೂ ಕರ್ನಾಟಕ ನಿಯಮಗಳು 2006 ಗಳನ್ವಯ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ವಿವಿಧ ಯೋಜನೆಗಳನ್ನು ಜಾರಿ ಮಾಡಲು ಉಪಯೋಗಿಸಲಾಗುತ್ತಿದೆ. ಮಂಡಳಿಯ ನಿಧಿಯಿಂದ ಯಾವುದೇ ಯೋಜನೆಗೆ ಹಣವನ್ನು ಖರ್ಚುಮಾಡಬೇಕಾದ್ದಲ್ಲಿ ಮಂಡಳಿಯ ಅನುಮೋದನೆಯನ್ನು ಪಡೆದು ಸರ್ಕಾರದ ನಿಯಮಗಳನ್ವಯ ಖರ್ಚು ಮಾಡಲಾಗುತ್ತಿದೆ.
ಆ)	ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು;	ಅನ್ವಯಿಸುವುದಿಲ್ಲ
ಇ)	ಕೋವಿಡ್ ನಿಂದ ಮೃತಪಟ್ಟ ಎಷ್ಟು ಕಾರ್ಮಿಕರಿಗೆ ಪರಿಹಾರ ನೀಡಲಾಗಿದೆ? (ಸಂಪೂರ್ಣ ವಿವರ ನೀಡುವುದು)	ಮಂಡಳಿಯಿಂದ ಯಾವುದೇ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮೃತ ಪಟ್ಟಲ್ಲಿ ಅವರ ಅವಲಂಭಿತರಿಗೆ / ನಾಮ ನಿರ್ದೇಶಿತರಿಗೆ ರೂ.50,000/- ಗಳ ಅನುಗ್ರಹ ರಾಶಿ ಹಾಗೂ ರೂ.4,000/- ಗಳ ಅಂತ್ಯ ಕ್ರಿಯೆ ವೆಚ್ಚವನ್ನು ನೀಡಲಾಗುತ್ತದೆ. ಆದರೆ, ನೋಂದಾಯಿತ ಕಟ್ಟಡ ಕಾರ್ಮಿಕರು ಕೋವಿಡ್‌ನಿಂದ ದಿನಾಂಕ:01-04-2021ರ ನಂತರ ಮೃತಪಟ್ಟಿದ್ದಲ್ಲಿ ರೂ.54,000/- ಗಳ ಬದಲಿಗೆ ರೂ.2,04,000/- ಗಳನ್ನು ಅನುಗ್ರಹರಾಶಿ ಹಾಗೂ ಅಂತ್ಯ ಕ್ರಿಯೆ ವೆಚ್ಚವನ್ನು ನೀಡಲು ಆದೇಶ ಹೊರಡಿಸಲಾಗಿರುತ್ತದೆ. ರಾಜ್ಯದಲ್ಲಿ ಕೋವಿಡ್‌ನಿಂದ ಮೃತಪಟ್ಟ 04 ನೋಂದಾಯಿತ ಕಟ್ಟಡ ಕಾರ್ಮಿಕರ ಅವಲಂಭಿತರಿಗೆ ಒಟ್ಟು ರೂ.8,16,000/-ಗಳನ್ನು ಅನುಗ್ರಹ ರಾಶಿ ಹಾಗೂ ಅಂತ್ಯಕ್ರಿಯೆ ವೆಚ್ಚವನ್ನು ನೀಡಲಾಗಿದೆ.

ಕಾಇ 511 ಎಲ್ಇಟಿ 2021

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	273
2.	ಮಾನ್ಯ ಸದಸ್ಯರ ಹೆಸರು	ಶ್ರೀ ಸಿದ್ದುಸವದಿ (ತೇರದಾಳ)
3.	ಉತ್ತರಿಸಬೇಕಾದ ದಿನಾಂಕ	14/12/2021
4.	ಉತ್ತರಿಸುವವರು	ಮಾನ್ಯ ಕಾರ್ಮಿಕ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕಾರ್ಮಿಕ ಇಲಾಖೆಯಿಂದ ಯಾವ ಯಾವ ಕಾರ್ಮಿಕರಿಗೆ ಕಾರ್ಮಿಕ ಕಾರ್ಡ್‌ಗಳನ್ನು ವಿತರಿಸಲಾಗುವುದು;	ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ವಿವಿಧ ಮಂಡಳಿಗಳಲ್ಲಿ ಕಾರ್ಮಿಕರಿಗೆ ನೀಡುವ ಗುರುತಿನ ಚೀಟಿಯ ವಿವರಗಳು ಈ ಕೆಳಗಿನಂತಿವೆ: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ: ಈ ಮಂಡಳಿಯಲ್ಲಿ ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸದಲ್ಲಿ ತೊಡಗಿರುವ ಈ ಕೆಳಗೆ ನಮೂದಿಸಿರುವ 53 ವರ್ಗದ ಕಾರ್ಮಿಕರನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಫಲಾನುಭವಿಗಳಾಗಿ ನೋಂದಾಯಿಸಲಾಗುತ್ತಿದೆ. 1. ನಿರ್ಮಾಣ 2. ಮಾರ್ಪಾಡು 3. ರಿಪೇರಿ 4. ನಿರ್ವಹಣೆ ಅಥವಾ ಕಟ್ಟಡ ಕೆಡವುವಿಕೆಗೆ ಸಂಬಂಧಿಸಿದ ಕಾಮಗಾರಿ 5. ಕಟ್ಟಡಗಳು 6. ಬೀದಿಗಳು 7. ರಸ್ತೆಗಳು 8. ರೈಲ್ವೆಗಳು 9. ಟ್ರಾಮ್‌ವೇಗಳು 10. ಏರ್‌ಫೀಲ್ಡ್ಸ್ 11. ನೀರಾವರಿ ಚರಂಡಿ 12. ಏರಿ/ಕಟ್ಟೆಕಟ್ಟುವುದು ಮತ್ತು ನೌಕಾ ಕಾಮಗಾರಿಗಳು 13. ಪ್ರವಾಹ ನಿಯಂತ್ರಣ ಕಾಮಗಾರಿಗಳು (ಮಳೆ ನೀರು, ಚರಂಡಿ ಕಾಮಗಾರಿಗಳು ಸೇರಿ) 14. ವಿದ್ಯುತ್ ಉತ್ಪಾದನೆ 15. ಪ್ರಸರಣ ಮತ್ತು ವಿತರಣೆ 16. ಜಲ ಕಾಮಗಾರಿಗಳು (ನೀರು ವಿತರಣಾ ನಾಲೆಗಳು ಸೇರಿ) 17. ತೈಲ ಮತ್ತು ಅನಿಲ ಸ್ಥಾವರಗಳು 18. ವಿದ್ಯುತ್ ಮಾರ್ಗಗಳು 19. ವೈರ್‌ಲೆಸ್ 20. ರೇಡಿಯೋ 21. ದೂರದರ್ಶನ 22. ದೂರವಾಣಿ 23. ದೂರಸಂಪರ್ಕ ಮತ್ತು ಸಮುದ್ರ ಸಂವಹನಗಳಿಗೆ ಸಂಬಂಧಿಸಿದ ನಿರ್ಮಾಣ/ನವೀಕರಣ ಮತ್ತು ದುರಸ್ತಿ 24. ಅಣೆಕಟ್ಟುಗಳು 25. ನಾಲೆಗಳು 26. ಜಲಾಶಯಗಳು 27. ಜಲ ಮೂಲಗಳು 28. ಸುರಂಗಗಳು 29. ಸೇತುವೆಗಳು 30. ವಯಾಡಕ್ಟ್ಸ್ 31. ಆಕ್ವೆಡಕ್ಟ್ಸ್ 32. ಕೊಳವೆ ಮಾರ್ಗಗಳ ನಿರ್ಮಾಣ 33. ಸ್ಥಾವರಗಳು 34. ಕೂಲಿಂಗ್ ಟವರ್‌ಗಳು ಮತ್ತು ಪ್ರಸರಣ ಸ್ಥಾವರಗಳು ಹೆಚ್ಚುವರಿ ನಿರ್ಮಾಣ ಕೆಲಸಗಳು: 35.ಕಲ್ಲು ಗಣಿಗಾರಿಕೆ ಕಾಯ್ದೆ 1952ರ ವ್ಯಾಪ್ತಿಗೆ ಒಳಪಡದ ರಸ್ತೆ ಮತ್ತು ಕಟ್ಟಡ

ನಿರ್ಮಾಣದ ಕಲ್ಲು ಕೆಲಸ 36. ನಿರ್ಮಾಣದಲ್ಲಿ ಚಪ್ಪಡಿ/ಟೈಲ್‌ಗಳನ್ನು ಅಳವಡಿಸುವುದು 37. ಯುಜಿಡಿ ನಿರ್ಮಾಣ ಸೇರಿದಂತೆ ಒಳಚರಂಡಿ ಮತ್ತು ಪ್ಲಂಬಿಂಗ್ ಕೆಲಸ 38. ವೈರಿಂಗ್, ವಿತರಣೆ ಪ್ಯಾನಲ್ ಫಿಟ್ಟಿಂಗ್ ಇತ್ಯಾದಿಗಳನ್ನು ಒಳಗೊಂಡ ವಿದ್ಯುತ್ ಕೆಲಸ 39. ಕೂಲಿಂಗ್ ಮತ್ತು ಹೀಟಿಂಗ್ ಸಿಸ್ಟಂಗಳ ಸ್ಥಾಪನೆ ಮತ್ತು ಅಳವಡಿಕೆ 40. ಲಿಫ್ಟ್, ಎಸ್ಕಲೇಟರ್ ಇತ್ಯಾದಿಗಳ ಸ್ಥಾಪನೆ 41. ಸೆಕ್ಯೂರಿಟಿ ಗೇಟುಗಳ ಸ್ಥಾಪನೆ 42. ಕಬ್ಬಿಣ/ಲೋಹದ ಗ್ರಿಲ್‌ಗಳು, ಕಿಟಕಿ, ಬಾಗಿಲುಗಳ ಸ್ಥಾಪನೆ 43. ನೀರಿನ ಕೊಯ್ಲು ರಚನೆಗಳ ನಿರ್ಮಾಣ 44. ಫ್ಲೋರಿಂಗ್, ಫಾಲ್ಸ್‌ಸೀಲಿಂಗ್, ವಾಲ್ ಪ್ಯಾನಲಿಂಗ್ ಮುಂತಾದವುಗಳನ್ನು ಒಳಗೊಂಡ ಒಳಾಂಗಣ ವಿನ್ಯಾಸ 45. ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಅಳವಡಿಸುವ ಗ್ಲಾಸ್ ಪ್ಯಾನಲ್‌ಗಳು, ಎಸಿಪಿ ಶೀಟ್‌ಗಳು, ಸ್ಪೈಡರ್ ಗ್ಲೇಜಿಂಗ್‌ಗಳು 46.ಪ್ರೀ-ಫ್ಯಾಬ್ರಿಕೇಟೆಡ್ ಕಾಂಕ್ರೀಟ್ ಮಾಡ್ಯೂಲ್ಸ್, ಕಾಂಕ್ರೀಟ್ ಬ್ರಿಕ್ಸ್, ಬ್ಲಾಕ್ಸ್, ಹಾಲೋಬ್ಲಾಕ್ಸ್, ಟೈಲ್ಸ್ ಮುಂತಾದವುಗಳ ಅಳವಡಿಕೆ 47.ಸಿಗ್ನೇಜ್, ರಸ್ತೆ ಪೀಠೋಪಕರಣಗಳು, ಬಸ್ ಆಶ್ರಯಗಳು/ ಸ್ಟ್ಯಾಂಡ್, ಸಿಗ್ನಲಿಂಗ್ ಸಿಸ್ಟಮ್ಸ್ ಮುಂತಾದವುಗಳ ನಿರ್ಮಾಣ 48.ರೋಟರಿಗಳ ನಿರ್ಮಾಣ ಮತ್ತು ಸ್ಥಾಪನೆ, ಕಾರಂಜಿಗಳು, ಸಾರ್ವಜನಿಕ ಉದ್ಯಾನವನ ಮತ್ತು ತೋಟಗಳಲ್ಲಿ ಈಜುಕೊಳಗಳು ಇತ್ಯಾದಿಗಳ ಅಳವಡಿಕೆ 49. ನಿರ್ಮಾಣ ಉದ್ದೇಶಗಳಿಗಾಗಿ ಭೂಮಿಯ ಕೆಲಸ, ಭೂಮಿಯ ಹರಡುವಿಕೆ, ನೆಲಸಮಗೊಳಿಸುವಿಕೆ ಮತ್ತು ಭೂಮಿಯ ಕತ್ತರಿಸುವಿಕೆ ಇತ್ಯಾದಿ ಕೆಲಸಗಳು 50. ತಾತ್ಕಾಲಿಕ ಆಶ್ರಯ ತಾಣಗಳ ನಿರ್ಮಾಣ ಮತ್ತು ಅಳವಡಿಕೆ. 51. ಇಟ್ಟಿಗೆ ಗೂಡಿನಲ್ಲಿ ಕೆಲಸ ಮಾಡುವವರು 52. ಫಿಲಂಸೆಟ್‌ಗಳ ನಿರ್ಮಾಣ ಮತ್ತು ಅಳವಡಿಕೆ. 53. ಕ್ವಾರಿಯಲ್ಲಿ ಕೆಲಸ ಮಾಡುವವರು.

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:

ಈ ಮಂಡಳಿಯು ಜಾರಿಗೊಳಿಸುತ್ತಿರುವ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ 11 ವರ್ಗಗಳಾದ ಹಮಾಲರು, ಗೃಹಕಾರ್ಮಿಕರು, ಚಿಂದಿ ಆಯುವವರು, ಟೈಲರ್‌ಗಳು, ಮೆಕ್ಯಾನಿಕ್ಸ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ ವೃತ್ತಿಯ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್‌ಕಾರ್ಡ್ ನೀಡಲಾಗುತ್ತಿದೆ.

ಅ)	ರಾಜ್ಯದಲ್ಲಿರುವ ಒಟ್ಟು ಕಾರ್ಮಿಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)	**ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿ** ಈ ಮಂಡಳಿಯಲ್ಲಿ ರಾಜ್ಯದಲ್ಲಿರುವ ಒಟ್ಟು ಕಾರ್ಮಿಕರ ಸಂಖ್ಯೆ ಕುರಿತು ಮಂಡಳಿಯ ವತಿಯಿಂದ ಸಮೀಕ್ಷೆ ಕೈಗೊಂಡಿರುವುದಿಲ್ಲ. ಇಲ್ಲಿಯವರೆಗೆ ಒಟ್ಟು 26,73,298 ಕಾರ್ಮಿಕರು ಮಂಡಳಿಯ ಫಲಾನುಭವಿಗಳಾಗಿ ನೋಂದಣಿಯಾಗಿರುತ್ತಾರೆ. ಜಿಲ್ಲಾವಾರು ವಿವರವನ್ನು ಅನುಬಂಧ-1ದಲ್ಲಿ ಲಗತ್ತಿಸಿದೆ. **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ** ಈ ಮಂಡಳಿಯಲ್ಲಿ ಅಸಂಘಟಿತ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ ಈವರೆಗೆ ಕಾರ್ಮಿಕ ಇಲಾಖೆಯಿಂದ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ. ಆದ್ದರಿಂದ ಅಸಂಘಟಿತ ಕಾರ್ಮಿಕರ ನಿಖರ ಸಂಖ್ಯೆ ಲಭ್ಯವಿರುವುದಿಲ್ಲ. ಆದರೆ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳು ಹಾಗೂ ಕೋವಿಡ್-19 ಪರಿಹಾರಕ್ಕಾಗಿ ನೋಂದಾಯಿತರಾದ ಅಸಂಘಟಿತ ಕಾರ್ಮಿಕರ ಸಂಖ್ಯೆ ಲಭ್ಯವಿದ್ದು ವಿವರ ಈ ಕೆಳಕಂಡಂತಿದೆ:

ಕ್ರ. ಸಂ.	ಯೋಜನೆ ಹೆಸರು	ಕಾರ್ಮಿಕರ ಸಂಖ್ಯೆ	ಷರಾ
1	ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ	2,40,745	ಜಿಲ್ಲಾವಾರು ಮಾಹಿತಿಯನ್ನು <u>ಅನುಬಂಧ-02ರಲ್ಲಿ</u> ಲಗತ್ತಿಸಿದೆ.
2	ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ	8,40,561	ಜಿಲ್ಲಾವಾರು ಮಾಹಿತಿಯನ್ನು <u>ಅನುಬಂಧ-03ರಲ್ಲಿ</u> ಲಗತ್ತಿಸಿದೆ.
3	ಕೋವಿಡ್-19ರ ವಿಶೇಷ ಪ್ಯಾಕೇಜ್‌ಗಳಡಿ ನೆರವು ಕೋರಿ ಅರ್ಜಿ ಸಲ್ಲಿಸಿದ ಕಾರ್ಮಿಕರು	14,52,943	ಜಿಲ್ಲಾವಾರು ಮಾಹಿತಿಯನ್ನು <u>ಅನುಬಂಧ-04ರಲ್ಲಿ</u> ಲಗತ್ತಿಸಿದೆ.

ಇ)	ಕೇಂದ್ರ ಸರ್ಕಾರದ ಹೊಸ ಕಾರ್ಮಿಕ ನೀತಿಯಿಂದ ದೊಡ್ಡ ಪ್ರಮಾಣದಲ್ಲಿ ಕಾರ್ಮಿಕ ಕಾರ್ಡ್ ಕೊಡಬೇಕಾಗಿದ್ದು ಈ ಕಾರ್ಡ್‌ಗಳನ್ನು ಹೇಗೆ ವಿತರಿಸಲಾಗುವುದು;	ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಈ ಮಂಡಳಿಯಲ್ಲಿ ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು, ರಾಷ್ಟ್ರೀಯ ಅಸಂಘಟಿತ ಕಾರ್ಮಿಕರ ಸಮಗ್ರ ದತ್ತಾಂಶ (NDUW) ಸಿದ್ಧಪಡಿಸಲು 379 ಅಸಂಘಟಿತ ವರ್ಗಗಳ ಕಾರ್ಮಿಕರನ್ನು ಇ-ಶ್ರಮ್ ಪೋರ್ಟಲ್ (WWW.eshram.gov.in) ನಲ್ಲಿ ದಿನಾಂಕ:26-08-2021ರಿಂದ ನೋಂದಾಯಿಸಲಾಗುತ್ತಿದ್ದು, ನೊಂದಣಿ ಪ್ರಕ್ರಿಯೆಯನ್ನು ಸಂಬಂಧಪಟ್ಟ ಕಾರ್ಮಿಕರು ನೇರವಾಗಿ ಸ್ವಯಂ ನೋಂದಣಿ ಮಾಡಿಕೊಳ್ಳಬಹುದು ಅಥವಾ ಸಾಮಾನ್ಯ ಸೇವಾ ಕೇಂದ್ರ (CSC) ಹಾಗೂ ಸ್ಥಳೀಯ ರಾಜ್ಯ ಸೇವಾ ಕೇಂದ್ರಗಳ ಮುಖಾಂತರ ಉಚಿತವಾಗಿ ನೋಂದಾಯಿಸಿಕೊಳ್ಳಬಹುದಾಗಿದೆ. ನೋಂದಾಯಿತ ಅಸಂಘಟಿತ ಕಾರ್ಮಿಕರು ಸ್ಥಳದಲ್ಲಿಯೆ ಗುರುತಿನ ಚೀಟಿ ಪಡೆಯಬಹುದಾಗಿದ್ದು, ನೋಂದಣಿ ಪ್ರಕ್ರಿಯೆ ಚಾಲ್ತಿಯಲ್ಲಿದೆ.
ಈ)	ತಾಲ್ಲೂಕು ಮಟ್ಟದಲ್ಲಿ ಸಿಬ್ಬಂದಿ ಕೊರತೆಯಿಂದ ಮತ್ತು ಇದ್ದ ಸಿಬ್ಬಂದಿಯವರು ಸಮರ್ಪಕವಾಗಿ ಕಾರ್ಮಿಕರಿಗೆ ಸ್ಪಂದಿಸದಿರುವವರ ವಿರುದ್ಧ ಯಾವ ಕ್ರಮ ಜರುಗಿಸಲಾಗುವುದು.	ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ತಾಲ್ಲೂಕು ಮಟ್ಟದಲ್ಲಿ ಯಾವುದೇ ಸಿಬ್ಬಂದಿಯನ್ನು ನೇಮಕ ಮಾಡಿರುವುದಿಲ್ಲ. ಆದರೆ ಮಂಡಳಿಯ ಕಾರ್ಯಕ್ರಮಗಳು ಹಾಗೂ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾರ್ಮಿಕ ಇಲಾಖೆಯ ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಕಾರ್ಮಿಕ ಅಧಿಕಾರಿಗಳ ಕಛೇರಿಗಳಿಗೆ ಮಂಡಳಿಯಿಂದ ಎಕ್ಸಿಕ್ಯೂಟೀವ್ ಹಾಗೂ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಹಾಗೂ ಉಪ ಕಾರ್ಮಿಕ ಆಯುಕ್ತರು ಮತ್ತು ಕಾರ್ಮಿಕ ನಿರೀಕ್ಷಕರ ಕಛೇರಿಗಳಿಗೆ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಏಜೆನ್ಸಿಯಿಂದ ನಿಯೋಜಿಸಲಾಗಿರುತ್ತದೆ. ಇಂತಹ ಸಿಬ್ಬಂಧಿಗಳ ವಿರುದ್ಧ ಅವರ ಕಾರ್ಯಕ್ಷಮತೆಯ ಬಗ್ಗೆ ಇಲಾಖೆಯ ಅಧಿಕಾರಿಗಳಿಂದ ದೂರುಗಳು ಬಂದಲ್ಲಿ ಅವರನ್ನು ಬದಲಾಯಿಸಲು / ಕಾನೂನು ರೀತಿಯ ಕ್ರಮ ಜರುಗಿಸಲಾಗಿಸಲಾಗುತ್ತಿದೆ.

ಕಾಇ 513 ಎಲ್‌ಇಟಿ 2021

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಅನುಬಂಧ-1

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಣಿಯಾದ ಫಲಾನುಭವಿಗಳ ಜಿಲ್ಲಾವಾರು ವಿವರ		
SL.No	**District Name**	**Total**
1	BANGALORE	223645
2	GULBARGA	204243
3	BIDAR	183779
4	HAVERI	135480
5	BELGAUM	121706
6	DAVANAGERE	98003
7	SHIMOGA	97215
8	DHARWAD	87473
9	KOPPAL	90049
10	CHITRADURGA	84176
11	BELLARY	83068
12	KOLAR	80895
13	BIJAPUR	77984
14	BAGALKOT	78131
15	Yadgiri	71384
16	MYSORE	70511
17	UTTARA KANNADA	65982
18	CHIKMAGALUR	58295
19	TUMKUR	57135
20	DAKSHINA KANNAD	54675
21	GADAG	49639
22	HASSAN	47176
23	RAICHUR	48353
24	UDUPI	39834
25	RAMANAGARA	32376
26	CHAMARAJA NAGAR	30146
27	CHIKBALLAPUR	28267
28	MANDYA	18999
29	KODAGU	4679
	Total	**26,73,298**
	Grand Total	**26,73,298**

ಅನುಬಂಧ-1

ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ನೊಂದಣಿಯಾದ ಜಿಲ್ಲಾವಾರು ವಿವರ		
ಕ್ರ. ಸಂ	ಜಿಲ್ಲೆಯ ಹೆಸರು	ನೋಂದಣಿ ಸಂಖ್ಯೆ
1	ಬಾಗಲಕೋಟೆ	9116
2	ಬಳ್ಳಾರಿ	10624
3	ಬೆಳಗಾವಿ	14138
4	ಬೆಂಗಳೂರು	30765
5	ಬೆಂಗಳೂರು ಗ್ರಾಮಾಂತರ	1156
6	ಬೀದರ್	3514
7	ಚಾಮರಾಜನಗರ	4385
8	ಚಿಕ್ಕಬಳಾಪುರ	3201
9	ಚಿಕ್ಕಮಗಳೂರು	3909
10	ಚಿತ್ರದುರ್ಗ	7100
11	ದಕ್ಷಿಣ ಕನ್ನಡ	9711
12	ದಾವಣಗೆರೆ	10574
13	ಧಾರವಾಡ	5241
14	ಗದಗ	4683
15	ಹಾಸನ	4652
16	ಹಾವೇರಿ	4666
17	ಕಲಬುರಗಿ	3979
18	ಕೊಡಗು	3963
19	ಕೋಲಾರ	2172
20	ಕೊಪ್ಪಳ	5512
21	ಮಂಡ್ಯ	6280
22	ಮೈಸೂರು	9836
23	ರಾಮನಗರ	2525
24	ರಾಯಚೂರು	6930
25	ಶಿವಮೊಗ್ಗ	6565
26	ತುಮಕೂರು	11946
27	ಉಡುಪಿ	5440
28	ಉತ್ತರ ಕನ್ನಡ	40850
29	ವಿಜಯಪೂರ	4122
30	ಯಾದಗಿರಿ	3190
	ಒಟ್ಟು	**2,40,745**

ಅನುಬಂಧ-03

ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯ ನೋಂದಣಿಯ ಕಾರ್ಮಿಕರು (RTO ID) ಜಿಲ್ಲಾವಾರು ಮಾಹಿತಿ ಈ ಕೆಳಕಂಡಂತೆ)		
ಕ್ರ. ಸಂ	ಜಿಲ್ಲೆಯ ಹೆಸರು	ನೋಂದಣಿ ಸಂಖ್ಯೆ
1	ಬಾಗಲಕೋಟೆ	19015
2	ಬಳ್ಳಾರಿ	25273
3	ಬೆಳಗಾವಿ	46747
4	ಬೆಂಗಳೂರು	286129
5	ಬೆಂಗಳೂರು ಗ್ರಾಮಾಂತರ	16681
6	ಬೀದರ್	25332
7	ಚಾಮರಾಜನಗರ	9743
8	ಚಿಕ್ಕಬಳಾಪುರ	15610
9	ಚಿಕ್ಕಮಗಳೂರು	10711
10	ಚಿತ್ರದುರ್ಗ	13457
11	ದಕ್ಷಿಣ ಕನ್ನಡ	50475
12	ದಾವಣಗೆರೆ	20553
13	ಧಾರವಾಡ	14199
14	ಗದಗ	13822
15	ಹಾಸನ	34001
16	ಹಾವೇರಿ	10681
17	ಕಲಬುರಗಿ	27470
18	ಕೊಡಗು	7326
19	ಕೋಲಾರ	28757
20	ಕೊಪ್ಪಳ	8488
21	ಮಂಡ್ಯ	27992
22	ಮೈಸೂರು	39460
23	ರಾಮನಗರ	15903
24	ರಾಯಚೂರು	15343
25	ಶಿವಮೊಗ್ಗ	22213
26	ತುಮಕೂರು	27383
27	ಉಡುಪಿ	22323
28	ಉತ್ತರ ಕನ್ನಡ	15714
29	ವಿಜಯಪೂರ	34008
30	ಯಾದಗಿರಿ	7291
	ಒಟ್ಟು	**912100**
Less- Drivers working in Government offices, Board and Corporation on permanent basis ಸರ್ಕಾರಿ ಸಂಸ್ಥೆಗಳಲ್ಲಿ ಖಾಯಂ ಆಗಿ ಕಾರ್ಯನಿರ್ವಹಿಸುತ್ತಿರುವ ಚಾಲಕರನ್ನು ಹೊರತು ಪಡಿಸಿ		71539
Total		**840561**

ಅನುಬಂಧ-04

ಕೋವಿಡ್-19ರ ವಿಶೇಷ ಪ್ಯಾಕೇಜ್‌ಗಳಡಿ ನೆರವು ಕೋರಿ ಅರ್ಜಿ ಸಲ್ಲಿಸಿದ ಕಾರ್ಮಿಕರ ಜಿಲ್ಲಾವಾರು ವಿವರ		
ಕ್ರ. ಸಂ	ಜಿಲ್ಲೆಯ ಹೆಸರು	ನೋಂದಣಿ ಸಂಖ್ಯೆ
1	ಬಾಗಲಕೋಟೆ	38124
2	ಬಳ್ಳಾರಿ	73260
3	ಬೆಳಗಾವಿ	151032
4	ಬೆಂಗಳೂರು	147631
5	ಬೆಂಗಳೂರು ಗ್ರಾಮಾಂತರ	17525
6	ಬೀದರ್	56827
7	ಚಾಮರಾಜನಗರ	30439
8	ಚಿಕ್ಕಬಳಾಪುರ	32634
9	ಚಿಕ್ಕಮಗಳೂರು	20418
10	ಚಿತ್ರದುರ್ಗ	37392
11	ದಕ್ಷಿಣ ಕನ್ನಡ	31663
12	ದಾವಣಗೆರೆ	38446
13	ಧಾರವಾಡ	58486
14	ಗದಗ	30634
15	ಹಾಸನ	18587
16	ಹಾವೇರಿ	44151
17	ಕಲಬುರಗಿ	123276
18	ಕೊಡಗು	3792
19	ಕೋಲಾರ	38967
20	ಕೊಪ್ಪಳ	46550
21	ಮಂಡ್ಯ	45058
22	ಮೈಸೂರು	102344
23	ರಾಮನಗರ	17213
24	ರಾಯಚೂರು	48597
25	ಶಿವಮೊಗ್ಗ	30324
26	ತುಮಕೂರು	54899
27	ಉಡುಪಿ	12313
28	ಉತ್ತರ ಕನ್ನಡ	40202
29	ವಿಜಯಪೂರ	34103
30	ಯಾದಗಿರಿ	28056
	ಒಟ್ಟು	**1452943**

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 274
2. ಸದಸ್ಯರ ಹೆಸರು : ಶ್ರೀ ಸಿದ್ದು ಸವದಿ
3. ಉತ್ತರಿಸಬೇಕಾದ ದಿನಾಂಕ : 14/12/2021
4. ಉತ್ತರಿಸುವ ಸಚಿವರು : ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ	2018 ರಿಂದ ಇಲ್ಲಿಯವರೆಗೆ ಸಣ್ಣ ನೀರಾವರಿ ಇಲಾಖೆಯಿಂದ ಬಾಗಲಕೋಟೆ ಜಿಲ್ಲೆಗೆ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ; (ವಿಧಾನ ಸಭಾ ಕ್ಷೇತ್ರವಾರು ಪ್ರತ್ಯೇಕವಾಗಿ ಸಂಪೂರ್ಣ ವಿವರ ನೀಡುವುದು)	2018 ರಿಂದ ಇಲ್ಲಿಯವರೆಗೆ (2021ರ ನವೆಂಬರ್ ಅಂತ್ಯದವರೆಗೆ) ಸಣ್ಣ ನೀರಾವರಿ ಇಲಾಖೆಯಿಂದ ಬಾಗಲಕೋಟೆ ಜಿಲ್ಲೆಗೆ ಒಟ್ಟು ರೂ.16717.60ಲಕ್ಷ ಅನುದಾನ ಒದಗಿಸಲಾಗಿದೆ. ವಿಧಾನಸಭಾ ಕ್ಷೇತ್ರವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ
ಆ	ಇಲಾಖೆಯಿಂದ ಮಂಜೂರಾದ ಕೆರೆ ಮತ್ತು ಗಂಗಾ ಕಲ್ಯಾಣ ಯೋಜನೆಗಳು ಟೆಂಡರ್ ಆಗಿದ್ದು, ಇವುಗಳನ್ನು ಪ್ರಾರಂಭಿಸದೇ ಇರಲು ಕಾರಣಗಳೇನು; ಯಾವಾಗ ಪ್ರಾರಂಭಿಸಲಾಗುವುದು;	ರಾಜ್ಯದ ಆರ್ಥಿಕ ಸಂಪನ್ಮೂಲಗಳನ್ನಾಧರಿಸಿ ಆರ್ಥಿಕ ಇಲಾಖೆಯು ದಿನಾಂಕ: 04/05/2020ರಲ್ಲಿ ಸುತ್ತೋಲೆ ಹೊರಡಿಸಿ, ಈಗಾಗಲೇ ಅನುಮೋದನೆಗೊಂಡು, ಟೆಂಡರ್ ಆಗದಿದ್ದಲ್ಲಿ/ ಅನುಮೋದನೆಗೊಂಡು, ಟೆಂಡರ್ ಆಗಿ, ವರ್ಕ್ ಆರ್ಡರ್ ನೀಡದಿದ್ದಲ್ಲಿ ಹಾಗೂ ಅನುಮೋದನೆಗೊಂಡು ಟೆಂಡರ್ ಆಗಿ ವರ್ಕ್ ಆರ್ಡರ್ ನ್ನು ಸಹಾ ನೀಡದಿದ್ದಲ್ಲಿ, ಅಂತಹ ಎಲ್ಲಾ ಕಾಮಗಾರಿಗಳು ಇನ್ನೂ ಕಾರ್ಯಾರಂಭ ಆಗದೇ ಇದ್ದಲ್ಲಿ, ಇವುಗಳನ್ನು ಪ್ರಾರಂಭಿಸಲು ಆರ್ಥಿಕ ಇಲಾಖೆಯ ಪೂರ್ವಾನುಮೋದನೆ ಪಡೆಯತಕ್ಕದ್ದು ಎಂದು ತಿಳಿಸಿರುತ್ತದೆ. ಅದರಂತೆ, ಇಲಾಖೆಯಿಂದ ಕ್ರಮ ವಹಿಸಲಾಗಿರುತ್ತದೆ.
ಇ	ಕೆರೆಗಳ ಅಭಿವೃದ್ಧಿಗೆ ಯಾವಾಗ ಅನುದಾನ ನೀಡಲಾಗುವುದು; ಅನುದಾನ ಒದಗಿಸದೇ ಇರಲು ಕಾರಣಗಳೇನು; ಹೀಗಾದಲ್ಲಿ, ಅಂತರ್ಜಲ ಬತ್ತಿ ಹೋಗುವುದಿಲ್ಲವೇ; ಇಲ್ಲವಾದಲ್ಲಿ ಇಲಾಖೆಯಿಂದ ಕ್ಷೇತ್ರವಾರು ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಅನುದಾನ ನೀಡಲಾಗುವುದು?	ಪ್ರತಿ ವರ್ಷ ಸಣ್ಣ ನೀರಾವರಿ ಇಲಾಖೆಗೆ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಒದಗಿಸಲಾಗುವ ಅನುದಾನವನ್ನು ಆಧರಿಸಿ, ಕೆರೆಗಳ ಅಭಿವೃದ್ಧಿಯ ಅವಶ್ಯಕತೆಗೆ ಅನುಗುಣವಾಗಿ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಸಂಖ್ಯೆ:ಎಂಐಡಿ 405 ಎಲ್ಎಕ್ಯೂ 2021

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು
ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

(1)

ವಿಧಾನಸಭಾ ಸದಸ್ಯರಾದ ಮಾನ್ಯ ಶ್ರೀ ಸಿದ್ದು ಸವದಿ (ತೇರದಾಳ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:274ಕ್ಕೆ ಅನುಬಂಧ–1

2018–19ರಿಂದ ಇಲ್ಲಿಯವರೆಗೆ ಸಣ್ಣ ನೀರಾವರಿ ಇಲಾಖೆಯಿಂದ ಬಾಗಲಕೋಟೆ ಜಿಲ್ಲೆಗೆ ವಿಧಾನಸಭಾ ಕ್ಷೇತ್ರವಾರು ಮಂಜೂರು ಮಾಡಲಾದ ಅನುದಾನದ ವಿವರ

ರೂ.ಲಕ್ಷಗಳಲ್ಲಿ

ಕ್ರ ಸಂ.	ಮತಕ್ಷೇತ್ರ	ಎಲ್ಲಾ ಲೆಕ್ಕಶೀರ್ಷಿಕೆಗಳಡಿ ಮಂಜೂರಾದ (ಬಿಡುಗಡೆಯಾದ) ಅನುದಾನ			
		2018–19	2019–20	2020–21	2021–22 ನವ್ಹೆಂಬರ್ ಅಂತ್ಯದವರೆಗೆ
1	2	3	4	5	6
1	ಮುಧೋಳ	773.67	670.55	526.11	321.43
2	ತೇರದಾಳ	565.00	268.00	68.91	1.76
3	ಜಮಖಂಡಿ	389.05	1402.39	834.00	161.84
4	ಬೀಳಗಿ	937.14	442.56	450.04	120.96
5	ಬಾದಾಮಿ	607.88	1313.59	1020.58	165.93
6	ಬಾಗಲಕೋಟೆ	759.11	1113.69	719.54	0.00
7	ಹುನಗುಂದ	901.98	1200.09	726.00	255.79
	ಒಟ್ಟು	**4933.84**	**6410.87**	**4345.18**	**1027.71**

ವಿಧಾನಸಭಾ ಸದಸ್ಯರಾದ ಮಾನ್ಯ ಶ್ರೀ ಸಿದ್ದು ಸವದಿ (ತೇರದಾಳ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:274ಕ್ಕೆ ಅನುಬಂಧ-2

ಸರ್ಕಾರದಿಂದ ಅನುಮೋದನೆ ನೀಡಲಾದ ಕಾಮಗಾರಿಗಳ ವಿವರ.

ಕ್ರ. ಸಂ.	ಜಿಲ್ಲೆ	ತಾಲ್ಲೂಕು	ಮತಕ್ಷೇತ್ರ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಕಾಮಗಾರಿ ಹಂತ	ಸರ್ಕಾರದ ಪತ್ರ ಸಂಖ್ಯೆ ಮತ್ತು ದಿನಾಂಕ
1	2	3	4	5	6	7	8	9
1	ಬಾಗಲಕೋಟೆ	ಬಾಗಲಕೋಟೆ	ಬಾಗಲಕೋಟೆ	4702-00-101-5-01-139 ಆಣೆಕಟ್ಟುಗಳು / ಪಿಕಪ್‌ಗಳ ನಿರ್ಮಾಣ - ಪ್ರಧಾನ ಕಾಮಗಾರಿಗಳು	ಬಾಗಲಕೋಟೆ ತಾಲೂಕಿನ ಬೋಡನಾಯಕನದಿನ್ನಿ ಹತ್ತಿರ ಬ್ಯಾರೇಜ ನಿರ್ಮಾಣ ಕಾಮಗಾರಿ.	100.00	ಪ್ರಗತಿಯಲ್ಲಿದೆ	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 649/ ಎಂ.ಆಯ್.ಎಸ್.ಯು/2020 ದಿನಾಂಕ:05/11/2020.
2	ಬಾಗಲಕೋಟೆ	ಬಾಗಲಕೋಟೆ	ಬಾಗಲಕೋಟೆ	ವಿಶೇಷ ಘಟಕ ಯೋಜನೆ	ಹೊಸುರ ಗ್ರಾಮದ ರಿ.ಸ.ನಂ:47/2, 48/1, 48/2ರ ಶ್ರೀ.ಸಂಗನಬಸಪ್ಪ, ರಾಮಪ್ಪ, ಮಾದರ, ಶ್ರೀಮತಿ.ಗಚ್ಚವ್ವ, ಭೀಮಪ್ಪ, ಮಾದರ, ಶ್ರೀಮತಿ.ಬಾಳವ್ವ, ದ್ಯಾಮಪ್ಪ, ಮಾದರ ಹಾಗೂ ಇತರರ ಜಮೀನುಗಳಿಗೆ ನದಿಯಿಂದ ನೀರಾವರಿ ಸೌಲಭ್ಯ ಒದಗಿಸುವುದು.	60.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 429/ಎಂ.ಆಯ್.ಎಸ್.ಯು/2021 ದಿನಾಂಕ:07/08/2021.
3	ಬಾಗಲಕೋಟೆ	ಗುಳೇದಗುಡ್ಡ	ಬಾದಾಮಿ	4702-00-101-5-01-139 ಆಣೆಕಟ್ಟುಗಳು / ಪಿಕಪ್‌ಗಳ ನಿರ್ಮಾಣ - ಪ್ರಧಾನ ಕಾಮಗಾರಿಗಳು	ಬಾಗಲಕೋಟೆ ಜಿಲ್ಲೆ ಗುಳೇದಗುಡ್ಡ ತಾಲೂಕಿನ ಮಂಗಳಗುಡ್ಡ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿ.	999.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/26/ ಬಿ.ಸಿ.ಬಿ./2021 ದಿನಾಂಕ:08/07/2021.
4	ಬಾಗಲಕೋಟೆ	ಬೀಳಗಿ	ಬೀಳಗಿ	ವಿಶೇಷ ಘಟಕ ಯೋಜನೆ	ಬಾಗಲಕೋಟೆ ಜಿಲ್ಲೆ, ಬೀಳಗಿ ತಾಲೂಕು, ಯಡಹಳ್ಳಿ ಗ್ರಾಮದ ಶ್ರೀ.ಶ್ರೀಶೈಲ ಗೋವಿಂದಪ್ಪ ಹಾದಿಮನಿ ರಿ.ಸ.ನಂ:225ಎ/2ಎಲ್ ಕ್ಷೇತ್ರ 2ಎಕರೆ-14ಗುಂಟೆ ಇವರ ಹೊಲಕ್ಕೆ ನೀರಾವರಿ ಸೌಲಭ್ಯ ಒದಗಿಸುವುದು.	12.00	ಪ್ರಗತಿಯಲ್ಲಿದೆ	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 429/ ಎಂ.ಆಯ್.ಎಸ್.ಯು/2021 ದಿನಾಂಕ:05/08/2021.
5					ಬಾಗಲಕೋಟೆ ಜಿಲ್ಲೆ, ಬೀಳಗಿ ತಾಲೂಕು, ಯಡಹಳ್ಳಿ ಗ್ರಾಮದ ಶ್ರೀ.ಯಂಕಪ್ಪ ಬಾಲಪ್ಪ ಹರಿಜನ ರಿ.ಸ.ನಂ:225ಎ/2ಎಲ್ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.			
6	ಬಾಗಲಕೋಟೆ	ಬೀಳಗಿ	ಬೀಳಗಿ	ವಿಶೇಷ ಘಟಕ ಯೋಜನೆ	ಬಾಗಲಕೋಟೆ ಜಿಲ್ಲೆ, ಬೀಳಗಿ ತಾಲೂಕಿನ ಕೊಂತಿಕಲ್ಲ ಗ್ರಾಮದ ಯಮನಪ್ಪ ಹನಮಂತ ಚಲವಾದಿ ಹಾಗೂ ಇತರರ ಜಮೀನುಗಳಿಗೆ ಕೃಷ್ಣಾ ನದಿಯಿಂದ ನೀರಾವರಿ ಸೌಲಭ್ಯ ಒದಗಿಸುವುದು.	50.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 256/ಎಂ.ಆಯ್.ಎಸ್.ಯು/2021 ದಿನಾಂಕ:30/10/2021.

(೩)

ಕ್ರ. ಸಂ.	ಜಿಲ್ಲೆ	ತಾಲ್ಲೂಕು	ಮತಕ್ಷೇತ್ರ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಕಾಮಗಾರಿ ಹಂತ	ಸರ್ಕಾರದ ಪತ್ರ ಸಂಖ್ಯೆ ಮತ್ತು ದಿನಾಂಕ
1	2	3	4	5	6	7	8	9
7					ಬಾಗಲಕೋಟೆ ಜಿಲ್ಲೆ, ಬೀಳಗಿ ತಾಲೂಕಿನ ಕಾತರಕಿ ಗ್ರಾಮದ ನಾನಪ್ಪ ಸೋಮಪ್ಪ ರಾಠೋಡ ಹಾಗೂ ಇತರರ ಜಮೀನುಗಳಿಗೆ ಘಟಪ್ರಭಾ ನದಿಯಿಂದ ನೀರಾವರಿ ಸೌಲಭ್ಯ ಒದಗಿಸುವುದು.			
8	ಬಾಗಲಕೋಟೆ	ಬೀಳಗಿ	ಬೀಳಗಿ	ವಿಶೇಷ ಘಟಕ ಯೋಜನೆ	ಬಾಗಲಕೋಟೆ ಜಿಲ್ಲೆ ಬೀಳಗಿ ತಾಲೂಕಿನ ತೋಳಮಟ್ಟಿ ಗ್ರಾಮದ ವಿಠ್ಠಲ ಮಲ್ಲಪ್ಪ ಮಾದರ ಹಾಗೂ ಇತರರ ಜಮೀನುಗಳಿಗೆ ಘಟಪ್ರಭಾ ನದಿಯಿಂದ ನೀರಾವರಿ ಸೌಲಭ್ಯ ಒದಗಿಸುವುದು.	35.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 256/ ಎಂ.ಆಯ್.ಎಸ್.ಯು/2021 ದಿನಾಂಕ:30/10/2021.
9	ಬಾಗಲಕೋಟೆ	ಬೀಳಗಿ	ಬೀಳಗಿ	ಗಿರಿಜನ ಉಪ ಯೋಜನೆ	ಬೀಳಗಿ ತಾಲ್ಲೂಕಿನ ಚೌಡಾಪೂರ ಗ್ರಾಮದ ಶ್ರೀಶೈಲ ಕಲ್ಲಪ್ಪ ವಾಲಿಕಾರ ಹಾಗೂ ಇತರರ ಜಮೀನುಗಳಿಗೆ ಕೃಷ್ಣಾ ನದಿಯಿಂದ ನೀರಾವರಿ ಸೌಲಭ್ಯ ಒದಗಿಸುವುದು.	40.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 256/ ಎಂ.ಆಯ್.ಎಸ್.ಯು/2021 ದಿನಾಂಕ:30/10/2021.
10					ಬೀಳಗಿ ತಾಲ್ಲೂಕಿನ ಶಿರಗುಪ್ಪಿ ಗ್ರಾಮದ ಹನಮಂತ ರಂಗಪ್ಪ ಗಡ್ಡಿ ಹಾಗೂ ಇತರರ ಜಮೀನುಗಳಿಗೆ ಕೃಷ್ಣಾ ನದಿಯಿಂದ ನೀರಾವರಿ ಸೌಲಭ್ಯ ಒದಗಿಸುವುದು.			
11	ಬಾಗಲಕೋಟೆ	ಮುಧೋಳ	ಮುಧೋಳ	4702–00–101–5–01–139 ಆಣೆಕಟ್ಟುಗಳು / ಪಿಕಪ್‌ಗಳ ನಿರ್ಮಾಣ – ಪ್ರಧಾನ ಕಾಮಗಾರಿಗಳು	ಮುಧೋಳ ತಾಲೂಕಿನ ಹಲಗಲಿ ಗ್ರಾಮದ ಮದರಖಂಡಿ ಹಳ್ಳಕ್ಕೆ ಸರಣಿ ಚೆಕ್ ಡ್ಯಾಂ ನಿರ್ಮಾಣ.	200.00	ಪ್ರಗತಿಯಲ್ಲಿದೆ	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 429/ಎಂ.ಆಯ್.ಎಸ್.ಯು/2021 ದಿನಾಂಕ:05/08/2021.
12	ಬಾಗಲಕೋಟೆ	ಮುಧೋಳ	ಮುಧೋಳ	4702–00–101–5–01–139 ಆಣೆಕಟ್ಟುಗಳು / ಪಿಕಪ್‌ಗಳ ನಿರ್ಮಾಣ – ಪ್ರಧಾನ ಕಾಮಗಾರಿಗಳು	ಮುಧೋಳ ತಾಲೂಕಿನ ಮಿರ್ಜಿ ಗ್ರಾಮದ ಹತ್ತಿರ ಘಟಪ್ರಭಾ ನದಿಗೆ ಅಡ್ಡಲಾಗಿ ಸಮಾನಂತರ ಬಿ.ಸಿ.ಬಿ. ನಿರ್ಮಾಣ ಕಾಮಗಾರಿ.	500.00	ಪೂರ್ಣಗೊಂಡಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 649/ ಎಂ.ಆಯ್.ಎಸ್.ಯು/2021 ದಿನಾಂಕ:11/11/2020.
13	ಬಾಗಲಕೋಟೆ	ಮುಧೋಳ	ಮುಧೋಳ	4702–00–101–5–01–139 ಆಣೆಕಟ್ಟುಗಳು / ಪಿಕಪ್‌ಗಳ ನಿರ್ಮಾಣ – ಪ್ರಧಾನ ಕಾಮಗಾರಿಗಳು	ಮುಧೋಳ ತಾಲೂಕಿನ ಪ್ರವಾಹದಿಂದ ಹಾನಿಗೊಳಗಾದ ಘಟಪ್ರಭಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಚನಾಳ ಬ್ಯಾರೇಜ ಪುನರುಜ್ಜೀವನ ಕಾಮಗಾರಿ.	143.00	ಪೂರ್ಣಗೊಂಡಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 649/ಎಂ.ಆಯ್.ಎಸ್.ಯು/2020 ದಿನಾಂಕ:05/11/2020.
14	ಬಾಗಲಕೋಟೆ	ಮುಧೋಳ	ಮುಧೋಳ	4702–00–101–03–1–139 ಏತ ನೀರಾವರಿ ಯೋಜನೆಗಳು – ಪ್ರಧಾನ ಕಾಮಗಾರಿಗಳು	ಬಂಟನೂರ ಸಣ್ಣ ನೀರಾವರಿ ಕೆರೆಯನ್ನು ಘಟಪ್ರಭಾ ನದಿಯಿಂದ ಏತ ನೀರಾವರಿ ಮೂಲಕ ತುಂಬಿಸುವ ಕಾಮಗಾರಿ.	200.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 26/ಬಿ.ಸಿ.ಬಿ/2021 ದಿನಾಂಕ:08/07/2021.

(4)

ಕ್ರ ಸಂ.	ಜಿಲ್ಲೆ	ತಾಲ್ಲೂಕು	ಮತಕ್ಷೇತ್ರ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಕಾಮಗಾರಿ ಹಂತ	ಸರ್ಕಾರದ ಪತ್ರ ಸಂಖ್ಯೆ ಮತ್ತು ದಿನಾಂಕ
1	2	3	4	5	6	7	8	9
15	ಬಾಗಲಕೋಟೆ	ಮುಧೋಳ	ಮುಧೋಳ	ವಿಶೇಷ ಘಟಕ ಯೋಜನೆ	ಮುಧೋಳ ತಾಲೂಕಿನ ಬೆಳಗಲಿ ಗ್ರಾಮದ ಬಂಗಾರೆವ್ವ ಶಂಕರ ವಂಜೇರಿ ಹಾಗೂ ಇತರರ ಜಮೀನಿಗೆ ಕೊಳವೆಬಾವಿ ಮೂಲಕ ನೀರಾವರಿ ಸೌಲಭ್ಯ(ಸರ್ವೆ ನಂ:1281,7)	20.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 429/ಎಂ.ಆಯ್.ಎಸ್.ಯು/2021 ದಿನಾಂಕ:07/08/2021.
16					ಮುಧೋಳ ತಾಲೂಕಿನ ಜಾಲಿಬೇರ ಗ್ರಾಮದ ರೇಣುಕಾ ಅರ್ಜುನ ಮಲವ್ವಗೋಳ ಇವರ ಜಮೀನಿನಲ್ಲಿ ಕೊಳವೆಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.			
17	ಬಾಗಲಕೋಟೆ	ಮುಧೋಳ	ಮುಧೋಳ	ವಿಶೇಷ ಘಟಕ ಯೋಜನೆ	ಮುಧೋಳ ತಾಲೂಕಿನ ಉತ್ತೂರ ಗ್ರಾಮದ ನಿಂಗಪ್ಪ ಶಿವಪ್ಪ ಮಾಂಗ ಇವರ ಜಮೀನಿನ ಸರ್ವೆ ನಂ:171/2ಬ ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.	20.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 429/ ಎಂ.ಆಯ್.ಎಸ್.ಯು/2021 ದಿನಾಂಕ:07/08/2021.
18					ಮುಧೋಳ ತಾಲೂಕಿನ ಉತ್ತೂರ ಗ್ರಾಮದ ಕೃಷ್ಣವ್ವ ಪರಸಪ್ಪ ಮಾಂಗ ಇವರ ಜಮೀನು ಸರ್ವೆ ನಂ:172/2ಅ ರಲ್ಲಿ ಕೊಳವೆಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.			
19	ಬಾಗಲಕೋಟೆ	ಮುಧೋಳ	ಮುಧೋಳ	ವಿಶೇಷ ಘಟಕ ಯೋಜನೆ	ಮುಧೋಳ ತಾಲೂಕಿನ ಆಲಗುಂಡಿ ಬಿ.ಕೆ ಶ್ರೀಮತಿ ಸತ್ಯವ್ವ ತಾ:ದುರಗವ್ವ ಜಾನಮಟ್ಟಿ ಹಾಗೂ ಇತರೆ ಇವರ ಸ.ನಂ:165/7, 165, 155 ರ ಜಮೀನಿನಲ್ಲಿ ಕೊಳವೆ ಭಾವಿ	50.00	ಪ್ರಗತಿಯಲ್ಲಿದೆ	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/429/ ಎಂ.ಆಯ್.ಎಸ್.ಯು/2021 ದಿನಾಂಕ:07/08/2021.
20					ಮುಧೋಳ ತಾಲೂಕಿನ ಪಾಲ್ಕಿಮಾನೆ ಗ್ರಾಮದ ಕರೆವ್ವ ಕಲ್ಲೋಳಪ್ಪ ಮುಧೋಳ ಇವರ ಜಮೀನು ಸರ್ವೆ ನಂ.36/2 ರಲ್ಲಿ ಕೊಳವೆಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.			
21					ಮುಧೋಳ ತಾಲೂಕಿನ ಪಾಲ್ಕಿಮಾನೆ ಗ್ರಾಮದ ಗಂಗವ್ವ ತಿಪ್ಪಣ್ಣ ಮಾದರ ಹಾಗೂ ವಿಠಲ ಹಣಮಪ್ಪ ಮ್ಯಾಗೇರಿ ಇವರ ಜಮೀನು ಸರ್ವೆ ನಂ:65/19, 66/55 ರಲ್ಲಿ ಕೊಳವೆಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.			
22					ಮುಧೋಳ ತಾಲೂಕಿನ ಜಾಲಿಕಟ್ಟಿ ಬಿ.ಕೆ. ಗ್ರಾಮದ ಶಾರದಾ ಬೆನ್ನಪ್ಪ ಮಾದರ ಇವರ ಜಮೀನು ಸರ್ವೆ ನಂ:60/4 ರಲ್ಲಿ ಕೊಳವೆಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.			

(5)

ಕ್ರ ಸಂ.	ಜಿಲ್ಲೆ	ತಾಲ್ಲೂಕು	ಮತಕ್ಷೇತ್ರ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಕಾಮಗಾರಿ ಹಂತ	ಸರ್ಕಾರದ ಪತ್ರ ಸಂಖ್ಯೆ ಮತ್ತು ದಿನಾಂಕ
1	2	3	4	5	6	7	8	9
23					ಮುಧೋಳ ತಾಲೂಕಿನ ಮುಗಳಖೋಡ ಗ್ರಾಮದ ಗೋಪಾಲ ಪರಮಪ್ಪ ಮಾದರ ಇವರ ಜಮೀನು ಸರ್ವೆ ನಂ:96/2+2/10, 1+2/6/1 ರಲ್ಲಿ ಕೊಳವೆಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.			
24	ಬಾಗಲಕೋಟೆ	ಮುಧೋಳ	ಮುಧೋಳ	ವಿಶೇಷ ಘಟಕ ಯೋಜನೆ	ಮುಧೋಳ ತಾಲೂಕಿನ ಬರಗಿ ಗ್ರಾಮದ ಹತ್ತಿರ ಇರುವ ಹಳ್ಳಕ್ಕೆ ಬಂದಾರ ನಿರ್ಮಾಣ.	150.00	ಪೂರ್ಣಗೊಂಡಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 845/ ಎಂ.ಆಯ್.ಎಸ್.ಯು/2020 ದಿನಾಂಕ:30/01/2021.
25					ಮುಧೋಳ ತಾಲೂಕಿನ ಹಲಗಲಿ ಗ್ರಾಮದ ಹತ್ತಿರ ಇರುವ ಹಳ್ಳಕ್ಕೆ ಬಂದಾರ ನಿರ್ಮಾಣ.			
26					ಮುಧೋಳ ತಾಲೂಕಿನ ಬೆಳಗಲಿ ಗ್ರಾಮದ ಹತ್ತಿರ ಇರುವ ಹಳ್ಳಕ್ಕೆ ಬಂದಾರ ನಿರ್ಮಾಣ.			
27	ಬಾಗಲಕೋಟೆ	ಮುಧೋಳ	ಮುಧೋಳ	ವಿಶೇಷ ಘಟಕ ಯೋಜನೆ	ಮುಧೋಳ ತಾಲೂಕಿನ ಮಲ್ಲಾಪೂರ ಪಿ.ಎಲ್. ಗ್ರಾಮದ ಹತ್ತಿರ ಇರುವ ಹಳ್ಳಕ್ಕೆ ಬಂದಾರ ನಿರ್ಮಾಣ.	240.00	ಪೂರ್ಣಗೊಂಡಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 845/ ಎಂ.ಆಯ್.ಎಸ್.ಯು/2020 ದಿನಾಂಕ:30/01/2021.
28					ಮುಧೋಳ ತಾಲೂಕಿನ ಒಂಟಗೋಡಿ ಗ್ರಾಮದ ಹತ್ತಿರ ಇರುವ ಹಳ್ಳಕ್ಕೆ ಬ್ರಿಡ್ಜ ಕಂ. ಬ್ಯಾರೇಜ ನಿರ್ಮಾಣ.			
29	ಬಾಗಲಕೋಟೆ	ಮುಧೋಳ	ಮುಧೋಳ	ವಿಶೇಷ ಘಟಕ ಯೋಜನೆ	ಮುಧೋಳ ತಾಲೂಕಿನ ಒಂಟಗೋಡಿ ಗ್ರಾಮದ ಹತ್ತಿರ ಇರುವ ಹಳ್ಳಕ್ಕೆ ಬ್ಯಾರೇಜ ನಿರ್ಮಾಣ.	200.00	ಪೂರ್ಣಗೊಂಡಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 845/ ಎಂ.ಆಯ್.ಎಸ್.ಯು/2020 ದಿನಾಂಕ:30/01/2021.
30	ಬಾಗಲಕೋಟೆ	ಮುಧೋಳ	ಮುಧೋಳ	ಗಿರಿಜನ ಉಪ ಯೋಜನೆ	ಮುಧೋಳ ತಾಲೂಕಿನ ಕಿಶೋರಿ ಗ್ರಾಮದ ಹಣಮಂತ ಸತ್ಯಪ್ಪ ಬಂಟನೂರ ಹಾಗೂ ಇತರರ ಜಮೀನಿನ ಸರ್ವೆ ನಂ:25/4, 25/19 ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.	10.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 429/ ಎಂ.ಆಯ್.ಎಸ್.ಯು/2021 ದಿನಾಂಕ:07/08/2021.
31	ಬಾಗಲಕೋಟೆ	ಮುಧೋಳ	ಮುಧೋಳ	ಗಿರಿಜನ ಉಪ ಯೋಜನೆ	ಮುಧೋಳ ತಾಲೂಕಿನ ಪಾಲ್ಕಿಮಾನೆ ಗ್ರಾಮದ ಮುದಕಪ್ಪ ಗೋವಿಂದಪ್ಪ ನಾವಲಗಿ ಇವರ ಜಮೀನಿನ ಸರ್ವೆ ನಂ:135/10ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.	10.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/429/ ಎಂ.ಆಯ್.ಎಸ್.ಯು/2021 ದಿನಾಂಕ:07/08/2021.
32	ಬಾಗಲಕೋಟೆ	ಮುಧೋಳ	ಮುಧೋಳ	ಗಿರಿಜನ ಉಪ ಯೋಜನೆ	ಮುಧೋಳ ತಾಲೂಕಿನ ಮೆಳ್ಳಿಗೇರಿ ಗ್ರಾಮದ ರುಕ್ಮೀಣಿ ಮಲ್ಲಪ್ಪ ಬಂಟನೂರ ಹಾಗೂ ಇತರರ ಜಮೀನಿನ ಸರ್ವೆ ನಂ:81/3,4,5 ರಲ್ಲಿ ಕೊಳವೆಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.	50.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 429/ಎಂ.ಆಯ್.ಎಸ್.ಯು/2021 ದಿನಾಂಕ:07/08/2021.

ಕ್ರ ಸಂ.	ಜಿಲ್ಲೆ	ತಾಲ್ಲೂಕು	ಮತಕ್ಷೇತ್ರ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಕಾಮಗಾರಿ ಹಂತ	ಸರ್ಕಾರದ ಪತ್ರ ಸಂಖ್ಯೆ ಮತ್ತು ದಿನಾಂಕ
1	2	3	4	5	6	7	8	9
33					ಮುಧೋಳ ತಾಲೂಕಿನ ಹಲಗಲಿ ಗ್ರಾಮದ ಸದಾಶಿವ ರಾಮಪ್ಪ ಚಿಕ್ಕಣ್ಣವರ ಹಾಗೂ ಇತರರ ಜಮೀನಿನ ಸರ್ವೆ ನಂ:102/1, 105/1ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.			
34					ಮುಧೋಳ ತಾಲೂಕಿನ ಹಲಗಲಿ ಗ್ರಾಮದ ಸಮರ್ಥ ಈರಪ್ಪ ಚಿಕ್ಕಣ್ಣವರ ಇವರ ಜಮೀನಿನ ಸರ್ವೆ ನಂ:101/1, 98/1 ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.			
35					ಮುಧೋಳ ತಾಲೂಕಿನ ಹಲಗಲಿ ಗ್ರಾಮದ ಶಂಕ್ರೆಪ್ಪ ಮುಂಡಲಿಕಪ್ಪ ಪೂಜಾರಿ ಇವರ ಜಮೀನಿನ ಸರ್ವೆ ನಂ:433/1,2,3 ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.			
36					ಮುಧೋಳ ತಾಲೂಕಿನ ಹಲಗಲಿ ಗ್ರಾಮದ ಹಣಮಪ್ಪ ಬೆನ್ನಪ್ಪ ಕುಂದರಗಿ ಇವರ ಜಮೀನಿನ ಸರ್ವೆ ನಂ:80/1 ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.			
37	ಬಾಗಲಕೋಟೆ	ಮುಧೋಳ	ಮುಧೋಳ	ಗಿರಿಜನ ಉಪ ಯೋಜನೆ	ಮುಧೋಳ ತಾಲೂಕಿನ ಯಡಹಳ್ಳಿ ಗ್ರಾಮದ ಶಂಕ್ರೆಪ್ಪ ಲಕ್ಕಪ್ಪ ಅರಕೇರಿ ಇವರ ಜಮೀನಿನ ಸರ್ವೆ ನಂ:121/3ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.	50.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 429/ಎಂ.ಆಯ್.ಎಸ್.ಯು/2021 ದಿನಾಂಕ:07/08/2021.
38					ಮುಧೋಳ ತಾಲೂಕಿನ ಮಂಟೂರ ಗ್ರಾಮದ ಶಂಕ್ರೆಪ್ಪ ಕಲ್ಲಪ್ಪ ತಳವಾರ ಇವರ ಜಮೀನಿನ ಸರ್ವೆ ನಂ:275/5ಎ ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.			
39					ಮುಧೋಳ ತಾಲೂಕಿನ ಮಂಟೂರ ಗ್ರಾಮದ ಭೀಮಪ್ಪ ಕಲ್ಲಪ್ಪ ತಳವಾರ ಇವರ ಜಮೀನಿನ ಸರ್ವೆ ನಂ:276/2ಈ2 ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.			
40					ಮುಧೋಳ ತಾಲೂಕಿನ ಮಂಟೂರ ಗ್ರಾಮದ ರುಕ್ಕವ್ವ ಬೈಲಪ್ಪ ತೆಗ್ಗಿ ಇವರ ಜಮೀನಿನ ಸರ್ವೆ ನಂ:193/1ಆ ರಲ್ಲಿ ಕೊಳವೆ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.			

ಕ್ರ. ಸಂ.	ಜಿಲ್ಲೆ	ತಾಲ್ಲೂಕು	ಮತಕ್ಷೇತ್ರ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಕಾಮಗಾರಿ ಹಂತ	ಸರ್ಕಾರದ ಪತ್ರ ಸಂಖ್ಯೆ ಮತ್ತು ದಿನಾಂಕ
1	2	3	4	5	6	7	8	9
41					ಮುಧೋಳ ತಾಲೂಕಿನ ಯಡಹಳ್ಳಿ ಗ್ರಾಮದ ಮಲ್ಲಪ್ಪ ದ್ಯಾವಪ್ಪ ಜಲಗೇರಿ ಇವರ ಜಮೀನಿನ ಸರ್ವೆ ನಂ:146 ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.			
42	ಬಾಗಲಕೋಟೆ	ಮುಧೋಳ	ಮುಧೋಳ	ಗಿರಿಜನ ಉಪ-ಯೋಜನೆ	ಮುಧೋಳ ತಾಲೂಕಿನ ಹಲಗಲಿ ಕಸ್ತೂರಿ ಮದಕಪ್ಪ ಜಡಗನ್ನವರ ಇವರ ಜಮೀನಿನ ಸ.ನಂ.82/5, 10 ರಲ್ಲಿ ಕೊಳವೆ ಬಾವಿ.	50.00	ಪ್ರಗತಿಯಲ್ಲಿದೆ	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 845/ ಎಂ.ಆಯ್.ಎಸ್.ಯು/2020 ದಿನಾಂಕ:30/01/2021.
43					ಮುಧೋಳ ತಾಲೂಕಿನ ಮಂಟೂರ, ಭೀಮಪ್ಪ ರಾಯಪ್ಪ ಮರನೂರ ಹಾಗೂ ಇತರೆ ಜಮೀನಿ ಸ.ನಂ.189/3,2,1 ರಲ್ಲಿ ಕೊಳವೆ ಬಾವಿ.			
44					ಮುಧೋಳ ತಾಲೂಕಿನ ಮಂಟೂರ ಗ್ರಾಮದ ಶ್ರೀ.ಆನಂದ ಸಂಗಪ್ಪ ಘಸ್ತಿ ಇವರ ಜಮೀನಿನ ಸ.ನಂ.184/ಅ ರಲ್ಲಿ ಕೊಳವೆ ಬಾವಿ.			
45					ಮುಧೋಳ ತಾಲೂಕಿನ ಮಂಟೂರ ಗ್ರಾಮದ ಶ್ರೀ.ಕರಪ್ಪ ಸಾಬಪ್ಪ ತಳವಾರ ಇವರ ಜಮೀನಿಗೆ ಸ.ನಂ.215/1,2 ರಲ್ಲಿ ಕೊಳವೆ ಬಾವಿ.			
46					ಮುಧೋಳ ತಾಲೂಕಿನ ಮಂಟೂರ ಗ್ರಾಮದ ಲಕ್ಕವ್ವ ಅಪ್ಪಣ್ಣ ಪಡಲಗಿ ಇವರ ಜಮೀನಿನ ಸ.ನಂ.283/1,2ರಲ್ಲಿ ಕೊಳವೆ ಬಾವಿ.			
47	ಬಾಗಲಕೋಟೆ	ಮುಧೋಳ	ಮುಧೋಳ	ಗಿರಿಜನ ಉಪ-ಯೋಜನೆ	ಮುಧೋಳ ತಾಲೂಕಿನ ಹಲಗಲಿ (ಸೈಟ್-1) ಗ್ರಾಮದ ಹತ್ತಿರ ಇರುವ ಹಳ್ಳಕ್ಕೆ ಬಾಂದಾರ ನಿರ್ಮಾಣ.	145.00	ಪೂರ್ಣಗೊಂಡಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 845/ ಎಂ.ಆಯ್.ಎಸ್.ಯು/2020 ದಿನಾಂಕ:30/01/2021.
48					ಮುಧೋಳ ತಾಲೂಕಿನ ಹಲಗಲಿ (ಸೈಟ್-2) ಗ್ರಾಮದ ಹತ್ತಿರ ಇರುವ ಹಳ್ಳಕ್ಕೆ ಬಾಂದಾರ ನಿರ್ಮಾಣ.			
49					ಮುಧೋಳ ತಾಲೂಕಿನ ಹಲಗಲಿ (ಸೈಟ್-3) ಗ್ರಾಮದ ಹತ್ತಿರ ಇರುವ ಹಳ್ಳಕ್ಕೆ ಬಾಂದಾರ ನಿರ್ಮಾಣ.			
50	ಬಾಗಲಕೋಟೆ	ಹುನಗುಂದ	ಹುನಗುಂದ	4702-00-101-5-01-139 ಆಣೆಕಟ್ಟುಗಳು / ಪಿಕಪ್‌ಗಳ ನಿರ್ಮಾಣ - ಪ್ರಧಾನ ಕಾಮಗಾರಿಗಳು	ಹುನಗುಂದ ತಾಲೂಕಿನ ಘಟ್ಟಿಗನೂರ ಹಗೆದಾಳ ಹತ್ತಿರ ಹಳ್ಳಕ್ಕೆ ಬಿ.ಸಿ.ಬಿ. ನಿರ್ಮಾಣ.	200.00	ಪೂರ್ಣಗೊಂಡಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 649/ಎಂ.ಆಯ್.ಎಸ್.ಯು/2020 ದಿನಾಂಕ:05/11/2020.

(8)

ಕ್ರ ಸಂ.	ಜಿಲ್ಲೆ	ತಾಲ್ಲೂಕು	ಮತಕ್ಷೇತ್ರ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಕಾಮಗಾರಿ ಹಂತ	ಸರ್ಕಾರದ ಪತ್ರ ಸಂಖ್ಯೆ ಮತ್ತು ದಿನಾಂಕ
1	2	3	4	5	6	7	8	9
51	ಬಾಗಲಕೋಟೆ	ಹುನಗುಂದ	ಹುನಗುಂದ	4702-00-101-03-1-139 ಏತ ನೀರಾವರಿ ಯೋಜನೆಗಳು – ಪ್ರಧಾನ ಕಾಮಗಾರಿಗಳು	ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ತಿಮ್ಮಾಪುರ ಗ್ರಾಮದ ಸ.ನಂ.32/ಬಿ, ಕ್ಷೇತ್ರ 37 ಎಕರೆ 6 ಗುಂಟೆ ಕೆರೆಯ ಅಭಿವೃದ್ಧಿ ಹಾಗೂ ನೀರು ತುಂಬಿಸುವ ಕಾಮಗಾರಿ	500.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/116/ ಎಲ್.ಆಯ್.ಎಸ್/2021 ದಿನಾಂಕ:26/10/2021.
52	ಬಾಗಲಕೋಟೆ	ಹುನಗುಂದ	ಹುನಗುಂದ	ವಿಶೇಷ ಘಟಕ ಯೋಜನೆ	ಹುನಗುಂದ ತಾಲೂಕಿನ ಇಂದವಾರ ಗ್ರಾಮದ ರಿ.ಸ.ನಂ.43/2, 55/2, 55/3 ರ ಶ್ರೀ ಹನಮಪ್ಪ ಯಲ್ಲಪ್ಪ ಚಲವಾದಿ ಹಾಗೂ ಶ್ರೀಮತಿ. ಗುರಲಿಂಗವ್ವ ತಂ.ಭೀಮಪ್ಪ ಮಾದರ ಹಾಗೂ ಇತರರ ಜಮೀನಿಗೆ ನದಿಯಿಂದ ನೀರಾವರಿ ಸೌಲಭ್ಯ ಒದಗಿಸುವದು.	25.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 429/ ಎಂ.ಆಯ್.ಎಸ್.ಯು/2021 ದಿನಾಂಕ:07/08/2021.
53	ಬಾಗಲಕೋಟೆ	ಜಮಖಂಡಿ	ಜಮಖಂಡಿ	4702-00-101-5-01-139 ಆಣೆಕಟ್ಟುಗಳು / ಪಿಕಪ್‌ಗಳ ನಿರ್ಮಾಣ – ಪ್ರಧಾನ ಕಾಮಗಾರಿಗಳು	ಜಮಖಂಡಿ ತಾಲೂಕಿನ ಕಾಜಿಬೀಳಗಿ ಗ್ರಾಮದ ಹತ್ತಿರ ಹಳ್ಳಕ್ಕೆ ಬಂದಾರ ನಿರ್ಮಾಣ (ಸೈಟ್-1).	65.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 82/ ಬಿ.ಸಿ.ಬಿ/2021 ದಿನಾಂಕ:23/08/2021.
54	ಬಾಗಲಕೋಟೆ	ಜಮಖಂಡಿ	ಜಮಖಂಡಿ	4702-00-101-5-01-139 ಆಣೆಕಟ್ಟುಗಳು / ಪಿಕಪ್‌ಗಳ ನಿರ್ಮಾಣ – ಪ್ರಧಾನ ಕಾಮಗಾರಿಗಳು	ಜಮಖಂಡಿ ತಾಲೂಕಿನ ಸಾವಳಗಿ ಗ್ರಾಮದ ಹತ್ತಿರ ಹಳ್ಳಕ್ಕೆ ಬಂದಾರ ನಿರ್ಮಾಣ.	70.00	ಪ್ರಗತಿಯಲ್ಲಿದೆ	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 82/ಬಿ.ಸಿ.ಬಿ/2021 ದಿನಾಂಕ:23/08/2021.
55	ಬಾಗಲಕೋಟೆ	ಜಮಖಂಡಿ	ತೇರದಾಳ	4702 ಕೆರೆಗಳ ಆಧುನೀಕರಣ	ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ಚಿಮ್ಮಡ ಕೆರೆ ಸೋರುವಿಕೆ ತಡೆಗಟ್ಟುವ ಹಾಗೂ ಸಿ.ಟಿ.ಸಿ. ನಿರ್ಮಿಸುವ ಕಾಮಗಾರಿ	100.00	ಆರ್ಥಿಕ ಬಿಡ್ ಅನುಮೋದನೆ ಆಗಿರುತ್ತದೆ. ಎಲ್.ಓ.ಎ. ಕೊಡಬೇಕಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 429/ಎಂ.ಆಯ್.ಎಸ್.ಯು/2021 ದಿನಾಂಕ:07/08/2021.
56	ಬಾಗಲಕೋಟೆ	ಜಮಖಂಡಿ	ತೇರದಾಳ	ವಿಶೇಷ ಘಟಕ ಯೋಜನೆ	ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ಹನಗಂಡಿ ಗ್ರಾಮದ ಶ್ರೀ.ರಾವಸಾಬ ಭೀಮಪ್ಪ ಗುಬಚಿ ಇವರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಯಿಸಿ ಪೈಪ್‌ಲೈನ್ ಮಾಡಿ ನೀರಾವರಿ ಸೌಲಭ್ಯ ಒದಗಿಸುವುದು.	50.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 429/ಎಂ.ಆಯ್.ಎಸ್.ಯು/2021 ದಿನಾಂಕ:07/08/2021.
57					ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ಹನಗಂಡಿ ಗ್ರಾಮದ ಶ್ರೀ.ಕಲ್ಲಪ್ಪ ಶಿವಪುತ್ರಪ್ಪ ಯಳಕಾರ ಇವರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಯಿಸಿ ಪೈಪ್‌ಲೈನ್ ಮಾಡಿ ನೀರಾವರಿ ಸೌಲಭ್ಯ ಒದಗಿಸುವುದು.			

9

ಕ್ರ ಸಂ.	ಜಿಲ್ಲೆ	ತಾಲ್ಲೂಕು	ಮತಕ್ಷೇತ್ರ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಕಾಮಗಾರಿ ಹಂತ	ಸರ್ಕಾರದ ಪತ್ರ ಸಂಖ್ಯೆ ಮತ್ತು ದಿನಾಂಕ
1	2	3	4	5	6	7	8	9
58					ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ಜಗದಾಳ ಗ್ರಾಮದ ಶ್ರೀ.ಯಮನಪ್ಪ ತಾಯಿ ಬಸವ್ವ ದೊಡ್ಡಮನಿ ಇವರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಯಿಸಿ ಪೈಪ್‌ಲೈನ್ ಮಾಡಿ ನೀರಾವರಿ ಸೌಲಭ್ಯ ಒದಗಿಸುವುದು.			
59					ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ಜಗದಾಳ ಗ್ರಾಮದ ಶ್ರೀ.ದುರ್ಗಪ್ಪ ಬಾಳಪ್ಪ ಬಸವ್ವಗೋಳ ಇವರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಯಿಸಿ ಪೈಪ್‌ಲೈನ್ ಮಾಡಿ ನೀರಾವರಿ ಸೌಲಭ್ಯ ಒದಗಿಸುವುದು. (ಜಗದಾಳ ರಿ.ಸ.ನಂ.146/6, 146/7, ಕ್ಷೇತ್ರ 2-26, 0-20)			
60					ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ನಾವಳಗಿ ಗ್ರಾಮದ ಶ್ರೀಮತಿ:ಚಂಪವ್ವ ವಿಠಲ ಮಾಗ ಉರ್ಫ ಶಿರೋಳ ಇವರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಯಿಸಿ ನೀರಾವರಿ ಸೌಲಭ್ಯ ಒದಗಿಸುವುದು.(ಜಗದಾಳ ರಿಸ.ನಂ.95/8 ಕ್ಷೇತ್ರ: 2-00)			
61					ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ನಾವಳಗಿ ಗ್ರಾಮದ ಶ್ರೀಮತಿ:ಗಂಗವ್ವ ರಾಮಪ್ಪ ಚನಾಳ ಹಾಗೂ ಇತರರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಯಿಸಿ ನೀರಾವರಿ ಸೌಲಭ್ಯ ಒದಗಿಸುವುದು.(ನಾವಲಗಿ ರಿಸ.ನಂ.158/1ಬ, ಕ್ಷೇತ್ರ: 3-14,0-34)			
62					ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ನಾವಳಗಿ ಗ್ರಾಮದ ಶ್ರೀ.ರಾಮಪ್ಪ ಲಕ್ಷ್ಮಣ ಮಾದರ ಉರ್ಫ ಪೂಜಾರಿ ಹಾಗೂ ಇವರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಯಿಸಿ ನೀರಾವರಿ ಸೌಲಭ್ಯ ಒದಗಿಸುವುದು.(ನಾವಲಗಿ ರಿಸ.ನಂ.112/3, ಕ್ಷೇತ್ರ: 5-00)			
63	ಬಾಗಲಕೋಟೆ	ಜಮಖಂಡಿ	ತೇರದಾಳ	ವಿಶೇಷ ಘಟಕ ಯೋಜನೆ	ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ಚಿಮ್ಮಡ ಗ್ರಾಮದ ಶ್ರೀಮತಿ:ಕಸ್ತೂರೆವ್ವ ರಮೇಶ ಮೇತ್ರಿ ಇವರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಯಿಸಿ ಪೈಪ್‌ಲೈನ್ ಮಾಡಿ ನೀರಾವರಿ ಸೌಲಭ್ಯ ಒದಗಿಸುವುದು.	42.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 429/ ಎಂ.ಆಯ್.ಎಸ್.ಯು/2021 ದಿನಾಂಕ:07/08/2021.

(10)

ಕ್ರ ಸಂ.	ಜಿಲ್ಲೆ	ತಾಲ್ಲೂಕು	ಮತಕ್ಷೇತ್ರ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಕಾಮಗಾರಿ ಹಂತ	ಸರ್ಕಾರದ ಪತ್ರ ಸಂಖ್ಯೆ ಮತ್ತು ದಿನಾಂಕ
1	2	3	4	5	6	7	8	9
64					ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ಚಿಮ್ಮಡ ಗ್ರಾಮದ ಶ್ರೀಮತಿ:ಯಲ್ಲವ್ವ ತಂದೆ ಹಣಮಂತ ಸಾವಳಗಿ ಇವರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಯಿಸಿ ಪೈಪ್‌ಲೈನ್ ಮಾಡಿ ನೀರಾವರಿ ಸೌಲಭ್ಯ ಒದಗಿಸುವುದು.(ಚಿಮ್ಮಡ ರಿ.ಸ.ನಂ.211/6, ಕ್ಷೇತ್ರ 2-10)			
65					ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ಮದುರಖಂಡಿ ಗ್ರಾಮದ ಶ್ರೀಮತಿ:ಸುನಂದಾ ತಂದೆ ಶಿವಪ್ಪ ಮಾದರ ಉರ್ಫ ಕಾಂಬಳೆ ಇವರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಯಿಸಿ ನೀರಾವರಿ ಸೌಲಭ್ಯ ಒದಗಿಸುವುದು.(ರಿ.ಸ.ನಂ.64/2/4, ಕ್ಷೇತ್ರ 2 ಎಕರೆ 37 ಗುಂಟೆ)			
66					ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ರಬಕವಿ ಪಟ್ಟಣದ ಶ್ರೀ.ಬಸವರಾಜ ನಾಗಪ್ಪ ಮಹಾಜನ ಹಾಗೂ ಇತರರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಯಿಸಿ ನೀರಾವರಿ ಸೌಲಭ್ಯ ಒದಗಿಸುವುದು.(ರಿ.ಸ.ನಂ.65/1ಕ, 65/1ಬ ಕ್ಷೇತ್ರ 2-00, 1-00)			
67					ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ಮಹಾಲಿಂಗಪೂರ ಪಟ್ಟಣದ ಶ್ರೀ.ಮಹಾಲಿಂಗಪ್ಪ ಭೀಮಪ್ಪ ಬಂಡಿವಡ್ಡರ ಇವರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಯಿಸಿ ನೀರಾವರಿ ಸೌಲಭ್ಯ ಒದಗಿಸುವುದು.(ರಿ.ಸ.ನಂ.26/13&26/14 ಕ್ಷೇತ್ರ 1 ಎಕರೆ 17 ಗುಂಟೆ & 1 ಎಕರೆ 11 ಗುಂಟೆ)			
68					ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ರಾಮಪೂರ ಪಟ್ಟಣದ ಶ್ರೀ.ಶ್ರೀಶೈಲ ರಾಮಚಂದ್ರ ಆಲಗೂರ ಇವರ ಜಮೀನಿನಲ್ಲಿ ಕೊಳವೆ ಬಾವಿ ಕೊರೆಯಿಸಿ ನೀರಾವರಿ ಸೌಲಭ್ಯ ಒದಗಿಸುವುದು. (ಹೊಸೂರು ರಿ.ಸ.ನಂ.12/1+2/2 ಕ್ಷೇತ್ರ: 2-00)			
69	ಬಾಗಲಕೋಟೆ	ಮುಧೋಳ	ತೇರದಾಳ	4702 ಹೊಸ ಕೆರೆಗಳ ನಿರ್ಮಾಣ	ಮದಭಾವಿ ಗ್ರಾಮದ ಹತ್ತಿರ ಹೊಸ ಇಂಗು ಕೆರೆ ನಿರ್ಮಾಣ ಕಾಮಗಾರಿ.	375.00	ಎಲ್.ಓ.ಎ. ಕೊಡಲಾಗಿದೆ.	ಸರ್ಕಾರದ ಪತ್ರ ಸಂ:ಎಂ.ಆಯ್.ಡಿ/ 117/ ಎಂ.ಆರ್.ಎಸ್.ಯು/2021 ದಿನಾಂಕ:07/07/2021.
					ಒಟ್ಟು	4761.00		

(11)

ವಿಧಾನಸಭಾ ಸದಸ್ಯರಾದ ಮಾನ್ಯ ಶ್ರೀ ಸಿದ್ದು ಸವದಿ (ತೇರದಾಳ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:274ಕ್ಕೆ ಅನುಬಂಧ-2

ಸರ್ಕಾರದಿಂದ ಅನುಮೋದನೆ ನೀಡಬೇಕಾದ ಕಾಮಗಾರಿಗಳ ವಿವರ.

ಕ್ರ. ಸಂ.	ಜಿಲ್ಲೆ	ತಾಲೂಕು	ಮತಕ್ಷೇತ್ರ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಷರಾ
1	2	3	4	5	6	7	8
1	ಬಾಗಲಕೋಟೆ	ಬಾಗಲಕೋಟೆ	ಬಾಗಲಕೋಟ	4702-00-101-03-1-139 ಏತನೀರಾವರಿ ಯೋಜನೆಗಳು - ಪ್ರಧಾನ ಕಾಮಗಾರಿಗಳು	ಬಾಗಲಕೋಟೆ ಜಿಲ್ಲೆ ಬಾಗಲಕೋಟೆ ತಾಲ್ಲೂಕಿನ ತೋಟಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯ ಬಾಗಲಕೋಟೆಗೆ ಶಾಶ್ವತ ನೀರಾವರಿ ಸೌಲಭ್ಯ ಒದಗಿಸುವ ಕಾಮಗಾರಿ	995.00	
2	ಬಾಗಲಕೋಟೆ	ಬಾಗಲಕೋಟೆ	ಬಾಗಲಕೋಟ	ಗಿರಿಜನ ಉಪ ಯೋಜನೆ	ಬಾಗಲಕೋಟೆ ತಾಲೂಕಿನ ಹಿರೇಶೆಲ್ಲಿಕೇರಿ ಗ್ರಾಮದ ಶ್ರೀ.ದುಂಡಪ್ಪ ಮಡಪ್ಪ ಆನೆಗುಂದಿ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.	20.00	
3					ಬಾದಾಮಿ ತಾಲೂಕಿನ ಕೈನಕಟ್ಟಿ ಗ್ರಾಮದ ಶ್ರೀ.ಸೋಮಪ್ಪ ರಾಮಪ್ಪ ಕೊಡ್ಲ್ಯಾಳ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		
4					ಬಾದಾಮಿ ತಾಲೂಕಿನ ಹೂಲಗೇರಿ ಗ್ರಾಮದ ಶ್ರೀ.ಶಿವಪ್ಪ ಹನಮಪ್ಪ ಜಲಗೇರಿ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		
5	ಬಾಗಲಕೋಟೆ	ಬಾಗಲಕೋಟೆ	ಬಾಗಲಕೋಟ	ಗಿರಿಜನ ಉಪ ಯೋಜನೆ	ಬೆವಿನಮಟ್ಟಿ ಗ್ರಾಮದ ರಿ.ಸ.ನಂ:18, 22/1, 22/2, 22/2ಬ, 23/3ರ ಶ್ರೀ.ಬಸಪ್ಪ. ಭೀಮಪ್ಪ. ಅಡಗಲ್, ಶ್ರೀ.ಹನಮಪ್ಪ.ಸೋಮಪ್ಪ.ಗೌಡರ, ಶ್ರೀ.ಹನಮಪ್ಪ.ದುರ್ಗಪ್ಪ.ಗೌಡರ, ಶ್ರೀ.ವಿಜಪ್ಪ. ರಾಮಣ್ಣ. ಗೌಡರ ಹಾಗೂ ಇತರರ ಜಮೀನುಗಳಿಗೆ ನದಿಯಿಂದ ನೀರಾವರಿ ಸೌಲಭ್ಯ ಒದಗಿಸುವುದು.	50.00	
6	ಬಾಗಲಕೋಟೆ	ಬದಾಮಿ	ಬದಾಮಿ	ವಿಶೇಷ ಘಟಕ ಯೋಜನೆ	ಬಾಗಲಕೋಟ ಜಿಲ್ಲೆಯ ಬದಾಮಿ ತಾಲ್ಲೂಕಿನ ಶ್ರೀ ರಾಮಪ್ಪ ತಂದೆ ದೊಡ್ಡಯಲ್ಲಪ್ಪ ಕೋಟಿ ಇವರು ಸರ್ವೆ ನಂ 6/2 ರ ಹೊಲದಲ್ಲಿ ಹೊಳೆಯಿಂದ ಪೈಪಲೈನ್ ಅಳವಡಿಸಿ ನೀರಾವರಿ ಸೌಲಭ್ಯ ಒದಗಿಸುವುದು.	30.00	
7	ಬಾಗಲಕೋಟೆ	ಬದಾಮಿ	ಬದಾಮಿ	ವಿಶೇಷ ಘಟಕ ಯೋಜನೆ	ಬಾಗಲಕೋಟೆ ತಾಲೂಕಿನ ಖಜ್ಜಿಡೋಣಿ ಗ್ರಾಮದ ಶ್ರೀ.ರಮೇಶ ತಾಯಪ್ಪ ಪೂಜಾರಿ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.	45.00	
8					ಬಾದಾಮಿ ತಾಲೂಕಿನ ಹಲಕುರ್ಕಿ ಗ್ರಾಮದ ಶ್ರೀ.ರಂಗಪ್ಪ ತಿಪ್ಪಣ್ಣ ಬಂಡಿವಡ್ಡರ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		

(12)

ಕ್ರ ಸಂ.	ಜಿಲ್ಲೆ	ತಾಲೂಕು	ಮತಕ್ಷೇತ್ರ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಷರಾ
1	2	3	4	5	6	7	8
9					ಬಾದಾಮಿ ತಾಲೂಕಿನ ಕೆರಕಲಮಟ್ಟಿ ಗ್ರಾಮದ ಶ್ರೀ.ಶ್ರೀಕಾಂತ ಭೀಮಪ್ಪ ಮಾದರ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		
10					ಬಾದಾಮಿ ತಾಲೂಕಿನ ಚಿಂಚಲಕಟ್ಟಿ ಗ್ರಾಮದ ಶ್ರೀ.ರಂಗಪ್ಪ ದುರ್ಗಪ್ಪ ವಡ್ಡರ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		
11					ಬಾದಾಮಿ ತಾಲೂಕಿನ ಗಂಗನಬೂದಿಹಾಳ ಗ್ರಾಮದ ಶ್ರೀ.ಗೋಪಾಲ ಮರಗಪ್ಪ ಮಾದರ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		
12					ಬಾಗಲಕೋಟೆ ತಾಲೂಕಿನ ಅಂಕಲಗಿ ಗ್ರಾಮದ ಶ್ರೀ.ಹಿರಗಪ್ಪ ಕಾಳಪ್ಪ ಮಾದರ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		
13					ಬಾಗಲಕೋಟೆ ತಾಲೂಕಿನ ಹಿರೇಶೇಲ್ಲಿಕೇರಿ ಗ್ರಾಮದ ಶ್ರೀ.ಅವಪ್ಪ ದುರಗಪ್ಪ ಮಾದರ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		
14	ಬಾಗಲಕೋಟ	ಬೀಳಗಿ	ಬೀಳಗಿ	ವಿಶೇಷ ಘಟಕ ಯೋಜನೆ	ಬೀಳಗಿ ತಾಲೂಕಿನ ಅರಕೇರಿ ಗ್ರಾಮದ ಶ್ರೀ.ದೇವಪ್ಪ ಕುಬಿಯಪ್ಪ ಲಮಾಣಿ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.	31.00	
15					ಬೀಳಗಿ ತಾಲೂಕಿನ ಅರಕೇರಿ ಗ್ರಾಮದ ಶ್ರೀ.ರಾಮಪ್ಪ ಗಂಗಪ್ಪ ಲಮಾಣಿ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		
16					ಬೀಳಗಿ ತಾಲೂಕಿನ ತುಂಬರಮಟ್ಟಿ ಗ್ರಾಮದ ಶ್ರೀ.ಮಲ್ಲಪ್ಪ ಫಕೀರಪ್ಪ ಮಾದರ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		
17					ಬೀಳಗಿ ತಾಲೂಕಿನ ಕಾತರಕಿ ಗ್ರಾಮದ ಶ್ರೀ.ಬಾಲು ರಾಮಪ್ಪ ಲಮಾಣಿ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		
18					ಬೀಳಗಿ ತಾಲೂಕಿನ ಸೊನ್ನ ಗ್ರಾಮದ ಶ್ರೀ.ಸದಾಶಿವ ಭೀಮವ್ವ ಮಾದರ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		
19	ಬಾಗಲಕೋಟ	ಬೀಳಗಿ	ಬೀಳಗಿ	ವಿಶೇಷ ಘಟಕ ಯೋಜನೆ	ಬೀಳಗಿ ತಾಲೂಕಿನ ಗಿರಿಸಾಗರ ಗ್ರಾಮದ ಶ್ರೀಮತಿ.ಯಲ್ಲವ್ವ ಯಂಕಪ್ಪ ಮಾದರ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.	18.00	

ಕ್ರ.ಸಂ.	ಜಿಲ್ಲೆ	ತಾಲೂಕು	ಮತಕ್ಷೇತ್ರ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಷರಾ
1	2	3	4	5	6	7	8
20					ಬೀಳಗಿ ತಾಲೂಕಿನ ಜಾನಮಟ್ಟಿ ಗ್ರಾಮದ ಶ್ರೀ.ಯಂಕಪ್ಪ ಯಮನಪ್ಪ ಮಾದರ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		
21					ಬೀಳಗಿ ತಾಲೂಕಿನ ಸೊನ್ನ ಗ್ರಾಮದ ಶ್ರೀ.ಭೀಮಪ್ಪ ಲಕ್ಷ್ಮಪ್ಪ ಮಾದರ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		
22	ಬಾಗಲಕೋಟ	ಬೀಳಗಿ	ಬೀಳಗಿ	ವಿಶೇಷ ಘಟಕ ಯೋಜನೆ	ಬಾಗಲಕೋಟ ಜಿಲ್ಲೆ, ಬೀಳಗಿ ತಾಲೂಕಿನ ಬಾಡಗಂಡಿ ಗ್ರಾಮದ ಕಾಶಿನಾಥ ಪುನ್ನು ರಾಠೋಡ ಹಾಗೂ ಇತರರ ಜಮೀನುಗಳಿಗೆ ಕೃಷ್ಣಾ ನದಿಯಿಂದ ನೀರಾವರಿ ಸೌಲಭ್ಯ ಒದಗಿಸುವುದು.	63.50	
23	ಬಾಗಲಕೋಟ	ಬೀಳಗಿ	ಬೀಳಗಿ	ಗಿರಿಜನ ಉಪ ಯೋಜನೆ	ಬೀಳಗಿ ತಾಲೂಕಿನ ಗಲಗಲಿ ಗ್ರಾಮದ ಶ್ರೀ.ಬಸಪ್ಪ ತಿಮ್ಮಪ್ಪ ಸಂಜೀವಪ್ಪಗೋಳ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.	30.00	
24					ಬೀಳಗಿ ತಾಲೂಕಿನ ಸಿದ್ದಾಪೂರ ಗ್ರಾಮದ ಶ್ರೀ.ರಂಗಪ್ಪ ಈರಪ್ಪ ಕಾಗದಾಳ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		
25					ಬೀಳಗಿ ತಾಲೂಕಿನ ಸುನಗ ಗ್ರಾಮದ ಶ್ರೀ.ರಾಮಣ್ಣ ಗೋವಿಂದಪ್ಪ ದಳವಾಯಿ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		
26					ಬೀಳಗಿ ತಾಲೂಕಿನ ತೆಗ್ಗಿ ಗ್ರಾಮದ ಶ್ರೀ.ಶಂಕ್ರೆಪ್ಪ ಶಿವಪ್ಪ ತಳವಾರ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		
27					ಬೀಳಗಿ ತಾಲೂಕಿನ ತೆಗ್ಗಿ ಗ್ರಾಮದ ಶ್ರೀ.ರಾಜೇಂದ್ರ ಸೋಮಪ್ಪ ಬಿರಾದಾರ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ ಒದಗಿಸುವುದು.		
28	ಬಾಗಲಕೋಟೆ	ಮುಧೋಳ	ಮುಧೋಳ	4702 ಹೊಸ ಕೆರೆಗಳು – ಪ್ರಧಾನ ಕಾಮಗಾರಿಗಳು	ಮುಧೋಳ ತಾಲೂಕಿನ ಬೆಳಗಲಿ ಪಟ್ಟಣಕ್ಕೆ ಇಂಗುಕೆರೆ ನಿರ್ಮಾಣ ಕಾಮಗಾರಿ	1000.00	
29	ಬಾಗಲಕೋಟೆ	ಮುಧೋಳ	ಮುಧೋಳ	4702 ಆಣೆಕಟ್ಟು/ಪಿಕಪ್ಸ್– ಪ್ರಧಾನ ಕಾಮಗಾರಿಗಳು	ಬಾಗಲಕೋಟೆ ಜಿಲ್ಲೆ ಮುಧೋಳ ತಾಲೂಕಿನ ಚಿಂಚಖಂಡಿ ಹತ್ತಿರ ಘಟಪ್ರಭಾ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿ.	990.00	
30	ಬಾಗಲಕೋಟೆ	ಮುಧೋಳ	ಮುಧೋಳ	ವಿಶೇಷ ಘಟಕ ಯೋಜನೆ	ಮುಧೋಳ ತಾಲೂಕಿನ ನಾಗರಾಳ ಗ್ರಾಮದ ಸ.ನಂ.12/5, 12/10, 12/8, 12/13, 12/6, 12/11, 12/9, 12/14, 12/7, 12/12 ಶ್ರೀಮತಿ.ಶಾರದಾ ರಾಜೇಶ ಕೂಗಾಟೆ ಹಾಗೂ ಇತರರ ಹೊಲಗಳಿಗೆ ಘಟಪ್ರಭಾ ನದಿಯಿಂದ ನೀರಾವರಿ ಸೌಲಭ್ಯ ಒದಗಿಸುವುದು	20.00	

(14)

ಕ್ರ. ಸಂ.	ಜಿಲ್ಲೆ	ತಾಲೂಕು	ಮತಕ್ಷೇತ್ರ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಷರಾ
1	2	3	4	5	6	7	8
31	ಬಾಗಲಕೋಟೆ	ಮುಧೋಳ	ಮುಧೋಳ	ವಿಶೇಷ ಘಟಕ ಯೋಜನೆ	ಮುಧೋಳ ತಾಲೂಕಿನ ಜೀರಗಾಳ ಗ್ರಾಮದ ಸ.ನಂ.108, 107, 134/1+2ಅ ಶ್ರೀಮತಿ.ಯಮನವ್ವ ತಾಯಿ ಬಾಳವ್ವ ಮಾದರ ಹಾಗೂ ಇತರರ ಹೊಲಗಳಿಗೆ ಘಟಪ್ರಭಾ ನದಿಯಿಂದ ನೀರಾವರಿ ಸೌಲಭ್ಯ ಒದಗಿಸುವುದು	60.00	
32					ಮುಧೋಳ ತಾಲೂಕಿನ ಕುಳಲಿ ಗ್ರಾಮದ ಹಣಮಂತ ಸಾಬಪ್ಪ ಮೀಶಿ ಇವರ ಜಮೀನಿನ ಸರ್ವೆ ನಂ.93/4ಎ ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.		
33					ಮುಧೋಳ ತಾಲೂಕಿನ ರಂಜಣಗಿ ಗ್ರಾಮದ ಹಣಮಂತ ಮಹಾದೇವ ಲಚ್ಚವ್ವಗೋಳ ಇವರ ಜಮೀನಿನ ಸರ್ವೆ ನಂ:94/1ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.		
34					ಮುಧೋಳ ತಾಲೂಕಿನ ಕುಳಲಿ ಗ್ರಾಮದ ತಂಗೆವ್ವ ದುರಗಪ್ಪ ಮುಕಪ್ಪಗೋಳ ಇವರ ಜಮೀನಿನ ಸರ್ವೆ ನಂ:112ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.		
35					ಮುಧೋಳ ತಾಲೂಕಿನ ಮುಗಳಖೋಡ ಗ್ರಾಮದ ಮುತ್ತಪ್ಪ ಶಿಡ್ಲಪ್ಪ ಮಾಂಗ ಉರ್ಫ ತಳಗೇರಿ ಇವರ ಜಮೀನಿನ ಸರ್ವೆ ನಂ:7/26, 7/23, 7/29, 35/30 ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.		
36					ಮುಧೋಳ ತಾಲೂಕಿನ ಉತ್ತೂರು ಗ್ರಾಮದ ನಾಗಪ್ಪ ಗೋವಿಂದಪ್ಪ ಕೋಲೂರ ಇವರ ಜಮೀನು ಉತ್ತೂರು ಗ್ರಾಮದ ಸರ್ವೆ ನಂ:44/17 ರಲ್ಲಿ ಕೊಳವೆಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.		
37	ಬಾಗಲಕೋಟೆ	ಮುಧೋಳ	ಮುಧೋಳ	ಗಿರಿಜನ ಉಪ ಯೋಜನೆ	ಮುಧೋಳ ತಾಲೂಕಿನ ಮಂಟೂರ ಗ್ರಾಮದ ಗೌರವ್ವ ರಂಗಪ್ಪ ಗಸ್ತಿ ಇವರ ಜಮೀನಿನ ಸರ್ವೆ ನಂ:184/7ರಲ್ಲಿ ಕೊಳವೆ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.	50.00	
38					ಮುಧೋಳ ತಾಲೂಕಿನ ಮಂಟೂರ ಗ್ರಾಮದ ಗೌರವ್ವ ರಂಗಪ್ಪ ಗಸ್ತಿ ಇವರ ಜಮೀನಿನ ಸರ್ವೆ ನಂ:184/15 ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.		
39					ಮುಧೋಳ ತಾಲೂಕಿನ ಮಂಟೂರ ಗ್ರಾಮದ ಲಕ್ಕವ್ವ ರಂಗಪ್ಪ ಗಸ್ತಿ ಇವರ ಜಮೀನಿನ ಸರ್ವೆ ನಂ:179/10 ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.		
40					ಮುಧೋಳ ತಾಲೂಕಿನ ಮಂಟೂರ ಗ್ರಾಮದ ಸದಪ್ಪ ಲಕ್ಕಪ್ಪ ಗಸ್ತಿ ಇವರ ಜಮೀನಿನ ಸರ್ವೆ ನಂ:179/5ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.		

15

ಕ್ರ. ಸಂ.	ಜಿಲ್ಲೆ	ತಾಲೂಕು	ಮತಕ್ಷೇತ್ರ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಷರಾ
1	2	3	4	5	6	7	8
41					ಮುಧೋಳ ತಾಲೂಕಿನ ಮಂಟೂರ ಗ್ರಾಮದ ಬಂಗಾರೆವ್ವ ಪರಸಪ್ಪ ಗಸ್ತಿ ಇವರ ಜಮೀನಿನ ಸರ್ವೆ ನಂ:179/12 ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.		
42	ಬಾಗಲಕೋಟ	ಮುಧೋಳ	ಮುಧೋಳ	ಗಿರಿಜನ ಉಪ ಯೋಜನೆ	ಮುಧೋಳ ತಾಲೂಕಿನ ಚಿತ್ರಬಾನುಕೋಟೆ ಗ್ರಾಮದ ಹಣಮಂತ ಶಿಂಗಪ್ಪ ನಾಯಕ ಇವರ ಜಮೀನಿನ ಸರ್ವೆ ನಂ:49/4 ಬ ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.	50.00	
43					ಮುಧೋಳ ತಾಲೂಕಿನ ಪೆಟ್ಲೂರ ಗ್ರಾಮದ ಚಂದ್ರವ್ವ ತಂಗಪ್ಪ ತಳವಾರ ಇವರ ಜಮೀನಿನ ಸರ್ವೆ ನಂ:52/4ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.		
44					ಮುಧೋಳ ತಾಲೂಕಿನ ಪೆಟ್ಲೂರ ಗ್ರಾಮದ ಶೃತಿ ಪಾಂಡುರಂಗ ತಳವಾರ ಇವರ ಜಮೀನಿನ ಸರ್ವೆ ನಂ:52/2ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.		
45					ಮುಧೋಳ ತಾಲೂಕಿನ ಚಿತ್ರಬಾನುಕೋಟೆ ಗ್ರಾಮದ ಯಮನಪ್ಪ ರಂಗಪ್ಪ ದಳವಾಯಿ ಇವರ ಜಮೀನಿನ ಸರ್ವೆ ನಂ:40/2 ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.		
46					ಮುಧೋಳ ತಾಲೂಕಿನ ಯಡಹಳ್ಳಿ ಗ್ರಾಮದ ಹಣಮಂತ ಮಳೆಪ್ಪ ತಳವಾರ ಇವರ ಜಮೀನಿನ ಸರ್ವೆ ನಂ:146/4 ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.		
47	ಬಾಗಲಕೋಟ	ಮುಧೋಳ	ಮುಧೋಳ	ಗಿರಿಜನ ಉಪ ಯೋಜನೆ	ಮುಧೋಳ ತಾಲೂಕಿನ ಕಿಶೋರಿ ಗ್ರಾಮದ ಭೀಮಪ್ಪ ಅಡಿವೆಪ್ಪ ಸೋಕನಾದಗಿ ಹಾಗೂ ಇತರರ ಜಮೀನಿನ ಸರ್ವೆ ನಂ:32/11, 32/12 ರಲ್ಲಿ ಕೊಳವೆ ಬಾವಿ ಮೂಲಕ ನೀರಾವರಿ ಸೌಲಭ್ಯ ಒದಗಿಸುವುದು.	10.00	
48	ಬಾಗಲಕೋಟ	ಮುಧೋಳ	ಮುಧೋಳ	ಗಿರಿಜನ ಉಪ ಯೋಜನೆ	ಮುಧೋಳ ತಾಲೂಕಿನ ಮಂಟೂರ ಗ್ರಾಮದ ದೇವೆಂದ್ರ ಗಿರೆಪ್ಪ ಜಾನಮಟ್ಟಿ ಇವರ ಜಮೀನಿನ ಸರ್ವೆ ನಂ:8/2/2ಬ, 8/2 ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.	20.00	
49					ಮುಧೋಳ ತಾಲೂಕಿನ ಮಂಟೂರ ಗ್ರಾಮದ ಚಂದ್ರವ್ವ ತಂಗಪ್ಪ ತಳವಾರ ಇವರ ಜಮೀನಿನ ಸರ್ವೆ ನಂ:8/3ಬ ರಲ್ಲಿ ಕೊಳವೆ ಬಾವಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವುದು.		
50	ಬಾಗಲಕೋಟ	ಹುನಗುಂದ	ಹುನಗುಂದ	ವಿಶೇಷ ಘಟಕ ಯೋಜನೆ	ಹುನಗುಂದ ತಾಲೂಕಿನ ಮರೋಳ ಗ್ರಾಮದ ರಿ.ಸ.ನಂ.266/1, 266/3 ಶ್ರೀ ಬಸಪ್ಪ ಯಂಕಪ್ಪ ಹಾದಿಮನಿ ಹಾಗೂ ಇತರರ ಜಮೀನಿಗೆ ನದಿಯಿಂದ ನೀರಾವರಿ ಸೌಲಭ್ಯ ಒದಗಿಸುವದು.	25.00	

ಕ್ರ. ಸಂ.	ಜಿಲ್ಲೆ	ತಾಲೂಕು	ಮತಕ್ಷೇತ್ರ	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಷರಾ
1	2	3	4	5	6	7	8
51	ಬಾಗಲಕೋಟ	ಹುನಗುಂದ	ಹುನಗುಂದ	ವಿಶೇಷ ಘಟಕ ಯೋಜನೆ	ಹುನಗುಂದ ತಾಲೂಕಿನ ಮೋಚಾಪೂರ ಗ್ರಾಮದ ರಿ.ಸ.ನಂ.19/1, 25/3 ಶ್ರೀ.ಅಮರಪ್ಪ ಹುಲಗೆಪ್ಪ ಬೇಗಾರ, ಶ್ರೀ.ದೇಶಪ್ಪ ಸಾಬಣ್ಣ ಬೇಗಾರ, ಸ.ನ.18/1ಬ/1ಅ, 24/2 ಶ್ರೀಮತಿ.ಸುಶೀಲವ್ವ ಗಂ. ಹನಮಪ್ಪ ಕುರಿ, ಸ.ನಂ.24/3, 25/2 ಶ್ರೀ.ಹುಸೇನಪ್ಪ ತಂ.ಸಾಬಣ್ಣ ಬೇಗಾರ ಹಾಗೂ ಸ.ನಂ.19/2 ಶ್ರೀ.ಅಮರಪ್ಪ ತಾ.ಹುಲೆಗವ್ವ ಬೇಗಾರ ಹಾಗೂ ಇತರರ ಜಮೀನಿಗೆ ನದಿಯಿಂದ ನೀರಾವರಿ ಸೌಲಭ್ಯ ಒದಗಿಸುವದು.	70.00	
52	ಬಾಗಲಕೋಟ	ಜಮಖಂಡಿ	ಜಮಖಂಡಿ	ವಿಶೇಷ ಘಟಕ ಯೋಜನೆ	ಬಾಗಲಕೋಟ ಜಿಲ್ಲೆ ಜಮಖಂಡಿ ತಾಲೂಕು ಚಿಮ್ಮಡ ಗ್ರಾಮದ ಶ್ರೀಮತಿ ರಾಣವ್ವ ಹಣಮಂತ ಪವಾಡಿ ಇವರ ಜಮೀನಿನಲ್ಲಿ ಕೊಳವೆಬಾವಿ ಕೊರೆಯಿಸಿ ನೀರಾವರಿ ಸೌಲಭ್ಯ ಕಲ್ಪಿಸುವುದು	8.00	
53	ಬಾಗಲಕೋಟ	ಜಮಖಂಡಿ	ಜಮಖಂಡಿ	ವಿಶೇಷ ಘಟಕ ಯೋಜನೆ	ಜಮಖಂಡಿ ತಾಲೂಕಿನ ತೊದಲಬಾಗಿ ಗ್ರಾಮದ ಸರ್ವೆ ನಂ:424/1ಬ/2, 408/4 ರಿಂದ 15 ಶ್ರೀ.ಶಂಕರ ಶೆಟ್ಟಪ್ಪ ದಾಶ್ಯಾಳ ಹಾಗೂ ಇತರರು ಜಮೀನುಗಳಿಗೆ ಕೃಷ್ಣಾ ನದಿಯಿಂದ ಏತ ನೀರಾವರಿ ಸೌಲಭ್ಯ ಒದಗಿಸುವುದು.	100.00	
54	ಬಾಗಲಕೋಟ	ಜಮಖಂಡಿ	ಜಮಖಂಡಿ	ಗಿರಿಜನ ಉಪ ಯೋಜನೆ	ಬಾಗಲಕೋಟ ಜಿಲ್ಲೆ, ಜಮಖಂಡಿ ತಾಲೂಕು ಬಂಡಿಗಣಿ ಗ್ರಾಮದ ಶ್ರೀ.ಕರೆಪ್ಪ ಯಂಕಪ್ಪ ಕುಳಲಿ ಹಾಗೂ ಇತರರ ಜಮೀನುಗಳಲ್ಲಿ ಕೊಳವೆಬಾವಿ ಕೊರೆಯಿಸಿ ನೀರಾವರಿ ಸೌಲಭ್ಯ ಕಲ್ಪಿಸುವುದು.	8.00	
55	ಬಾಗಲಕೋಟ	ಜಮಖಂಡಿ	ಜಮಖಂಡಿ	ಗಿರಿಜನ ಉಪ ಯೋಜನೆ	ಜಮಖಂಡಿ ತಾಲೂಕಿನ ಸಾವಳಗಿ-ತುಂಗಳ ಗ್ರಾಮದ ಟಿ.ಎಸ್.ಪಿ. ಫಲಾನುಭವಿಗಳಿಗೆ ಬಾಂಧಾರ ನಿರ್ಮಿಸುವುದು.	50.00	
56	ಬಾಗಲಕೋಟ	ಜಮಖಂಡಿ	ತೇರದಾಳ	ವಿಶೇಷ ಘಟಕ ಯೋಜನೆ	ರಬಕವಿ-ಬನಹಟ್ಟಿ ತಾಲೂಕು ಜಗದಾಳ ಗ್ರಾಮದ ಹಳ್ಳೂರ ಇವರ ಹೊಲದ ಹತ್ತಿರ ದುರ್ಗಾದೇವಿ ಗುಡಿಯಿಂದ ಹಳ್ಳ ಸ್ವಚ್ಛಗೊಳಿಸಿ, ಬಾಂದಾರ ನಿರ್ಮಾಣ ಮಾಡಿ ಪರಿಶಿಷ್ಟ ಜನಾಂಗದ ಹೊಲಗಳಿಗೆ ನೀರಾವರಿ ಸೌಲಭ್ಯ ತಲುಪಿಸುವುದು.	60.00	
					ಒಟ್ಟು	3803.50	

ಕರ್ನಾಟಕ ವಿಧಾನ ಸಭೆ

01.	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	275
02.	ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ. ಹಾಲಪ್ಪ ಹರತಾಳ್. ಹೆಚ್. (ಸಾಗರ)
03.	ಉತ್ತರಿಸುವ ದಿನಾಂಕ	:	14-12-2021
04.	ಉತ್ತರಿಸುವ ಸಚಿವರು.	:	ಮಾನ್ಯ ಗೃಹ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಸಾಗರ ತಾಲ್ಲೂಕಿನ ಆನಂದಪುರ ಮತ್ತು ತುಮರಿ ಭಾಗಗಳಲ್ಲಿ ಕೊಲೆ, ಸುಲಿಗೆ ಮತ್ತು ಇತರೆ ಅಪರಾಧ ಕೃತ್ಯಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ.
ಆ	ಈ ತಾಲ್ಲೂಕಿನ ಆನಂದಪುರ ಮತ್ತು ಬ್ಯಾಕೋಡು ಹೊರ ಠಾಣೆಗಳನ್ನು ಮೇಲ್ದರ್ಜೆಗೇರಿಸಿ, ಪೊಲೀಸ್ ಠಾಣೆಗಳನ್ನಾಗಿ ಮಾರ್ಪಡಿಸಲು ಇಲಾಖೆಯಿಂದ ಪ್ರಸ್ತಾವನೆ ಸಲ್ಲಿಸಿ ರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಪ್ರಸ್ತಾವನೆ ಸಲ್ಲಿಸಿದ ದಿನಾಂಕ ಸಮೇತ ಪೂರ್ಣ ವಿವರ ನೀಡುವುದು)	ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಆನಂದಪುರ ಪೊಲೀಸ್ ಹೊರಠಾಣೆಯನ್ನು ಮೇಲ್ದರ್ಜೆಗೇರಿಸುವ ಕುರಿತು ದಿನಾಂಕ: 08.11.2017 ರಂದು ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯು ರಾಷ್ಟ್ರೀಯ ಪೊಲೀಸ್ ಆಯೋಗದ ಮಾರ್ಗಸೂಚಿಯಲ್ಲಿನ ಮಾನದಂಡವನ್ನು ಪೂರೈಸಿರುವುದಿಲ್ಲವಾದ್ದರಿಂದ ಈ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ಸರ್ಕಾರದ ಪತ್ರ ಸಂಖ್ಯೆ: ಹೆಚ್‌ಡಿ/218/ ಪಿಓಪಿ/2017, ದಿನಾಂಕ: 13.12.2017 ರಲ್ಲಿ ತಿಳಿಸಲಾಗಿರುತ್ತದೆ. ಸಾಗರ ತಾಲ್ಲೂಕಿನ ಬ್ಯಾಕೋಡು ಹೊರಠಾಣೆಯನ್ನು ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ.
ಇ	ಇದುವರೆಗೂ ಮೇಲ್ದರ್ಜೆಗೇರಿಸದಿರಲು ಕಾರಣವೇನು;	
ಈ	ಪೊಲೀಸ್ ಹೊರಠಾಣೆಗಳನ್ನು ಮೇಲ್ದರ್ಜೆಗೇರಿಸಿ ಅಪರಾಧ ಕೃತ್ಯ ಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು? (ಪೂರ್ಣ ವಿವರ ನೀಡುವುದು)	ಸದರಿ ಪ್ರದೇಶಗಳಲ್ಲಿ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಹಾಲಿಯಿರುವ ಪೊಲೀಸ್ ಠಾಣೆಗಳಿಂದಲೇ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಹೆಚ್‌ಡಿ 35 ಪಿಸಿಕ್ಯೂ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಅನುಬಂಧ

1) ಆನಂದಪುರ ಉಪಠಾಣಾ ವ್ಯಾಪ್ತಿಯಲ್ಲಿ 2018 ನೇ ಸಾಲಿನಿಂದ 2021 ರ ನವಂಬರ್ 30 ರವರೆಗೆ ದಾಖಲಾದ ಅಪರಾಧ ಪ್ರಕರಣಗಳ ಮಾಹಿತಿ.

ಕ್ರ. ಸಂ.	ವಿವರ	2018	2019	2020	2021 (ದಿ:30/11/2021)
1	ಕೊಲೆ	02	02	–	02
2	ಕೊಲೆಗೆ ಪ್ರಯತ್ನ	03	–	02	03
3	ಸಿ.ಹೆಚ್.ಎನ್.ಎ.	–	–	01	–
4	ದರೋಡೆ	–	–	01	–
5	ಸುಲಿಗೆ	–	01	–	01
6	ಹಗಲು ಕನ್ನಾ ಕಳುವು	–	01	–	–
7	ರಾತ್ರಿಕನ್ನಾ ಕಳುವು	9	07	05	05
8	ಮನೆ ಕಳುವು	–	–	–	–
9	ಸಾಮಾನ್ಯ ಕಳುವು	11	08	07	08
10	ಜಾನುವಾರು ಕಳುವು	–	–	–	–
11	ಕಳುವು ಮಾಲು ಸ್ವೀಕೃತಿ	–	–	–	–
12	ಮೋಸ	1	02	01	03
13	ನಂಬಿಕೆ ದ್ರೋಹ	–	–	–	–
14	ಖೋಟಾ ನೋಟು, ನಾಣ್ಯ	–	–	–	–
15	ಪ್ರಾಣಾಂತಿಕ ಅಪಘಾತ	13	10	12	06
16	ಸಾಮಾನ್ಯ ಅಪಘಾತ	56	48	43	26
17	ದೊಂಬಿ ಕೇಸುಗಳು	7	12	15	09
18	ಗಾಯದ ಕೇಸುಗಳು	21	35	36	41
19	ಅಪಹರಣ	1	01	01	01
20	ಕಲಂ:304(ಬಿ)ಐಪಿಸಿ	1	–	02	–
21	ಕಲಂ: 498 (ಎ)ಐಪಿಸಿ	1	–	01	03
22	ಕಲಂ: 498(ಎ)ಐಪಿಸಿ/ಡಿಪಿ ಆಕ್ಟ್	–	–	–	–
23	ಕಲಂ: 354ಐಪಿಸಿ	21	11	13	02
24	ಕಲಂ: 376ಐಪಿಸಿ	–	01	01	07
25	ಕಲಂ: 353 ಐಪಿಸಿ	–	01	04	01
26	ಇತರೆ ಐಪಿಸಿ	28	19	–	10
27	ರೆಫರ್ಡ್ ಕೇಸುಗಳು	–	–	–	–
28	ಆಯುಧಕಾಯ್ದೆ	–	–	–	–
29	ಗೋ ಹತ್ಯೆಕಾಯ್ದೆ	–	03	–	–
30	ಪ್ರಾಣಿ ಬಲಿ ಕಾಯ್ದೆ	–	–	–	–

31	ಎಸ್.ಐ.ಟಿ. ಕಾಯ್ದೆ	–	–	–	–
32	ಎಂ.ವಿ. ಕಾಯ್ದೆ	–	–	–	–
33	ಕೆ.ಪಿ.ಕಾಯ್ದೆ	–	–	–	–
34	ಈ.ಸಿ.ಕಾಯ್ದೆ	–	01	04	–
35	ಅಟ್ರಾಸಿಟಿ ಕಾಯ್ದೆ	–	01	–	02
36	ಸ್ಫೋಟಕಕಾಯ್ದೆ	–	–	01	01
37	ಎನ್‌ಡಿಪಿಎಸ್‌ಕಾಯ್ದೆ.	–	01	02	–
38	ಟಾಡಾಕಾಯ್ದೆ	–	–	–	–
39	ಪಿ.ಸಿ.ಆರ್ ಕಾಯ್ದೆ.	–	–	–	–
40	ಆರ್.ಪಿ. ಆಕ್ಟ್	–	–	–	–
41	ಮಕ್ಕಳ ಕಾಯ್ದೆ	1	–	–	–
42	ಸತಿಕಾಯ್ದೆ	–	–	–	–
43	ಸಿನಿಮಾಟೋಗ್ರಫಿಕಾಯ್ದೆ	–	–	–	–
44	ಜೂಜಾಟಕಾಯ್ದೆ	3	05	06	03
45	ಅಬಕಾರಿಕಾಯ್ದೆ	5	03	–	06
46	ಡಿ.ಪಿ. ಕಾಯ್ದೆ	–	01	–	–
47	ಇತರೆಕಾಯ್ದೆ	3	–	10	03
48	107 ಸಿ.ಆರ್.ಪಿ.ಸಿ	48	–	–	16
49	109 ಸಿ.ಆರ್.ಪಿ.ಸಿ	–	–	–	04
50	110 ಸಿ.ಆರ್.ಪಿ.ಸಿ	–	–	–	–
51	145 ಸಿ.ಆರ್.ಪಿ.ಸಿ	–	–	–	–
52	41 (ಡಿ) 102 ಸಿ.ಆರ್.ಪಿ.ಸಿ	–	–	–	–
53	151 ಸಿ.ಆರ್.ಪಿ.ಸಿ	–	–	–	–
54	ಮನುಷ್ಯಕಾಣೆ	8	18	18	16
ಒಟ್ಟು		244	192	186	178

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**276**
ಸದಸ್ಯರ ಹೆಸರು	:	ಶ್ರೀ ಹಾಲಪ್ಪ ಹರತಾಳ್ ಹೆಚ್. (ಸಾಗರ)
ಉತ್ತರಿಸುವ ಸಚಿವರು	:	ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು
ಉತ್ತರಿಸಬೇಕಾದ ದಿನಾಂಕ	:	**14-12-2021**

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಸಾಗರ ಪಟ್ಟಣದ ಸಿವಿಲ್ ಕೋರ್ಟ್ ಆವರಣದಲ್ಲಿ ವಕೀಲರ ಭವನ ನಿರ್ಮಿಸಲು ಸರ್ಕಾರದಿಂದ ಮಂಜೂರಾತಿ ನೀಡಲಾಗಿದೆಯೇ; (ಮಂಜೂರಾದ ದಿನಾಂಕ, ಮೊತ್ತದ ಪೂರ್ಣ ವಿವರ ನೀಡುವುದು)	ಸಾಗರ ಪಟ್ಟಣದ ಸಿವಿಲ್ ಕೋರ್ಟ್ ಆವರಣದಲ್ಲಿ ವಕೀಲರ ಭವನ ನಿರ್ಮಿಸಲು 2021-22ನೇ ಸಾಲಿಗೆ ಸರ್ಕಾರದಿಂದ ರೂ. 475.00 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. ಸರ್ಕಾರದ ಪತ್ರ ಸಂಖ್ಯೆ: ಲೋಇ/871/ಐಎಫ್ಎ/2021 (ಇ-ಕಚೇರಿ), ದಿನಾಂಕ : 15-11-2021ರಲ್ಲಿ ವಕೀಲರ ಭವನ ನಿರ್ಮಾಣ ಕಾಮಗಾರಿಗೆ ಅನುಮೋದನೆ ನೀಡಲಾಗಿರುತ್ತದೆ (ಅನುಬಂಧ-1)
ಆ)	ನೀಡಿದ್ದಲ್ಲಿ, ಸದರಿ ವಕೀಲರ ಭವನವನ್ನು ಯಾವ ಇಲಾಖೆಯಿಂದ ನಿರ್ಮಿಸಲು ಆದೇಶ ನೀಡಲಾಗಿದೆ; (ಆದೇಶದ ಪ್ರತಿಯ ಪೂರ್ಣ ವಿವರ ನೀಡುವುದು)	ವಕೀಲರ ಭವನವನ್ನು ಲೋಕೋಪಯೋಗಿ ಇಲಾಖೆ ವತಿಯಿಂದ ನಿರ್ಮಿಸಲು ಆದೇಶ ನೀಡಲಾಗಿದೆ (ಅನುಬಂಧ-1).
ಇ)	ಕಾಮಗಾರಿಯ ವಿಳಂಬಕ್ಕೆ ಕಾರಣವೇನು;	ದಿನಾಂಕ : 15-11-2021 ರಂದು ಕಾಮಗಾರಿಗೆ ಅನುಮೋದನೆ ದೊರಕಿರುತ್ತದೆ. ಸದರಿ ಅಂದಾಜು ಪಟ್ಟಿಯನ್ನು ಆಡಳಿತಾತ್ಮಕ ಅನುಮೋದನೆಗಾಗಿ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿಗೆ ಸಲ್ಲಿಸಲಾಗಿರುತ್ತದೆ (ಅನುಬಂಧ-2) ಸದರಿ ಅಂದಾಜು ಪಟ್ಟಿಗೆ ಮಾನ್ಯ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇದರ ಕೌಂಟರ್ ಸಹಿಯೊಂದಿಗೆ ಕಾರ್ಯನಿರ್ವಾಹಕ ಇಂಜಿನಿಯರ್, PWD, ಶಿವಮೊಗ್ಗ ಇವರನ್ನು ಕಾಮಗಾರಿ ಕೈಗೊಳ್ಳಲು ಅಗತ್ಯ ಕ್ರಮತೆಗೆದುಕೊಳ್ಳುವಂತೆ ಕೋರಲಾಗುವುದು.
ಈ)	ಸದರಿ ವಕೀಲರ ಭವನ ನಿರ್ಮಿಸಿ ಹಸ್ತಾಂತರಿಸಲು ಕೈಗೊಂಡ ಕ್ರಮಗಳೇನು? (ಪೂರ್ಣ ವಿವರ ನೀಡುವುದು)	ಕಾಮಗಾರಿ ಅನುಷ್ಠಾನಗೊಂಡ ನಂತರದಲ್ಲಿ ಹಸ್ತಾಂತರಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಲಾ-ಎಲ್ಎಡಿ/456/2021

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ
ಸಚಿವರು

ಅನುಬಂಧ - 1

ಕರ್ನಾಟಕ ಸರ್ಕಾರ

ಸಂ: ಲೋಇ/871/ಐಎಫ್ಎ/2021 (ಇ-ಕಚೇರಿ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ, ಬೆಂಗಳೂರು
ದಿನಾಂಕ: 15-11-2021

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಲೋಕೋಪಯೋಗಿ ಇಲಾಖೆ,
ಬೆಂಗಳೂರು.

ಇವರಿಗೆ,
ಮುಖ್ಯ ಇಂಜಿನಿಯರ್,
ಸಂಪರ್ಕ ಮತ್ತು ಕಟ್ಟಡ (ಕೇಂದ್ರ),
ಶಿವಮೊಗ್ಗ.

ಮಾನ್ಯರೇ

ವಿಷಯ : ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ವಕೀಲರ ಭವನ ನಿರ್ಮಾಣ ಕಾಮಗಾರಿಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ : 1. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ಇವರ ಪತ್ರ ಸಂಖ್ಯೆ:-DJBS 3/ 2008 ದಿ:-29-07-2021
2. ಆರ್ಥಿಕ ಇಲಾಖೆಯ ಹಿಂಬರಹ ಸಂ. ಆಇ 224 ಆಕೋ-2/2021 (ಇ-ಕಛೇರಿ) ದಿನಾಂಕ 16-09-2021

* * * *

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರ ಪತ್ರದಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ವಕೀಲರ ಭವನ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕೋರಿದ್ದ ಹಿನ್ನಲೆಯಲ್ಲಿ ಉಲ್ಲೇಖ(2)ರ ಆರ್ಥಿಕ ಇಲಾಖೆಯ ಹಿಂಬರಹದಲ್ಲಿ ಈ ಕೆಳಕಂಡ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು 2021-22ನೇ ಸಾಲಿನಲ್ಲಿ ಆದ್ಯತೆ ಮೇಲೆ ಕೈಗೆತ್ತಿಕೊಳ್ಳಲು ಸಹಮತಿ ನೀಡಲಾಗಿರುತ್ತದೆ. ವಿವರ ಕೆಳಕಂಡಂತಿದೆ:

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಕಾಮಗಾರಿ ವಿವರ	ಅಂದಾಜು ಮೊತ್ತ
	ಲೆ.ಶೀ 4059-80-051-0-32-386 ನ್ಯಾಯಾಲಯ ಕಟ್ಟಡಗಳು-ನಿರ್ಮಾಣ	
1	ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ವಕೀಲರ ಭವನ ನಿರ್ಮಾಣ ಕಾಮಗಾರಿ	475.00
	ಒಟ್ಟು	**475.00**

: ಷರತ್ತುಗಳು :

1. ಅಂದಾಜು ಪಟ್ಟಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆಯನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಳ್ಳತಕ್ಕದ್ದು.
2. ಮೇಲ್ಕಂಡ ಕಾಮಗಾರಿಗಳನ್ನು 2021-22ನೇ ಸಾಲಿನ ಕಟ್ಟಡಗಳ ಹೊಸ ಕಾಮಗಾರಿಗಳ ಅಪೆಂಡಿಕ್ಸ್-ಇ ನಲ್ಲಿ ಸೇರ್ಪಡೆ ಮಾಡಿ ಸಲ್ಲಿಸುವುದು.
3. ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಅಧಿನಿಯಮ ಮತ್ತು ನಿಯಮಗಳ ಅಡಿಯಲ್ಲಿ ಹಾಗೂ ಸರ್ಕಾರದ ಅಧಿಸೂಚನ ಸಂ.ಸಿಆಸುಇ 2 ಇಸಂಗ್ರ 2009, ದಿನಾಂಕ 09-10-2012ರ ಪ್ರಕಾರ ಟೆಂಡರ್ ಕರೆದು ನಿರ್ವಹಣೆಗೆ ಕ್ರಮವಹಿಸತಕ್ಕದ್ದು ಹಾಗೂ ಸರ್ಕಾರದ ಸುತ್ತೋಲೆ ಸಂ.ಲೋಇ/07/ಐಎಫ್ಎ/2013 ದಿನಾಂಕ 16-01-2013ರ ಪ್ರಕಾರ ನಿರ್ವಹಿಸತಕ್ಕದ್ದು.
4. ಈ ಕಾಮಗಾರಿಯನ್ನು ಅನುಷ್ಠಾನಗೊಳಿಸುವಾಗ ಸರ್ಕಾರದ ಆದೇಶ ಸಂ.ಲೋಇ 272 ಆಕೋ-2/2013 ದಿನಾಂಕ 24-04-2013ರಂತೆ ಕ್ರಮವಹಿಸತಕ್ಕದ್ದು.

5. ಸದರಿ ಕಾಮಗಾರಿಯು ಸ್ಥಳೀಯ ಸಂಸ್ಥೆಗಳ / ಇತರ ಇಲಾಖೆಗಳ ಕ್ರಿಯಾ ಯೋಜನೆಗಳಲ್ಲಿ, ಇತರ ಕಾರ್ಯಕ್ರಮಗಳ ಕ್ರಿಯಾ ಯೋಜನೆಯಲ್ಲಿ ಹಾಗೂ ಈ ಹಿಂದಿನ ಅಪೆಂಡಿಕ್ಸ್-ಇ ಅಡಿ ಅಭಿವೃದ್ಧಿಪಡಿಸಲಾಗದಿರುವ ಬಗ್ಗೆ ಖಚಿತಪಡಿಸಿಕೊಂಡು ಸದರಿ ರಸ್ತೆಗಳು ಲೋಕೋಪಯೋಗಿ ಇಲಾಖೆಗೆ ಒಳಪಡದಿದ್ದಲ್ಲಿ ಸಂಬಂಧಪಟ್ಟ ಇಲಾಖೆಯಿಂದ ಪ್ರಮಾಣ ಪತ್ರ ಪಡೆದು ಕೈಗೆತ್ತಿಕೊಳ್ಳುವುದು. ಅಲ್ಲದೇ ಈ ಕಾಮಗಾರಿಯ ಬಿಲ್ಲು ಪಾವತಿಸುವ ಮುನ್ನ ಸದರಿ ಕಾಮಗಾರಿಯು ಅಪೆಂಡಿಕ್ಸ್-ಇ ನಲ್ಲಿ ಸೇರ್ಪಡೆಯಾಗಿರುವುದನ್ನು ಖಚಿತಪಡಿಸಿಕೊಂಡು ನಂತರ ಪಾವತಿಸತಕ್ಕದ್ದು.

6. ಕಾಮಗಾರಿಗಳು ಮುಕ್ತಾಯಗೊಂಡ ನಂತರ ಬಿ.ಆರ್.ಸಂಖ್ಯೆ ಮತ್ತು ದಿನಾಂಕ ವಿವರಗಳೊಂದಿಗೆ ಇಲಾಖೆಯ ಅಂತರ್ಜಾಲದಲ್ಲಿ ಅಳವಡಿಸಿದ ನಂತರವೇ ಹಣ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

7. ಪ್ರಸ್ತಾಪಿತ ಕಾಮಗಾರಿಗಳನ್ನು 2021-22 ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಕಡ್ಡಾಯವಾಗಿ ಸೇರ್ಪಡೆ ಮಾಡಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯತಕ್ಕದ್ದು.

ತಮ್ಮ ವಿಶ್ವಾಸಿ,

(ಡಾ. ಕೆ.ಎಸ್.ಕೃಷ್ಣಾರೆಡ್ಡಿ)
ಸರ್ಕಾರದ ಕಾರ್ಯದರ್ಶಿ
ಲೋಕೋಪಯೋಗಿ ಇಲಾಖೆ

ಅನುಬಂಧ- 2

NO.ADM.DJS.1160 /2021
Encls:

Office of the
District & Sessions Judge,
Shivamogga, Dated:02.12.2021.

To

The Hon'ble Registrar General,
Hon'ble High Court of Karnataka,
B E N G A L U R U.

DJBS

Respected Sir,

Sub:- Submission of estimate for Construction of Bar Association in the Premises of Court Complex in Sagara Town - reg.

Ref :- Assistant Executive Engineer, PWD, Shivamogga-division, Shivamogga vide letter No. ಸಕಾ.ಇಂ/ಶಿವಿಶಿ/ಶಿಇ-3/2021-22/2411 dated:30.11.2021

-:-

With reference to the above subject, I write to submit herewith the estimate for Construction of Bar Association in the Premises of Court Complex in Sagara Town for an amount of Rs.475.00 lakhs received from the Executive Engineer, PWD, Shivamogga Division, Shivamogga, duly signed for Administrative Approval and needful.

Submitted for kind perusal and information.

Yours faithfully,

(MUSTAFA HUSSAIN S A)
Prl. District & Sessions Judge,
Shivamogga.

ಕರ್ನಾಟಕ ವಿಧಾನ ಸಭೆ

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 277
02. ಸದಸ್ಯರ ಹೆಸರು : ಶ್ರೀ ಹಾಲಪ್ಪ ಹರತಾಳ್ ಹೆಚ್. (ಸಾಗರ)
03. ಉತ್ತರಿಸುವ ದಿನಾಂಕ : 14.12.2021
04. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಪೊಲೀಸ್ ಇಲಾಖೆಯಲ್ಲಿನ ಕಾನ್ಸ್‌ಟೇಬಲ್ ಹುದ್ದೆಯ ನೇಮಕಾತಿಯಲ್ಲಿ ಅರ್ಹತಾ ವಯೋಮಿತಿಯನ್ನು 28 ವರ್ಷದಿಂದ 32 ವರ್ಷಕ್ಕೆ ಸಡಿಲಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇಲ್ಲ
ಆ)	ಸದರಿ ಹುದ್ದೆಗೆ ಅರ್ಹತಾ ವಯೋಮಿತಿಯನ್ನು 28 ವರ್ಷದಿಂದ 32 ವರ್ಷಕ್ಕೆ ಸಡಿಗೊಳಿಸಲು ಇರುವ ತೊಂದರೆಗಳೇನು;	ಪೊಲೀಸ್ ಇಲಾಖೆಯಲ್ಲಿ 2004ನೇ ಸಾಲಿನವರೆಗೆ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಯ ನೇಮಕಾತಿಗೆ ವಯೋಮಿತಿಯು ಸಾಮಾನ್ಯ ಅಭ್ಯರ್ಥಿಗೆ 23 ವರ್ಷ ಮತ್ತು ಎಸ್.ಸಿ/ಎಸ್.ಟಿ/ಓ.ಬಿ.ಸಿ ವರ್ಗಗಳಿಗೆ 25 ವರ್ಷಗಳಾಗಿತ್ತು.
ಇ)	ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ಪೂರ್ಣ ವಿವರ ಒದಗಿಸುವುದು)	ಸರ್ಕಾರದ ಅಧಿಸೂಚನೆ ಸಂಖ್ಯೆ: HD/282/ಪೊಸಿಅ/2008, ದಿನಾಂಕ:28.05.2009ರಲ್ಲಿ ನೇಮಕಾತಿ ವಯೋಮಿತಿಯನ್ನು ಎರಡು ವರ್ಷಗಳಿಗೆ ಹೆಚ್ಚಿಸಿ, ಸಾಮಾನ್ಯ ಅಭ್ಯರ್ಥಿಗೆ 25 ಮತ್ತು ಎಸ್.ಸಿ/ಎಸ್.ಟಿ/ಓ.ಬಿ.ಸಿ ವರ್ಗಗಳಿಗೆ 27 ವರ್ಷಗಳಿಗೆ ಹೆಚ್ಚಿಸಲಾಗಿರುತ್ತದೆ. ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್/ಎಫ್.ಪಿ.ಬಿ/ನಿಸ್ತಂತು) ಘಟಕಗಳಿಗೆ ನೇರ ನೇಮಕಾತಿ ಕನಿಷ್ಠ ವಯೋಮಿತಿ 19 ವರ್ಷಗಳಾಗಿದ್ದು, ವಿದ್ಯಾರ್ಹತೆಯು ಪಿ.ಯು.ಸಿ ಆಗಿರುತ್ತದೆ. ಅದರಂತೆ ಪೊಲೀಸ್ ಕಾನ್ಸ್‌ಟೇಬಲ್ (ಸಶಸ್ತ್ರ/ಕೆ.ಎಸ್.ಆರ್.ಪಿ /ಕೆ.ಎಸ್.ಐ.ಎಸ್.ಎಫ್) ರವರಿಗೆ ನೇರ ನೇಮಕಾತಿಯ ಕನಿಷ್ಠ ವಯೋಮಿತಿಯನ್ನು 18 ವರ್ಷಗಳಿಗೆ ನಿಗಧಿ ಪಡಿಸಲಾಗಿದ್ದು, ಎಸ್.ಎಸ್.ಎಲ್.ಸಿ ವಿದ್ಯಾರ್ಹತೆಯನ್ನು ನಿಗಧಿ ಪಡಿಸಲಾಗಿರುತ್ತದೆ. ಪೊಲೀಸ್ ಕಾನ್ಸ್‌ಟೇಬಲ್ ನೇರ ನೇಮಕಾತಿಗೆ ಪ್ರತಿ ಅಭ್ಯರ್ಥಿಗೆ 7 ರಿಂದ 10 ವರ್ಷಗಳ ಕಾಲಾವಕಾಶ ಸಿಗುತ್ತದೆ. ಆದ್ದರಿಂದ ಅಭ್ಯರ್ಥಿಗಳು ಬಾಧಿತರಾಗಿರುವುದಿಲ್ಲ. ಪ್ರಸ್ತುತ ವೃಂದ ಮತ್ತು ನೇಮಕಾತಿಗಳ ಪ್ರಕಾರ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ ನಿಗಧಿಪಡಿಸಿರುವ ವಯೋಮಿತಿ ಸೂಕ್ತವಾಗಿರುತ್ತದೆ.

HD/182/PPS/2021

(ಆರಗ ಜ್ಞಾನೇಂದ್ರ)
ಮಾನ್ಯ ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 278
2. ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ.
3. ಉತ್ತರಿಸಬೇಕಾದ ದಿನಾಂಕ : 14.12.2021
4. ಉತ್ತರಿಸುವ ಸಚಿವರು : ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಸಣ್ಣ ನೀರಾವರಿ ಇಲಾಖೆಯಿಂದ ದಕ್ಷಿಣ ಕನ್ನಡ ಜಿಲ್ಲೆಗೆ 2019-20 ರಿಂದ ಈವರೆವಿಗೂ ವಿವಿಧ ಯೋಜನೆಗಳಿಗೆ ಬಿಡುಗಡೆಗೊಳಿಸಲಾದ ಅನುದಾನವೆಷ್ಟು? (ಕ್ಷೇತ್ರವಾರು ವಿವರ ನೀಡುವುದು).	ಅನುಬಂಧದಲ್ಲಿ ನೀಡಲಾಗಿದೆ.

ಸಂಖ್ಯೆ: ಎಂಐಡಿ 407 ಎಲ್‌ಎಕ್ಯೂ 2021

(ಜೆ.ಸಿ ಮಾಧುಸ್ವಾಮಿ)
ಕಾನೂನು ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

ಅನುಬಂಧ

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಖಾದರ್ ಯು.ಟಿ. (ಮಂಗಳೂರು) ಇವರ ಪ್ರಶ್ನೆ ಸಂಖ್ಯೆ: 278 ಕ್ಕೆ ಉತ್ತರ.

2019-20 ರಿಂದ 2021-22 (ನವೆಂಬರ್ 2021) ರ ವರೆಗೆ ವಿವಿಧ ಲೆಕ್ಕ ಶೀರ್ಷಿಕೆಯಡಿ ವಿಧಾನ ಸಭಾ ಕ್ಷೇತ್ರವಾರು ಬಿಡುಗಡೆಗೊಳಿಸಲಾದ ವೆಚ್ಚದ ವಿವರ.

ರೂ.ಲಕ್ಷಗಳಲ್ಲಿ

ಕ್ರ.ಸಂ.	ಜಿಲ್ಲೆ	ವಿಧಾನ ಸಭಾ ಕ್ಷೇತ್ರ	ಲೆಕ್ಕ ಶೀರ್ಷಿಕೆ	2019-20	2020-21	2021-22 ನವೆಂಬರ್ 21 ರ ವರೆಗೆ
1	ದಕ್ಷಿಣಕನ್ನಡ	ಮಂಗಳೂರು	4702-00-101-1-07-139 ಕೆರೆಗಳ ಆಧುನೀಕರಣ		10.82	
3			4702-00-101-5-01-139 ಅಣೆಕಟ್ಟು ಮತ್ತು ಬಂದಾರಗಳು	12.30		18.52
5			4702-00-101-5-02-139 ಪಶ್ಚಿಮವಾಹಿನಿ	1611.52	12504.16	4533.30
8			4711-01-103-1-00-140 ಪ್ರವಾಹ ನಿಯಂತ್ರಣ ಕಾಮಗಾರಿ	23.62	328.90	
				1647.44	**12843.88**	**4551.82**
3	ದಕ್ಷಿಣಕನ್ನಡ	ಮಂಗಳೂರು ಉತ್ತರ	4702-00-101-5-01-139 ಅಣೆಕಟ್ಟು ಮತ್ತು ಬಂದಾರಗಳು	134.00	120.79	5.82
5			4702-00-101-5-02-139 ಪಶ್ಚಿಮವಾಹಿನಿ	706.83	906.69	
6			4702 -00-789-0-00-422 ವಿಶೇಷ ಘಟಕ ಯೋಜನೆ	21.47	0.48	0.24
7			4702-00-796-0-00-423 ಗಿರಿಜನ ಉಪಯೋಜನೆ	19.30	0.25	
8			4711-01-103-1-00-140 ಪ್ರವಾಹ ನಿಯಂತ್ರಣ ಕಾಮಗಾರಿ	301.19	290.02	0.73
				1182.79	**1318.23**	**6.79**
6	ದಕ್ಷಿಣಕನ್ನಡ	ಮಂಗಳೂರು ದಕ್ಷಿಣ	4702 -00-789-0-00-422 ವಿಶೇಷ ಘಟಕ ಯೋಜನೆ		1.45	
8			4711-01-103-1-00-140 ಪ್ರವಾಹ ನಿಯಂತ್ರಣ ಕಾಮಗಾರಿ	106.09	238.36	1.40
				106.09	**239.81**	**1.40**
3	ದಕ್ಷಿಣಕನ್ನಡ	ಮೂಲ್ಕಿ ಮೂಡಬಿದ್ರೆ	4702-00-101-5-01-139 ಅಣೆಕಟ್ಟು ಮತ್ತು ಬಂದಾರಗಳು	38.82	202.98	17.00
5			4702-00-101-5-02-139 ಪಶ್ಚಿಮವಾಹಿನಿ	858.20	101.75	
6			4702 -00-789-0-00-422 ವಿಶೇಷ ಘಟಕ ಯೋಜನೆ	39.08	0.06	40.56
7			4702-00-796-0-00-423 ಗಿರಿಜನ ಉಪಯೋಜನೆ		53.67	4.25
8			4711-01-103-1-00-140 ಪ್ರವಾಹ ನಿಯಂತ್ರಣ ಕಾಮಗಾರಿ	187.12	272.63	22.37
9			4711-01-103-1-00-436 ಪ್ರವಾಹ ನಿಯಂತ್ರಣ ಕಾಮಗಾರಿ (ನಬಾರ್ಡ್)		118.85	28.27
				1123.22	**749.94**	**112.45**

ಕ್ರ.ಸಂ.	ಜಿಲ್ಲೆ	ವಿಧಾನ ಸಭಾ ಕ್ಷೇತ್ರ	ಲೆಕ್ಕ ಶೀರ್ಷಿಕೆ	2019-20	2020-21	2021-22 ನವೆಂಬರ್ 21 ರ ವರೆಗೆ
3	ದಕ್ಷಿಣಕನ್ನಡ	ಬಂಟ್ವಾಳ	4702-00-101-5-01-139 ಅಣೆಕಟ್ಟು ಮತ್ತು ಬಂದಾರಗಳು	203.52	708.45	21.12
5			4702-00-101-5-02-139 ಪಶ್ಚಿಮವಾಹಿನಿ	2596.92	2507.37	8[illegible]00
6			4702 -00-789-0-00-422 ವಿಶೇಷ ಘಟಕ ಯೋಜನೆ	0.06	63.17	13.66
7			4702-00-796-0-00-423 ಗಿರಿಜನ ಉಪಯೋಜನೆ	20.16	38.09	
8			4711-01-103-1-00-140 ಪ್ರವಾಹ ನಿಯಂತ್ರಣ ಕಾಮಗಾರಿ	174.45	756.90	30.00
				2995.11	**4073.98**	**879.78**
1	ದಕ್ಷಿಣಕನ್ನಡ	ಪುತ್ತೂರು	4702-00-101-1-07-139 ಕೆರೆಗಳ ಆಧುನೀಕರಣ	52.52	0.00	
3			4702-00-101-5-01-139 ಅಣೆಕಟ್ಟು ಮತ್ತು ಬಂದಾರಗಳು	99.52	150.55	13.09
4			4702-00-101-3-01-139 ಏತ ನೀರಾವರಿ ಯೋಜನೆಗಳು	15.41	50.42	41.91
5			4702-00-101-5-02-139 ಪಶ್ಚಿಮವಾಹಿನಿ		0.79	400
6			4702 -00-789-0-00-422 ವಿಶೇಷ ಘಟಕ ಯೋಜನೆ	106.48	23.02	51.23
7			4702-00-796-0-00-423 ಗಿರಿಜನ ಉಪಯೋಜನೆ	16.63	7.74	16.27
8			4711-01-103-1-00-140 ಪ್ರವಾಹ ನಿಯಂತ್ರಣ ಕಾಮಗಾರಿ	347.21	282.43	
				637.77	**514.95**	**522.50**
3	ದಕ್ಷಿಣಕನ್ನಡ	ಬೆಳ್ತಂಗಡಿ	4702-00-101-5-01-139 ಅಣೆಕಟ್ಟು ಮತ್ತು ಬಂದಾರಗಳು	346.36	2043.14	33.89
5			4702-00-101-5-02-139 ಪಶ್ಚಿಮವಾಹಿನಿ	1017.01	3104.92	1526.52
6			4702 -00-789-0-00-422 ವಿಶೇಷ ಘಟಕ ಯೋಜನೆ	30.97	41.69	2.12
7			4702-00-796-0-00-423 ಗಿರಿಜನ ಉಪಯೋಜನೆ	0.50	59.51	
8			4711-01-103-1-00-140 ಪ್ರವಾಹ ನಿಯಂತ್ರಣ ಕಾಮಗಾರಿ	1046.47	704.51	4.50
				2441.31	**5953.77**	**1567.03**
3	ದಕ್ಷಿಣಕನ್ನಡ	ಸುಳ್ಯ	4702-00-101-5-01-139 ಅಣೆಕಟ್ಟು ಮತ್ತು ಬಂದಾರಗಳು	201.38	385.00	78.29
4			4702-00-101-3-01-139 ಏತ ನೀರಾವರಿ ಯೋಜನೆಗಳು	27.99	0.00	
5			4702-00-101-5-02-139 ಪಶ್ಚಿಮವಾಹಿನಿ	187.48	375.21	
6			4702 -00-789-0-00-422 ವಿಶೇಷ ಘಟಕ ಯೋಜನೆ	21.37	0.00	42.02
7			4702-00-796-0-00-423 ಗಿರಿಜನ ಉಪಯೋಜನೆ	0.66	24.77	
8			4711-01-103-1-00-140 ಪ್ರವಾಹ ನಿಯಂತ್ರಣ ಕಾಮಗಾರಿ	227.65	388.81	
				666.53	**1173.79**	**120.31**
			ಒಟ್ಟು ಮೊತ್ತ	**10800.26**	**26868.35**	**7762.08**

ಕರ್ನಾಟಕ ವಿಧಾನ ಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 279

2] ಮಾನ್ಯ ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ.(ಮಂಗಳೂರು)

3] ಉತ್ತರಿಸುವ ದಿನಾಂಕ : 14/12/2021

4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಹಿಳಾ ಪೊಲೀಸ್ ಠಾಣೆ ಹಾಗೂ ಹೆಚ್ಚುವರಿ ಪೊಲೀಸ್ ಠಾಣೆ ಪ್ರಾರಂಭಿಸುವ ಉದ್ದೇಶ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಈ ಕುರಿತು ವಿವರ ನೀಡುವುದು:	ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈಗಾಗಲೇ ಮಹಿಳಾ ಪೊಲೀಸ್ ಠಾಣೆಯು ಕಾರ್ಯ ನಿರ್ವಹಿಸುತ್ತಿರುತ್ತದೆ. ಹೆಚ್ಚುವರಿ ಪೊಲೀಸ್ ಠಾಣೆ ಪ್ರಾರಂಭಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ.
ಆ)	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮಾಜಘಾತುಕ ಶಕ್ತಿಗಳು ಅಶಾಂತಿ ಸೃಷ್ಟಿಸಲು ಪ್ರಯತ್ನ ನಡೆಸುತ್ತಿರುವ ವಿಚಾರ ಸರ್ಕಾರದ ಗಮನದಲ್ಲಿದೆಯೇ; ಇದ್ದಲ್ಲಿ, ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಾಂತಿ ಕಾಪಾಡಲು ಕೆಳಕಂಡ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ➢ ಸಮಾಜಘಾತಕ ಶಕ್ತಿಗಳು ಅಶಾಂತಿ ಸೃಷ್ಟಿಸಲು ಪ್ರಯತ್ನ ನಡೆಸುತ್ತಿರುವಂತವರನ್ನು ಗುರುತಿಸಿ ಅಂತಹ ವ್ಯಕ್ತಿ/ಸಂಘಟನೆಗಳ ವಿರುದ್ಧ ಭದ್ರತೆ ಪ್ರಕರಣ, ರೌಡಿ ಹಾಳೆಗಳನ್ನು ತೆರೆದಿರುವುದಲ್ಲದೆ ಗರಿಷ್ಠ ಮಟ್ಟದ ಬಾಂಡ್ ಓವರ್‌ಗೆ ವರದಿ ಸಲ್ಲಿಸಲಾಗುತ್ತಿದೆ. ➢ ಸಮಾಜಘಾತಕ ಶಕ್ತಿಗಳು ಅಶಾಂತಿ ಸೃಷ್ಟಿಸದಂತೆ ಮುಂಚಿತವಾಗಿ ಎಲ್ಲಾ ಧರ್ಮಿಯರ ಮುಖಂಡರುಗಳನ್ನು ಕರೆದು ಶಾಂತಿ ಸಭೆಯನ್ನು ನಡೆಸಿ ಶಾಂತಿ ಸೌಹಾರ್ಧತೆಯನ್ನು ಕಾಪಾಡುವಂತೆ ತಿಳಿ ಹೇಳಲಾಗುತ್ತಿದೆ. ➢ ಸಮಾಜಘಾತಕ ಶಕ್ತಿಗಳು ಅಶಾಂತಿ ಸೃಷ್ಟಿಸಲು ಪ್ರಯತ್ನಿಸುವ ವ್ಯಕ್ತಿಗಳ ಮೇಲೆ ನಿರ್ಧಾಕ್ಷಣ್ಯವಾಗಿ ಪ್ರಕರಣ ದಾಖಲಿಸಿ ಕಾನೂನಿನ ಅಡಿಯಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ➢ ಠಾಣಾ ವ್ಯಾಪ್ತಿಯಲ್ಲಿ ಪ್ರತಿ ಬೀಟ್ ಸಿಬ್ಬಂದಿಗಳು ಆಗಾಗ್ಗೆ ತಮ್ಮ ವ್ಯಾಪ್ತಿಯಲ್ಲಿ ಸಭೆಗಳನ್ನು ನಡೆಸುವ ಮೂಲಕ ಸಮಾಜಘಾತಕ ಶಕ್ತಿಗಳ ಬಗ್ಗೆ ಚರ್ಚಿಸಿ ಅಂತಹ ವ್ಯಕ್ತಿಗಳಿಗೆ ಸಾರ್ವಜನಿಕವಾಗಿ ಎಚ್ಚರಿಕೆ ನೀಡುವ ಮೂಲಕ ಮುನ್ನೆಚ್ಚರಿಕೆ ತೆಗೆದುಕೊಳ್ಳಲಾಗುತ್ತಿದೆ. ➢ ಠಾಣಾ ಮಟ್ಟದಲ್ಲಿ ರೌಡಿ ಚಟುವಟಿಕೆ ಇರುವ ವ್ಯಕ್ತಿಗಳನ್ನು ಆಗಾಗ್ಗೆ ರೌಡಿ ಪರೇಡ್ ನಡೆಸಿ ಎಚ್ಚರಿಕೆ ನೀಡಲಾಗುತ್ತಿದೆ.

ಸಂಖ್ಯೆ: ಹೆಚ್‌ಡಿ 176 ಪಿಓಪಿ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು.

ಕರ್ನಾಟಕ ವಿಧಾನ ಸಭೆ

1	ಮಾನ್ಯ ಸದಸ್ಯರ ಹೆಸರು	: ಶ್ರೀ ಖಾದರ್ ಯು.ಟಿ (ಮಂಗಳೂರು)
2	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 280
3	ಉತ್ತರಿಸಬೇಕಾದ ದಿನಾಂಕ	: 14-12-2021
4	ಉತ್ತರಿಸಬೇಕಾದವರು	: ಮಾನ್ಯ ಕಾರ್ಮಿಕ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಕರ್ನಾಟಕ ರಾಜ್ಯ ವಿಮಾ ಯೋಜನೆಯ ಸೌಲಭ್ಯವನ್ನು ಎಷ್ಟು ಮಂದಿ ಫಲಾನುಭವಿಗಳು ಪಡೆದುಕೊಂಡಿರುತ್ತಾರೆ? (ಜಿಲ್ಲಾವಾರು ವಿವರ ನೀಡುವುದು)	ಕರ್ನಾಟಕ ರಾಜ್ಯ ವಿಮಾ ಯೋಜನೆಯ ಸೌಲಭ್ಯವನ್ನು ಪಡೆಯುತ್ತಿರುವ ಫಲಾನುಭವಿಗಳ ಜಿಲ್ಲಾವಾರು ವಿವರವುಳ್ಳ ಕಾ.ರಾ.ವಿ. ನಿಗಮದವರು ಒದಗಿಸಿರುವ ಪಟ್ಟಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

ಕಡತ ಸಂಖ್ಯೆ: LD-LSI/372/2021

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಅನುಬಂಧ - 1

DISTRICTWISE NO. OF EMPLOYEES REGISTERED UNDER ESI, IN KARNATAKA STATE AS ON 31.12.2020			
Sl. No.	RO/SRO	Taluk/District	No. of Employees
1	RO, Binny Pet	Bengaluru Rural	24425
		Bengaluru Urban	1424980
		Kolar	52431
ಇ) ಉಪನಿರ್ದೇಶಕರು, ಜಿಲ್ಲಾ ಖಜಾನೆ, ಹಾಸನ ರವರು ದಿ:17/06/2021ರಲ್ಲಿ ಹೆಚ್ಚುವರಿ ನಿರ್ದೇಶಕರು, ಟಿ.ಎನ್.ಎಂ.ಸಿ., ಖನಿಜ ಭವನ, ಬೆಂಗಳೂರು ರವರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತಾವನೆಯನ್ನು ಸಲ್ಲಿಸಿ 03 ತಿಂಗಳು ಕಳೆದಿದ್ದು, ರೂ.25.00ಲಕ್ಷ FAILED PAYMENT ಆಗಿ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹಾಸನ ರವರ ಲಾಗಿನ್‌ನಲ್ಲಿ ಒಂದು ವರ್ಷಕ್ಕೂ ಮೇಲ್ಪಟ್ಟು ಉಳಿದಿದ್ದರೂ ಸಹ ಈ ರೀತಿ ಕಳೆದ 02 ವರ್ಷಗಳಿಂದಲೂ ಇಲಾಖೆಯವರು ಮಾಡಿರುವ ತಪ್ಪಿನಿಂದಾಗಿ ಪಾವತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ತಪ್ಪಿಗೆ ಕಾರಣರಾದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಿ, ಕೂಡಲೇ ರೂ.25.00 ಲಕ್ಷಗಳ ಹಣವನ್ನು ಪಾವತಿಸಲು ಸರ್ಕಾರ ಮುಂದಾಗುವುದೇ? (ಸಂಪೂರ್ಣ ಮಾಹಿತಿ ನೀಡುವುದು)	ಲೆಕ್ಕ ಬದಲಾವಣೆ ಜ್ಞಾಪನ (ALTERATION MEMORANDUM) ಮಹಾಲೇಖಪಾಲರ ಕಚೇರಿಯಲ್ಲಿ ಅನುಮೋದಿತವಾಗಬೇಕಾಗಿದ್ದು, ಜಿಲ್ಲಾ ಖಜಾನೆ, ಹಾಸನ ಇವರು ದಿನಾಂಕ:17/08/2021ರಂದು ವಿಫಲ ಇ-ಪಾವತಿಗೆ ಲೆಕ್ಕ ಬದಲಾವಣೆ ಮಾಡಿಕೊಡುವ ಬಗ್ಗೆ ALTERATION MEMORANDUMನ್ನು ಮಹಾಲೇಖಪಾಲರ ಕಚೇರಿಗೆ ಕಳುಹಿಸಿರುತ್ತಾರೆ. ಮಹಾಲೇಖಪಾಲರಿಂದ ಸದರಿ ಲೆಕ್ಕ ಬದಲಾವಣೆ ಜ್ಞಾಪನವು ಸಂಖ್ಯೆ: SBR/R-8/2021-22/2383, ದಿನಾಂಕ:06/12/2021ರಲ್ಲಿ ಅನುಮೋದಿತವಾಗಿರುತ್ತದೆ. ಮಹಾಲೇಖಪಾಲರಿಂದ ಸದರಿ ಲೆಕ್ಕ ಬದಲಾವಣೆ ಜ್ಞಾಪನವು ಅನುಮೋದಿತವಾಗಿರುವುದರಿಂದ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹಾಸನ, ಇವರು ಪ್ರಸಕ್ತ ಸಾಲಿನ ಅನುದಾನದಲ್ಲಿ ಬಿಲ್ಲನ್ನು ತಯಾರಿಸಿ, ಖಜಾನೆಗೆ ಸಲ್ಲಿಸಿದ ನಂತರ ಪಾವತಿಸಲು ಕ್ರಮಕೈಗೊಳ್ಳಲಾಗುವುದು.

ಸಂಖ್ಯೆ: ಆಇ 175 ಆಖಇ 2021.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 292
2. ಸದಸ್ಯರ ಹೆಸರು : ಶ್ರೀ ರೇವಣ್ಣ. ಹೆಚ್.ಡಿ
3. ಉತ್ತರಿಸಬೇಕಾದ ದಿನಾಂಕ : 14-12-2021

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಗೊರೂರು ಹೇಮಾವತಿ ಜಲಾಶಯ ಯೋಜನೆಯಡಿಯಲ್ಲಿ 2018-19ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಹಾಸನ ಜಿಲ್ಲೆಯ ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ, ಸಕಲೇಶಪುರ ವಿಧಾನಸಭಾ ಕ್ಷೇತ್ರ ಮತ್ತು ಅರಕಲಗೂಡು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನೀರಾವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ಟೆಂಡರ್ ಪ್ರಕ್ರಿಯೆ ನಡೆದಿದ್ದು, ಹಲವು ಕಾಮಗಾರಿಗಳ ತಾಂತ್ರಿಕ ಬಿಡ್ ಹಾಗೂ ಆರ್ಥಿಕ ಬಿಡ್‌ಗಳು ಅನುಮೋದನೆಗಾಗಿ ವಿವಿಧ ಹಂತದಲ್ಲಿದ್ದು, ಸದರಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳನ್ನು ತಡೆಹಿಡಿದಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ಹೇಮಾವತಿ ಯೋಜನಾ ವಲಯ, ಗೊರೂರು ವ್ಯಾಪ್ತಿಯಡಿಯಲ್ಲಿ 2018-19ನೇ ಸಾಲಿನಲ್ಲಿ ಅನುಮೋದನೆಗೊಂಡ ಕಾಮಗಾರಿಗಳ ಪೈಕಿ ಹೊಳೆನರಸೀಪುರ ಕ್ಷೇತ್ರ, ಅರಕಲಗೂಡು ಕ್ಷೇತ್ರ ಹಾಗೂ ಸಕಲೇಶಪುರ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕಾವೇರಿ ನೀರಾವರಿ ನಿಗಮದ 70ನೇ ಮಂಡಳಿ ಸಭೆಯ ನಿರ್ಣಯ ಹಾಗೂ ನಂತರದ ದಿನಗಳಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ಕಾಮಗಾರಿಗಳು (Grounded works) ಮತ್ತು ಅನುದಾನದ ಕೊರತೆಯಿಂದ ತಡೆಹಿಡಿದಿರುವ ಕಾಮಗಾರಿಗಳ (Non Grounded works) ವಿವರಗಳು ಈ ಕೆಳಕಂಡಂತಿವೆ :

(ರೂ. ಕೋಟಿಗಳಲ್ಲಿ)

ಕ್ರ ಸಂ	ವಿಧಾನ ಸಭಾ ಕ್ಷೇತ್ರ	2018-19ನೇ ಸಾಲಿನ ಕಾರ್ಯಕ್ರಮ ಪಟ್ಟಿಯಂತೆ ಅನುಮೋದನೆಗೊಂಡ ಕಾಮಗಾರಿಗಳು		70ನೇ ಮಂಡಳಿ ಸಭೆಯ ನಿರ್ಣಯ ಮತ್ತು ನಂತರ ದಿನಗಳಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಕಾಮಗಾರಿಗಳು (Grounded works)		ಅನುದಾನದ ಕೊರತೆಯಿಂದ ತಡೆಹಿಡಿಯಲಾಗಿರುವ ಕಾಮಗಾರಿಗಳು (Non Grounded works)	
		ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
1	ಹೊಳೆನರಸೀಪುರ	1911	1927.15	1242	1515.70	669	411.45
2	ಅರಕಲಗೂಡು	1136	842.73	461	532.27	675	310.46
3	ಆಲೂರು-ಸಕಲೇಶಪುರ	596	264.10	383	122.76	213	141.34
	ಒಟ್ಟು :-	**3643**	**3033.98**	**2086**	**2170.73**	**1557**	**863.25**

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಆ)	ಸದರಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳನ್ನು ತಡೆಹಿಡಿದಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಅರಕಲಗೂಡು, ಹೊಳೆನರಸೀಪುರ ಮತ್ತು ಸಕಲೇಶಪುರ ವಿಧಾನಸಭಾ ಕ್ಷೇತ್ರದ ಶಾಸಕರುಗಳು ದಿ:06.03.2020 ರಲ್ಲಿ ಮನವಿ ಪತ್ರದಲ್ಲಿ ಮಾನ್ಯ ಮುಖ್ಯಮಂತ್ರಿಯವರ ಕಛೇರಿ ಕಡತ ಸಂಖ್ಯೆ ಇ.ಸಿ.ಎಂ. 1230358/2020/ ದಿ:06.03.2020 ರಲ್ಲಿ	ಹೌದು.

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
	"ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲು ಕಡತ ಮಂಡಿಸಿ" ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಜಲಸಂಪನ್ಮೂಲ ಇಲಾಖೆ, ರವರಿಗೆ ನಿರ್ದೇಶನ ನೀಡಿರುವುದು ನಿಜವೇ;	
ಇ	ಮೇಲ್ಕಂಡ ತಡೆಹಿಡಿದಿರುವ ಕಾಮಗಾರಿಗಳ ಬಗ್ಗೆ ಕಾವೇರಿ ನೀರಾವರಿ ನಿಗಮದಿಂದ ಮಾನ್ಯ ಜಲಸಂಪನ್ಮೂಲ ಸಚಿವರಿಗೆ ಕಡತ ಮಂಡಿಸಿದ್ದು, ಮಾನ್ಯ ಜಲಸಂಪನ್ಮೂಲ ಸಚಿವರು ಆರ್ಥಿಕ ಇಲಾಖೆಗೆ ದಿ:04.05.2020 ರ ಸುತ್ತೋಲೆಯಂತೆ ಕ್ರಮವಹಿಸಲು ಸೂಚಿಸಿರುವ ಹಿನ್ನೆಲೆಯಲ್ಲಿ ಕಡತವನ್ನು ಆರ್ಥಿಕ ಇಲಾಖೆಯ ಸಹಮತಿಗಾಗಿ ಸಲ್ಲಿಸಲು ಸರ್ಕಾರದ ಜಲಸಂಪನ್ಮೂಲ ಕಾರ್ಯದರ್ಶಿಯವರ ಮುಖೇನ ಕಡತ ಸಂಖ್ಯೆ: WRD 26 NHP 2020, e-office file ರಲ್ಲಿ ಆರ್ಥಿಕ ಅನುಮೋದನೆಗಾಗಿ ಆರ್ಥಿಕ ಇಲಾಖೆಗೆ ಕಡತವನ್ನು ಸಲ್ಲಿಸಿರುವುದು ನಿಜವೇ; ಹಾಗಿದ್ದಲ್ಲಿ, ತಡೆಹಿಡಿದಿರುವ ಟೆಂಡರ್ ನೋಟಿಫಿಕೇಶನ್‌ಗಳಲ್ಲಿನ ಕಾಮಗಾರಿಗಳನ್ನು ಯಾವ ಕಾಲಮಿತಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು?	ಹೌದು. ಸದರಿ ಮನವಿ ಕುರಿತು ಮಾನ್ಯ ಮುಖ್ಯಮಂತ್ರಿಯವರ ನಿರ್ದೇಶನದಂತೆ, ಹೊಳೆನರಸೀಪುರ, ಅರಕಲಗೂಡು, ಸಕಲೇಶಪುರ ಹಾಗೂ ಕೆ.ಆರ್.ನಗರ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು, ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ ಹಾಗೂ ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು ವ್ಯಾಪ್ತಿಯ 11 ಸಂಖ್ಯೆಯ ಟೆಂಡರ್ ನೋಟಿಫಿಕೇಷನ್‌ಗಳಲ್ಲಿನ 738 ಸಂಖ್ಯೆ ರೂ.348.45 ಕೋಟಿ ಮೊತ್ತದ Non Grounded (Under Tender Process) ಕಾಮಗಾರಿಗಳ ಪೈಕಿ, ಒಟ್ಟಾರೆ ಯೋಜನಾ ವ್ಯಾಪ್ತಿಯಲ್ಲಿನ ನಿಗಮದ ಧ್ಯೇಯೋದ್ದೇಶಗಳಡಿಯಲ್ಲಿ ಒಳಗೊಂಡಿಲ್ಲದ ದೇವಸ್ಥಾನಗಳು, ಮಸೀದಿಗಳು, ಚರ್ಚ್‌ಗಳು, ಸಮುದಾಯ ಭವನಗಳು ಹಾಗೂ ರಸ್ತೆ ಜೊತೆ ಸೇರ್ಪಡೆಯಾಗಿರುವ ದೇವಸ್ಥಾನದ ಕಾಮಗಾರಿಗಳನ್ನೊಳಗೊಂಡ 230 ಸಂಖ್ಯೆಯ 108.20 ಕೋಟಿ ಮೊತ್ತದ ಕಾಮಗಾರಿಗಳನ್ನು ಹೊರತುಪಡಿಸಿ, ಯೋಜನಾ ವ್ಯಾಪ್ತಿಯಲ್ಲಿನ 508 ಸಂಖ್ಯೆಯ ರೂ.240.25 ಕೋಟಿ ಮೊತ್ತದ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕೋರಿ ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಆರ್ಥಿಕ ಇಲಾಖೆಯ ಅನುಮೋದನೆಗಾಗಿ ಕಡತವನ್ನು ಸಲ್ಲಿಸಲಾಗಿದ್ದು, ಪರಿಶೀಲನಾ ಹಂತದಲ್ಲಿದೆ. ಮುಂಬರುವ ಆರ್ಥಿಕ ವರ್ಷಗಳಲ್ಲಿ ಅನುದಾನದ ಲಭ್ಯತೆಯ ಅನುಸಾರ ಹಾಗೂ ಆರ್ಥಿಕ ಇಲಾಖೆಯು ನೀಡುವ ಸೂಚನೆಗಳನ್ವಯ ಸದರಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ:ಜಸಂಇ 210 ಎನ್‌ಎಲ್‌ಎ 2021

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 293
2. ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್. ಡಿ.
3. ಉತ್ತರಿಸಬೇಕಾದ ದಿನಾಂಕ : 14-12-2021

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಹೊಳೆನರಸೀಪುರ ಮತಕ್ಷೇತ್ರ ವ್ಯಾಪ್ತಿಯ ಹಾಸನ ತಾಲ್ಲೂಕು ದುದ್ದ ಹೋಬಳಿಯು ಸಂಪೂರ್ಣ ಕೃಷಿ ಕ್ಷೇತ್ರಕ್ಕೊಳಪಟ್ಟಿದ್ದು ಇಲ್ಲಿನ ಜನರು ಹಾಗೂ ರೈತರು ಜೀವನೋಪಾಯಕ್ಕಾಗಿ ಕೃಷಿಯನ್ನೇ ಅವಲಂಬಿಸಿರುತ್ತಾರೆ. ದುದ್ದ ಹೋಬಳಿಯು Upper Hemavathy Basin ವ್ಯಾಪ್ತಿಗೊಳಪಟ್ಟಿದ್ದು, ಹಾಸನ ತಾಲ್ಲೂಕಿನಲ್ಲಿ ಹೇಮಾವತಿ ಅಣೆಕಟ್ಟು ಇದ್ದರೂ, ಯಗಚಿ ನದಿಯು ಹಾಸನ ತಾಲ್ಲೂಕಿನಲ್ಲಿ ಹರಿದರೂ ಕೂಡ ಈ ಪ್ರದೇಶಕ್ಕೆ ಯಾವುದೇ ನದಿ ಮೂಲಗಳಿಂದ ನೀರಾವರಿಗೊಳಪಡಿಸಲು ಸಾಧ್ಯವಾಗಿರುವುದಿಲ್ಲವಾದ್ದರಿಂದ ಈ ಪ್ರದೇಶದ ರೈತಾಪಿ ವರ್ಗದವರು ಕೃಷಿಗಾಗಿ ಕೆರೆ, ಕಟ್ಟೆಗಳು, ಕೊಳವೆಬಾವಿಗಳನ್ನು ಅವಲಂಬಿಸಿದ್ದು, ಅಂತರ್ಜಲ ದಿನೇ ದಿನೇ ಕುಸಿಯುತ್ತಿರುವುದರಿಂದ ಕೊಳವೆಬಾವಿಗಳು ವರ್ಷದಿಂದ ವರ್ಷಕ್ಕೆ ನಿಷ್ಕ್ರಿಯಗೊಳುತ್ತಿದ್ದು, ಇದರಿಂದ ರೈತರಿಗೆ ಆರ್ಥಿಕವಾಗಿ ತೊಂದರೆಯಾಗಿರುವುದರಿಂದ ಹೊಳೆನರಸೀಪುರ ತಾಲ್ಲೂಕು ಮಾವಿನಕೆರೆ ಗ್ರಾಮದ ಹತ್ತಿರ ಹೇಮಾವತಿ ನದಿಯಿಂದ ದುದ್ದ ಹಾಗೂ ಶಾಂತಿಗ್ರಾಮ ಹೋಬಳಿಯ 160 ಕೆರೆಗಳು ಹಾಗೂ 10 ಕಟ್ಟೆಗಳಿಗೆ ಕುಡಿಯುವ ನೀರಿಗಾಗಿ ಕೆರೆತುಂಬಿಸುವ ಏತ ನೀರಾವರಿ ಯೋಜನೆಯಿಂದ ಕೈಬಿಟ್ಟಿರುವ ಗ್ರಾಮಗಳ 30 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗಾಗಿ ರೂ.45.00 ಕೋಟಿಗಳ ಅಂದಾಜು ಪಟ್ಟಿಯೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ಹೊಳೆನರಸೀಪುರ ತಾಲ್ಲೂಕು ಮಾವಿನಕೆರೆ ಗ್ರಾಮದ ಹತ್ತಿರ ಹೇಮಾವತಿ ನದಿಯಿಂದ ಹಾಸನ ತಾಲ್ಲೂಕು ದುದ್ದ ಮತ್ತು ಶಾಂತಿಗ್ರಾಮ ಹೋಬಳಿ ವ್ಯಾಪ್ತಿಯ 160 ಕೆರೆಗಳು ಮತ್ತು ಕಟ್ಟೆಗಳಿಗೆ ಕುಡಿಯುವ ನೀರಿಗಾಗಿ ಕೆರೆ ತುಂಬಿಸುವ ಯೋಜನೆಯನ್ನು ಎರಡು ಹಂತಗಳಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿ ಸರ್ಕಾರದ ಆದೇಶ ದಿನಾಂಕ:28-09-2018 ರಲ್ಲಿ ರೂ333.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಅದರಂತೆ ಸದರಿ ಕಾಮಗಾರಿಗೆ ದಿನಾಂಕ:11-10-2018 ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿ, ಟೆಂಡರ್ ಆದಾರದ ಮೇಲೆ ಕಾಮಗಾರಿಯನ್ನು ಕೈಗೆತ್ತಿಕೊಂಡು ನಿರ್ವಹಿಸಲಾಗುತ್ತಿದೆ. ಹೊಳೆನರಸೀಪುರ ತಾಲ್ಲೂಕು ಮಾವಿನಕೆರೆ ಗ್ರಾಮದ ಹತ್ತಿರ ಹೇಮಾವತಿ ನದಿಯಿಂದ ದುದ್ದ ಹಾಗೂ ಶಾಂತಿಗ್ರಾಮ ಹೋಬಳಿಯ 160 ಕೆರೆಗಳು ಹಾಗೂ ಕಟ್ಟೆಗಳಿಗೆ ಕುಡಿಯುವ ನೀರಿಗಾಗಿ ಕೆರೆ ತುಂಬಿಸುವ ಯೋಜನೆಯಲ್ಲಿ ಕೈಬಿಟ್ಟು ಹೋಗಿರುವ ದುದ್ದ ಹೋಬಳಿಯ ಉಳಿಕೆ 27 ಕೆರೆಗಳಿಗೆ ಮತ್ತು 18 ಕಟ್ಟೆಗಳಿಗೆ ನೀರು ತುಂಬಿಸಲು ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಗ್ರಾಮಸ್ಥರುಗಳು ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ. ಮೂಲ ಯೋಜನೆಯಿಂದ ಈ ಕೆರೆಗಳಿಗೆ ಹಾಗೂ ಕಟ್ಟೆಗಳಿಗೆ ನೀರು ತುಂಬಿಸಲು ಕಾವೇರಿ ನೀರಾವರಿ ನಿಗಮದ ವತಿಯಿಂದ ವಿವರವಾದ ಅಂದಾಜು ಪಟ್ಟಿಯನ್ನು ರೂ.45.00 ಕೋಟಿಗಳಿಗೆ ತಯಾರಿಸಿದ್ದು, ನಿಗಮದ ಪರಿಶೀಲನೆಯಲ್ಲಿದೆ.
ಆ	ದುದ್ದ ಹೋಬಳಿ ವ್ಯಾಪ್ತಿಯ ಗ್ರಾಮಗಳಾದ ಸೋಮನಹಳ್ಳಿ, ಸೋಮನಹಳ್ಳಿಕಾವಲು, ಲಿಂಗರಸನಹಳ್ಳಿ, ಕುದುರೆಗುಂಡಿ, ಮುತ್ತತ್ತಿ, ಬೊಗಾರನಹಳ್ಳಿ, ಬೊಗಾರನಹಳ್ಳಿಕೊಪ್ಪಲು, ಕಬ್ಬಳಿ, ಹೊಸಹಳ್ಳಿ, ಮುದ್ಲಾಪುರ, ತಿರುಪತಿಹಳ್ಳಿ, ಹಂಗರಹಳ್ಳಿ, ವೇದಾವತಿ, ಬಸವಾಘಟ್ಟ, ಬೈರಾಪುರ, ಹುಲಹಳ್ಳಿ, ಮಹದೇವರಹಳ್ಳಿ, ಚೀರನಹಳ್ಳಿ, ಚಿಕ್ಕಾಮೇನಹಳ್ಳಿ ಮುಂತಾದ ಸುಮಾರು 20ಕ್ಕೂ ಹೆಚ್ಚು ಹಳಿಗಳು ನೀರಿನ ಸಮಸ್ಯೆಯಿಂದ ಬಹಳ ತೊಂದರೆಗೊಳಪಡುತ್ತಿದ್ದು ಈ ಹಳ್ಳಿಗಳ ಸುಮಾರು 30 ಕ್ಕೂ ಹೆಚ್ಚು ಕೆರೆಗಳು ಹಾಲಿ ದುದ್ಧ-ಶಾಂತಿಗ್ರಾಮ ಏತ ನೀರಾವರಿ ಯೋಜನೆಯಿಂದ ಹೊರ ಉಳಿದಿದ್ದು, ಈ ಕೆರೆಗಳನ್ನು ಈ ಯೋಜನೆ ವ್ಯಾಪ್ತಿಗೆ ಈಗಾಗಲೇ ಕಾಮಗಾರಿ ಪ್ರಗತಿಯಲ್ಲಿರುವ ದುದ್ಧ ಶಾಂತಿಗ್ರಾಮ ಏತ ನೀರಾವರಿ	

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
	ಯೋಜನೆಯಿಂದ ಕೈಬಿಟ್ಟಿಹೋಗಿರುವ ಕೆರೆಗಳನ್ನು ಈ ಯೋಜನೆಯ ವ್ಯಾಪ್ತಿಗೆ ಒಳಪಡಿಸಿ ತುಂಬಿಸಲು ಕ್ರಮಕೈಗೊಳ್ಳುವಂತೆ ಮಾನ್ಯ ಮುಖ್ಯಮಂತ್ರಿಯರನ್ನು ಕೋರಿದ್ದರ ಮೇರೆಗೆ ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ಬಲದಂತೆ ನಾಲಾ ವಿಭಾಗ, ಹೊಳೆನರಸೀಪುರ ರವರಿಗೆ ಮುಖ್ಯಮಂತ್ರಿಗಳು ನಿರ್ದೇಶನ ನೀಡಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ಮುಂದುವರೆದು, ನಿಗಮದ ಕಾಮಗಾರಿಗಳ ಕಾರ್ಯಭಾರ ಅಧಿಕವಾಗಿದ್ದು, ನಿಗಮಕ್ಕೆ ಹಂಚಿಕೆಯಾಗಿರುವ ಪ್ರಸಕ್ತ ಸಾಲಿನ ಅನುದಾನದಲ್ಲಿ ಹಾಲಿ ಮುಂದುವರೆದ ಕಾಮಗಾರಿಗಳನ್ನೇ ಸರಿದೂಗಿಸಿಕೊಳ್ಳುವುದು ಕಷ್ಟಸಾಧ್ಯವಾಗುತ್ತಿರುತ್ತದೆ. ಆದಾಗ್ಯೂ, ಸದರಿ ಕಾಮಗಾರಿಯನ್ನು ನೀರಿನ ಲಭ್ಯತೆ ಹಾಗೂ ಅನುದಾನದ ಲಭ್ಯತೆಯನ್ನಾಧರಿಸಿ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.
ಇ	ದುದ್ದ ಶಾಂತಿಗ್ರಾಮ ಏತ ನೀರಾವರಿ ಯೋಜನೆಯಿಂದ ಕೈ ಬಿಟ್ಟುಹೋಗಿರುವ ಕೆರೆಗಳನ್ನು ಈ ಯೋಜನೆ ವ್ಯಾಪ್ತಿಗೆ ಒಳಪಡಿಸಿ ತುಂಬಿಸಲು ಕ್ರಮಕೈಗೊಳ್ಳುವಂತೆ ಅಂದಿನ ಮಾನ್ಯ ಮುಖ್ಯಮಂತ್ರಿಯವರು "ದುದ್ದ ಹೋಬಳಿಯ ಉಳಿಕೆ ಕೆರೆಗಳಿಗೆ ನೀರು ತುಂಬಿಸಲು ಸೂಕ್ತ ಕ್ರಮ" ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಜಲಸಂಪನ್ಮೂಲ ಇಲಾಖೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು ರವರಿಗೆ ಇ-ಸಿಎಂ/2623971/2021/ ದಿನಾಂಕ:14.06.2021ರಲ್ಲಿ ಸಲ್ಲಿಸಿದ ಕೋರಿಕೆ ಮೇರೆಗೆ ಕೈಗೊಳ್ಳುವಂತೆ ನಿರ್ದೇಶನ ನೀಡಿರುವುದು ನಿಜವೇ, (ಸಂಪೂರ್ಣ ಮಾಹಿತಿ ನೀಡುವುದು)	
ಈ	ಹಿಂದಿನ ಮಾನ್ಯ ಮುಖ್ಯಮಂತ್ರಿಗಳ ನಿರ್ದೇಶನಗಳ ಮೇರೆಗೆ ದುದ್ದ-ಶಾಂತಿಗ್ರಾಮ ಏತ ನೀರಾವರಿ ಯೋಜನೆಯಿಂದ ಕೈ ಬಿಟ್ಟುಹೋಗಿರುವ ಕೆರೆಗಳನ್ನು ಈ ಯೋಜನೆ ವ್ಯಾಪ್ತಿಗೆ ಒಳಪಡಿಸಿ ನೀರನ್ನು ತುಂಬಿಸುವ ಕಾಮಗಾರಿಗೆ ಯೋಜನಾ ವರದಿಯಂತೆ ರೇಖಾ ಅಂದಾಜು ಪಟ್ಟಿಯನ್ನು 2018-19ನೇ ಸಾಲಿನ ಜಲಸಂಪನ್ಮೂಲ ಇಲಾಖೆ, ಲೋಕೋಪಯೋಗಿ ಇಲಾಖೆ ಹಾಗೂ ಮಾರುಕಟ್ಟೆ ದರಗಳನ್ನು ಪರಿಗಣಿಸಿ ರೂ.45.00 ಕೋಟಿಗಳ ಅಂದಾಜು ಪಟ್ಟಿಯೊಂದಿಗೆ ಪ್ರಸ್ತಾವನೆಯನ್ನು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ಬೆಂಗಳೂರು ರವರಿಗೆ ಕಳುಹಿಸಿರುವುದು ನಿಜವೇ; ಹಾಗಿದ್ದಲ್ಲಿ, ರೂ.45.00 ಕೋಟಿಗಳ ಅಂದಾಜು ಪಟ್ಟಿಯ ಪ್ರಸ್ತಾವನೆಯನ್ನು ಕಾವೇರಿ ನೀರಾವರಿ ನಿಗಮದ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ, ಆಡಳಿತಾತ್ಮಕ ಅನುಮೋದನೆಯನ್ನು ಯಾವ ಕಾಲಮಿತಿಯಲ್ಲಿ ನೀಡಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	

ಸಂಖ್ಯೆ:ಜಸಂಇ 186 ಎನ್‌ಎಲ್‌ಎ 2021

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 294
2. ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ.
3. ಉತ್ತರಿಸಬೇಕಾದ ದಿನಾಂಕ : 14-12-2021

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಹಾಸನ ಜಿಲ್ಲೆ, ಹಾಸನ ನಗರದಲ್ಲಿ Integrated Master Planರ ಪ್ರಕಾರ ಹಾಸನ ನಗರದ ಚನ್ನಪಟ್ಟಣ ಕೆರೆಯ ಅಂಗಳದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿರುವ ವಿಹಾರಧಾಮದ ಅಭಿವೃದ್ಧಿ ಮತ್ತು ಉದ್ಯಾನವನ ನಿರ್ಮಾಣ ಮುಂತಾದ ಕಾಮಗಾರಿಗಳ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಈ ಕಾಮಗಾರಿಗಳನ್ನು ಒಳಗೊಂಡ ಹಾಗೂ ಮಳೆಗಾಲದಲ್ಲಿ ಮಳೆನೀರು ಮತ್ತು ಕೊಳಚೆ ನೀರು ಹೊರಹಾಕುವ ಯೋಜನೆಯನ್ನು ರೂ.144.00 ಕೋಟಿಗಳಲ್ಲಿ ಕೈಗೆತ್ತಿಕೊಳ್ಳುವಂತೆ ಮಾನ್ಯ ಮುಖ್ಯಮಂತ್ರಿಯವರು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಜಲಸಂಪನ್ಮೂಲ ಇಲಾಖೆ ರವರಿಗೆ ನಿರ್ದೇಶನ ನೀಡಿದ್ದು, ಕಡತವನ್ನು ಜಲಸಂಪನ್ಮೂಲ ಇಲಾಖೆಯಿಂದ ಆರ್ಥಿಕ ಇಲಾಖೆಯ ಅನುಮೋದನೆಗಾಗಿ ಸಲ್ಲಿಸಲಾಗಿರುವುದು ನಿಜವೇ; ಪ್ರಸ್ತುತ ಸದರಿ ಕಡತವು ಯಾವ ಹಂತದಲ್ಲಿರುತ್ತದೆ; ಈ ಯೋಜನೆಯನ್ನು ಮೂಲ ಯೋಜನೆಯಂತೆ ಯಥಾವತ್ತಾಗಿ ಕೈಗೊಳ್ಳಲು ಸರ್ಕಾರಕ್ಕಿರುವ ಅಡತಡೆಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ನಗರದ ಚನ್ನಪಟ್ಟಣ ಕೆರೆಯ ಅಂಗಳದಲ್ಲಿ ವಿಹಾರಧಾಮದ ಅಭಿವೃದ್ಧಿ ಮತ್ತು ಉದ್ಯಾನವನ ನಿರ್ಮಾಣ ಕಾಮಗಾರಿಯ ರೂ.144.00 ಕೋಟಿ ಮೊತ್ತದ ಡಿ.ಪಿ.ಆರ್ ಪ್ರಸ್ತಾವನೆಗೆ ಸರ್ಕಾರದ ದಿನಾಂಕ:28.02.2019ರ ಆದೇಶದಲ್ಲಿ ರೂ.36.00 ಕೋಟಿಗಳ ಅಂದಾಜು ಮೊತ್ತಕ್ಕೆ ಸೀಮಿತಗೊಳಿಸಿ ಕೈಗೆತ್ತಿಕೊಳ್ಳುವ ಷರತ್ತಿಗೊಳಪಟ್ಟು ತಾತ್ವಿಕ ಅನುಮೋದನೆ ನೀಡಲಾಗಿರುತ್ತದೆ. ಮುಂದುವರೆದು, ಸರ್ಕಾರದ ದಿನಾಂಕ:24.07.2019ರ ತಿದ್ದುಪಡಿ ಆದೇಶದಲ್ಲಿ, ರೂ.144.00 ಕೋಟಿ ಮೊತ್ತದ ಯೋಜನಾ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಿ 2019-20 ನೇ ಸಾಲಿನಲ್ಲಿ ಕಾಮಗಾರಿಯ ವೆಚ್ಚವನ್ನು ರೂ.36.00 ಕೋಟಿಗಳಿಗೆ ಸೀಮಿತಗೊಳಿಸಿ ಹಾಗೂ ಉಳಿಕೆ ಮೊತ್ತವಾದ ರೂ.108.00 ಕೋಟಿಗಳ ಕಾಮಗಾರಿಯನ್ನು 2020-21 ನೇ ಸಾಲಿನಲ್ಲಿ ಕಾವೇರಿ ನೀರಾವರಿ ನಿಗಮಕ್ಕೆ ಹಂಚಿಕೆಯಾಗುವ ಅನುದಾನದಲ್ಲಿ ಕೈಗೆತ್ತಿಕೊಳ್ಳಲು ಅನುಮೋದನೆ ನೀಡಲಾಗಿರುತ್ತದೆ. ತದನಂತರ, ಹಾಸನ ವಿಧಾನಸಭಾಕ್ಷೇತ್ರದ ಶಾಸಕರು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಿಸಿರುವ ದಿನಾಂಕ:12.09.2019 ರ ಪತ್ರದಲ್ಲಿ, ಚನ್ನಪಟ್ಟಣಕೆರೆ ಅಭಿವೃದ್ಧಿ ಮತ್ತು ಉದ್ಯಾನವನ ನಿರ್ಮಾಣ ಕಾಮಗಾರಿಗೆ ಸರ್ಕಾರದಿಂದ ಅನುಮೋದನೆಯಾಗಿರುವ ರೂ.144.00 ಕೋಟಿ ಮೊತ್ತದಲ್ಲಿ ಹಾಸನ ನಗರಕ್ಕೆ ಸರಿಹೊಂದುವಂತೆ ಚನ್ನಪಟ್ಟಣಕೆರೆ ಮತ್ತು ವಿಹಾರಧಾಮದ ಅಭಿವೃದ್ಧಿಯನ್ನು ಕೈಗೊಂಡು ಉಳಿಕೆ ಮೊತ್ತದಲ್ಲಿ ಹಾಸನ ನಗರದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಇತರೆ ಉದ್ಯಾನವನಗಳು ಮತ್ತು ಸುತ್ತಮುತ್ತಲ ಪ್ರದೇಶಗಳ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು ಅವಶ್ಯಕವಾಗಿದ್ದು, ಅದರಂತೆ ಪ್ರಸ್ತಾವನೆಯನ್ನು ಪರಿಷ್ಕರಿಸುವಂತೆ ಕೋರಿದ್ದ ಪ್ರಯುಕ್ತ, ಮಾರ್ಪಡಿಸಿದ ಪ್ರಸ್ತಾವನೆಯನ್ನು ರೂ.144.00 ಕೋಟಿ ಮೊತ್ತದ ಮಿತಿಯಲ್ಲಿ ತಯಾರಿಸಲಾಗಿದ್ದು, ಚನ್ನಪಟ್ಟಣಕೆರೆ ಸೇರಿದಂತೆ ಹಾಸನ ನಗರದ 6 ಪ್ರಮುಖ ಕೆರೆಗಳನ್ನು ಹಾಗೂ 9 ಉದ್ಯಾನವನಗಳನ್ನು ಹಾಗೂ ಮೂಲಸೌಲಭ್ಯ ಕಲ್ಪಿಸುವ ಕಾಮಗಾರಿಗಳನ್ನು ರೂ.144.00 ಕೋಟಿ ಮೊತ್ತದ ಮಿತಿಯಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿರುತ್ತದೆ. ಹಾಸನ ನಗರದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಇತರೆ ಉದ್ಯಾನವನಗಳು ಮತ್ತು ಸುತ್ತಮುತ್ತಲ ಪ್ರದೇಶಗಳ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ರೂ.144.00 ಕೋಟಿಗಳ ಮೊತ್ತದ ಮಾರ್ಪಡಿಸಿದ ಯೋಜನಾ ವರದಿಗೆ ಸರ್ಕಾರದ ಆದೇಶ ದಿನಾಂಕ:02.06.2021 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ತದನಂತರ, ಸದರಿ ಕಾಮಗಾರಿಯ ರೂ.138,54,60,104/- ಟೆಂಡರ್ ಮೊತ್ತಕ್ಕೆ ದಿನಾಂಕ:30.07.2021 ರಂದು ಕರಾರು ಒಪ್ಪಂದ ಮಾಡಿಕೊಂಡು ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
ಆ	ಮೇಲ್ಕಂಡ ಯೋಜನೆಯ ಪರಿಷ್ಕೃತ ಯೋಜನೆಯಾದ ಹಾಸನ ನಗರದ ಚನ್ನಪಟ್ಟಣ ಕೆರೆ ಸೇರಿದಂತೆ ಹಾಸನ ನಗರದ ಇತರೆ 05 ಕೆರೆಗಳು ಮತ್ತು 09 ಉದ್ದಯಾನವನಗಳ	ಹಾಸನ ನಗರದ ಚನ್ನಪಟ್ಟಣ ಕೆರೆಯ ಸೌಂದರೀಕರಣ ಸೇರಿದಂತೆ ಹಾಸನ ನಗರಕ್ಕೆ ಹೊಂದಿಕೊಂಡಿರುವ 06 ಕೆರೆಗಳ ಅಭಿವೃದ್ಧಿ ಮತ್ತು ಹಾಸನ ನಗರ ವ್ಯಾಪ್ತಿಯಲ್ಲಿ ಬರುವ 09 ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ಅಂದಾಜು ಪಟ್ಟಿಯ ಘೋಷ್ವಾರೆ ಕೆಳಕಂಡಂತಿದೆ:

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td></td><td>ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ರೂ.144.00 ಕೋಟಿಗಳ ಮೊತ್ತದ ಯೋಜನೆಯ ಅಂದಾಜು ವಿವರಗಳು, ಟೆಂಡರ್ ಕರಾರಿನ ವಿವರಗಳು ಮತ್ತು ನಿಗದಿಯಾಗಿರುವ ಟೆಂಡರ್‌ದಾರರ ವಿಳಾಸದೊಂದಿಗೆ ಸಂಪೂರ್ಣ ಮಾಹಿತಿಯನ್ನು ನೀಡುವುದು.</td><td>
<table>
<tr><th>ಕ್ರ ಸಂ</th><th>ಕೆರೆ ಮತ್ತು ಉದ್ಯಾನವನಗಳ ವಿವರಗಳು</th><th>ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td colspan="3">ಅ) ಕೆರೆಗಳು:</td></tr>
<tr><td>1</td><td>ಚನ್ನಪಟ್ಟಣಕೆರೆ</td><td>3915.33</td></tr>
<tr><td>2</td><td>ಗರ್ವೇನಹಳ್ಳಿ ಕೆರೆ</td><td>655.55</td></tr>
<tr><td>3</td><td>ಬೂವನಹಳ್ಳಿ ಕೆರೆ</td><td>554.12</td></tr>
<tr><td>4</td><td>ಸತ್ಯಮಂಗಲ ಕೆರೆ</td><td>1142.10</td></tr>
<tr><td>5</td><td>ಹುಣಸಿನಕೆರೆ</td><td>1123.37</td></tr>
<tr><td>6</td><td>ಗುಡ್ಡೇನಹಳ್ಳಿ ಕೆರೆ</td><td>336.70</td></tr>
<tr><td></td><td>ಉಪ ಮೊತ್ತ (ಅ) :</td><td>7727.17</td></tr>
<tr><td colspan="3">ಆ) ಉದ್ಯಾನವನಗಳು:</td></tr>
<tr><td>7</td><td>ಮಹಾರಾಜ ಪಾರ್ಕ್</td><td>1436.22</td></tr>
<tr><td>8</td><td>ವಿಜಯನಗರ ಪಾರ್ಕ್</td><td>461.95</td></tr>
<tr><td>9</td><td>ಹೌಸಿಂಗ್ ಬೋರ್ಡ್ ಪಾರ್ಕ್</td><td>178.08</td></tr>
<tr><td>10</td><td>ಗಂಧದಕೋಠಿ ಪಾರ್ಕ್</td><td>426.96</td></tr>
<tr><td>11</td><td>ಹೊಯ್ಸಳ ನಗರ ಪಾರ್ಕ್</td><td>372.01</td></tr>
<tr><td>12</td><td>ಫ್ರೀಡಂ ಪಾರ್ಕ್</td><td>783.21</td></tr>
<tr><td>13</td><td>ಗಣೇಶಟೆಂಪಲ್ ಪಾರ್ಕ್</td><td>206.12</td></tr>
<tr><td>14</td><td>ಹಿಂದೂರುದ್ರಭೂಮಿ</td><td>163.09</td></tr>
<tr><td>15</td><td>ಸಿಲ್ವರ್ ಜ್ಯೂಬಿಲಿ ಪಾರ್ಕ್</td><td>440.66</td></tr>
<tr><td></td><td>ಉಪ ಮೊತ್ತ (ಆ):</td><td>4468.30</td></tr>
<tr><td></td><td>ಒಟ್ಟು ಸಿವಿಲ್ ಕೆಲಸ (ಅ + ಆ) :</td><td>12195.47</td></tr>
<tr><td></td><td>ನಿರ್ವಹಣಾ ವೆಚ್ಚ (3 ವರ್ಷ)</td><td>496.00</td></tr>
<tr><td></td><td>ಒಟ್ಟು</td><td>12691.47</td></tr>
<tr><td></td><td>ಜಿ.ಎಸ್.ಟಿ 12%</td><td>1522.98</td></tr>
<tr><td></td><td>ಪಿ.ಎಂ.ಸಿ 1%</td><td>126.91</td></tr>
<tr><td></td><td>Consultancy service for preparation of DPR and Miscellaneous</td><td>58.64</td></tr>
<tr><td></td><td>ನಿವ್ವಳ ಮೊತ್ತ :</td><td>14400.00</td></tr>
</table>
ಮೇಲಿನ ಕಾಮಗಾರಿಯನ್ನು ಕರಾರು ಸಂಖ್ಯೆ:33/2021-22 ದಿನಾಂಕ:30.07.2021 ರಲ್ಲಿ L1 ಬಿಡ್ಡುದಾರರಾದ Sri Srinivasa Rao Balusu (M/s.BSR Infratech India Ltd.), No.851, D-Block, 15th Cross, Sahakaranagara, Bengalore-560092 ಇವರಿಗೆ ರೂ.138,54,60,104/- (ಅಪ್‌ಡೇಟೆಡ್ ಮೊತ್ತಕ್ಕೆ ಶೇ.9 ಹೆಚ್ಚುವರಿ) ಮೊತ್ತಕ್ಕೆ 24 ತಿಂಗಳುಗಳ ಕಾಲಾವಧಿಯೊಂದಿಗೆ ಕಾಮಗಾರಿಯನ್ನು ವಹಿಸಲಾಗಿರುತ್ತದೆ.</td></tr>
<tr><td>ಇ</td><td>ಕಾವೇರಿ ನೀರಾವರಿ ನಿಗಮದ ಅನುದಾನದಲ್ಲಿ ನಗರದ ಪ್ರದೇಶಗಳಲ್ಲಿರುವ ಕೆರೆಗಳನ್ನು ಮತ್ತು ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಅವಕಾಶವಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು)</td><td>ನಿಗಮದ ಅಡಿಯಲ್ಲಿ ಬರುವ ಯೋಜನೆಗಳ ಅಚ್ಚುಕಟ್ಟು ವ್ಯಾಪ್ತಿಯನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿರುವ ಕೆರೆಗಳನ್ನು ಮತ್ತು ಉದ್ಯಾನವನಗಳನ್ನು ಅಭಿವೃದ್ಧಿಪಡಿಸುವುದು ನಿಗಮದ ಧ್ಯೇಯೋದ್ದೇಶಗಳಡಿಯಲ್ಲಿ ಬರುವುದಿಲ್ಲ.

ಆದರೆ, ಕೆಲವು ವಿಶೇಷ ಪ್ರಕರಣಗಳಲ್ಲಿ ನಿಗಮ ಮಂಡಳಿ ಸಭೆಯ ತಿರುವಳಿ ಪಡೆದು ಸಕ್ಷಮ ಪ್ರಾಧಿಕಾರದ ಅನುಮೋದನೆ ನಂತರ ಆಡಳಿತಾತ್ಮಕ ಅನುಮೋದನೆ ನೀಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ.</td></tr>
</table>

ಸಂಖ್ಯೆ:ಜಸಂಇ 175 ಎಸ್‌ಎಲ್‌ಎ 2021

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.	295
ಮಾನ್ಯ ಸದಸ್ಯರ ಹೆಸರು	ಶ್ರೀ ರೇವಣ್ಣ ಹೆಚ್.ಡಿ (ಹೊಳೇನರಸೀಪುರ)
ಉತ್ತರಿಸಬೇಕಾದ ದಿನಾಂಕ	14.12.2021
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಅಬಕಾರಿ ಇಲಾಖೆಯ ಅಧಿಕಾರಿಗಳು ಸಿಎಲ್-7 ಮದ್ಯದ ಅಂಗಡಿಗೆ ಸರ್ಕಾರವು ನಿಗದಿಪಡಿಸಿರುವ ನಿಯಮಗಳನುಸಾರವಾಗಿಯೆ ಸಿಎಲ್-7 ಸನ್ನದುಗಳನ್ನು ಮಂಜೂರು ಮಾಡಿದರೂ ಸಹ ಅನಂತರ ಸಿಎಲ್-7 ಸನ್ನದುಗಳ ನಿಯಮಗಳನ್ನು ಗಾಳಿಗೆ ತೂರಿ, ಸದರಿ ಸಿಎಲ್-7 ಮದ್ಯದ ಅಂಗಡಿಗಳಿಂದ ಅಕ್ರಮವಾಗಿ ಮತ್ತು ಕಾನೂನು ಬಾಹಿರವಾಗಿ ಗ್ರಾಮ ಮಟ್ಟದಲ್ಲಿ ಹರಾಜು ಪ್ರಕ್ರಿಯೆ ಮತ್ತು ಅಕ್ರಮವಾಗಿ ನಡೆಯುತ್ತಿರುವ ಅಂಗಡಿಗಳಿಗೆ ಲೆಕ್ಕವಿಲ್ಲದಷ್ಟು ಮದ್ಯವನ್ನು ಸಾಗಾಣೆ ಮಾಡಿ, ವ್ಯಾಪಾರ ವಹಿವಾಟು ನಡೆಸಿ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸಿಎಲ್-7 ಸನ್ನದುಗಳನ್ನು ನಿಯಮಿತವಾಗಿ ತಪಾಸಣೆಗೆ ಒಳಪಡಿಸಲಾಗುತ್ತಿದ್ದು, ತಪಾಸಣೆ ವೇಳೆಯಲ್ಲಿ ಸನ್ನದು ಷರತ್ತುಗಳ ಉಲ್ಲಂಘನೆ ಕಂಡುಬಂದಿರುವ ಕಾರಣ ಅಂತಹ ಸನ್ನದುಗಳ ವಿರುದ್ಧ ಕೆಳಕಂಡಂತೆ ಪ್ರಕರಣಗಳನ್ನು ದಾಖಲಿಸಲಾಗಿದೆ. ಕ್ರ ಸಂ / ಅಬಕಾರಿ ವರ್ಷ / ದಾಖಲಿಸಿರುವ ಪ್ರಕರಣಗಳು: 1 / 2016-17 / 1600 2 / 2017-18 / 1420 3 / 2018-19 / 1297 4 / 2019-20 / 1160 5 / 2020-21 / 1315 ಇಲಾಖೆಯಿಂದ ಮದ್ಯ ಮಾರಾಟಕ್ಕಾಗಿ ನೀಡಲಾಗುವ ಸನ್ನದುಗಳಿಂದ ಕೆಲವು ವ್ಯಕ್ತಿಗಳು ಸ್ವಲಾಭಕ್ಕಾಗಿ ಅನಧಿಕೃತ ಸ್ಥಳದಲ್ಲಿ ಸೇವನೆಗಾಗಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಅಕ್ರಮವಾಗಿ ಅನಧಿಕೃತ ಸ್ಥಳದಲ್ಲಿ ಮದ್ಯ ಮಾರಾಟವಾಗುತ್ತಿರುವ ಅಂತಹ ಮದ್ಯವು ತೆರಿಗೆ ಪಾವತಿಸಲಾದ ಮದ್ಯವಾಗಿರುವುದರಿಂದ ಸರ್ಕಾರದ ಆದಾಯಕ್ಕೆ ಯಾವುದೇ ನಷ್ಟ ಉಂಟಾಗಿರುವುದಿಲ್ಲ.

ಆ) ಕಳೆದ 02–03 ವರ್ಷಗಳಿಂದ ಹೊಸದಾಗಿ ಆರಂಭವಾಗಿರುವ ಸಿಎಲ್–7 ಮದ್ಯದ ಅಂಗಡಿಗಳು ಕೆ.ಎಸ್.ಬಿ.ಸಿ.ಎಲ್ ನಿಂದ ಖರೀದಿಸಿರುವ ಮದ್ಯದ ಎತ್ತುವಳಿಯನ್ನು ಗಮನಿಸಿದ್ದಲ್ಲಿ ಅಕ್ರಮವಾಗಿರುವ ಮಾರಾಟವಾಗಿರುವ ಮದ್ಯದ ಮಾಹಿತಿ ಬಗ್ಗೆ ಸ್ಪಷ್ಟವಾಗಿ ತಿಳಿದಿದ್ದರೂ ಅಬಕಾರಿ ಇಲಾಖಾಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಸಿಎಲ್.7 ಮಾಲೀಕರಿಂದ ಪ್ರತಿ ಮಾಹೆ ಲಕ್ಷಾಂತರ ರೂಪಾಯಿಗಳ ಹಣ ಪಡೆದು ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ನಷ್ಟವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)

ಸಿಎಲ್–7 ಸನ್ನದುಗಳಲ್ಲಿ ಹಿಂದಿನ ವರ್ಷಗಳಲ್ಲಿ ಮಾರಾಟ ಮಾಡಿದ ಒಟ್ಟು ಮದ್ಯದ ಪ್ರಮಾಣ, ಶೇಕಡವಾರು ಪ್ರಮಾಣ ಸನ್ನದಿನ ವಾರ್ಷಿಕ ಸರಾಸರಿ ಮಾರಾಟದ ಪ್ರಮಾಣದ ವಿವರ ಕೆಳಕಂಡಂತಿದೆ.

ಅಬಕಾರಿ ವರ್ಷ	ಸಿಎಲ್–7 ಸನ್ನದುಗಳ ಸಂಖ್ಯೆ	ಮಾರಾಟ ಮಾಡಿದ ಒಟ್ಟಾರೆ ಮದ್ಯದ ಪ್ರಮಾಣ (ಲಕ್ಷ ಪೆಟ್ಟಿಗೆ)	ಒಟ್ಟಾರೆ ಮಾರಾಟದಲ್ಲಿ ಸಿಎಲ್–7 ಸನ್ನದಿನ ಶೇ. ಪ್ರಮಾಣ	ಒಂದು ಸಿಎಲ್–7 ಸನ್ನದಿನ ವಾರ್ಷಿಕ ಮಾರಾಟದ ಸರಾಸರಿ (ಪೆಟ್ಟಿಗೆ)
2016–17	1,013	34.21	4.26	3,377
2017–18	1,004	42.99	5.18	4,282
2018–19	1,259	55.55	6.38	4,412
2019–20	1,453	67.62	7.59	4,653
2020–21	1,636	68.35	8.33	4,178

ಇಲಾಖೆಯು ಅಕ್ರಮ ಮದ್ಯ ಮಾರಾಟವನ್ನು ತಡೆಗಟ್ಟಲು ಅಬಕಾರಿ ಕಾಯ್ದೆ ಮತ್ತು ತತ್ಸಂಬಂಧ ನಿಯಮಗಳ ಜಾರಿಗೊಳಿಸುವಿಕೆ ಕ್ರಮಗಳನ್ನು ಚುರುಕುಗೊಳಿಸಲಾಗಿದೆ. ಅಲ್ಲದೆ ಈ ಕುರಿತು ಪೊಲೀಸ್ ಇಲಾಖೆಯೂ ಸಹ ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದು, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ 2 ತಿಂಗಳಿಗೊಮ್ಮೆ ನಡೆಯುವ ಸಮನ್ವಯ ಸಮಿತಿ ಸಭೆಯಲ್ಲೂ ಅಬಕಾರಿ ಅಕ್ರಮ ಕುರಿತು ಅಗತ್ಯ ನಿರ್ದೇಶನಗಳನ್ನು ನೀಡಲಾಗುತ್ತಿದೆ. ಅಬಕಾರಿ ಇಲಾಖೆಯ ಸಿಬ್ಬಂದಿಯು ಸದಾ ಕಾಲ ಜಾಗ್ರುತರಾಗಿದ್ದು ನಿರಂತರ ಗಸ್ತು ಕಾರ್ಯ ನಡೆಸಿ, ಅಕ್ರಮವಾಗಿ ಮದ್ಯ ಮಾರಾಟವಾಗದಂತೆ ಎಚ್ಚರಿಕೆ ವಹಿಸುವಂತೆ ನಿರ್ದೇಶಿಸಲಾಗಿದೆ.

ಇ) ರಾಜ್ಯದಲ್ಲಿ ಎಲ್ಲಾ ವಿಧವಾದ ಮದ್ಯದ ಅಂಗಡಿಗಳು ಸಹ, ಸರ್ಕಾರ ವಿಧಿಸಿರುವ ಎಲ್ಲಾ ನಿಯಮಗಳನ್ನು ಮೀರಿ ಒಂದೇ ತರಹ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲಾಖೆಯಿಂದ ನೀಡಲಾಗುವ ವಿವಿಧ ಮದ್ಯ ಮಾರಾಟ ಸನ್ನದುಗಳಿಗೆ ಸನ್ನದು ಷರತ್ತುಗಳನ್ನು ವಿಧಿಸಿದ್ದು, ಅಬಕಾರಿ ಕಾಯ್ದೆ/ನಿಯಮಗಳನ್ವಯ ಹಾಗೂ ಸನ್ನದು ಷರತ್ತುಗಳನ್ವಯವೇ ಕಾರ್ಯನಿರ್ವಹಿಸಬೇಕಿದೆ. ಯಾವುದೇ ಸನ್ನದು ಷರತ್ತನ್ನು ಉಲ್ಲಂಘಿಸಿದಲ್ಲಿ ಇಲಾಖೆಯು ಸನ್ನದು ಷರತ್ತು ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸುತ್ತಿದ್ದು, ಈ ಹಿಂದಿನ ವರ್ಷಗಳಲ್ಲಿ ರಾಜ್ಯದ ವಿವಿಧ ಬಗೆಯ ಸನ್ನದುಗಳ ವಿರುದ್ಧ ದಾಖಲಿಸಿರುವ ಪ್ರಕರಣಗಳು ಕೆಳಗಿನಂತಿವೆ.

ಕ್ರ ಸಂ	ಅಬಕಾರಿ ವರ್ಷ	ದಾಖಲಿಸಿರುವ ಪ್ರಕರಣಗಳು			
		ಸಿಎಲ್-2	ಸಿಎಲ್-7	ಸಿಎಲ್-9	ಸಿಎಲ್ 11-ಸಿ
1	2016-17	13964	1600	8653	363
2	2017-18	10804	1420	7734	364
3	2018-19	7333	1297	5687	493
4	2019-20	5676	1160	3619	433
5	2020-21	46	1315	3602	497

ಈ) ಸರ್ಕಾರ ಸಿ.ಎಲ್-2 ಸನ್ನದುಗಳಲ್ಲಿ ಕುಳಿತು ಕುಡಿಯಲು ಅವಕಾಶ ಇಲ್ಲದಿದ್ದರೂ ಸಹ; ಪಕ್ಕದಲ್ಲಿಯೇ ಕಾನೂನುಬಾಹಿರವಾಗಿ ಮಾಂಸಾಹಾರಿ ಹೋಟೆಲ್ ಎಂದು ನಾಮಫಲಕ ಹಾಕಿ ಮದ್ಯಪಾನ ಮಾಡಲು ಅವಕಾಶ ಕಲ್ಪಿಸಿರುವುದು ಮತ್ತು ಬಾರ್ ಮತ್ತು ಸಿಎಲ್-7 ಸನ್ನದುಗಳಲ್ಲಿ ಪಾರ್ಸಲ್ ನೀಡಲು ಅವಕಾಶವಿಲ್ಲದಿದ್ದರೂ ಸಹ ಕಾನೂನುಬಾಹಿರವಾಗಿ ಮದ್ಯವನ್ನು ಪಾರ್ಸಲ್ ನೀಡಲಾಗುತ್ತಿದ್ದು, ಈ ಎಲ್ಲಾ ಅಂಶಗಳನ್ನು ಸಿ.ಸಿ.ಟಿ.ವಿಯಲ್ಲಿ ರೆಕಾರ್ಡ್ ಆಗಿದ್ದರೂ ಅಬಕಾರಿ ಇಲಾಖಾಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಸನ್ನದು ಷರತ್ತು ಉಲ್ಲಂಘಿಸಿ ಸಿಎಲ್-2 ಸನ್ನದುಗಳಲ್ಲಿ ಚಿಲ್ಲರೆಯಾಗಿ ಮದ್ಯವನ್ನು ಮಾರಾಟ ಮಾಡಿದ ಸಂಬಂಧ ಇಲಾಖೆಯು ಕಳೆದ 03 ವರ್ಷಗಳಲ್ಲಿ ಕ್ರಮವಾಗಿ 1154, 835 ಹಾಗೂ 471 ಉಲ್ಲಂಘನೆಯನ್ನು ಪತ್ತೆಹಚ್ಚಿ ಕಾನೂನಿನ್ವಯ ಸನ್ನದು ಷರತ್ತು ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸಲಾಗಿದೆ.

ಸನ್ನದು ಷರತ್ತು ಉಲ್ಲಂಘಿಸಿ ಸಿಎಲ್-7 ಹಾಗೂ ಸಿಎಲ್-9 ಸನ್ನದುಗಳಲ್ಲಿ ಮದ್ಯವನ್ನು ಗ್ರಾಹಕರಿಗೆ ಸನ್ನದು ಆವರಣದಲ್ಲಿಯೇ ಸೇವಿಸಲು ಮಾತ್ರವೇ ಅವಕಾಶ ನೀಡದೇ ಮದ್ಯವನ್ನು ತೆಗೆದುಕೊಂಡು ಹೋಗಲು ಅವಕಾಶ ಮಾಡಿಕೊಟ್ಟ ಸಂಬಂಧ ಇಲಾಖೆಯು ಕಳೆದ 03 ವರ್ಷಗಳಲ್ಲಿ ಕ್ರಮವಾಗಿ 6086, 4128 ಹಾಗೂ 3623 ಉಲ್ಲಂಘನೆಯನ್ನು ಪತ್ತೆಹಚ್ಚಿ ಕಾನೂನಿನ್ವಯ ಸನ್ನದು ಷರತ್ತು ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸಲಾಗಿದೆ.

	ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	
ಉ)	ರಾಜ್ಯದಲ್ಲಿರುವ ಎಲ್ಲಾ ಮದ್ಯದ ಅಂಗಡಿಗಳು ವರ್ಷದ 365 ದಿನಗಳಲ್ಲಿಯೂ ಸಹ ಸರ್ಕಾರ ವಿಧಿಸಿರುವ ನಿಯಮಗಳನ್ನು ಉಲ್ಲಂಘಿಸಿ ಕೋಟ್ಯಂತರ ರೂಪಾಯಿಗಳ ಆದಾಯ ಹೊಂದುತ್ತಿದ್ದರೂ ಲೈಸೆನ್ಸ್ ನಿಯಮಗಳನ್ನು ಗಾಳಿಗೆ ತೂರಿ ವಹಿವಾಟು ನಡೆಸಿದ ಸನ್ನದುದಾರರ ಲೈಸನ್ಸ್‌ನ್ನು ನಾಮಕಾವಸ್ತೆಗೆ ವರ್ಷದಲ್ಲಿ ಒಂದೆರಡು ಬಾರಿ ಮದ್ಯದ ಅಂಗಡಿಯ ವಿರುದ್ಧ ಕೇಸನ್ನು ದಾಖಲಿಸಿ, ದಂಡವನ್ನು ವಿಧಿಸಿ ಕೇಸನ್ನು ಮುಕ್ತಾಯಗೊಳಿಸಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು;	ಮದ್ಯ ಮಾರಾಟ ಸನ್ನದುಗಳಲ್ಲಿ ಅಬಕಾರಿ ಕಾಯ್ದೆ ಹಾಗೂ ತತ್ಸಂಬಂಧ ನಿಯಮಗಳನ್ವಯ ಕಾರ್ಯನಿರ್ವಹಿಸದೆ ರೂಢಿಗತವಾಗಿ ಸನ್ನದು ಷರತ್ತು ಉಲ್ಲಂಘಿಸುವ ಸನ್ನದುಗಳನ್ನು ಅಮಾನತ್ತುಗೊಳಿಸಲಾಗಿರುತ್ತದೆ. 2019-20 ಹಾಗೂ 2020-21ನೇ ಸಾಲಿನಲ್ಲಿ ಸನ್ನದು ಷರತ್ತು ಉಲ್ಲಂಘಿಸಿದ್ದ ಕಾರಣಕ್ಕಾಗಿ ಕ್ರಮವಾಗಿ 308 ಮತ್ತು 107 ಸನ್ನದುಗಳನ್ನು ಅಮಾನತ್ತುಗೊಳಿಸಲಾಗಿರುತ್ತದೆ ಹಾಗೂ ಕಳೆದ ಎರಡು ವರ್ಷಗಳಲ್ಲಿ 09 ಸನ್ನದುಗಳನ್ನು ರದ್ದುಪಡಿಸಲಾಗಿರುತ್ತದೆ.
ಊ)	ರಾಜ್ಯದಲ್ಲಿ ಎಲ್ಲಾ ವಿಧದ ಮದ್ಯದ ಅಂಗಡಿಗಳಲ್ಲಿ ಮದ್ಯಕ್ಕೆ ಸರ್ಕಾರ ನಿಗದಿಪಡಿಸಿರುವ ದರಕ್ಕಿಂತ ಶೇಕಡಾ 20 ಕ್ಕಿಂತಲೂ ಹೆಚ್ಚಿನದರಕ್ಕೆ ಮದ್ಯ ಮಾರಾಟ ಮಾಡುತ್ತಿದ್ದರೂ ಸಹ ಅಬಕಾರಿ ಇಲಾಖಾಧಿಕಾರಿಗಳು ಮದ್ಯದ ಅಂಗಡಿಯ ಮಾಲೀಕರುಗಳೊಂದಿಗೆ ಶಾಮೀಲಾಗಿ ಯಾವುದೇ ಕಾನೂನಿನ ಕ್ರಮ ಜರುಗಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಇಲಾಖೆಯಿಂದ ನೀಡಲಾಗುವ ಸಿಎಲ್-2 ಹಾಗೂ ಸಿಎಲ್11-ಸಿ ಮದ್ಯ ಮಾರಾಟ ಸನ್ನದುಗಳಲ್ಲಿ ಗರಿಷ್ಠ ಮಾರಾಟ ಬೆಲೆಗಿಂತಲೂ ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡುವ ಸನ್ನದಿನ ವಿರುದ್ಧ ಅಬಕಾರಿ ಕಾಯ್ದೆ ಹಾಗೂ ತತ್ಸಂಬಂಧ ನಿಯಮಗಳನ್ವಯ ಮೊಕದ್ದಮೆಯನ್ನು ದಾಖಲಿಸಿ ಕ್ರಮ ಕೈಗೊಳ್ಳಲಾಗಿದೆ. 2019-20 ಹಾಗೂ 2020-21ನೇ ಸಾಲಿನಲ್ಲಿ ಕ್ರಮವಾಗಿ 2005 ಮತ್ತು 1821 ಪ್ರಕರಣಗಳನ್ನು ಗರಿಷ್ಠ ಮಾರಾಟ ಬೆಲೆಗಿಂತಲೂ ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡಿದ್ದ ಸಿಎಲ್-2 ಹಾಗೂ ಸಿಎಲ್11-ಸಿ ಸನ್ನದಿನ ವಿರುದ್ಧ ದಾಖಲಿಸಲಾಗಿದೆ.

ಎ)	ರಾಜ್ಯದಲ್ಲಿರುವ ಎಲ್ಲಾ ಮದ್ಯದ ಅಂಗಡಿಗಳಲ್ಲಿ ಸಿ.ಸಿ.ಟಿ.ವಿಯನ್ನು ಅಳವಡಿಸಲಾಗಿದ್ದರೂ, ಯಾವುದೇ ಸನ್ನದುಗಳ ಸಿ.ಸಿ.ಟಿ.ವಿ ಪರಿಶೀಲನೆಯ ಅಬಕಾರಿ ಇಲಾಖೆ ಯಾವುದೇ ಮೇಲಧಿಕಾರಿಗಳಿಂದ ಆಗದೇ ಸನ್ನದು ಆವರಣದಿಂದಲೇ ಮದ್ಯದದಾಸ್ತಾನನ್ನು ಬಾಕ್ಸ್‌ಗಟ್ಟಲೆ ಅಕ್ರಮವಾಗಿ ಹಳ್ಳಿಗಳಿಗೆ ಕಳುಹಿಸಲಾಗುತ್ತಿದ್ದು ಅಬಕಾರಿ ಇಲಾಖಾಧಿಕಾರಿಗಳು ಸನ್ನದುದಾರರೊಂದಿಗೆ ಶಾಮೀಲಾಗಿ ಯಾವುದೇ ಕ್ರಮವನ್ನು ಜರುಗಿಸದೇ ಇರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿಗಳ ನಷ್ಟವುಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಲ್ಲದೇ ಜಿಲ್ಲಾ ಮಟ್ಟದಲ್ಲಿ ಕಂಟ್ರೋಲ್ ರೂಂ ಗಳನ್ನು ಸ್ಥಾಪಿಸಿ ದಿನದ 24 ಗಂಟೆಯೂ ಈ ರೀತಿ ಅಕ್ರಮ ಮದ್ಯದ ಸಾಗಾಣೆ ಬಗ್ಗೆ ಪರಿಶೀಲಿಸಲು ಕ್ರಮ ಕೈಗೊಂಡಲ್ಲಿ ಸರ್ಕಾರಕ್ಕಾಗುವ ನಷ್ಟವನ್ನು ತಪ್ಪಿಸಬಹುದಾಗಿದ್ದು, ಈ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳಲು ಇಚ್ಚಿಸದೆ ಎಂಬ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು?	ರಾಜ್ಯದ ಎಲ್ಲಾ ಸಿಎಲ್-2 ಹಾಗೂ ಎಂ.ಎಸ್.ಐ.ಎಲ್ ಸಂಸ್ಥೆಗೆ ನೀಡಲಾಗುವ ಸಿಎಲ್11-ಸಿ ಸನ್ನದುಗಳಲ್ಲಿ ಕಡ್ಡಾಯವಾಗಿ ಸಿ.ಸಿ.ಟಿ.ವಿಯನ್ನು ಅಳವಡಿಸಲು ಇಲಾಖೆಯಿಂದ ನಿರ್ದಿಷ್ಟ ಸೂಚನೆಯನ್ನು ನೀಡಲಾಗಿರುತ್ತದೆ. ಮದ್ಯವನ್ನು ಯಾವುದೇ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ ಸಾಗಾಣಿಕೆ ಮಾಡುವವರ ವಿರುದ್ಧ ಅಬಕಾರಿ ಕಾಯ್ದೆ ಹಾಗೂ ತತ್ಸಂಬಂಧ ನಿಯಮಗಳನ್ವಯ ಮೊಕದ್ದಮೆಯನ್ನು ದಾಖಲಿಸಿ ಕ್ರಮ ಕೈಗೊಳ್ಳಲಾಗಿದೆ. 2019-20 ಹಾಗೂ 2020-21ನೇ ಸಾಲಿನಲ್ಲಿ ಕ್ರಮವಾಗಿ 1205 ಮತ್ತು 1739 ವಾಹನಗಳನ್ನು ಜಪ್ತಿಪಡಿಸಲಾಗಿದೆ. ಇಲಾಖೆಯ ಯಾವುದೇ ಅಧಿಕಾರಿಗಳು ಅಕ್ರಮ ಮದ್ಯ ಮಾರಾಟಕ್ಕೆ ಪ್ರೋತ್ಸಾಹಿಸುವುದಾಗಲೀ ಇಲ್ಲವೇ ಸನ್ನದುದಾರರೊಂದಿಗೆ ಶಾಮೀಲಾಗಿರುವ ಬಗ್ಗೆ ವರದಿಯಾಗಿರುವುದಿಲ್ಲ. ನಿಯಮಿತವಾಗಿ ಇಲಾಖೆಯ ಅಧಿಕಾರಿ/ಸಿಬ್ಬಂದಿಯವರು ಜಾರಿ ಮತ್ತು ತನಿಖಾ ಕಾರ್ಯಗಳನ್ನು ನಡೆಸುತ್ತಿರುವುದರಿಂದ ಸರ್ಕಾರದ ಆದಾಯಕ್ಕೆ ಯಾವುದೇ ನಷ್ಟವುಂಟಾಗದಂತೆ ಕ್ರಮ ವಹಿಸಲಾಗುತ್ತಿದೆ. ಇಲಾಖೆಗೆ ಬರುವ ದೂರುಗಳನ್ನು ಸ್ವೀಕರಿಸಲು ಜಿಲ್ಲಾ ಮಟ್ಟದಲ್ಲಿ ಕಂಟ್ರೋಲ್ ರೂಂ ಅನ್ನು ತೆರೆದು ದಿನದ 24 ಗಂಟೆಯೂ ಕಾರ್ಯನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ. ರಾಜ್ಯ ಮಟ್ಟದಲ್ಲಿ ಅಬಕಾರಿ Toll Free Number 1800 4252 550 ಅನ್ನು ಸ್ಥಾಪಿಸಿದ್ದು, ಇಲಾಖೆಗೆ ಸಂಬಂಧಿಸಿದಂತಹ ಯಾವುದೇ ದೂರುಗಳನ್ನು ದಾಖಲಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಇಲಾಖೆಯ Toll Free ದೂರವಾಣಿ ಸಂಖ್ಯೆಗೆ ಕಳೆದ ಒಂದು ವರ್ಷದಲ್ಲಿ 590 ದೂರುಗಳು ಬಂದಿದ್ದು, ಆದರನ್ವಯ ಇಲಾಖಾಧಿಕಾರಿಗಳು 248 ಮೊಕದ್ದಮೆಗಳನ್ನು ನಿಯಮಾನುಸಾರ ದಾಖಲಿಸಿರುತ್ತಾರೆ.

ಆಇ 118 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು

ಕರ್ನಾಟಕ ವಿಧಾನ ಸಭೆ

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 296

2 ಸದಸ್ಯರ ಹೆಸರು : ಶ್ರೀ ಮಂಜುನಾಥ ಆರ್. (ದಾಸರಹಳ್ಳಿ)

3 ಉತ್ತರಿಸುವ ದಿನಾಂಕ : 14-12-2021

4 ಉತ್ತರಿಸುವವರು : ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬಿಬಿಎಂಪಿ ವ್ಯಾಪ್ತಿಯಲ್ಲಿ LED ದೀಪ ಅಳವಡಿಸಲು ಹಾಗೂ 10 ವರ್ಷಗಳ ನಿರ್ವಹಣೆಯನ್ನು ಶಾಪೂರ್ಜಿ ಪಲ್ಲೋಂಜಿ ಕಂಪನಿಯು ಶೇ.85.50 ರಷ್ಟು ಖಾತರಿ ವಿದ್ಯುತ್ ಉಳಿತಾಯ ಘೋಷಿಸಿ ಕಾರ್ಯಾದೇಶ ಪಡೆದು ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಚಾಲನೆ ನೀಡಿದ್ದು, ಡಿಸೆಂಬರ್ 2021ರ ಅಂತ್ಯದೊಳಗೆ ಎಲ್ಲಾ ವಾರ್ಡ್‌ಗಳಲ್ಲಿ LED ದೀಪಗಳನ್ನು ಅಳವಡಿಸದಿದ್ದಲ್ಲಿ ಸದರಿ ಕಂಪನಿಗೆ ದಂಡ ವಿಧಿಸಲಾಗುವುದೇ; (ವಿವರ ನೀಡುವುದು)	ಈ ಯೋಜನೆಯ ಪೂರ್ವಾಗತ್ಯ (Pre requisite) Financial Closure Activity (As per Clause 12.1.1(a) of EPC) ಮತ್ತು ನಿಗದಿತ ಅನುಷ್ಠಾನ ಪ್ರಗತಿ ಕುಂಠಿತವಾಗಿದ್ದರಿಂದ EPC ಷರತ್ತು: 22.1(e) ಪ್ರಕಾರ ಈ ಯೋಜನೆಯ ಗುತ್ತಿಗೆಯನ್ನು Termination Notice ಸಂಖ್ಯೆ: ಮು.ಅ/ಪಿಆರ್/225/2021-22, ದಿನಾಂಕ: 03-12-2021 ರಂತೆ ಈ ಯೋಜನೆಯ ಗುತ್ತಿಗೆಯನ್ನು ರದ್ದುಪಡಿಸಲಾಗಿರುತ್ತದೆ.
ಆ	ಬೀದಿ ದೀಪ ಅಳವಡಿಸಿರುವ ಸ್ಥಳಗಳಲ್ಲಿ ರಸ್ತೆಯ ಪೂರ್ಣ ವಿಸ್ತೀರ್ಣಕ್ಕೆ ಬೆಳಕು ಆವರಿಸುತ್ತಿಲ್ಲ ಎಂಬುದರ ಬಗ್ಗೆ ಸಾರ್ವಜನಿಕರು ದಿನನಿತ್ಯ ದೂರು ನೀಡುತ್ತಿದ್ದು, ಈ ಸಮಸ್ಯೆಯನ್ನು ಹೇಗೆ ಬಗೆಹರಿಸಲಾಗುವುದು; (ವಿವರ ನೀಡುವುದು)	ಈ ಯೋಜನೆಯು ವಿದ್ಯುಚ್ಛಕ್ತಿ ಉಳಿತಾಯ ಯೋಜನೆಯಾಗಿದ್ದು, BIS-1944 parts 1 & 2-1970 ರಂತೆ ನಿರ್ದಿಷ್ಟಪಡಿಸಿದ್ದ Lux level ಅನ್ನು ಕಾಯ್ದುಕೊಳ್ಳಬೇಕಿದ್ದು, ಅಸಮರ್ಪಕ ಬೆಳಕಿನ ಬಗ್ಗೆ ತಾಂತ್ರಿಕವಾಗಿ ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುತ್ತದೆ.
ಇ	LED Fittings ಗಳನ್ನು 10 ವರ್ಷಗಳ ಹಿಂದೆ ಅಳವಡಿಸಿರುವ Clamp ಹಾಗೂ Bracket ಗಳಿಗೆ ಅಳವಡಿಸುತ್ತಿದ್ದು, ಯಾವ ಸಮಯದಲ್ಲಾದರೂ Fittings ಗಳು ಕಳಚಿ ಹೋಗುವ ಸಾಧ್ಯತೆಗಳಿದ್ದು, ಎಲ್ಲಾ ಕಂಬಗಳಿಗೆ ಹೊಸ Clamp ಮತ್ತು Bracket ಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದೇ (ವಿವರ ನೀಡುವುದು).	ಈ ಯೋಜನೆಯ ಗುತ್ತಿಗೆ ಕರಾರಿನ Clause 6.2.3 (c) ಅನ್ವಯ ಹಾನಿಯಾಗಿರುವ Bracket ಗಳನ್ನು ಬದಲಾಯಿಸಲು / ದುರಸ್ಥಿಪಡಿಸಲು ಅವಕಾಶವಿರುತ್ತದೆ. ಆದರೆ, ಪ್ರಸ್ತುತ ಯೋಜನೆ ರದ್ದುಗೊಂಡಿದ್ದರಿಂದ ಈ ಪ್ರಮೇಯ ಉದ್ಭವಿಸುವುದಿಲ್ಲ.

ಸಂಖ್ಯೆ: ನಅಇ 349 ಎಂಎನ್‌ವೈ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	297
2	ಸದಸ್ಯರ ಹೆಸರು	:	ಶ್ರೀ ಮಂಜುನಾಥ ಆರ್. (ದಾಸರಹಳ್ಳಿ)
3	ಉತ್ತರಿಸುವ ದಿನಾಂಕ	:	14-12-2021
4	ಉತ್ತರಿಸುವವರು	:	ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	BWSSB ವತಿಯಿಂದ 110 ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವ ಯೋಜನೆಯಡಿ 5 ಹಳ್ಳಿಗಳಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿ ಕಾಮಗಾರಿಗಳನ್ನು ನಿರ್ವಹಿಸಿರುವುದರಿಂದ ಸುಮಾರು 158 ಕಿ.ಮೀ ವರೆಗೂ ರಸ್ತೆಗಳು ಹಾಳಾಗಿದ್ದು, ಸದರಿ ರಸ್ತೆ ದುರಸ್ಥಿ ಕಾರ್ಯಕ್ಕೆ ರೂ.327 ಕೋಟಿಗಳ ಅಂದಾಜು ಪಟ್ಟಿ ಅನುಮೋದನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ

ಹಾಗಿದ್ದಲ್ಲಿ, ದಿನಾಂಕ: 29.04.2021ರ ಸರ್ಕಾರಿ ಆದೇಶದನ್ವಯ ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಕೇವಲ ರೂ.25 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಬೇರೆ ಕ್ಷೇತ್ರಗಳಿಗೆ ಸರಾಸರಿ ರೂ.200 ಕೋಟಿಗಳ ಅನುದಾನ ಬಿಡುಗಡೆಯಾಗಿದ್ದು, ಅನುದಾನ ಹಂಚಿಕೆಯಲ್ಲಿ ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ದೊಡ್ಡ ಮಟ್ಟದಲ್ಲಿ ವಂಚನೆಯಾಗಿದ್ದು, ರಸ್ತೆ ಅಭಿವೃದ್ಧಿಗೆ ಬಾಕಿ ಉಳಿದ ಅನುದಾನವನ್ನು ಯಾವ ಕಾಲಮಿತಿಯೊಳಗೆ ಹಂಚಿಕೆ ಮಾಡಲಾಗುವುದು?

2018-19, 2019-20, 2020-21 ಮತ್ತು 2021-22ನೇ ಆರ್ಥಿಕ ವರ್ಷಗಳಲ್ಲಿ ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಾಮಗಾರಿಗಳಿಗೆ ನೀಡಿರುವ ಅನುದಾನದ ವಿವರಗಳು ಈ ಕೆಳಕಂಡಂತೆ ಇರುತ್ತವೆ.

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಯೋಜನೆ	2018-19		2019-20		2020-21		2021-22	
		ಕಾಮಗಾರಿ	ಅನುದಾನ	ಕಾಮಗಾರಿ	ಅನುದಾನ	ಕಾಮಗಾರಿ	ಅನುದಾನ	ಕಾಮಗಾರಿ	ಅನುದಾನ
1.	SFC	32	4350.00	-	-	-	-	-	-
2.	14th Finance Commission	88	1775.00	38	1073.95	-	-	-	-
3.	15th Finance Commission	-	-	-	-	-	-	-	300.00
4.	BBMP Own Fund	503	15583.81	861	19545.47	243	6517.94	-	-
5.	ಮುಖ್ಯ ಮಂತ್ರಿಗಳ ನವನ ನ	-	-	29	5111.00	-	-	1	1000.00
6.	ಶುಭ್ರ ಬೆಂಗಳೂರು	-	-	-	-	-	-	-	-
7.	110 ಹಳ್ಳಿಗಳ ರಸ್ತೆ ಅಭಿವೃದ್ಧಿ ಮತ್ತು ದುರಸ್ಥಿ ಕಾಮಗಾರಿ ಯೋಜನೆ	-	-	-	-	-	-	3	2500.00
8.	ಇತರೆ ಯೋಜನೆಗಳು	7	94.84	-	-	-	-	-	-
	ಒಟ್ಟು ಮೊತ್ತ	630	21803.65	928	25730.42	243	6517.94	4	3800.00

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ನಅಇ 06 ಎಂಎನ್‌ವೈ 2021, ದಿನಾಂಕ: 29-04-2021ರ ಆದೇಶದಲ್ಲಿ 110 ಹಳ್ಳಿಗಳ ರಸ್ತೆ ಅಭಿವೃದ್ಧಿ ಮತ್ತು ದುರಸ್ಥಿ ಕಾಮಗಾರಿ ಯೋಜನೆಗೆ ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ಒಟ್ಟು ರೂ.25.00 ಕೋಟಿಗಳ ಅನುದಾನ ಒದಗಿಸಲಾಗಿದೆ.

ಅಲ್ಲದೆ, ಸರ್ಕಾರದ ಆದೇಶ ಸಂಖ್ಯೆ: ನಅಇ 209 ಎಂಎನ್‌ವೈ 2020, ದಿನಾಂಕ: 03-05-2021ರ ಆದೇಶದಲ್ಲಿ ಬಿಬಿಎಂಪಿಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಕೈಗೊಳ್ಳುವ ಈ ಕೆಳಕಂಡ ಮೂರು (03) ಕಾಮಗಾರಿಗಳ ರೂ.1000.00 ಲಕ್ಷಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ.

Sl No.	Name of the Work	Et Amt (Rs. In Lakhs)
1	Formation of Earthen Embankment / Construction of RCC Retaining Wall /U-Shape drain and Culverts for Secondary Drain DH-216, DH-217 & DH-213 in Belmar Layout Ward No.39	500.00
2	Formation of Earthen Embankment / Construction of RCC Retaining Wall /U-Shape drain and Culverts for Secondary Drain DH-131 at Kammagondanahalli ward No.12.	300.00
3	Construction of RCC Retaining Wall / U Shaped drain and Culverts for Secondary Drain DH-236 Near Royal Enclave at Sidedahalli in Ward No.14	200.00
	Grand Total	1000.00

ತದನಂತರ, ಸರ್ಕಾರದ ದಿನಾಂಕ: 30-03-2021ರ ಪತ್ರದಲ್ಲಿ, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ನಂ. 71ರ ವ್ಯಾಪ್ತಿಗೆ ಒಳಪಡುವ ಪ್ರದೇಶಗಳ ಅಭಿವೃದ್ಧಿ ಕಾಮಗಾರಿಗಳನ್ನು 2020-21ನೇ ಸಾಲಿನ ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆಯ ಲೆಕ್ಕ ಶೀರ್ಷಿಕೆ: 4217-01-800-0-02 ರಡಿ ರೂ.180.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಸರ್ಕಾರದ ಅನುಮತಿ ನೀಡಲಾಗಿದೆ.

ಸರ್ಕಾರವು ಪ್ರಸ್ತುತ ಅನುಮೋದನೆ ನೀಡಿರುವ ಎಲ್ಲಾ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುವ ಮೊತ್ತವನ್ನು ಭರಿಸಲು ಬದ್ಧವಾಗಿರುತ್ತದೆ. ಯಾವುದೇ ವಿಧಾನಸಭಾ ಕ್ಷೇತ್ರದ ಕಾಮಗಾರಿಗಳಿಗೆ ನೇರವಾಗಿ / ಪ್ರತ್ಯೇಕವಾಗಿ ಅನುದಾನ ಬಿಡುಗಡೆ ಮಾಡುವುದಿಲ್ಲ. (Government wouldn't release on case to case basis). ಪ್ರತ್ಯೇಕ ವಿಧಾನಸಭಾ ಕ್ಷೇತ್ರವಾರು ಅನುದಾನ ಬಿಡುಗಡೆ ಮಾಡುವ ಕ್ರಮ ಇರುವುದಿಲ್ಲ.

ಸರ್ಕಾರವು ಬಿಬಿಎಂಪಿಯಿಂದ ಸಲ್ಲಿಕೆಯಾಗುವ ಯೋಜನೆ / ಕಾಮಗಾರಿಗಳ ಆದ್ಯತೆಯ ಮೇರೆಗೆ ರಾಜ್ಯ ವಾರ್ಷಿಕ ಆಯವ್ಯಯದ ಮಿತಿಯಲ್ಲಿ ಅನುದಾನದ ಹಂಚಿಕೆ ಮಾಡುತ್ತಿದ್ದು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬೆಂಗಳೂರು ಜಲಮಂಡಳಿಯು ಬಿಬಿಎಂಪಿಗೆ ಒಳಪಟ್ಟಿರುವ 110 ಹಳ್ಳಿಗಳ ಪೈಕಿ ದಾಸರಹಳ್ಳಿ ವಲಯದ 5 ಹಳ್ಳಿಗಳಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಮತ್ಯಾವುದೇ ರಸ್ತೆ ಕತ್ತರಿಸುವಿಕೆ ಇರುವುದಿಲ್ಲವೆಂದು ದೃಢೀಕರಿಸಿಕೊಂಡು, ನಂತರದಲ್ಲಿ, ರಸ್ತೆ ಪುನಃಶ್ಚೇತನ ಕಾಮಗಾರಿಯನ್ನು ಕೈಗೊಳ್ಳಲಾಗುತ್ತದೆ.

ಸಂಖ್ಯೆ: ನಅಇ 344 ಎಂಎನ್‌ವೈ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 298
2 ಸದಸ್ಯರ ಹೆಸರು : ಶ್ರೀ ಮಂಜುನಾಥ ಆರ್. (ದಾಸರಹಳ್ಳಿ)
3 ಉತ್ತರಿಸುವ ದಿನಾಂಕ : 14-12-2021
4 ಉತ್ತರಿಸುವವರು : ಮುಖ್ಯಮಂತ್ರಿಗಳು

ಕ್ರಸಂ	ಪ್ರಶ್ನೆ	ಉತ್ತರ
ಅ	ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಮೇದರಹಳ್ಳಿ ಗ್ರಾಮದ ಸರ್ವೆ ನಂ. 26, 27, 28, 32/1 ಹಾಗೂ 32/2ರ ಸ್ವತ್ತಿಗೆ ಹೊಂದಿಕೊಂಡಿರುವ ರಾಜಕಾಲುವೆಯ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕಾಲಮಿತಿಯೊಳಗೆ ಈ ಒತ್ತುವರಿಯನ್ನು ತೆರವುಗೊಳಿಸಲಾಗುವುದು; (ಸಂಪೂರ್ಣ ವಿವರ ನೀಡುವುದು)	ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಮೇದರಹಳ್ಳಿ ಗ್ರಾಮಕ್ಕೆ ಸಂಬಂಧಿಸಿದಂತೆ ಸರ್ವೆ ನಂ. 26ರಲ್ಲಿ ಗ್ರಾಮ ನಕ್ಷೆಯಂತೆ ಕೆರೆ ಚಿಹ್ನೆ ಇದ್ದು ರಾಜಕಾಲುವೆ ಇರುವುದಿಲ್ಲ. ಸರ್ವೆ ನಂ. 27 ಮತ್ತು 28ರಲ್ಲಿ ಗ್ರಾಮ ನಕ್ಷೆಯಂತೆ ರಾಜಕಾಲುವೆ ಇಲ್ಲದಿರುವುದು ಕಂಡು ಬಂದಿರುತ್ತದೆ. ಸರ್ವೆ ನಂ. 32ರಲ್ಲಿ ಈಗಾಗಲೇ ಬೃಹತ್ ಕಾಲುವೆಗಳನ್ನು ಅಳತೆ ಮಾಡಿ ಒತ್ತುವರಿ ಗುರುತಿಸುವ ನಕ್ಷೆಯಲ್ಲಿ ತಹಶೀಲ್ದಾರ್ ಬೆಂಗಳೂರು. ಉತ್ತರ ತಾಲ್ಲೂಕು ರವರು ದಿನಾಂಕ 20.01.2019ರಂದು ಸಹಿ ಮಾಡಿರುವ ನಕ್ಷೆಯಲ್ಲಿ ಯಾವುದೇ ಒತ್ತುವರಿ ಆಗಿರುವುದಿಲ್ಲ.
ಆ	ರಾಜಕಾಲುವೆಯ ಸ್ವತ್ತಿನಲ್ಲಿ ಅನಧಿಕೃತ ಬಡಾವಣೆ ನಿರ್ಮಾಣವಾಗಿರುವುದರ ಬಗ್ಗೆ ಮಾಹಿತಿ ಇದೆಯೇ; ಸದರಿ ಬಡಾವಣೆಯ 2, 3, 4 ಮತ್ತು 5ನೇ ಅಡ್ಡರಸ್ತೆಗಳಲ್ಲಿ ರಾಜಕಾಲುವೆ ಒತ್ತುವರಿಯು ಸರ್ಕಾರದ ಗಮನಕ್ಕೆ ಇದೆಯೇ; ಇದ್ದಲ್ಲಿ ಯಾವ ಕಾಲಮಿತಿಯೊಳಗೆ ಒತ್ತುವರಿಯನ್ನು ತೆರವುಗೊಳಿಸಲಾಗುವುದು; (ಸಂಪೂರ್ಣ ವಿವರ ನೀಡುವುದು)	ಮೇಲಿನ ಉತ್ತರದಂತೆ, ಯಾವುದೇ ರಾಜಕಾಲುವೆಯು ಒತ್ತುವರಿಯಾಗಿರುವುದಿಲ್ಲ. ಅದರನ್ವಯ ರಾಜಕಾಲುವೆ ಸ್ವತ್ತಿನಲ್ಲಿ ಯಾವುದೇ ಅನಧಿಕೃತ ಬಡಾವಣೆ ನಿರ್ಮಾಣವಾಗಿರುವುದಿಲ್ಲ. ಯಾವುದೇ ರಾಜಕಾಲುವೆಯು ಒತ್ತುವರಿಯಾಗಿಲ್ಲದಿರುವುದರಿಂದ, ಒತ್ತುವರಿಯನ್ನು ತೆರವುಗೊಳಿಸುವ ಪ್ರಮೇಯ ಉದ್ಭವಿಸುವುದಿಲ್ಲ
ಇ	ರಾಜಕಾಲುವೆಯ ಸ್ವತ್ತುಗಳನ್ನು ಭೂಗಳ್ಳರು, ಪ್ರಭಾವಿಗಳು, ಮುಂತಾದವರು ಒತ್ತುವರಿ ಮಾಡುತ್ತಿದ್ದರೂ ಸರ್ಕಾರ ಈವರೆಗೆ ಯಾವುದೇ ಕ್ರಮಕೈಗೊಳ್ಳದಿರಲು ಕಾರಣವೇನು; ಒತ್ತುವರಿ ತೆರವುಗೊಳಿಸಲು ಸರ್ಕಾರಕ್ಕೆ ಇರುವ ತೊಂದರೆಗಳಾದರೂ ಏನು; ಈ ಒತ್ತುವರಿ ತೆರವುಗೊಳಿಸಲು ಯಾವ ರೀತಿ ಕ್ರಮ ಕೈಗೊಳ್ಳುತ್ತದೆ? (ವಿವರ ನೀಡುವುದು)	ರಾಜಕಾಲುವೆಯ ಉಪಸ್ಥಿತಿ ಹಾಗೂ ಅಳತೆ ಬಾಬ್ತು ವರದಿ/ನಕ್ಷೆಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದು ಈಗಾಗಲೇ ಹಲವಾರು ರಾಜಕಾಲುವೆ ಒತ್ತುವರಿಯನ್ನು ತೆರವುಗೊಳಿಸಲಾಗಿರುತ್ತದೆ. ಹಾಗೂ ಉಳಿಕೆ ರಾಜಕಾಲುವೆ ಒತ್ತುವರಿಗಳನ್ನು ಸಂಬಂಧಪಟ್ಟ ಭೂಮಾಪಕರಿಂದ ಗುರುತಿಸುವ ಕಾರ್ಯ ಪ್ರಗತಿಯಲ್ಲಿದ್ದು ಒತ್ತುವರಿಗಳನ್ನು ಹಂತ ಹಂತವಾಗಿ ತೆರವುಗೊಳಿಸುವ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ನಅಇ 350 ಎಂಎಸ್‌ವೈ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	299
2.	ಮಾನ್ಯ ಸದಸ್ಯರ ಹೆಸರು	ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)
3.	ಉತ್ತರಿಸಬೇಕಾದ ದಿನಾಂಕ	14/12/2021
4.	ಉತ್ತರಿಸುವವರು	ಮಾನ್ಯ ಕಾರ್ಮಿಕ ಸಚಿವರು

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾರ್ಮಿಕ ಇಲಾಖೆಯು ಎಷ್ಟು ಕಾರ್ಮಿಕರನ್ನು ನೋಂದಣಿ ಮಾಡಿಕೊಂಡು ಅವರಿಗೆ ಕಾರ್ಮಿಕ ಕಾರ್ಡ್‌ಗಳನ್ನು ವಿತರಿಸಿದೆ; (ಗ್ರಾಮವಾರು ಮಾಹಿತಿ ನೀಡುವುದು)</td><td>ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ವಿವಿಧ ಮಂಡಳಿಗಳಲ್ಲಿ ಕಾರ್ಮಿಕರು ಫಲಾನುಭವಿಗಳಾಗಿ ನೋಂದಣಿಯಾಗಿರುವ ವಿವರಗಳು ಈ ಕೆಳಗಿನಂತಿರುತ್ತವೆ:

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ, ಕಟ್ಟಡ ಕಾರ್ಮಿಕರ ನೋಂದಣಿಯ ಮಾಹಿತಿಯನ್ನು ತಾಲ್ಲುಕುವಾರು ತಂತ್ರಾಂಶದಲ್ಲಿ ನಿರ್ವಹಿಸಲಾಗುತ್ತಿದ್ದು, ಬೀದರ್ ತಾಲ್ಲೂಕಿನಲ್ಲಿ 80816 ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ನೋಂದಾಯಿಸಲಾಗಿರುತ್ತದೆ. ನೋಂದಾಯಿತ ಕಾರ್ಮಿಕರ ಗ್ರಾಮವಾರು ಮಾಹಿತಿಯನ್ನು ನಿರ್ವಹಿಸಿರುವುದಿಲ್ಲ.

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ನೋಂದಾಯಿತರಾದ ಅಸಂಘಟಿತ ಕಾರ್ಮಿಕರ ಗ್ರಾಮವಾರು ಮಾಹಿತಿ ಲಭ್ಯವಿರುವುದಿಲ್ಲ ಆದರೆ, ಜಿಲ್ಲಾವಾರು ಮಾಹಿತಿಯು ಲಭ್ಯವಿದ್ದು, ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ ಮಾಹಿತಿಯು ಈ ಕೆಳಕಂಡಂತಿದೆ:

<table>
<tr><th>ಕ್ರ.ಸಂ.</th><th>ಯೋಜನೆ ಹೆಸರು</th><th>ಕಾರ್ಮಿಕರ ಸಂಖ್ಯೆ</th></tr>
<tr><td>1</td><td>ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ</td><td>25,332</td></tr>
<tr><td>2</td><td>ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ</td><td>3,633</td></tr>
</table>
</td></tr>
</table>

		ಕರ್ನಾಟಕ ರಾಜ್ಯ ವಿಮಾ ನಿಗಮವುವರು ಡಿಸೆಂಬರ್ 2020ಕ್ಕೆ ಅನ್ವಯಿಸುವಂತೆ ಒದಗಿಸಿರುವ ಅಂಕಿ ಅಂಶದ ಪ್ರಕಾರ ಬೀದರ್‌ನಲ್ಲಿ 6347 ಕಾರ್ಮಿಕರು ನೊಂದಾಯಿತರಾಗಿರುತ್ತಾರೆ. ಅನುಬಂಧದಲ್ಲಿ ಲಗತ್ತಿಸಿದೆ.
ಆ)	ಈ ಇಲಾಖೆಯಡಿ ನೋಂದಣಿ ಮಾಡಿಕೊಂಡ ಎಷ್ಟು ಕಾರ್ಮಿಕರಿಗೆ ಇ.ಎಸ್.ಐ. ಸೌಲಭ್ಯವನ್ನು ಒದಗಿಸಲಾಗಿದೆ ಹಾಗೂ ಅವಕ್ಕೆ ಇರುವ ಮಾನದಂಡಗಳೇನು;(ಮಾಹಿತಿ ನೀಡುವುದು)	ಕರ್ನಾಟಕ ರಾಜ್ಯ ವಿಮಾ ನಿಗಮವು ಗುರುತಿಸಿ ನೊಂದಾಯಿಸಿದ ವಿಮಾ ಕಾರ್ಮಿಕರಿಗೆ ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯವನ್ನು ಈ ಇಲಾಖೆಯಿಂದ ವಿಸ್ತರಿಸಲಾಗುತ್ತಿದೆ.
ಇ)	ಕಾರ್ಮಿಕ ಕಾರ್ಡ್ ಹೊಂದಿರುವ ಕಾರ್ಮಿಕರಿಗೆ ಆರೋಗ್ಯ ಕ್ಷೇತ್ರದಲ್ಲಿ ಇಲಾಖೆಯ ವತಿಯಿಂದ ಒದಗಿಸಲಾಗುತ್ತಿರುವ ಸೌಲಭ್ಯಗಳೇನು? (ಮಾಹಿತಿ ಒದಗಿಸುವುದು)	ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಮಂಡಳಿಯಿಂದ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. 1. ವೈದ್ಯಕೀಯ ಸಹಾಯಧನ (ಕಾರ್ಮಿಕ ಆರೋಗ್ಯ ಭಾಗ್ಯ): ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಬಿತರು ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ರೂ.300/- ರಿಂದ ರೂ.10,000/-ವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದ ದಿನಗಳಿಗೆ ಅನುಗುಣವಾಗಿ ಚಿಕಿತ್ಸಾ ವೆಚ್ಚವನ್ನು ಮರು ಪಾವತಿ ಮಾಡಿಕೊಳ್ಳಲು ಅವಕಾಶವಿರುತ್ತದೆ. ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ): ಹೃದ್ರೋಗ, ಕಿಡ್ನಿಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರ ಪಿಂಡದಲ್ಲಿನ ಕಲ್ಲು ತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯುಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್‌ಚಿಕಿತ್ಸೆ, ಇತರೆ ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ ರೂ.2,00,000/- ವರೆಗೆಚಿಕಿತ್ಸಾವೆಚ್ಚವನ್ನು ಮರು ಪಾವತಿ ಮಾಡಿಕೊಳ್ಳಲು ಅವಕಾಶವಿರುತ್ತದೆ.

		ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ: ಈ ಮಂಡಳಿಯ ವತಿಯಿಂದ ಅಸಂಘಟಿತ ಕಾರ್ಮಿಕರ ಆರೋಗ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಯೋಜನೆಗಳನ್ನು ಜಾರಿಗೊಳಿಸುತ್ತಿಲ್ಲ. ಆದರೆ, ಮಂಡಳಿಯು ಜಾರಿಗೊಳಿಸುತ್ತಿರುವ, ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಯಡಿ, ಅಪಘಾತದಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ರೂ. 5 ಲಕ್ಷದ ಪರಿಹಾರ, ಸಂಪೂರ್ಣ ಶಾಶ್ವತ ದುರ್ಬಲತೆ ಪ್ರಕರಣಗಳಲ್ಲಿ ರೂ.2 ಲಕ್ಷದ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ರೂ.1 ಲಕ್ಷದವರೆಗೆ ಚಿಕಿತ್ಸಾ ವೆಚ್ಚದ ಮರುಪಾವತಿ ಸೌಲಭ್ಯ ನೀಡಲಾಗುತ್ತಿದೆ. ಕರ್ನಾಟಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲ್ಲಿ ನೊಂದಾಯಿತ ಕಾರ್ಮಿಕರಿಗೆ ರಾಜ್ಯದಾದ್ಯಂತ 07 ಕರ್ನಾಟಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಆಸ್ಪತ್ರೆಗಳಲ್ಲಿ 02 ವಿಮಾ ನಿಗಮದ ಆಸ್ಪತ್ರೆಗಳಲ್ಲಿ ರೋಗ ಪತ್ತೆ ಹಚ್ಚುವ ಕೇಂದ್ರ ಮತ್ತು 113 ಕರ್ನಾಟಕ ರಾಜ್ಯ ವಿಮಾ ಚಿಕಿತ್ಸಾಲಯಗಳಲ್ಲಿ ಪೂರ್ಣ ಪ್ರಮಾಣದ ವೈದ್ಯಕೀಯ ಸೇವೆಯನ್ನು ಒದಗಿಸಲಾಗುತ್ತಿದೆ ಹಾಗೂ ಲಭ್ಯವಿಲ್ಲದ ವೈದ್ಯಕೀಯ ಸೇವೆಯನ್ನು 122 ಹೊಂದಾಣಿಕೆ ಮಾಡಿಕೊಂಡ ಸರ್ಕಾರಿ/ಖಾಸಗಿ ಆಸ್ಪತ್ರೆಗಳ ಮೂಲಕ ವಿತರಿಸಲಾಗುತ್ತಿದೆ.

ಕಾಇ 515 ಎಲ್‌ಇಟಿ 2021

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

అనుబంధ

DISTRICT / TALUK WISE NO. OF EMPLOYERS AND EMPLOYEES REGISTERED UNDER ESI, IN KARNATAKA STATE AS ON DECEMBER 2020

	RO/SRO	Taluk	No. of Employers	No. of Employees
1. Bagalkote	Gulbarga	1. Bagalkote	390	7997
		2. Jamkhandi	53	1001
		3. Mudhola	72	1590
		4. Badami	34	420
		5. Bilagi	24	101
		6. Hungunda	14	91
		7. Ilkal	38	855
		8. Rabkavi Banhatti	15	459
		9. Guledgudda	6	34
		TOTAL	**646**	**12548**
2. Bengaluru Rural	Peenya	1. Doddaballapura	499	29048
	Peenya	2. Devanhalli	164	6959
	Binnypet	3. Hosakote	708	24425
	Peenya	4. Nelmangala	588	23765
		TOTAL	**1959**	**84197**
3. Bengaluru Urban	Bommasandra	1. Anekal	8868	450370
	Bommasandra	2. Bengaluru South	12904	769694
	Peenya	3. Bengaluru North	14251	559344
	Binnypet	4. Bengaluru East	32046	1352013
		TOTAL	**68069**	**3131421**
4. Belagavi	Hubli	1. Athani	59	842
		2. Bailahongala	28	896
		3. Belagavi	2822	89382
		4. Chikodi	83	2429
		5. Gokak	422	11846
		6. Hukkeri	58	3155
		7. Khanapura	20	575
		8. Ramdurga	24	487
		9. Raybaga	43	420
		10. Saundatti	50	941
		11. Kittur	0	0
		12. Nipani	0	0
		13. Mudalgi	0	0
		14. Kagawad	0	0
		TOTAL	**3609**	**110973**
5. Bellary	Gulbarga	1. Ballari	1035	38671
		2. Hospete	342	14023
		3. Hoovina Hadagalli	1	183
		4. Hagaribommanahalli	30	1148
		5. Kudligi	9	415
		6. Sanduru	522	20562
		7. Siruguppa	119	1224
		8. Kotturu	3	173
		9. Kampli	6	68
		10. Kurugodu	1	213
		TOTAL	**2068**	**76680**
6. Bidar	Gulbarga	1. Aurad	14	92
		2. Basavakalyana	3	82

		3. Bidar	239	6347
		4. Bhalki	1	21[illegible]
		5. Homnabad	26	874
		6. Chitgoppa	1	10
		7. Hulsoor	0	0
		8. Kamalnagar	0	0
		TOTAL	284	7619
7. Bijapur	Gulbarga	1. Bijapur	723	19227
		2. Basavan Bagevadi	31	1195
		3. Indi	75	92
		4. Muddebihala	23	125
		5. Sindagi	42	352
		6. Talikote	1	22
		7. Chadchan	5	91
		8. Devar Hipparagi	1	63
		9. Kolhar	29	734
		10. Nidagundi	3	30
		11. Babaleshwar	3	84
		12. Tikota	0	0
		TOTAL	936	22015
8. Chamarajanagar	Mysore	1. Chamrajnagara	160	3672
		2. Gundlupete	33	522
		3. Kollegala	76	890
		4. Yelandur	10	96
		5. Hanur	5	72
		TOTAL	284	5252
9. Chikkaballapur	Peenya	1. Chikkaballapur	87	2754
		2. Bagepalli	12	400
		3. Chintamani	14	2605
		4. Gauribidanuru	33	5362
		5. Gudibanda	2	12
		6. Sidlaghatta	11	394
		TOTAL	159	11527
10. Chikkamagalur	Mysore	1. Chikkamagaluru	135	4486
		2. Kadur	32	524
		3. Koppa	12	369
		4. Mudigere	16	306
		5. Narasimharajapura	3	29
		6. Sringeri	5	252
		7. Tarikere	23	413
		8. Ajjampura	5	96
		TOTAL	231	6475
11. Chitradurga	Hubli	1. Chitradurga	423	10861
		2. Challakere	164	1431
		3. Hiriyuru	32	2452
		4. Holalkere	6	63
		5. Hosdurga	12	157
		6. Molakalmuru	14	26
		TOTAL	651	14990
12. Dakshina Kannada	Mangalore	1. Mangalore	3785	132953
		2. Ullal	0	0
		3. Kotekar	0	0
		4. Mulki	0	0
		5. Puttur	179	5757
		6. Bantwala	154	4030

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	300
2.	ಸದಸ್ಯರ ಹೆಸರು	:	ಶ್ರೀ ಬಂಡೆಪ್ಪ ಖಾಶೆಂಪುರ್
3.	ಉತ್ತರಿಸಬೇಕಾದ ದಿನಾಂಕ	:	14.12.2021
4.	ಉತ್ತರಿಸುವವರು	:	ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ</td><td>ಬೀದರ್ ಜಿಲ್ಲೆಯಲ್ಲಿ ಬಹುತೇಕ ನೀರಾವರಿಯು ಕೊಳವೆ ಬಾವಿ ಮತ್ತು ತೆರೆದ ಬಾವಿಗಳನ್ನು ಅವಲಂಬಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.</td></tr>
<tr><td>ಆ</td><td>ಜಿಲ್ಲೆಯಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ಅಂತರ್ಜಲ ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಅಂತರ್ಜಲ ಮಟ್ಟಗಳ ಕಳೆದ ಮೂರು ವರ್ಷಗಳ ವಿವರವಾದ ಮಾಹಿತಿ ನೀಡುವುದು)</td><td>ಬಂದಿದೆ.
ಬೀದರ್ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಮತ್ತು ಕೃಷಿಗೆ ಅಂತರ್ಜಲವನ್ನು ಅವಲಂಭಿಸಲಾಗಿದೆ ಹಾಗೂ ನಗರೀಕರಣದಿಂದಾಗಿ ಅಂತರ್‌ಜಲದ ಮೇಲೆ ಅವಲಂಬನೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ 2001ರಲ್ಲಿ ಬೀದರ್ ಜಿಲ್ಲೆಯ ಸರಾಸರಿ ಅಂತರ್ಜಲ ಮಟ್ಟವು 10.15 ಮೀಟರ್ ಇದ್ದು, 2020ರಲ್ಲಿ 14.45 ಮೀಟರ್ ರಷ್ಟು ದಾಖಲೆಯಾಗಿರುತ್ತದೆ. ಈ ಮೇಲಿನ ಕಾರಣದಿಂದಾಗಿ ಅಂತರ್ಜಲ ಮಟ್ಟದಲ್ಲಿ 4.30 ಮೀಟರ್‌ರಷ್ಟು ಇಳಿಕೆಯಾಗಿರುತ್ತದೆ.
ವಿವರಗಳನ್ನು ಅನುಬಂಧ-1'ರಲ್ಲಿ ನೀಡಲಾಗಿದೆ.
ಪ್ರತಿ ಮಾಹೆಯಾನ ದಾಖಲಿಸಿದ ಕೊಳವೆಬಾವಿಗಳ ಅಂತರ್ಜಲ ಸ್ಥಿರ ಜಲಮಟ್ಟ ಮಾಪನದಂತೆ 03 ವರ್ಷಗಳ (2018 ರಿಂದ 2020ರ ವರೆಗಿನ) ವಾರ್ಷಿಕ ಸರಾಸರಿ ಅಂತರ್ಜಲ ಸ್ಥಿರಮಟ್ಟ ಮೂರು ವರ್ಷಗಳಲ್ಲಿ ಈ ಕೆಳಕಂಡಂತೆ ಅಂತರ್ಜಲ ಮಟ್ಟ (ಮೀ.ಗಳಲ್ಲಿ) ಕಂಡು ಬಂದಿರುತ್ತದೆ.
<table>
<tr><th>ಕ್ರ.ಸಂ</th><th>ತಾಲ್ಲೂಕುಗಳು</th><th>2018</th><th>2019</th><th>2020</th></tr>
<tr><td>1</td><td>ಔರಾದ್</td><td>24.24</td><td>26.34</td><td>23.35</td></tr>
<tr><td>2</td><td>ಬಸವಕಲ್ಯಾಣ</td><td>15.64</td><td>17.69</td><td>11.81</td></tr>
<tr><td>3</td><td>ಭಾಲ್ಕಿ</td><td>21.25</td><td>20.1</td><td>15.26</td></tr>
<tr><td>4</td><td>ಬೀದರ್</td><td>14.26</td><td>16.56</td><td>13.09</td></tr>
<tr><td>5</td><td>ಚಿಟಗುಪ್ಪ</td><td>5.97</td><td>7.92</td><td>5.25</td></tr>
<tr><td>6</td><td>ಹುಮನಾಬಾದ್</td><td>18.37</td><td>19.13</td><td>17.89</td></tr>
<tr><td>7</td><td>ಹುಲಸೂರು</td><td>14.5</td><td>16.13</td><td>15.82</td></tr>
<tr><td>8</td><td>ಕಮಲಾನಗರ</td><td>17.53</td><td>19.13</td><td>13.12</td></tr>
</table>
</td></tr>
</table>

		ಕ್ರಿಯಾತ್ಮಕ ಅಂತರ್ಜಲ ಸಂಪನ್ಮೂಲ ಮೌಲೀಕರಣ ಮಾರ್ಚ್-2020ರನ್ವಯ ಬೀದರ್ ಜಿಲ್ಲೆಯ ಭಾಲ್ಕಿ ಮತ್ತು ಹುಲಸೂರು ತಾಲ್ಲೂಕುಗಳು ಅರೆಕ್ಲಿಷ್ಟಕರ (ಅಂತರ್ಜಲ ಬಳಕೆಯು ವಾರ್ಷಿಕ ಮರುಪೂರಣ ಪ್ರಮಾಣದ ಶೇ.70 ರಿಂದ 90) ವರ್ಗಕ್ಕೆ ಸೇರಿದ್ದು, ಉಳಿದ ಎಲ್ಲಾ ತಾಲ್ಲೂಕುಗಳು ಸುರಕ್ಷಿತ (ಅಂತರ್ಜಲ ಬಳಕೆಯು ವಾರ್ಷಿಕ ಮರುಪೂರಣ ಪ್ರಮಾಣದ ಶೇ.70 ಕ್ಕಿಂತ ಕಡಿಮೆ) ವರ್ಗಕ್ಕೆ ಸೇರಿರುತ್ತದೆ.
ಇ	ನೀರಾವರಿಗಾಗಿ ಕೊಳವೆ ಬಾವಿ ಮತ್ತು ತೆರೆದ ಬಾವಿಗಳನ್ನು ಅವಲಂಬಿಸಿರುವ ಬೀದರ್ ಜಿಲ್ಲೆಯಲ್ಲಿ ಅಂತರ್ಜಲ ವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು ಹಾಗೂ ಅದಕ್ಕೆ ಕಳೆದ ಮೂರು ವರ್ಷದಲ್ಲಿ ಎಷ್ಟು ಅನುದಾನವನ್ನು ಒದಗಿಸಲಾಗಿದೆ? (ವಿವರವಾದ ಮಾಹಿತಿಯನ್ನು ನೀಡುವುದು)	ಬೀದರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಅಂತರ್ಜಲ ವೃದ್ಧಿಗಾಗಿ ಸರಣಿ ಚೆಕ್ ಡ್ಯಾಂಗಳನ್ನು ನಿರ್ಮಿಸುವ 26 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಸದರಿ ಕಾಮಗಾರಿಗಳಿಗೆ ರೂ.905.81 ಲಕ್ಷ ವೆಚ್ಚ ಮಾಡಲಾಗಿದೆ. ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ "ಕೆರೆ ಸಂಜೀವಿನಿ ಯೋಜನೆ" ಅಡಿ ಒದಗಿಸಲಾದ ಅನುದಾನದಲ್ಲಿ, 39 ಕೆರೆಗಳ ಹೂಳು ತೆಗೆಯುವ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು, ಈ ಪೈಕಿ ಇದುವರೆಗೆ 15 ಕೆರೆಗಳಿಂದ ಹೂಳನ್ನು ತೆಗೆಯುವ ಕಾಮಗಾರಿಗಳನ್ನು ಪೂರ್ಣಗೊಳಿಸಿ ರೂ.55.68 ಲಕ್ಷ ವೆಚ್ಚ ಮಾಡಲಾಗಿದೆ. ಬಾಕಿ ಉಳಿದ 24 ಕೆರೆಗಳ ಹೂಳನ್ನು ತೆಗೆಯುವ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದೆ. ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಕಡತ ಸಂಖ್ಯೆ: ಎಂಐಡಿ 408 ಎಲ್ಎಕ್ಯೂ 2021

(ಜೆ.ಸಿ ಮಾಧುಸ್ವಾಮಿ)
ಕಾನೂನು ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು

ಬೀದರ್ ಜಿಲ್ಲೆಯ 20 ವರ್ಷಗಳ ಸರಾಸರಿ ಅಂತರ್ಜಲ ಮಟ್ಟದ ವಿವರ (ಮೀ.ಗಳಲ್ಲಿ) ನೆಲಮಟ್ಟದಿಂದ ಕೆಳಗೆ (bgl) ಅನುಬಂಧ-1

ಕ್ರ.ಸಂ.	ತಾಲ್ಲೂಕುಗಳು	2001	2002	2003	2004	2005	2006	2007	2008	2009	2010	2011	2012	2013	2014	2015	2016	2017	2018	2019	2020
1	ಔರಾದ್	5.03	5.77	4.68	7.51	10.53	6.32	7.74	28.79	24.81	17.89	14.93	16.9	14.73	12.17	15.5	21.35	24.24	24.24	26.34	23.35
2	ಬಸವಕಲ್ಯಾಣ	11.41	11.19	18.02	18.32	13.01	12.51	12.66	12.2	12.53	12	11.15	12.6	12.18	12.54	14.52	14.73	14.07	15.64	17.69	11.81
3	ಭಾಲ್ಕಿ	7.77	7.92	10.5	14.28	16.12	9.57	8.69	7.93	8.42	8.29	11.17	14.5	15.25	17.84	25.11	26.14	21.19	21.25	20.1	15.26
4	ಬೀದರ್	10.84	11.1	11.67	16.03	13.72	10.03	11.95	9.58	9.19	10.16	9.95	13.78	12.64	11.61	17.45	16.57	13.5	14.26	16.56	13.09
5	ಚಿಟಗುಪ್ಪ	16.18	11.16	15.5	18.95	16.35	11.45	11.98	11.87	10.81	5.7	12.21	6.62	5.7	7.91	8.84	6.5	5.73	5.97	7.92	5.25
6	ಹುಮನಾಬಾದ್	13.24	12.19	15.83	18.09	15.51	13.16	11.68	14.62	11.46	10.64	9.31	30.31	12.77	14.67	23.05	24.52	19.55	18.37	19.13	17.89
7	ಹುಲಸೂರು	-	-	-	-	-	-	8.75	12.92	13.35	21.66	20.41	21.1	18.1	22.02	34.3	24.92	16.62	14.5	16.13	15.82
8	ಕಮಲಾನಗರ	6.6	6.8	5.51	6.97	13.32	7.31	7.13	9.92	10.2	10.83	7.93	8.77	9.27	9.54	18.7	16.23	16.3	17.53	19.13	13.12
	ಸರಾಸರಿ ಮಟ್ಟ	10.15	9.45	11.67	14.31	14.08	10.05	10.07	13.48	12.60	12.15	12.13	15.57	12.58	13.54	19.68	18.87	16.40	16.47	17.88	14.45

1

ವಿಧಾನಸಭೆಯ ಸದಸ್ಯರಾದ ಮಾನ್ಯ ಶ್ರೀ ಬಂಡೆಪ್ಪ ಖಾಶೆಂಪುರ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 300ಕ್ಕೆ ಅನುಬಂಧ –2

ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಅಂತರ್ಜಲ ವೃದ್ಧಿಸಲು ಸಣ್ಣ ನೀರಾವರಿ ಇಲಾಖೆಯಿಂದ ಕೈಗೊಳ್ಳಲಾದ ಕಾಮಗಾರಿಗಳ ವಿವರ

ಕ್ರ.ಸಂ.	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ವೆಚ್ಚ	ಪ್ರಗತಿಯ ಹಂತ		ಷರಾ
					ಪೂರ್ಣಗೊಂಡಿದೆ	ಪ್ರಗತಿಯಲ್ಲಿದೆ	
1	3	4	5	6	7	8	9
	2018–19 ನೇ ಸಾಲಿನ ಮುಂದುವರೆದ ಕಾಮಗಾರಿಗಳು						
1	ಬೀದರ	4702–ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಜನವಾಡಾ ಗ್ರಾಮದ ಹತ್ತಿರ ಇರುವ ಲೋಕಲ ನಾಲಾಗೆ ಚೆಕ್ ಡ್ಯಾಮಗಳ ನಿರ್ಮಾಣ ಕಾಮಗಾರಿ (2 ಸಂಖ್ಯೆ).	20.50	ಪೂರ್ಣಗೊಂಡಿದೆ		
2	ಬೀದರ	4702–ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಜನವಾಡಾ ಗ್ರಾಮದ ಹತ್ತಿರ ಇರುವ ಲೋಕಲ ನಾಲಾಗೆ ಚೆಕ್ ಡ್ಯಾಮಗಳ ನಿರ್ಮಾಣ ಕಾಮಗಾರಿ (4 ಸಂಖ್ಯೆ).	90.00	ಪೂರ್ಣಗೊಂಡಿದೆ		
3	ಬೀದರ	4702–ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಜನವಾಡಾ ಗ್ರಾಮದ ಹತ್ತಿರ ಇರುವ ಲೋಕಲ ನಾಲಾಗೆ ಚೆಕ್ ಡ್ಯಾಮಗಳ ನಿರ್ಮಾಣ ಕಾಮಗಾರಿ (3 ಸಂಖ್ಯೆ).	45.77	ಪೂರ್ಣಗೊಂಡಿದೆ		
4	ಬೀದರ	4702–ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಜನವಾಡಾ ಗ್ರಾಮದ ಹತ್ತಿರ ಇರುವ ಲೋಕಲ ನಾಲಾಗೆ ಚೆಕ್ ಡ್ಯಾಮಗಳ ನಿರ್ಮಾಣ ಕಾಮಗಾರಿ (1 ಸಂಖ್ಯೆ).	13.60	ಪೂರ್ಣಗೊಂಡಿದೆ		
5	ಬೀದರ	4702–ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಜನವಾಡಾ ಗ್ರಾಮದ ಹತ್ತಿರ ಇರುವ ಲೋಕಲ ನಾಲಾಗೆ ಚೆಕ್ ಡ್ಯಾಮಗಳ ನಿರ್ಮಾಣ ಕಾಮಗಾರಿ (1 ಸಂಖ್ಯೆ).	14.47	ಪೂರ್ಣಗೊಂಡಿದೆ		
6	ಔರಾದ	4702–ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಕರಕ್ಯಾಳ ಗ್ರಾಮದ ಹತ್ತಿರ ಇರುವ ಸ್ಥಳೀಯ ನಾಲಾಗೆ ಸರಣಿ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ (3 ಸಂಖ್ಯೆ)	42.84	ಪೂರ್ಣಗೊಂಡಿದೆ		
7	ಔರಾದ	4702–ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಖೇಡ್ಸಾ ಗ್ರಾಮದ ಹತ್ತಿರ ಇರುವ ಸ್ಥಳೀಯ ನಾಲಾಗೆ ಸರಣಿ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ (3 ಸಂಖ್ಯೆ)	33.56	ಪೂರ್ಣಗೊಂಡಿದೆ		
8	ಔರಾದ	4702–ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಉಜ್ಜನಿ ಗ್ರಾಮದ ಹತ್ತಿರ ಇರುವ ಸ್ಥಳೀಯ ನಾಲಾಗೆ ಸರಣಿ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ (3 ಸಂಖ್ಯೆ)	44.88	ಪೂರ್ಣಗೊಂಡಿದೆ		

(2)

ಕ್ರ.ಸಂ.	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ವೆಚ್ಚ	ಪ್ರಗತಿಯ ಹಂತ		ಷರಾ
					ಪೂರ್ಣಗೊಂಡಿದೆ	ಪ್ರಗತಿಯಲ್ಲಿದೆ	
1	3	4	5	6	7	8	9
9	ಹುಮನಾಬಾದ.	4702–ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಘಾಟಬೋರಾಳ ಗ್ರಾಮದಿಂದ (ವಾಯಾ–ಹುಂಚನಾಳ – ಕುಮಾರಚಿಂಚೊಳ್ಳಿ) ನಾವದಗಿ ಗ್ರಾಮದ ವರೆಗೆ ಸ್ಥಳೀಯ ನಾಲಾಗೆ ಸರಣಿ ಚೆಕ್ ಡ್ಯಾಂ ನಿರ್ಮಾಣ. (3 ಸಂಖ್ಯೆ)	52.97	ಪೂರ್ಣಗೊಂಡಿದೆ		
10	ಹುಮನಾಬಾದ.	4702–ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ತಳಮಡಗಿ ಗ್ರಾಮದ ಹತ್ತಿರ ಸ್ಥಳೀಯ ನಾಲಾಗೆ ಸರಣಿ ಚೆಕ್ ಡ್ಯಾಂ ನಿರ್ಮಾಣ. (3 ಸಂಖ್ಯೆ)	51.84	ಪೂರ್ಣಗೊಂಡಿದೆ		
11	ಹುಮನಾಬಾದ.	4702–ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಹಳ್ಳಿಖೇಡ (ಕೆ) ಗ್ರಾಮದ ಹತ್ತಿರ ಸ್ಥಳೀಯ ನಾಲಾಗೆ ಸರಣಿ ಚೆಕ್ ಡ್ಯಾಂ ನಿರ್ಮಾಣ. (2 ಸಂಖ್ಯೆ)	49.84	ಪೂರ್ಣಗೊಂಡಿದೆ		
12	ಹುಮನಾಬಾದ.	4702–ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಕಲ್ಲೂರ ಗ್ರಾಮದ ಹತ್ತಿರ ಸ್ಥಳೀಯ ನಾಲಾಗೆ ಸರಣಿ ಚೆಕ್ ಡ್ಯಾಂ ನಿರ್ಮಾಣ. (3 ಸಂಖ್ಯೆ)	50.73	ಪೂರ್ಣಗೊಂಡಿದೆ		
13	ಬೀದರ (ದ)	4702–ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಸಿರ್ಸಿ (ಎ) ಗ್ರಾಮದ ಹತ್ತಿರ ಇರುವ ಸ್ಥಳೀಯ ನಾಲಾಗೆ ಸರಣಿ ಚೆಕ್ ಡ್ಯಾಂ ನಿರ್ಮಾಣ. (2 ಸಂಖ್ಯೆ)	40.48	ಪೂರ್ಣಗೊಂಡಿದೆ		
14	ಬೀದರ (ದ)	4702–ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಚಿಟ್ಟಾ ಗ್ರಾಮದಿಂದ ಘೋಡಂಪಳ್ಳಿ ಗ್ರಾಮದವರೆಗೆ ಹರಿಯುವ ಸ್ಥಳೀಯ ನಾಲಾಗೆ ಸರಣಿ ಚೆಕ್ ಡ್ಯಾಂ ನಿರ್ಮಾಣ. (3 ಸಂಖ್ಯೆ)	35.55	ಪೂರ್ಣಗೊಂಡಿದೆ		
15	ಬೀದರ (ದ)	4702–ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಬುಧೇರಾ ಗ್ರಾಮದಿಂದ ಯಾಕಾತಪೂರ ಗ್ರಾಮದವರೆಗೆ ಹರಿಯುವ ಸ್ಥಳೀಯ ನಾಲಾಗೆ ಸರಣಿ ಚೆಕ್ ಡ್ಯಾಂ ನಿರ್ಮಾಣ. (3 ಸಂಖ್ಯೆ)	44.02	ಪೂರ್ಣಗೊಂಡಿದೆ		

(4)

ಕ್ರಸಂ.	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ವೆಚ್ಚ	ಪ್ರಗತಿಯ ಹಂತ		ಷರಾ
					ಪೂರ್ಣಗೊಂಡಿದೆ	ಪ್ರಗತಿಯಲ್ಲಿದೆ	
1	3	4	5	6	7	8	9
16	ಬಸವಕಲ್ಯಾಣ	4702-ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ತಳಭೋಗ ಗ್ರಾಮದಿಂದ ಮಮದಾಪೂರ ಗ್ರಾಮದವರೆಗೆ ಹರಿಯುವ ಸ್ಥಳೀಯ ನಾಲಾಗೆ ಸ್ಲೂಸ ಗೇಟಗೊಂದಿರುವ ಸರಣಿ ಚೆಕ್ ಡ್ಯಾಂ (09 ಸಂ) ನಿರ್ಮಾಣ.	89.32	ಪೂರ್ಣಗೊಂಡಿದೆ		
17	ಬಸವಕಲ್ಯಾಣ	4702-ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಮುಚಳಂಬ ಗ್ರಾಮದಲ್ಲಿ ಹರಿಯುವ ಸ್ಥಳೀಯ ಸಣ್ಣ ಹಳ್ಳ ನಾಲಾಗೆ ಸ್ಲೂಸ ಗೇಟಗೊಂದಿರುವ ಸರಣಿ ಚೆಕ್ ಡ್ಯಾಂ (01 ಸಂ) ನಿರ್ಮಾಣ.	15.40	ಪೂರ್ಣಗೊಂಡಿದೆ		
18	ಬಸವಕಲ್ಯಾಣ	4702-ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಮುಚಳಂಬ ಗ್ರಾಮದಲ್ಲಿ ಹರಿಯುವ ಸ್ಥಳೀಯ ಸಣ್ಣ ಹಳ್ಳ ನಾಲಾಗೆ ಆಣೆಕಟ್ಟು ನಿರ್ಮಾಣ (01 ಸಂ)	5.50	ಪೂರ್ಣಗೊಂಡಿದೆ		
19	ಭಾಲ್ಕಿ	4702-ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಮರೂರ ಗ್ರಾಮದಿಂದ ಜೋಳದಾಪಕ ಗ್ರಾಮದವರೆಗೆ ಹರೆಯುವ ಸ್ಥಳೀಯ ನಾಲಾಗೆ ಶೇಖರಣಾ ತೊಟ್ಟಿಯೊಂದಿಗೆ ಚೆಕ್ ಡ್ಯಾಮ (01 ಸಂ) ನಿರ್ಮಣ.	13.50	ಪೂರ್ಣಗೊಂಡಿದೆ		
20	ಭಾಲ್ಕಿ	4702-ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಕಡೆಯಾಳ ಗ್ರಾಮದಲ್ಲಿ ಹರೆಯುವ ಸ್ಥಳೀಯ ನಾಲಾಗೆ ಸ್ಲೂಸ ಗೇಟಹೊಂದಿರುವ ಸರಣಿ ಚೆಕ್ ಡ್ಯಾಂ (04 ಸಂ) ನಿರ್ಮಣ.	24.93	ಪೂರ್ಣಗೊಂಡಿದೆ		
21	ಭಾಲ್ಕಿ	4702-ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಗ)	ಕೋನಮೆಲಕುಂದ ಗ್ಹಮದಿಂದ ಸಿದದ್ದೇಶ್ವರ ಗ್ರಾಮದ ವರೆಗೆ ಹರೆಯುವ ಸ್ಥಳೀಯ ನಾಲಾಗೆ ಸ್ಲೂಸ ಗೇಟಹೊಂದಿರುವ ಸರಣಿ ಚೆಕ್ ಡ್ಯಾಂ (03 ಸಂ) ನಿರ್ಮಣ.	22.10	ಪೂರ್ಣಗೊಂಡಿದೆ		
22	ಭಾಲ್ಕಿ	4702-ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಅಂತರಭಾರತಿ ತಾಂಡಾದಲ್ಲಿ ಹರೆಯುವ ಸಾಯಗಾಂವ ನಾಲಾಗೆ ಸ್ಲೂಸ ಗೇಟಹೊಂದಿರುವ ಸರಣಿ ಚೆಕ್ ಡ್ಯಾಂ (01 ಸಂ) ನಿರ್ಮಣ.	22.25	ಪೂರ್ಣಗೊಂಡಿದೆ		

ಕ್ರ.ಸಂ.	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ವೆಚ್ಚ	ಪ್ರಗತಿಯ ಹಂತ		ಷರಾ
					ಪೂರ್ಣಗೊಂಡಿದೆ	ಪ್ರಗತಿಯಲ್ಲಿದೆ	
1	3	4	5	6	7	8	9
23	ಭಾಲ್ಕಿ	4702-ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಡೊಣಗಾಪೂರ ತಾಂಡಾದಲ್ಲಿ ಹರೆಯುವ ಡೋಣೆಶ್ವರ ನಾಲಾಗೆ ಶೇಖರಣಾ ತೊಟ್ಟಿಯೊಂದಿಗೆ ಚೆಕ್ ಡ್ಯಾಂ (02ಸಂ) ನಿರ್ಮಣ.	15.81	ಪೂರ್ಣಗೊಂಡಿದೆ		
24	ಭಾಲ್ಕಿ	4702-ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಅಂಬೆಸಾಂಗವಿ ಗ್ರಾಮದ ಹತ್ತಿರ ಹರಿಯುವ ಭಗವಾನವಾಡಿ ನಾಲಾಗಿ ಸ್ಲೂಸ ಗೇಟಹೊಂದಿರುವ ಸರಣಿ ಚೆಕ್ ಡ್ಯಾಂ (04 ಸಂ).	42.21	ಪೂರ್ಣಗೊಂಡಿದೆ		
25	ಭಾಲ್ಕಿ	4702-ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಲಾದಾ ಗ್ರಾಮದಲ್ಲಿ ಹತ್ತಿರ ಹರಿಯುವ ಖಿದವಂತಪೂರ ನಾಲಾಗೆ ಆಣೆಕಟ್ಟು (01 ಸಂ) ನಿರ್ಮಾಣ .	8.06	ಪೂರ್ಣಗೊಂಡಿದೆ		
26	ಭಾಲ್ಕಿ	4702-ಪ್ರದಾನ ಕಾಮಗಾರಿಗಳು (ಸರಣಿ ಚೆಕ್ ಡ್ಯಾಂ)	ಖಾನಾಪೂರ ಗ್ರಾಮದ ಹತ್ತಿರ ಮೈಲಾರ ಮಲ್ಲಣ್ಣಾ ಮಂದಿರದ ಹತ್ತಿರ ಚೆಕ್ ಡ್ಯಾಂ (10 ಸಂ) ನಿರ್ಮಾಣ.	15.68	ಪೂರ್ಣಗೊಂಡಿದೆ		
			ಒಟ್ಟು	905.81			
	2018-19 ನೇ ಸಾಲಿನ ಕಾಮಗಾರಿಗಳು						
1	ಔರಾದ.	ಕೆರೆ ಸಂಜೀವನಿ	ಮೇಡಪಳ್ಳಿ ಸ.ನೀ. ಕೆರೆ.	3.98	ಪೂರ್ಣಗೊಂಡಿದೆ		
2	ಔರಾದ.	ಕೆರೆ ಸಂಜೀವನಿ	ಚಿಕಲಿ (ಜೆ)ಸ.ನೀ. ಕೆರೆ.	3.78	ಪೂರ್ಣಗೊಂಡಿದೆ		
3	ಬೀದರ	ಕೆರೆ ಸಂಜೀವನಿ	ಚಟನಳ್ಳಿ ಸ.ನೀ. ಕೆರೆ.	3.93	ಪೂರ್ಣಗೊಂಡಿದೆ		
4	ಬೀದರ	ಕೆರೆ ಸಂಜೀವನಿ	ಆಷ್ಟೂರ ಸ.ನೀ. ಕೆರೆ.	3.33	ಪೂರ್ಣಗೊಂಡಿದೆ		
5	ಬೀದರ	ಕೆರೆ ಸಂಜೀವನಿ	ಜಮಿಸ್ತಾನಪೂರ ಸ.ನೀ. ಕೆರೆ.	3.76	ಪೂರ್ಣಗೊಂಡಿದೆ		
6	ಬೀದರ	ಕೆರೆ ಸಂಜೀವನಿ	ಮಲಕಾಪೂರ ಸ.ನೀ. ಕೆರೆ.	3.81	ಪೂರ್ಣಗೊಂಡಿದೆ		
7	ಬೀದರ	ಕೆರೆ ಸಂಜೀವನಿ	ಅಲಿಯಂಬರ ಸ.ನೀ. ಕೆರೆ.	3.94	ಪೂರ್ಣಗೊಂಡಿದೆ		
8	ಹುಮನಾಬಾದ.	ಕೆರೆ ಸಂಜೀವನಿ	ಮೀನಕೆರಾ ಸ.ನೀ. ಕೆರೆ.	3.94	ಪೂರ್ಣಗೊಂಡಿದೆ		
9	ಹುಮನಾಬಾದ.	ಕೆರೆ ಸಂಜೀವನಿ	ಧೂಮನಸೂರ ಸ.ನೀ. ಕೆರೆ.	3.89	ಪೂರ್ಣಗೊಂಡಿದೆ		

ಕ್ರಸಂ.	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ವೆಚ್ಚ	ಪ್ರಗತಿಯ ಹಂತ		ಷರಾ
					ಪೂರ್ಣಗೊಂಡಿದೆ	ಪ್ರಗತಿಯಲ್ಲಿದೆ	
1	3	4	5	6	7	8	9
10	ಹುಮನಾಬಾದ.	ಕೆರೆ ಸಂಜೀವನಿ	ಬುಗ್ಗಿ ಬಸವ ಸ.ನೀ. ಕೆರೆ.	3.98	ಪೂರ್ಣಗೊಂಡಿದೆ		
11	ಭಾಲ್ಕಿ	ಕೆರೆ ಸಂಜೀವನಿ	ಮದಕಟ್ಟಿ ಇಂಗು ಕೆರೆ.	3.19	ಪೂರ್ಣಗೊಂಡಿದೆ		
12	ಭಾಲ್ಕಿ	ಕೆರೆ ಸಂಜೀವನಿ	ಕಳಸದಾಳ ಸ.ನೀ. ಕೆರೆ.	3.18	ಪೂರ್ಣಗೊಂಡಿದೆ		
13	ಭಾಲ್ಕಿ	ಕೆರೆ ಸಂಜೀವನಿ	ಅಟ್ಟರ್ಗಾ ಸ.ನೀ. ಕೆರೆ.	3.75	ಪೂರ್ಣಗೊಂಡಿದೆ		
14	ಬಸವಕಲ್ಯಾಣ.	ಕೆರೆ ಸಂಜೀವನಿ	ಬೇಟಬಾಲಕುಂದಾ ಸ.ನೀ. ಕೆರೆ.	3.33	ಪೂರ್ಣಗೊಂಡಿದೆ		
15	ಬಸವಕಲ್ಯಾಣ.	ಕೆರೆ ಸಂಜೀವನಿ	ಪರತಾಪೂರ ಸ.ನೀ. ಕೆರೆ.	3.89	ಪೂರ್ಣಗೊಂಡಿದೆ		
			ಒಟ್ಟು	55.68			
	2019-20 ನೇ ಸಾಲಿನ ಕಾಮಗಾರಿಗಳು						
1	ಬಸವಕಲ್ಯಾಣ	ಕೆರೆ ಸಂಜೀವನಿ	ಅಟ್ಟೂರು ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		ಕೆರೆ ಸಂಜಿವಿನಿ ಕ್ರಿಯಾ ಯೋಜನೆಯು ದಿನಾಂಕ:28-07-2020 ರಂದು ಅನುಮೋದನೆಯಾಗಿದ್ದು, ಈ ಕೆರೆಗಳಲ್ಲಿ ನೀರು ಸಂಗ್ರಹಣಯಾಗಿರುವುದರಿಂದ ಕಾಮಗಾರಿಗಳನ್ನು ಕೈಗೊಳ್ಳಲು ವಿಳಂಬವಾಗುತ್ತಿದೆ. ಕೆರೆಯಲ್ಲಿ ನೀರು ಸಂಗ್ರಹಣೆ ಕಡಿಮೆಯಾದ ನಂತರ ಅಂದಾಜು ಪಟ್ಟಿಗಳನ್ನು ತಯಾರಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.
2	ಬಸವಕಲ್ಯಾಣ	ಕೆರೆ ಸಂಜೀವನಿ	ಸೈದಾಪೂರ ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
3	ಬಸವಕಲ್ಯಾಣ	ಕೆರೆ ಸಂಜೀವನಿ	ಬೇಟಬಾಲಕುಂದಾ ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
4	ಬೀದರ	ಕೆರೆ ಸಂಜೀವನಿ	ಜನವಾಡ (ಪೂರ್ವ) ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
5	ಬೀದರ	ಕೆರೆ ಸಂಜೀವನಿ	ಜನವಾಡ (ಪ) ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
6	ಬೀದರ	ಕೆರೆ ಸಂಜೀವನಿ	ಮರಖಲ ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
7	ಬೀದರ	ಕೆರೆ ಸಂಜೀವನಿ	ವಿಲಾಸಪೂರ ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
8	ಬೀದರ	ಕೆರೆ ಸಂಜೀವನಿ	ಮನ್ನಳ್ಳಿ ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
9	ಬೀದರ	ಕೆರೆ ಸಂಜೀವನಿ	ಬಾವಗಿ ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
10	ಬೀದರ	ಕೆರೆ ಸಂಜೀವನಿ	ಜಿರಾದ (ಎಸ್) ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		

(8)

ಕ್ರ.ಸಂ.	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಹೆಸರು	ವೆಚ್ಚ	ಪ್ರಗತಿಯ ಹಂತ		ಷರಾ
					ಪೂರ್ಣಗೊಂಡಿದೆ	ಪ್ರಗತಿಯಲ್ಲಿದೆ	
1	3	4	5	6	7	8	9
11	ಬೀದರ	ಕೆರೆ ಸಂಜೀವನಿ	ಖಾಶೆಂಪುರ ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
12	ಬೀದರ	ಕೆರೆ ಸಂಜೀವನಿ	ಚಟನಳ್ಳಿ ವಾಡಿ ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
13	ಚಿಟಗುಪ್ಪ	ಕೆರೆ ಸಂಜೀವನಿ	ಚಾಂಗಲೆರ ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
14	ಹುಮನಾಬಾದ	ಕೆರೆ ಸಂಜೀವನಿ	ಹಳ್ಳಿಖೆಡ (ಕೆ) ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
15	ಹುಮನಾಬಾದ	ಕೆರೆ ಸಂಜೀವನಿ	ಧುಮ್ಮನಸುರ ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
16	ಹುಮನಾಬಾದ	ಕೆರೆ ಸಂಜೀವನಿ	ಬುಗ್ಗಿ ಬಸವ ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
17	ಚಿಟಗುಪ್ಪ	ಕೆರೆ ಸಂಜೀವನಿ	ಬೆಳಕೆರಾ ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
18	ಚಿಟಗುಪ್ಪ	ಕೆರೆ ಸಂಜೀವನಿ	ಮಂಗಲಗಿ ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
19	ಭಾಲ್ಕಿ	ಕೆರೆ ಸಂಜೀವನಿ	ಜಯಗಾಂವ ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
20	ಭಾಲ್ಕಿ	ಕೆರೆ ಸಂಜೀವನಿ	ಹುಪಳಾ ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
21	ಭಾಲ್ಕಿ	ಕೆರೆ ಸಂಜೀವನಿ	ತೆಗಂಪೂರ ಇಂಗು ಕೆರೆ	0.00	ಪೂರ್ಣಗೊಂಡಿದೆ		
22	ಭಾಲ್ಕಿ	ಕೆರೆ ಸಂಜೀವನಿ	ಕೆರುರು ಇಂಗು ಕೆರೆ	0.00	ಪೂರ್ಣಗೊಂಡಿದೆ		
23	ಔರಾದ	ಕೆರೆ ಸಂಜೀವನಿ	ಬಾವಲಗಾಂವ ಸಣ್ಣ ನೀರಾವರಿ ಕೆರೆ	0.00	ಪೂರ್ಣಗೊಂಡಿದೆ		
24	ಕಮಲನಗರ	ಕೆರೆ ಸಂಜೀವನಿ	ಅಕನಾಪೂರ ಶೇಖರಣೆ ಕೆರೆ	0.00	ಪೂರ್ಣಗೊಂಡಿದೆ		
			ಒಟ್ಟು	0.00			
			ಕೆರೆ ಸಂಜೀವಿನಿ ಯೋಜನೆಯ ಒಟ್ಟು	55.68			

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 301

ಸದಸ್ಯರ ಹೆಸರು : ಶ್ರೀ.ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)

ಉತ್ತರಿಸುವ ದಿನಾಂಕ : 14-12-2021

<table>
<tr><th>ಕ್ರ.
ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
- ಕಾರ್ಯಕ್ರಮ ನಡೆಯುವ ಜಿಲ್ಲೆಯ ಸಂಸದರು (ಜಿಲ್ಲೆಯನ್ನು ನೋಡಲ್ ಜಿಲ್ಲೆಯನ್ನಾಗಿ ಆಯ್ಕೆ ಮಾಡಿಕೊಂಡಿರುವ ರಾಜ್ಯ ಸಭಾ ಸದಸ್ಯರು ಸೇರಿದಂತೆ).
- ಕಾರ್ಯಕ್ರಮ ಜರುಗುವ ಜಿಲ್ಲೆಯಲ್ಲಿನ ಎಲ್ಲಾ ಶಾಸಕರು (ಕಾರ್ಯಕ್ರಮ ನಡೆಯುವ ಸ್ಥಳದ ವ್ಯಾಪ್ತಿಯ ಶಾಸಕರ ಅಧ್ಯಕ್ಷತೆ).
- ಕಾರ್ಯಕ್ರಮದ ನಡೆಯುವ ಜಿಲ್ಲೆಯ ಪ್ರತಿನಿಧಿಸುವ ಪದವೀದರ ಕ್ಷೇತ್ರ, ಶಿಕ್ಷಕರ ಕ್ಷೇತ್ರ ಮತ್ತು ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಚುನಾಯಿತರಾಗಿರುವ ವಿಧಾನ ಪರಿಷತ್ತಿನ ಎಲ್ಲಾ ಶಾಸಕರುಗಳು ಮತ್ತು ನೋಡಲ್ ಜಿಲ್ಲೆಯಾಗಿ ಆಯ್ಕೆ ಮಾಡಿಕೊಂಡಿರುವ ನಾಮ ನಿರ್ದೇಶಿತ ಹಾಗೂ ವಿಧಾನಸಭೆಯಿಂದ ಆಯ್ಕೆಯಾದ ವಿಧಾನ ಪರಿಷತ್ತಿನ ಶಾಸಕರುಗಳು.
- ನಿಗಮ ಮತ್ತು ಮಂಡಳಿಗಳ ಕಾರ್ಯಕ್ರಮಗಳಿಗೆ ಆಯಾ ನಿಗಮ ಮತ್ತು ಮಂಡಳಿಯ ಅಧ್ಯಕ್ಷರುಗಳನ್ನು ಆಹ್ವಾನಿಸುವುದು. ಜೊತೆಗೆ ಇತರೇ ಕಾರ್ಯಕ್ರಮಗಳಿಗೆ ಆಯಾ ಜಿಲ್ಲೆಗಳಿಂದ ನಿಗಮ ಮತ್ತು ಮಂಡಳಿಗಳಿಗೆ ಅಧ್ಯಕ್ಷರುಗಳಾಗಿರುವವರನ್ನು ಸಹ ಆಹ್ವಾನಿಸುವುದು.
- ಕಾರ್ಯಕ್ರಮ ನಡೆಯುವ ಸ್ಥಳದ ಜಿಲ್ಲಾ ಪಂಚಾಯತ್ ಅಧ್ಯಕ್ಷರು.
- ಕಾರ್ಯಕ್ರಮ ನಡೆಯುವ ಸ್ಥಳದ ತಾಲ್ಲೂಕು ಪಂಚಾಯತ್ ಅಧ್ಯಕ್ಷರು
- ಕಾರ್ಯಕ್ರಮ ನಡೆಯುವ ಸ್ಥಳದ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು/ ಮಹಾಪೌರರು ಅಥವಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರು.

೯. ಕಂಡಿಕೆ ೮ರಲ್ಲಿ ನಮೂದಿಸಿದ ಜನಪ್ರತಿನಿಧಿ/ ಗಣ್ಯ ವ್ಯಕ್ತಿಗಳೊಂದಿಗೆ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸಂದರ್ಭಗನುಗುಣವಾಗಿ ಈ ಕೆಳಕಂಡ ಜನಪ್ರತಿನಿಧಿಗಳನ್ನು ಸಹ ಆಹ್ವಾನಿಸತಕ್ಕದ್ದು.

(ಎ) ಜಿಲ್ಲಾ ಪಂಚಾಯತ್‌ಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳಿಗೆ ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಜಿಲ್ಲಾ ಪಂಚಾಯತ್ ಸದಸ್ಯರುಗಳನ್ನು ಆಹ್ವಾನಿಸುವುದು.

(ಬಿ) ಅದರಂತೆ ತಾಲ್ಲೂಕು ಪಂಚಾಯತ್‌ಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳಿಗೆ ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ತಾಲ್ಲೂಕು ಪಂಚಾಯತ್ ಸದಸ್ಯರುಗಳನ್ನು ಆಹ್ವಾನಿಸುವುದು.

(ಸಿ) ಅದರಂತೆ ಗ್ರಾಮ ಪಂಚಾಯತ್‌ಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳಿಗೆ ಗ್ರಾಮ ಪಂಚಾಯತ್‌ನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಗ್ರಾಮ ಪಂಚಾಯತ್ ಸದಸ್ಯರುಗಳನ್ನು ಆಹ್ವಾನಿಸುವುದು.

(ಡಿ) ಅದರಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಗರ ಸ್ಥಳೀಯ ಸಂಸ್ಥೆಯ ಸದಸ್ಯರುಗಳನ್ನು ಆಹ್ವಾನಿಸುವುದು.

<u>ಟಿಪ್ಪಣಿ:</u>

ಮೇಲ್ಕಂಡ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಆಹ್ವಾನಿಸಬೇಕಾಗಿರುವ ಜನಪ್ರತಿನಿಧಿಗಳನ್ನು ಹೊರತುಪಡಿಸಿ, ಇತರೆ ಸಚಿವರು/ ಜನಪ್ರತಿನಿಧಿಗಳು/ ಗಣ್ಯ ವ್ಯಕ್ತಿಗಳನ್ನು ಆಹ್ವಾನಿಸಲು ಕಾರ್ಯಕ್ರಮದ ಸಂದರ್ಭಕ್ಕನುಗುಣವಾಗಿ ಆಯೋಜಕರು ತೀರ್ಮಾನ ತೆಗೆದುಕೊಳ್ಳತಕ್ಕದ್ದು.

<u>ಆಹ್ವಾನ ಪತ್ರಿಕೆ ಮುದ್ರಿಸುವ ಬಗ್ಗೆ :</u>

10. ಸಮಾರಂಭದಲ್ಲಿ ಪಾಲ್ಗೊಳ್ಳುವಂತಹ ಸಂದರ್ಭ, ರಾಜ್ಯ ಆದ್ಯತಾ ಸೂಚಿ ಪಟ್ಟಿ ಮತ್ತು ಇತರೆ ಸನ್ನಿವೇಶಗಳನ್ನು ಆದರಿಸಿ ಕೇಂದ್ರ ಸಚಿವರುಗಳು, ರಾಜ್ಯ ಸಂಪುಟ ದರ್ಜೆ ಸಚಿವರುಗಳು, ರಾಜ್ಯ ಸಚಿವರು, ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳಿಗೆ, ಘನ ಉಪಸ್ಥಿತಿ, ಉದ್ಘಾಟನೆ/ ಶಂಕುಸ್ಥಾಪನೆ/ಲೋಕಾರ್ಪಣೆ, ಅಧ್ಯಕ್ಷರು, ಮುಖ್ಯ ಅತಿಥಿಗಳು, ವಿಶೇಷ ಆಹ್ವಾನಿತರು ಹೀಗೆ ಸ್ಥಾನಗಳನ್ನು ನೀಡಬೇಕು. ಇದೇ ಅನುಕ್ರಮದಲ್ಲಿ ಆಹ್ವಾನ ಪತ್ರಿಕೆಯನ್ನು ಮುದ್ರಿಸತಕ್ಕದ್ದು.

11. ಸರ್ಕಾರದ ಕಾರ್ಯಕ್ರಮದ ಎಲ್ಲಾ ಆಹ್ವಾನ ಪತ್ರಿಕೆಗಳಲ್ಲಿ ಆಹ್ವಾನಿತರ ಹೆಸರುಗಳನ್ನು ರಾಜ್ಯ ಆಧ್ಯತಾ ಸೂಚಿಪಟ್ಟಿಗೆ ಅನುಗುಣವಾಗಿಯೇ ಮುದ್ರಿಸಬೇಕು. ಈ ಆದ್ಯತಾಸೂಚಿ ಪಟ್ಟಿಯನ್ನು ಪರಿಗಣಿಸುವಾಗ ಜನಪ್ರತಿನಿಧಿಗಳು ಹೊಂದಿರುವ ಸ್ಥಾನಮಾನವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಆದರೆ, ರಾಜ್ಯ ಆದ್ಯತಾ ಸೂಚಿ ಪಟ್ಟಿಯ ಟಿಪ್ಪಣಿ 6(ಎ) ರಲ್ಲಿ ತಿಳಿಸಿರುವಂತೆ ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಆಹ್ವಾನ ಪತ್ರಿಕೆಯಲ್ಲಿ ಘನ ಉಪಸ್ಥಿತಿ, ಉದ್ಘಾಟನೆ/ ಶಂಕುಸ್ಥಾಪನೆ/ಲೋಕಾರ್ಪಣೆಯ ನಂತರ ನಮೂದಿಸುವುದು.

<u>ಟಿಪ್ಪಣಿ</u>

ಅ) ಸರ್ಕಾರದ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಆಹ್ವಾನಿಸಬೇಕಾದ ಮತ್ತು ಕರ್ನಾಟಕ ರಾಜ್ಯದ ಆಧ್ಯತಾ ಸೂಚಿ ಪಟ್ಟಿಯಲ್ಲಿ ಯಾವುದೇ ಸ್ಥಾನಮಾನವನ್ನು ಹೊಂದದೇ ಇರುವ ಜನಪ್ರತಿನಿಧಿಗಳನ್ನು/ಗಣ್ಯ ವ್ಯಕ್ತಿಗಳನ್ನು ಅಹ್ವಾನ ಪತ್ರಿಕೆಯಲ್ಲಿ ಕೊನೆಯ ಶಾಸಕರ ನಂತರ ಈ ಕೆಳಗಿನ ಆಧ್ಯತೆಯಂತೆ ನಮೂದಿಸಲು ಕ್ರಮಕೈಗೊಳ್ಳತಕ್ಕದ್ದು.

i. **ಶಾಸಕರಲ್ಲದ ಮತ್ತು ಸಚಿವ ಸ್ಥಾನಮಾನ ಹೊಂದದೇ ಇರುವ ರಾಜ್ಯ ಮಟ್ಟದ ಇತರೆ ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರುಗಳು.**

- ಒಂದಕ್ಕಿಂತ ಹೆಚ್ಚಿಗೆ ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರುಗಳು ಇದ್ದಲ್ಲಿ, ಆಯಾ ಅಧ್ಯಕ್ಷರುಗಳು ಆ ಹುದ್ದೆಗೆ ಸೇರಿದ ದಿನಾಂಕವನ್ನು ಪರಿಗಣನೆಗೆ ತೆಗೆದುಕೊಂಡು ಪರಸ್ಪರ ಆಧ್ಯತೆ ನಿಗದಿಪಡಿಸುವುದು.

ii. ಕಾರ್ಯಕ್ರಮ ನಡೆಯುವ ಸ್ಥಳದ ಮಹಾನಗರಪಾಲಿಕೆಯ ಮಹಾಪೌರರು.

iii. ಕಾರ್ಯಕ್ರಮ ನಡೆಯುವ ಸ್ಥಳದ ತಾಲ್ಲೂಕ್ ಪಂಚಾಯತ್ ಅಧ್ಯಕ್ಷರು..

iv. ಕಾರ್ಯಕ್ರಮ ನಡೆಯುವ ಸ್ಥಳದ ನಗರ ಸ್ಥಳೀಯ ಸಂಸ್ಥೆಯ/ಗ್ರಾಮ ಪಂಚಾಯತಿನ ಅಧ್ಯಕ್ಷರು.

ಆ) ಸರ್ಕಾರದ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಆಹ್ವಾನಿಸಬೇಕಾದ ಜನಪ್ರತಿನಿಧಿಗಳನ್ನು ಹೊರತುಪಡಿಸಿ ಇತರೆ ಜನಪ್ರತಿನಿಧಿಗಳನ್ನು ಮತ್ತು ಗಣ್ಯವ್ಯಕ್ತಿಗಳನ್ನು ಆಹ್ವಾನಿಸಿದಾಗ,

i. ಈಗಾಗಲೇ ಅವರಿಗೆ ಕರ್ನಾಟಕ ರಾಜ್ಯದ ಆಧ್ಯತಾ ಸೂಚಿಪಟ್ಟಿಯಲ್ಲಿ ಸ್ಥಾನಮಾನ ನೀಡಿದ್ದರೆ ಅವರ ಹೆಸರುಗಳನ್ನು ಆ ಪ್ರಕಾರ ಆಹ್ವಾನ ಪತ್ರಿಕೆಗಳಲ್ಲಿ ನಮೂದಿಸಿವುದು.

ii. ಅವರಿಗೆ ಯಾವುದೇ ಸ್ಥಾನಮಾನವಿಲ್ಲದಿದ್ದಾಗ ಅವರ ಹೆಸರುಗಳನ್ನು ಕಡ್ಡಾಯವಾಗಿ ಆಹ್ವಾನಿಸಬೇಕಾದ ಎಲ್ಲಾ ಜನಪ್ರತಿನಿಧಿಗಳ ನಂತರ ಅವರ ಹೆಸರುಗಳನ್ನು ನಮೂದಿಸುವುದು.

12. 2018 ರ ಆದ್ಯತಾ ಸೂಚಿಪಟ್ಟಿಯ ಪ್ರಕಾರ ಲೋಕಸಭಾ ಸದಸ್ಯರು ಮತ್ತು ರಾಜ್ಯಸಭಾ ಸದಸ್ಯರು ಕ್ರಮ ಸಂಖ್ಯೆ:21 ಅನುಚ್ಛೇದದಲ್ಲಿ ಹಾಗೂ ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರುಗಳು ಕ್ರಮ ಸಂಖ್ಯೆ:21 (ಎ) ಅನುಚ್ಛೇದದಲ್ಲಿ ಸ್ಥಾನವನ್ನು ಪಡೆಯುತ್ತಾರೆ. ಭಾರತ ಸರ್ಕಾರದ ಗೃಹ ಮಂತ್ರಾಲಯವು "as per the practice the person who has served more than one term continuously are placed higher in the Table of Precedence (ToP)" ಎಂದು ಅಭಿಪ್ರಾಯಿಸಿರುವ ಹಿನ್ನೆಲೆಯಲ್ಲಿ ಆದ್ಯತಾಸೂಚಿ ಪಟ್ಟಿಯಲ್ಲಿ ಒಂದೇ ಅನುಚ್ಛೇದದಲ್ಲಿರುವ ಹುದ್ದೆಗಳ ನಡುವೆ ಆದ್ಯತೆ ನೀಡುವಾಗ ಲೋಕಸಭಾ ಸದಸ್ಯರ ನಂತರ ರಾಜ್ಯಸಭಾ ಸದಸ್ಯರು ಹಾಗೂ ವಿಧಾನ ಸಭಾ ಸದಸ್ಯರ ನಂತರ ವಿಧಾನ ಪರಿಷತ್ತು ಸದಸ್ಯರು ಎಂಬ ಎರಡು ವಿಂಗಡನೆಗಳಾಗಿ ಮಾಡಿಕೊಳ್ಳದೇ ಯಾವ ವ್ಯಕ್ತಿಗಳು ಒಂದಕ್ಕಿಂತ

ಹೆಚ್ಚು ಅವಧಿಗೆ ಸತತವಾಗಿ ಅದೇ ಸ್ಥಾನದಲ್ಲಿ ಮುಂದುವರೆದಿರುತ್ತಾರೋ ಅಂತಹವರಿಗೆ ಪರಸ್ಪರ ಆದ್ಯತೆಯನ್ನು ನಿಗದಿಪಡಿಸುವಾಗ ಮೇಲಿನ ಸ್ಥಾನವನ್ನು ನಿಗದಿಪಡಿಸುವುದು.

ಟಿಪ್ಪಣಿ

ಜಿಲ್ಲಾ ಮಟ್ಟದ ಹಾಗೂ ರಾಜ್ಯ ಮಟ್ಟದ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, ಕಾರ್ಯಕ್ರಮ ನಡೆಯುವ ಸ್ಥಳದ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸದರನ್ನು ಮೊದಲಿಗೆ ಹಾಕುವುದು. ತದನಂತರ ಉಳಿದ ಸಂಸದರುಗಳನ್ನು (ಲೋಕಸಭಾ ಮತ್ತು ರಾಜ್ಯ ಸಭಾ ಸಂಸದರನ್ನೊಳಗೊಂಡಂತೆ) ಆದ್ಯತಾ ಪಟ್ಟಿಯ ಪ್ರಕಾರ ನಮೂದು ಮಾಡುವುದು.

13. ಸರ್ಕಾರದ ಸಮಾರಂಭಗಳ ಆಮಂತ್ರಣ ಪತ್ರಿಕೆಯಲ್ಲಿ ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯ ಸದಸ್ಯರ ಹೆಸರುಗಳನ್ನು ನಮೂದು ಮಾಡುವ ಸಂದರ್ಭಗಳಲ್ಲಿ "ಶಾಸಕರು (ವಿಧಾನ ಪರಿಷತ್ತು) ಮತ್ತು ಶಾಸಕರು (ವಿಧಾನ ಸಭೆ) ಎಂದು ಹಾಗೂ ಲೋಕಸಭಾ ಸದಸ್ಯರ ಮತ್ತು ರಾಜ್ಯಸಭಾ ಸದಸ್ಯರ ಹೆಸರುಗಳನ್ನು ನಮೂದು ಮಾಡುವ ಸಂದರ್ಭಗಳಲ್ಲಿ ಸಂಸದರು (ಲೋಕಸಭೆ) ಮತ್ತು ಸಂಸದರು (ರಾಜ್ಯಸಭೆ) ಎಂದು ನಮೂದು ಮಾಡುವುದು

14. ಜಿಲ್ಲೆಯಲ್ಲಿ ಯಾವುದೇ ಸರ್ಕಾರಿ ಸಮಾರಂಭ ಏರ್ಪಡಿಸುವ ಮುನ್ನ ಆಹ್ವಾನ ಪತ್ರಿಕೆಗೆ ಆಯಾ ಜಿಲ್ಲಾಧಿಕಾರಿಗಳ / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆಯಬೇಕು

15. ಸರ್ಕಾರದ ಸಮಾರಂಭವನ್ನು ಏರ್ಪಡಿಸುವ ಎಲ್ಲಾ ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲಾಧಿಕಾರಿಗಳು ಸಂಸತ್ತಿನ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ತಪ್ಪದೇ ಆಹ್ವಾನ ಪತ್ರಿಕೆಗಳನ್ನು ಕಳುಹಿಸುವ ವ್ಯವಸ್ಥೆ ಮಾಡತಕ್ಕದ್ದಲ್ಲದೇ, ಇಲಾಖೆಯ ಹಿರಿಯ ಅಧಿಕಾರಿಗಳ ಮುಖಾಂತರ ಅವರುಗಳಿಗೆ ಆಹ್ವಾನ ಪತ್ರಿಕೆಗಳನ್ನು ಖುದ್ದಾಗಿ ತಲುಪಿಸಲು ಏರ್ಪಾಡು ಮಾಡಬೇಕು.

16 ಆಹ್ವಾನ ಪತ್ರಿಕೆಗಳನ್ನು ಮುದ್ರಿಸದಿದ್ದ ಪಕ್ಷದಲ್ಲಿ ಕನಿಷ್ಠ ಪಕ್ಷ ಪತ್ರದ ಮುಖೇನ ಅನೌಪಚಾರಿಕವಾಗಿ ಜವಾಬ್ದಾರಿಯುತ ಅಧಿಕಾರಿಗಳ ಮುಖಾಂತರ ಸಂಸತ್ ಸದಸ್ಯರುಗಳನ್ನು ರಾಜ್ಯ ವಿಧಾನ ಮಂಡಲದ ಸದಸ್ಯರನ್ನು ಹಾಗೂ ಇತರರನ್ನು ಸಮಾರಂಭಕ್ಕೆ ಆಹ್ವಾನಿಸಬೇಕು.

17 ಶಂಕುಸ್ಥಾಪನೆ / ಉದ್ಘಾಟನೆ ಇತ್ಯಾದಿಗಳಿಗೆ ಸಂಬಂಧಪಟ್ಟ ಶಿಲೆಗಳಲ್ಲೂ ಸಹ ಆಹ್ವಾನ ಪತ್ರಿಕೆಯಲ್ಲಿರುವ ಹೆಸರುಗಳನ್ನು ಅದೇ ಆದ್ಯತೆಯಲ್ಲಿ ನಮೂದಿಸಬೇಕು.

ಆಸನ ವ್ಯವಸ್ಥೆ

18. ಆಸನ ವ್ಯವಸ್ಥೆ ಮಾಡುವಾಗಲೂ ರಾಜ್ಯ ಆದ್ಯತಾ ಪಟ್ಟಿಯ ಪ್ರಕಾರವೇ ಗಣ್ಯರಿಗೆ ಸಲ್ಲಬೇಕಾದ ಸ್ಥಾನಮಾನಗಳನ್ನು ಆಯಾ ವರಿಷ್ಠರಿಗೆ ತಪ್ಪದೇ ಸಲ್ಲಿಸಬೇಕು. ಆದ್ದರಿಂದ ಆಹ್ವಾನ ಪತ್ರಿಕೆಯನ್ನು ಆದ್ಯತಾಪಟ್ಟಿಯ ಮೇರೆಗೆ ಮುದ್ರಿಸುವುದರಿಂದ ಆಸನ ವ್ಯವಸ್ಥೆಯನ್ನು ಆಹ್ವಾನ ಪತ್ರಿಕೆಯ ಅನುಗುಣವಾಗಿ ಮಾಡುವುದು.

19 ಸಾಮಾನ್ಯವಾಗಿ ಶಿಷ್ಟಾಚಾರದಂತೆ ಅನುಸರಿಸಬೇಕಾದ ಆಸನ ವ್ಯವಸ್ಥೆಯನ್ನು ಕೆಳಕಂಡಂತೆ ನೀಡಲಾಗಿದೆ.

10	8	6	4	2	1	3	5	7	9	11

ಮೇಲ್ಕಂಡಂತೆ ಕಾರ್ಯಕ್ರಮದ ಆಹ್ವಾನ ಪತ್ರಿಕೆಯ ಪ್ರಕಾರ ಮೊದಲಿಗರೋ ಯಾರೋ ಅವರನ್ನು ಮಧ್ಯದಲ್ಲಿ (ಆಸನ ಸಂಖ್ಯೆ: 1) ಕೂರಿಸಬೇಕು ಅವರ ನಂತರ ಆಹ್ವಾನ ಪತ್ರಿಕೆಯ ಅನುಗುಣವಾಗಿ ಉಳಿದ ಗಣ್ಯರನ್ನು ಬಲ ಮತ್ತು ಎಡ ಭಾಗದಲ್ಲಿ ಮೇಲ್ಕಂಡಂತೆ ಆಸನ ವ್ಯವಸ್ಥೆಯನ್ನು ಮಾಡಬೇಕು.

20. ಕಾರ್ಯಕ್ರಮಗಳಿಗೆ ತಡವಾಗಿ ಬರುವ ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಗೆ

ಆಗುವ ಅನಾನುಕೂಲತೆಗಳನ್ನು ನಿವಾರಿಸುವ ಸಲುವಾಗಿ ಅವರಿಗಾಗಿ ಪ್ರತ್ಯೇಕವಾಗಿರಿಸಿದ ಆಸನಗಳನ್ನು ಸಮಾರಂಭ ಮುಗಿಯುವವರೆಗೂ ಕಾದಿರಿಸತಕ್ಕದ್ದು. ಹಾಗೂ ಆ ಆಸನಗಳು ಖಾಲಿಯಿದ್ದಾಗ್ಯೂ ಅವುಗಳನ್ನು ಇತರರು ಉಪಯೋಗಿಸಿಕೊಳ್ಳತಕ್ಕದಲ್ಲ.

21. ಸರ್ಕಾರಿ ಅಧಿಕಾರಿಗಳು ಸಾಮಾನ್ಯವಾಗಿ ಯಾವುದೇ ಸರ್ಕಾರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸುವುದು ಮತ್ತು ಉದ್ಘಾಟಿಸುವುದನ್ನು ನಿಷೇಧಿಸಿದೆ. ಆದರೆ, ಅನಿವಾರ್ಯ ಸಂದರ್ಭಗಳಲ್ಲಿ ಅಂದರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹೊರತುಪಡಿಸಿ, ಇನ್ನಿತರ ಸರ್ಕಾರಿ ಕಾರ್ಯಕ್ರಮಗಳಾದ ಜಯಂತಿ/ ಉತ್ಸವ/ ಅರಿವು ಮೂಡಿಸುವ ಕಾರ್ಯಕ್ರಮಗಳಲ್ಲಿ ಆಹ್ವಾನ ಪತ್ರಿಕೆಯಲ್ಲಿ ನಮೂದಿಸಿದ ಯಾವುದೇ ಜನಪ್ರತಿನಿಧಿಗಳು ಕಾರ್ಯಕ್ರಮಕ್ಕೆ ಹಾಜರಾಗದೇ ಇದ್ದ ಸಂದರ್ಭದಲ್ಲಿ ಮಾತ್ರ ಅಧ್ಯಕ್ಷತೆ ವಹಿಸಬಹುದು ಮತ್ತು ಉದ್ಘಾಟನೆ ಮಾಡಬಹುದು ಮತ್ತು ಅವಶ್ಯಕತೆಗೆ ಅನುಗುಣವಾಗಿ ಸಂಬಂಧಪಟ್ಟ ಅಧಿಕಾರಿಗಳು ಕಾರ್ಯಕ್ರಮದ ವೇದಿಕೆ ಮೇಲೆ ಉಪಸ್ಥಿತರಿರಬಹುದು.

<u>ವಿಶೇಷ ಸೂಚನೆಗಳು:</u>

22. ನ್ಯಾಯಾಲಯಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಕುರಿತಾಗಿ ಮಾನ್ಯ ಉಚ್ಛ ನ್ಯಾಯಾಲಯದ ನಿರ್ದೇಶನದನ್ವಯ ಕ್ರಮವನ್ನು ಕೈಗೊಳ್ಳುವುದು.

23 ಮಾನ್ಯ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳು ಭಾಗವಹಿಸುವ ಕಾರ್ಯಕ್ರಮಗಳನ್ನು ಮಾನ್ಯ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳ ಕಾರ್ಯಾಲಯದ ಅನುಮೋದನೆಯಂತೆ ನಡೆಸುವುದು.

24. ಕೇಂದ್ರ ಸರ್ಕಾರದ ಸಮಾರಂಭಗಳಿಗೆ ಸಂಸತ್ತು ಸದಸ್ಯರನ್ನು ಆಹ್ವಾನಿಸುವ ರೀತಿಯಲ್ಲಿಯೇ ಸ್ಥಳೀಯ ಚುನಾಯಿತ ಪ್ರತಿನಿಧಿಗಳಾದ ವಿಧಾನಮಂಡಲದ ಸದಸ್ಯರುಗಳನ್ನು ಶಿಷ್ಟಾಚಾರದನ್ವಯ ತಪ್ಪದೇ ಆಹ್ವಾನಿಸುವುದು.

25 ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯ ದಿನಾಚರಣೆ ದಿನಗಳಂದು ಯಾರು ಧ್ವಜಾರೋಹಣ ಮಾಡಬೇಕು ಎನ್ನುವ ಬಗ್ಗೆ ಭಾರತ ಸರ್ಕಾರ ಹೊರಡಿಸಿದ ಸುತ್ತೋಲೆಗಳಲ್ಲಿ ನೀಡಲಾದ ನಿರ್ದೇಶನವನ್ನು ಮುಂದುವರೆಸಿಕೊಂಡು ಹೋಗುವುದು.

26. ಸರ್ಕಾರಿ ಆದೇಶಗಳಲ್ಲಿ ಶಾಸಕರು ಅಥವಾ ಖಾಸಗಿ ಪ್ರಮುಖರ ಅಧ್ಯಕ್ಷತೆಯಲ್ಲಿ ಹಲವು ಸಮಿತಿಗಳನ್ನು ನೇಮಕ ಮಾಡಲಾಗಿದೆ. ಆಯಾ ಸಮಿತಿಯ ಕಾರ್ಯವ್ಯಾಪ್ತಿಗೆ ಒಳಪಟ್ಟು ಸಮೀಕ್ಷಣಾ ಸಭೆಗಳನ್ನು ನಡೆಸಬಹುದು. ಇದನ್ನು ಹೊರತುಪಡಿಸಿ ಶಾಸಕರೇ ಆಗಲೀ ಇತರೇ ಖಾಸಗಿ ಪ್ರಮುಖರೇ ಆಗಲೀ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮೀಕ್ಷಣಾ ಸಭೆಗಳನ್ನು ನಡೆಸುವಂತಿಲ್ಲ. ವಿರೋಧ ಪಕ್ಷದ ನಾಯಕರಿಗೂ ಸಹ ಅಧಿಕಾರಿಗಳ ಸಭೆ ಕರೆಯಲು ಅವಕಾಶವಿರುವುದಿಲ್ಲ ಆದರೆ ಅಗತ್ಯ ಮಾಹಿತಿಯನ್ನು ಸೂಕ್ತವಾಗಿ ಒದಗಿಸಬಹುದಾಗಿದೆ. ಅಂತಹ ಸಭೆಗಳನ್ನು ನಡೆಸಲು ಮಾನ್ಯ ಸಚಿವರು ಮತ್ತು ಅಧಿಕಾರಿಗಳಿಗೆ ಮಾತ್ರ ಅವಕಾಶವಿರುತ್ತದೆ.

27. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಮ್ಮ ಹಂತದಲ್ಲಿ ಬರುವ ಎಲ್ಲಾ ಅಧಿಕಾರಿಗಳಗೆ ಶಿಷ್ಟಾಚಾರದ ಬಗ್ಗೆ ಪೂರ್ಣವಾಗಿ ತರಬೇತಿ ನೀಡುವುದು. ಶಿಷ್ಟಾಚಾರ ಲೋಪವಾದ ಪ್ರಕರಣಗಳಲ್ಲಿ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ಸಂಬಂಧಪಟ್ಟವರಿಗೆಲ್ಲ ತಿಳಿಸತಕ್ಕದ್ದು ಸಂಬಂಧಪಟ್ಟ ಅಧಿಕಾರಿಗಳಲ್ಲದೇ, ಶಿಷ್ಟಾಚಾರ ಪಾಲಿಸುವುದರಲ್ಲಿ ವಿಫಲರಾದ ಹಿರಿಯ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದೆಂದು ಈ ಮೂಲಕ ಸೂಚಿಸಿದೆ.

[signature]
ಸರ್ಕಾರದ ಮುಖ್ಯ ಕಾರ್ಯದರ್ಶಿ

ಪ್ರತಿಗಳು:

1) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
3) ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.
4) ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
5) ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ.
6) ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್.
7) ಎಲ್ಲಾ ವಿಭಾಗಾಧಿಕಾರಿಗಳು.
8) ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
9) ಎಲ್ಲಾ ಜಿಲ್ಲಾಧಿಕಾರಿಗಳು.
10) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
11) ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
12) ಪತ್ರಿಕಾ ಪ್ರಕಟಣೆ / ಹೆಚ್ಚುವರಿ ಪ್ರತಿಗಳು.

ಮಾಹಿತಿಗಾಗಿ:

1) ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸು ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ (ರಾಜಕೀಯ)

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	319
2.	ಪ್ರಶ್ನೆ ಕೇಳಿದ ಸದಸ್ಯರು	ಶ್ರೀ. ಬೆಳ್ಳಿ ಪ್ರಕಾಶ್ (ಕಡೂರು)
3.	ಉತ್ತರಿಸುವ ದಿನಾಂಕ	14.12.2021
4.	ಉತ್ತರಿಸುವ ಸಚಿವರು	ಮುಖ್ಯಮಂತ್ರಿಯವರು

	ಪ್ರಶ್ನೆ	ಉತ್ತರ
(ಅ)	ಸರ್ಕಾರದ ಸಭೆ ಸಮಾರಂಭಗಳಿಗೆ ಜನಪ್ರತಿನಿಧಿಗಳನ್ನು ಆಹ್ವಾನಿಸುವಲ್ಲಿ ಮತ್ತು ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ಉಲ್ಲಂಘನೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸಭೆ ಸಮಾರಂಭಗಳ ಆಯೋಜನೆಯಲ್ಲಿ ಶಿಷ್ಟಾಚಾರ ಪಾಲಿಸುವ ಕುರಿತು ಇತ್ತೀಚೆಗೆ ಸರ್ಕಾರದಿಂದ ಸುತ್ತೋಲೆಯನ್ನು ಹೊರಡಿಸಲಾಗಿದೆಯೇ; ಯಾವಾಗ ಹೊರಡಿಸಲಾಗಿದೆ; ಮಾಹಿತಿ ಮತ್ತು ಸುತ್ತೋಲೆಯ ಪ್ರತಿಯನ್ನು ನೀಡವುದು;	ಹೌದು. ಸರ್ಕಾರದ ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರದ ಕುರಿತು ಸಮಗ್ರ ಸೂಚನೆಗಳನ್ನು ಸುತ್ತೋಲೆ ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2018 (1), ದಿನಾಂಕ:16.04.2019ರಲ್ಲಿ ನೀಡಲಾಗಿದ್ದು, ಸದರಿ ಸುತ್ತೋಲೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.
(ಆ)	ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರಗಳು ಸರ್ಕಾರದ ಎಲ್ಲಾ ಇಲಾಖೆಗಳಿಗೆ ಸಹಕಾರಿ ಸಂಘಗಳಿಗೆ ಹಾಗೂ ಸರ್ಕಾರದ ಸ್ವಾಮ್ಯಕ್ಕೊಳಪಡುವ ಸಂಘ ಸಂಸ್ಥೆಗಳ ಕಾರ್ಯಕ್ರಮಗಳಿಗೆ ಅನ್ವಯಿಸುವುದಿಲ್ಲವೇ; ಹಾಗಿದ್ದಲ್ಲಿ ಯಾವ ಯಾವ ಇಲಾಖೆಗಳಿಗೆ ಅನ್ವಹಿಸುತ್ತದೆ ಮತ್ತು ಯಾವ ಯಾವ ಇಲಾಖೆಗಳಿಗೆ ಅನ್ವಯಿಸುವುದಿಲ್ಲ; ಮಾಹಿತಿ ನೀಡುವುದು;	ಸುತ್ತೋಲೆ ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2018 (1), ದಿನಾಂಕ:16.04.2019ರಲ್ಲಿನ ಸೂಚನೆಗಳು ರಾಜ್ಯ ಸರ್ಕಾರದ ವತಿಯಿಂದ ನಡೆಸುವ ರಾಜ್ಯ / ಜಿಲ್ಲಾ / ತಾಲ್ಲೂಕು ಮಟ್ಟದ ಸಮಾರಂಭಗಳಿಗೆ ಮತ್ತು ರಾಜ್ಯದ ಧನ ಸಹಾಯದಿಂದ ಸ್ಥಾಪಿಸಲ್ಪಟ್ಟ ರಾಜ್ಯ ಮಟ್ಟದ ಸಹಕಾರಿ ಸಂಘಗಳು ಹಾಗೂ ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು ನಡೆಸುವ ಕಾರ್ಯಕ್ರಮಗಳಿಗೆ ಅನ್ವಯಿಸುತ್ತವೆ.
(ಇ)	ಹಾಗಿದ್ದಲ್ಲಿ ಪೊಲೀಸ್ ಇಲಾಖೆಯ ಸಭೆ / ಸಮಾರಂಭ / ಸಮಾರಂಭಗಳಿಗೆ ಶಿಷ್ಟಾಚಾರ ಪಾಲನೆ ಅನ್ವಯವಾಗುವುದಿಲ್ಲವೇ; ಹಾಗಿದ್ದಲ್ಲಿ ಪೊಲೀಸ್ ತರಬೇತಿ ಶಾಲೆಗಳಲ್ಲಿ ನಡೆಯುವ ಸಭೆ / ಸಮಾರಂಭ / ಕಾರ್ಯಕ್ರಮಗಳಲ್ಲಿ ಶಿಷ್ಟಾಚಾರ ಪಾಲನೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪೊಲೀಸ್ ಇಲಾಖೆಯಲ್ಲಿ ಜನ ಪ್ರತಿನಿಧಿಗಳ ಆಹ್ವಾನದ ಕುರಿತಾಗಿ ಶಿಷ್ಟಾಚಾರ ಪಾಲನೆಗೆ ಪ್ರತ್ಯೇಕವಾಗಿ ಸುತ್ತೋಲೆ ಹೊರಡಿಸಲಾಗಿದೆಯೇ; ಹಾಗಿದ್ದಲ್ಲಿ ಪ್ರತಿ ನೀಡುವುದು;	ಪೊಲೀಸ್ ಇಲಾಖೆಯ ಸಭೆ / ಸಮಾರಂಭಗಳಲ್ಲಿ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಶಿಷ್ಟಾಚಾರ ಪಾಲನೆಯಾಗುತ್ತಿದೆ. ಆದರೆ, ಪೊಲೀಸ್ ತರಬೇತಿ ಶಾಲೆಗಳಲ್ಲಿ ನಡೆಯುವ ನಿರ್ಗಮನ ಪಥ ಸಂಚಲನವು ಇಲಾಖೆಯ ಆಂತರಿಕ ಕಾರ್ಯಕ್ರಮವಾಗಿದ್ದು, ಸಾರ್ವಜನಿಕ ಸಭೆಯಾಗಿರುವುದಿಲ್ಲ. ಈ ಕಾರ್ಯಕ್ರಮದಲ್ಲಿ ಶಿಸ್ತಿನ ಕವಾಯತ್ ನಡೆಯಲಿದ್ದು, ಇದರಲ್ಲಿ ರಾಷ್ಟ್ರೀಯ ಮತ್ತು ರಾಜ್ಯದ ಭದ್ರತೆಯ ದೃಷ್ಟಿಯಿಂದ ಕೆಲವೊಂದು ವಿಚಾರಗಳ ಬಗ್ಗೆ ಪ್ರಶಿಕ್ಷಣಾರ್ಥಿಗಳಿಗೆ ತಿಳಿಸಲಾಗುತ್ತದೆ. ಆದ್ದರಿಂದ, ನಿರ್ಗಮನ ಪಥ ಸಂಚಲನ ಕಾರ್ಯಕ್ರಮವು ಪೊಲೀಸ್ ಇಲಾಖೆಯ ಪ್ರತ್ಯೇಕ ಕಾರ್ಯಕ್ರಮವಾಗಿದ್ದು, ಈ ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಆಹ್ವಾನವಿರುವುದಿಲ್ಲ. ಸದರಿ ಕಾರ್ಯಕ್ರಮಕ್ಕೆ ಮಾನ್ಯ ಮುಖ್ಯ ಮಂತ್ರಿಗಳು, ಗೃಹ ಸಚಿವರು ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳು ಮಾತ್ರ ಪಾಲ್ಗೊಳ್ಳುತ್ತಾರೆ. ಪೊಲೀಸ್ ಇಲಾಖೆಯವರು ಮಾಹಿತಿ ನೀಡಿದಂತೆ ಪೊಲೀಸ್ ಇಲಾಖೆಯಲ್ಲಿ ಜನ ಪ್ರತಿನಿಧಿಗಳ ಆಹ್ವಾನದ ಕುರಿತಾಗಿ ಶಿಷ್ಟಾಚಾರ ಪಾಲನೆಗೆ ಪ್ರತ್ಯೇಕವಾಗಿ ಯಾವುದೇ ಸುತ್ತೋಲೆ ಹೊರಡಿಸಿರುವುದಿಲ್ಲ.

--2

(ಈ)	ಸುತ್ತೋಲೆಗಳ ಅನ್ವಯ ಕಾರ್ಯಕ್ರಮ ನಡೆಯುವ ಸ್ಥಳದ ವ್ಯಾಪ್ತಿಯ ಶಾಸಕರು ಅಧ್ಯಕ್ಷತೆ ವಹಿಸಬೇಕಾಗಿದ್ದರೂ ಸಹ ಶಿಷ್ಟಾಚಾರ ಪಾಲನೆ ಮಾಡದೇ ಪೊಲೀಸ್ ತರಬೇತಿ ಶಾಲೆಗಳಲ್ಲಿ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನ ಕಾರ್ಯಕ್ರಮ ಮಾಡುವುದು ನಿಯಮಾನುಸಾರ ಸರಿಯೇ; ಹಾಗಿದ್ದಲ್ಲಿ, ಶಾಸಕರ ಹಾಗೂ ಜನಪ್ರತಿನಿಧಿಗಳ ಅಧಿಕಾರಿ ಮೊಟಕುಗೊಳಿಸದಂತಾಗುವುದಿಲ್ಲವೇ; ಈ ಕುರಿತು ಸರ್ಕಾರದ ನಿಲುವೇನು; ಮಾಹಿತಿ ನೀಡುವುದು?	ಪೊಲೀಸ್ ಇಲಾಖೆಯ ಸಭೆ / ಸಮಾರಂಭಗಳಲ್ಲಿ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಶಿಷ್ಟಾಚಾರ ಪಾಲನೆಯಾಗುತ್ತಿದೆ. ಆದರೆ, ನಿರ್ಗಮನ ಪಥ ಸಂಚಲನ ಕಾರ್ಯಕ್ರಮವು ಪೊಲೀಸ್ ಇಲಾಖೆಯ ಪ್ರತ್ಯೇಕ ಆಂತರಿಕ ಕಾರ್ಯಕ್ರಮವಾಗಿದ್ದು, ರಾಷ್ಟ್ರೀಯ ಮತ್ತು ರಾಜ್ಯದ ಭದ್ರತೆಯ ದೃಷ್ಟಿಯಿಂದ ಕೆಲವೊಂದು ವಿಚಾರಗಳ ಬಗ್ಗೆ ಪ್ರಶಿಕ್ಷಣಾರ್ಥಿಗಳಿಗೆ ತಿಳಿಸಲಾಗುತ್ತದೆ. ಆದ್ದರಿಂದ, ಈ ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಆಹ್ವಾನವಿರುವುದಿಲ್ಲ. ಇದನ್ನು ಹೊರತುಪಡಿಸಿ, ಪೊಲೀಸ್ ಇಲಾಖೆಯಿಂದ ಕೈಗೊಳ್ಳುವ ಎಲ್ಲಾ ಸರ್ಕಾರಿ ಕಾರ್ಯಕ್ರಮಗಳಲ್ಲಿ ಸರ್ಕಾರದ ಸುತ್ತೋಲೆಯಂತೆ ಶಿಷ್ಟಾಚಾರದ ಪಾಲನೆಯಾಗುತ್ತಿದೆ.

(ಸಂಖ್ಯೆ: ಸಿಆಸುಇ 24 ಹೆಚ್‌ಇಎನ್ 2021)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2018(1)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು ದಿನಾಂಕ: 16.04.2019

ಸು ತ್ತೋ ಲೆ

ವಿಷಯ: ಸರ್ಕಾರದ ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ಕುರಿತು ಸಮಗ್ರ ಸೂಚನೆಗಳನ್ನು ಹೊರಡಿಸುವ ಕುರಿತು.

******

ಸರ್ಕಾರಿ ಸಭೆ ಮತ್ತು ಸಮಾರಂಭಗಳಿಗೆ ಜನ ಪ್ರತಿನಿಧಿಗಳನ್ನು ಆಹ್ವಾನಿಸುವಲ್ಲಿ ಅನುಸರಿಸಬೇಕಾದ ಶಿಷ್ಟಾಚಾರದ ಕುರಿತು ಈಗಾಗಲೇ ಸಮಗ್ರವಾದ ಸುತ್ತೋಲೆ ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2018 (1) ದಿನಾಂಕ: 06.03.2019ರಡಿ ಹೊರಡಿಸಲಾಗಿದೆ. ಸದರಿ ಸುತ್ತೋಲೆಗೆ ಕೆಲವೊಂದು ಅಂಶಗಳನ್ನು ಸೇರಿಸಬೇಕಾಗಿರುವುದರಿಂದ, ಈ ಪರಿಷ್ಕೃತ ಸುತ್ತೋಲೆಯನ್ನು ಹೊರಡಿಸಿದೆ. ಹೊಸದಾಗಿ ಸೇರಿಸಿದ ಅಂಶಗಳನ್ನು ಅನುಕ್ರಮ ಸಂಖ್ಯೆ 11ರ ಕೆಳಗಡೆ ದಪ್ಪ ಅಕ್ಷರಗಳಿಂದ ನಮೂದಿಸಿದೆ.

ಸಾಮಾನ್ಯ ಸೂಚನೆಗಳು

1. ಈ ಸೂಚನೆಗಳು ರಾಜ್ಯ ಸರ್ಕಾರದ ವತಿಯಿಂದ ನಡೆಸುವ ರಾಜ್ಯ / ಜಿಲ್ಲಾ / ತಾಲ್ಲೂಕು ಮಟ್ಟದ ಸಮಾರಂಭಗಳಿಗೆ ಮತ್ತು ರಾಜ್ಯದ ಧನ ಸಹಾಯದಿಂದ ಸ್ಥಾಪಿಸಲ್ಪಟ್ಟ ರಾಜ್ಯ ಮಟ್ಟದ ಸಹಕಾರಿ ಸಂಘಗಳು ಹಾಗೂ ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು ನಡೆಸುವ ಕಾರ್ಯಕ್ರಮಗಳಿಗೆ ಅನ್ವಯಿಸುತ್ತವೆ.

2. ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು ಒಳಗೊಂಡಂತೆ ಸರ್ಕಾರದ ಆ ಇಲಾಖೆಯ ಅಧಿಕೃತ ಕಾರ್ಯಕ್ರಮಗಳಿಗೆ, ಸಂಬಂಧಪಟ್ಟ ಇಲಾಖೆಯ ಸಚಿವರ ಸಮಾಲೋಚನೆಯೊಂದಿಗೆ ನಿಗದಿಪಡಿಸಿ ಕಾರ್ಯಕ್ರಮವನ್ನು ಏರ್ಪಡಿಸತಕ್ಕದ್ದು.

3. ಸರ್ಕಾರಿ ಕಾರ್ಯಾಕ್ರಮವನ್ನು ನಡೆಸಲು ಕನಿಷ್ಟ ಪಕ್ಷ 7 ದಿವಸಗಳ ಸಮಯಾವಕಾಶವನ್ನು ನೀಡುವಂತೆ ಜಿಲ್ಲಾ ಉಸ್ತುವಾರಿ ಸಚಿವರಿಗೆ ಕೋರುವುದು.

4. ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ಬದಲಾಗಿ ಜನಪ್ರತಿನಿದಿಗಳು ಹಾಗೂ ಸಾರ್ವಜನಿಕರೇ ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿ ಸರ್ಕಾರಿ ಸಮಾರಂಭಗಳನ್ನು ಏರ್ಪಡಿಸಬಾರದು.

5. ಯಾವುದೇ ಸರ್ಕಾರಿ ಸಭೆ ಅಥವಾ ಕಾರ್ಯಕ್ರಮವನ್ನು ಖಾಸಗಿ ನಿವಾಸದಲ್ಲಿ ಏರ್ಪಡಿಸುವಂತಿಲ್ಲ.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವ ಬಗ್ಗೆ

6 ಸರ್ಕಾರದ ಯಾವುದೇ ಕಾರ್ಯಕ್ರಮವಾಗಿದ್ದರೂ ಸಾಮಾನ್ಯವಾಗಿ ಕಾರ್ಯಕ್ರಮ ನಡೆಯುವ ಸ್ಥಳದ ವ್ಯಾಪ್ತಿಗೊಳಪಡುವ ವಿಧಾನ ಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿಯೇ ಕಾರ್ಯಕ್ರಮ ನಡೆಸುವುದು. ಆದರೆ ಕೆಲವೊಂದು ಸಂದರ್ಭದಲ್ಲಿ ಒಂದು ವಿಧಾನಸಭಾ ಕ್ಷೇತ್ರದ ಸ್ಥಳೀಯ ಕಾರ್ಯಕ್ರಮವನ್ನು ಸದರಿ ವಿಧಾನಸಭಾ ಕ್ಷೇತ್ರದ ಹೋಬಳಿ/ ಪ್ರದೇಶವಿರುವ ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿ ಆಯೋಜಿಸಿದಾಗ, ಸದರಿ ತಾಲ್ಲೂಕು ಕೇಂದ್ರ ಸ್ಥಾನವು ಇನ್ನೊಂದು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿದ್ದರೂ ಸಹ ಅಂತಹ ಕಾರ್ಯಕ್ರಮಗಳಲ್ಲಿ, ಕಾರ್ಯಕ್ರಮವು ಯಾವ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಿರುತ್ತದೆಯೋ ಆ ಸಂಬಂಧಪಟ್ಟ ಶಾಸಕರು ಅಧ್ಯಕ್ಷತೆಯನ್ನು ವಹಿಸುವುದು.

7. ಕೆಲವೊಮ್ಮೆ ಕಾರಣಾಂತರಗಳಿಂದ ವಿಧಾನಸಭಾ ಸದಸ್ಯರ ಸ್ಥಾನವು ತೆರವಾದ ಸಂದರ್ಭದಲ್ಲಿ ಸರ್ಕಾರಿ ಕಾರ್ಯಕ್ರಮಗಳ ಅಧ್ಯಕ್ಷತೆಯನ್ನು ಕೆಳಕಂಡಂತೆ ವಹಿಸುವುದು.

   i. ಸರ್ಕಾರಿ ಕಾರ್ಯಕ್ರಮಗಳನ್ನು ಮಾನ್ಯ ಮುಖ್ಯ ಮಂತ್ರಿಯವರು ಉದ್ಘಾಟಿಸಿದಾಗ ಜಿಲ್ಲಾ ಸಚಿವರು ಅಧ್ಯಕ್ಷತೆಯನ್ನು ವಹಿಸುವುದು.

   ii. ಸಂಬಂಧಪಟ್ಟ ಜಿಲ್ಲಾ ಸಚಿವರು ಉದ್ಘಾಟಿಸಿದಾಗ ಇಲಾಖಾ ಸಚಿವರು ಅಧ್ಯಕ್ಷತೆಯನ್ನು ವಹಿಸುವುದು.

   iii. ಜಿಲ್ಲಾ ಸಚಿವರು ಸರ್ಕಾರಿ ಕಾರ್ಯಕ್ರಮಗಳನ್ನು ಉದ್ಘಾಟಿಸಿದಾಗ, ಇಲಾಖಾ ಸಚಿವರು ಹಾಜರಾಗದೇ ಇರುವ ಸಂದರ್ಭಗಳಲ್ಲಿ, ಜಿಲ್ಲಾ ಸಚಿವರೇ ಅಧ್ಯಕ್ಷತೆಯನ್ನು ಸಹ ವಹಿಸುವುದು.

ಕಾರ್ಯಕ್ರಮಕ್ಕೆ ಆಹ್ವಾನಿಸುವ ಬಗ್ಗೆ

8 ಕಾರ್ಯಕ್ರಮಕ್ಕನುಗುಣವಾಗಿ ಈ ಕೆಳಕಂಡಂತೆ ಜನಪ್ರತಿನಿಧಿಗಳನ್ನು ಕಡ್ಡಾಯವಾಗಿ ಆಹ್ವಾನಿಸಬೇಕೆಂದು ಸೂಚಿಸಿದೆ.

ತಾಲ್ಲೂಕು ಮಟ್ಟದ ಕಾರ್ಯಕ್ರಮ:

- ಜಿಲ್ಲಾ ಉಸ್ತುವಾರಿ ಸಚಿವರುಗಳು.
- ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಇಲಾಖಾ ಸಚಿವರು.
- ಸಂಬಂಧಪಟ್ಟ ಕ್ಷೇತ್ರದ ವಿಧಾನ ಸಭಾ ಕ್ಷೇತ್ರದ ಶಾಸಕರು (ಅಧ್ಯಕ್ಷತೆ)
- ತಾಲ್ಲೂಕನ್ನು ಪ್ರತಿನಿಧಿಸುವ ಸಂಸದರು (ಆ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡಿರುವ ರಾಜ್ಯಸಭಾ ಸದಸ್ಯರು ಸೇರಿದಂತೆ).

- ತಾಲ್ಲೂಕನ್ನು ಪ್ರತಿನಿಧಿಸುವ ಪದವೀದರ ಕ್ಷೇತ್ರ, ಶಿಕ್ಷಕರ ಕ್ಷೇತ್ರ ಮತ್ತು ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನ ಪರಿಷತ್ತಿನ ಎಲ್ಲಾ ಶಾಸಕರುಗಳು ಮತ್ತು ನೋಡಲ್ ತಾಲ್ಲೂಕಾಗಿ ಆಯ್ಕೆ ಮಾಡಿಕೊಂಡಿರುವ ನಾಮ ನಿರ್ದೇಶಿತ ಹಾಗೂ ವಿಧಾನಸಭೆಯಿಂದ ಆಯ್ಕೆಯಾದ ವಿಧಾನ ಪರಿಷತ್ತಿನ ಶಾಸಕರುಗಳು.
- ನಿಗಮ ಮತ್ತು ಮಂಡಳಿಗಳ ಕಾರ್ಯಕ್ರಮಗಳಿಗೆ ಆಯಾ ನಿಗಮ ಮತ್ತು ಮಂಡಳಿಯ ಅಧ್ಯಕ್ಷರುಗಳನ್ನು ಆಹ್ವಾನಿಸುವುದು. ಜೊತೆಗೆ ಇತರೇ ಕಾರ್ಯಕ್ರಮಗಳಿಗೆ ಆಯಾ ತಾಲ್ಲೂಕುಗಳಿಂದ ನಿಗಮ ಮತ್ತು ಮಂಡಳಿಗಳಿಗೆ ಅಧ್ಯಕ್ಷರುಗಳಾಗಿರುವವರನ್ನು ಸಹ ಆಹ್ವಾನಿಸುವುದು.
- ಜಿಲ್ಲಾ ಪಂಚಾಯತ್ ಅಧ್ಯಕ್ಷರು
- ತಾಲ್ಲೂಕು ಪಂಚಾಯತ್ ಅಧ್ಯಕ್ಷರು
- ಕಾರ್ಯಕ್ರಮ ನಡೆಯುವ ಸ್ಥಳದ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು/ ಮಹಾಪೌರರು ಅಥವಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರು

ಜಿಲ್ಲಾ ಮಟ್ಟದ ಕಾರ್ಯಕ್ರಮ:

- ಜಿಲ್ಲಾ ಉಸ್ತುವಾರಿ ಸಚಿವರುಗಳು.
- ಜಿಲ್ಲೆಯ ಇತರೆ ಸಚಿವರುಗಳು.
- ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಇಲಾಖಾ ಸಚಿವರು.
- ಜಿಲ್ಲೆಯ ಎಲ್ಲಾ ವಿಧಾನ ಸಭಾ ಸದಸ್ಯರುಗಳು (ಕಾರ್ಯಕ್ರಮ ನಡೆಯುವ ಸ್ಥಳದ ವ್ಯಾಪ್ತಿಯ ಶಾಸಕರ ಅಧ್ಯಕ್ಷತೆ.
- ಜಿಲ್ಲೆಯ ಎಲ್ಲಾ ಸಂಸದರು (ಜಿಲ್ಲೆಯನ್ನು ನೋಡಲ್ ಜಿಲ್ಲೆಯನ್ನಾಗಿ ಆಯ್ಕೆ ಮಾಡಿಕೊಂಡಿರುವ ರಾಜ್ಯ ಸಭಾ ಸದಸ್ಯರು ಸೇರಿದಂತೆ)
- ಜಿಲ್ಲೆಯನ್ನು ಪ್ರತಿನಿಧಿಸುವ ಪದವೀದರ ಕ್ಷೇತ್ರ, ಶಿಕ್ಷಕರ ಕ್ಷೇತ್ರ ಮತ್ತು ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಚುನಾಯಿತರಾಗಿರುವ ವಿಧಾನ ಪರಿಷತ್ತಿನ ಎಲ್ಲಾ ಶಾಸಕರುಗಳು ಮತ್ತು ನೋಡಲ್ ಜಿಲ್ಲೆಯಾಗಿ ಆಯ್ಕೆ ಮಾಡಿಕೊಂಡಿರುವ ನಾಮ ನಿರ್ದೇಶಿತ ಹಾಗೂ ವಿಧಾನಸಭೆಯಿಂದ ಆಯ್ಕೆಯಾದ ವಿಧಾನ ಪರಿಷತ್ತಿನ ಶಾಸಕರುಗಳು
- ನಿಗಮ ಮತ್ತು ಮಂಡಳಿಗಳ ಕಾರ್ಯಕ್ರಮಗಳಿಗೆ ಆಯಾ ನಿಗಮ ಮತ್ತು ಮಂಡಳಿಯ ಅಧ್ಯಕ್ಷರುಗಳನ್ನು ಆಹ್ವಾನಿಸುವುದು. ಜೊತೆಗೆ ಇತರೇ ಕಾರ್ಯಕ್ರಮಗಳಿಗೆ ಆಯಾ ಜಿಲ್ಲೆಗಳಿಂದ ನಿಗಮ ಮತ್ತು ಮಂಡಳಿಗಳಿಗೆ ಅಧ್ಯಕ್ಷರುಗಳಾಗಿರುವವರನ್ನು ಸಹ ಆಹ್ವಾನಿಸುವುದು.
- ಜಿಲ್ಲಾ ಪಂಚಾಯತ್ ಅಧ್ಯಕ್ಷರು,
- ಕಾರ್ಯಕ್ರಮ ನಡೆಯುವ ಸ್ಥಳದ ತಾಲ್ಲೂಕು ಪಂಚಾಯತ್ ಅಧ್ಯಕ್ಷರು
- ಕಾರ್ಯಕ್ರಮ ನಡೆಯುವ ಸ್ಥಳದ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು/ ಮಹಾಪೌರರು ಅಥವಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರು

ರಾಜ್ಯ ಮಟ್ಟದ ಕಾರ್ಯಕ್ರಮ:

- ಮಾನ್ಯ ಮುಖ್ಯಮಂತ್ರಿಗಳು,
- ಉಪ ಮುಖ್ಯಮಂತ್ರಿಗಳು.
- ಕಾರ್ಯಕ್ರಮ ನಡೆಯುವ ಸ್ಥಳದ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವರು.
- ಕಾರ್ಯಕ್ರಮ ನಡೆಯುವ ಸ್ಥಳದ ಜಿಲ್ಲೆಯ ಇತರೆ ಸಚಿವರು
- ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಇಲಾಖಾ ಸಚಿವರು,
- ವಿರೋಧ ಪಕ್ಷದ ನಾಯಕರು,
- ಕಾರ್ಯಕ್ರಮ ನಡೆಯುವ ಜಿಲ್ಲೆಯ ಸಂಸದರು (ಜಿಲ್ಲೆಯನ್ನು ನೋಡಲ್ ಜಿಲ್ಲೆಯನ್ನಾಗಿ ಆಯ್ಕೆ ಮಾಡಿಕೊಂಡಿರುವ ರಾಜ್ಯ ಸಭಾ ಸದಸ್ಯರು ಸೇರಿದಂತೆ).
- ಕಾರ್ಯಕ್ರಮ ಜರುಗುವ ಜಿಲ್ಲೆಯಲ್ಲಿನ ಎಲ್ಲಾ ಶಾಸಕರು (ಕಾರ್ಯಕ್ರಮ ನಡೆಯುವ ಸ್ಥಳದ ವ್ಯಾಪ್ತಿಯ ಶಾಸಕರ ಅಧ್ಯಕ್ಷತೆ).
- ಕಾರ್ಯಕ್ರಮದ ನಡೆಯುವ ಜಿಲ್ಲೆಯ ಪ್ರತಿನಿಧಿಸುವ ಪದವೀದರ ಕ್ಷೇತ್ರ, ಶಿಕ್ಷಕರ ಕ್ಷೇತ್ರ ಮತ್ತು ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಚುನಾಯಿತರಾಗಿರುವ ವಿಧಾನ ಪರಿಷತ್ತಿನ ಎಲ್ಲಾ ಶಾಸಕರುಗಳು ಮತ್ತು ನೋಡಲ್ ಜಿಲ್ಲೆಯಾಗಿ ಆಯ್ಕೆ ಮಾಡಿಕೊಂಡಿರುವ ನಾಮ ನಿರ್ದೇಶಿತ ಹಾಗೂ ವಿಧಾನಸಭೆಯಿಂದ ಆಯ್ಕೆಯಾದ ವಿಧಾನ ಪರಿಷತ್ತಿನ ಶಾಸಕರುಗಳು.
- ನಿಗಮ ಮತ್ತು ಮಂಡಳಿಗಳ ಕಾರ್ಯಕ್ರಮಗಳಿಗೆ ಆಯಾ ನಿಗಮ ಮತ್ತು ಮಂಡಳಿಯ ಅಧ್ಯಕ್ಷರುಗಳನ್ನು ಆಹ್ವಾನಿಸುವುದು. ಜೊತೆಗೆ ಇತರೇ ಕಾರ್ಯಕ್ರಮಗಳಿಗೆ ಆಯಾ ಜಿಲ್ಲೆಗಳಿಂದ ನಿಗಮ ಮತ್ತು ಮಂಡಳಿಗಳಿಗೆ ಅಧ್ಯಕ್ಷರುಗಳಾಗಿರುವವರನ್ನು ಸಹ ಆಹ್ವಾನಿಸುವುದು.
- ಕಾರ್ಯಕ್ರಮ ನಡೆಯುವ ಸ್ಥಳದ ಜಿಲ್ಲಾ ಪಂಚಾಯತ್ ಅಧ್ಯಕ್ಷರು.
- ಕಾರ್ಯಕ್ರಮ ನಡೆಯುವ ಸ್ಥಳದ ತಾಲ್ಲೂಕು ಪಂಚಾಯತ್ ಅಧ್ಯಕ್ಷರು
- ಕಾರ್ಯಕ್ರಮ ನಡೆಯುವ ಸ್ಥಳದ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು/ ಮಹಾಪೌರರು ಅಥವಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರು.

೯. ಕಂಡಿಕೆ ೮ರಲ್ಲಿ ನಮೂದಿಸಿದ ಜನಪ್ರತಿನಿಧಿ/ ಗಣ್ಯ ವ್ಯಕ್ತಿಗಳೊಂದಿಗೆ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸಂದರ್ಭಗನುಗುಣವಾಗಿ ಈ ಕೆಳಕಂಡ ಜನಪ್ರತಿನಿಧಿಗಳನ್ನು ಸಹ ಆಹ್ವಾನಿಸತಕ್ಕದ್ದು.

(ಎ) ಜಿಲ್ಲಾ ಪಂಚಾಯತ್‌ಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳಿಗೆ ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಜಿಲ್ಲಾ ಪಂಚಾಯತ್ ಸದಸ್ಯರುಗಳನ್ನು ಆಹ್ವಾನಿಸುವುದು.

(ಬಿ) ಅದರಂತೆ ತಾಲ್ಲೂಕು ಪಂಚಾಯತ್‌ಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳಿಗೆ ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ತಾಲ್ಲೂಕು ಪಂಚಾಯತ್ ಸದಸ್ಯರುಗಳನ್ನು ಆಹ್ವಾನಿಸುವುದು.

(ಸಿ) ಅದರಂತೆ ಗ್ರಾಮ ಪಂಚಾಯತ್‌ಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳಿಗೆ ಗ್ರಾಮ ಪಂಚಾಯತ್‌ನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಗ್ರಾಮ ಪಂಚಾಯತ್ ಸದಸ್ಯರುಗಳನ್ನು ಆಹ್ವಾನಿಸುವುದು.

(ಡಿ) ಅದರಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಗರ ಸ್ಥಳೀಯ ಸಂಸ್ಥೆಯ ಸದಸ್ಯರುಗಳನ್ನು ಆಹ್ವಾನಿಸುವುದು.

<u>ಟಿಪ್ಪಣಿ:</u>

ಮೇಲ್ಕಂಡ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಆಹ್ವಾನಿಸಬೇಕಾಗಿರುವ ಜನಪ್ರತಿನಿಧಿಗಳನ್ನು ಹೊರತುಪಡಿಸಿ, ಇತರೆ ಸಚಿವರು/ ಜನಪ್ರತಿನಿಧಿಗಳು/ ಗಣ್ಯ ವ್ಯಕ್ತಿಗಳನ್ನು ಆಹ್ವಾನಿಸಲು ಕಾರ್ಯಕ್ರಮದ ಸಂದರ್ಭಕ್ಕನುಗುಣವಾಗಿ ಆಯೋಜಕರು ತೀರ್ಮಾನ ತೆಗೆದುಕೊಳ್ಳತಕ್ಕದ್ದು.

<u>ಆಹ್ವಾನ ಪತ್ರಿಕೆ ಮುದ್ರಿಸುವ ಬಗ್ಗೆ :</u>

10. ಸಮಾರಂಭದಲ್ಲಿ ಪಾಲ್ಗೊಳ್ಳುವಂತಹ ಸಂದರ್ಭ, ರಾಜ್ಯ ಆಧ್ಯತಾ ಸೂಚಿ ಪಟ್ಟಿ ಮತ್ತು ಇತರೆ ಸನ್ನಿವೇಶಗಳನ್ನು ಆದರಿಸಿ ಕೇಂದ್ರ ಸಚಿವರುಗಳು, ರಾಜ್ಯ ಸಂಪುಟ ದರ್ಜೆ ಸಚಿವರುಗಳು, ರಾಜ್ಯ ಸಚಿವರು, ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳಿಗೆ, ಘನ ಉಪಸ್ಥಿತಿ, ಉದ್ಘಾಟನೆ/ ಶಂಕುಸ್ಥಾಪನೆ/ಲೋಕಾರ್ಪಣೆ, ಅಧ್ಯಕ್ಷರು, ಮುಖ್ಯ ಅತಿಥಿಗಳು, ವಿಶೇಷ ಆಹ್ವಾನಿತರು ಹೀಗೆ ಸ್ಥಾನಗಳನ್ನು ನೀಡಬೇಕು. ಇದೇ ಅನುಕ್ರಮದಲ್ಲಿ ಆಹ್ವಾನ ಪತ್ರಿಕೆಯನ್ನು ಮುದ್ರಿಸತಕ್ಕದ್ದು.

11. ಸರ್ಕಾರದ ಕಾರ್ಯಕ್ರಮದ ಎಲ್ಲಾ ಆಹ್ವಾನ ಪತ್ರಿಕೆಗಳಲ್ಲಿ ಆಹ್ವಾನಿತರ ಹೆಸರುಗಳನ್ನು ರಾಜ್ಯ ಆಧ್ಯತಾ ಸೂಚಿಪಟ್ಟಿಗೆ ಅನುಗುಣವಾಗಿಯೇ ಮುದ್ರಿಸಬೇಕು. ಈ ಆದ್ಯತಾಸೂಚಿ ಪಟ್ಟಿಯನ್ನು ಪರಿಗಣಿಸುವಾಗ ಜನಪ್ರತಿನಿಧಿಗಳು ಹೊಂದಿರುವ ಸ್ಥಾನಮಾನವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಆದರೆ, ರಾಜ್ಯ ಆದ್ಯತಾ ಸೂಚಿ ಪಟ್ಟಿಯ ಟಿಪ್ಪಣಿ 6(ಎ) ರಲ್ಲಿ ತಿಳಿಸಿರುವಂತೆ ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಆಹ್ವಾನ ಪತ್ರಿಕೆಯಲ್ಲಿ ಘನ ಉಪಸ್ಥಿತಿ, ಉದ್ಘಾಟನೆ/ ಶಂಕುಸ್ಥಾಪನೆ/ಲೋಕಾರ್ಪಣೆಯ ನಂತರ ನಮೂದಿಸುವುದು.

<u>ಟಿಪ್ಪಣಿ</u>

ಅ) ಸರ್ಕಾರದ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಅಹ್ವಾನಿಸಬೇಕಾದ ಮತ್ತು ಕರ್ನಾಟಕ ರಾಜ್ಯದ ಆಧ್ಯತಾ ಸೂಚಿ ಪಟ್ಟಿಯಲ್ಲಿ ಯಾವುದೇ ಸ್ಥಾನಮಾನವನ್ನು ಹೊಂದದೇ ಇರುವ ಜನಪ್ರತಿನಿಧಿಗಳನ್ನು/ಗಣ್ಯ ವ್ಯಕ್ತಿಗಳನ್ನು ಅಹ್ವಾನ ಪತ್ರಿಕೆಯಲ್ಲಿ ಕೊನೆಯ ಶಾಸಕರ ನಂತರ ಈ ಕೆಳಗಿನ ಆಧ್ಯತೆಯಂತೆ ನಮೂದಿಸಲು ಕ್ರಮಕೈಗೊಳ್ಳತಕ್ಕದ್ದು.

i. **ಶಾಸಕರಲ್ಲದ ಮತ್ತು ಸಚಿವ ಸ್ಥಾನಮಾನ ಹೊಂದದೇ ಇರುವ ರಾಜ್ಯ ಮಟ್ಟದ ಇತರೆ ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರುಗಳು.**

- ಒಂದಕ್ಕಿಂತ ಹೆಚ್ಚಿಗೆ ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರುಗಳು ಇದ್ದಲ್ಲಿ, ಆಯಾ ಅಧ್ಯಕ್ಷರುಗಳು ಆ ಹುದ್ದೆಗೆ ಸೇರಿದ ದಿನಾಂಕವನ್ನು ಪರಿಗಣನೆಗೆ ತೆಗೆದುಕೊಂಡು ಪರಸ್ಪರ ಆದ್ಯತೆ ನಿಗದಿಪಡಿಸುವುದು.

ii. ಕಾರ್ಯಕ್ರಮ ನಡೆಯುವ ಸ್ಥಳದ ಮಹಾನಗರಪಾಲಿಕೆಯ ಮಹಾಪೌರರು.

iii. ಕಾರ್ಯಕ್ರಮ ನಡೆಯುವ ಸ್ಥಳದ ತಾಲ್ಲೂಕ್ ಪಂಚಾಯತ್ ಅಧ್ಯಕ್ಷರು..

iv. ಕಾರ್ಯಕ್ರಮ ನಡೆಯುವ ಸ್ಥಳದ ನಗರ ಸ್ಥಳೀಯ ಸಂಸ್ಥೆಯ/ಗ್ರಾಮ ಪಂಚಾಯತಿನ ಅಧ್ಯಕ್ಷರು.

ಆ) ಸರ್ಕಾರದ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಅಹ್ವಾನಿಸಬೇಕಾದ ಜನಪ್ರತಿನಿಧಿಗಳನ್ನು ಹೊರತುಪಡಿಸಿ ಇತರೆ ಜನಪ್ರತಿನಿಧಿಗಳನ್ನು ಮತ್ತು ಗಣ್ಯವ್ಯಕ್ತಿಗಳನ್ನು ಅಹ್ವಾನಿಸಿದಾಗ,

i. ಈಗಾಗಲೇ ಅವರಿಗೆ ಕರ್ನಾಟಕ ರಾಜ್ಯದ ಆಧ್ಯತಾ ಸೂಚಿಪಟ್ಟಿಯಲ್ಲಿ ಸ್ಥಾನಮಾನ ನೀಡಿದ್ದರೆ ಅವರ ಹೆಸರುಗಳನ್ನು ಆ ಪ್ರಕಾರ ಆಹ್ವಾನ ಪತ್ರಿಕೆಗಳಲ್ಲಿ ನಮೂದಿಸಿವುದು.

ii. ಅವರಿಗೆ ಯಾವುದೇ ಸ್ಥಾನಮಾನವಿಲ್ಲದಿದ್ದಾಗ ಅವರ ಹೆಸರುಗಳನ್ನು ಕಡ್ಡಾಯವಾಗಿ ಅಹ್ವಾನಿಸಬೇಕಾದ ಎಲ್ಲಾ ಜನಪ್ರತಿನಿಧಿಗಳ ನಂತರ ಅವರ ಹೆಸರುಗಳನ್ನು ನಮೂದಿಸುವುದು.

12. 2018 ರ ಆದ್ಯತಾ ಸೂಚಿಪಟ್ಟಿಯ ಪ್ರಕಾರ ಲೋಕಸಭಾ ಸದಸ್ಯರು ಮತ್ತು ರಾಜ್ಯಸಭಾ ಸದಸ್ಯರು ಕ್ರಮ ಸಂಖ್ಯೆ:21 ಅನುಚ್ಛೇದದಲ್ಲಿ ಹಾಗೂ ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರುಗಳು ಕ್ರಮ ಸಂಖ್ಯೆ:21 (ಎ) ಅನುಚ್ಛೇದದಲ್ಲಿ ಸ್ಥಾನವನ್ನು ಪಡೆಯುತ್ತಾರೆ. ಭಾರತ ಸರ್ಕಾರದ ಗೃಹ ಮಂತ್ರಾಲಯವು "as per the practice the person who has served more than one term continuously are placed higher in the Table of Precedence (ToP)" ಎಂದು ಅಭಿಪ್ರಾಯಿಸಿರುವ ಹಿನ್ನೆಲೆಯಲ್ಲಿ ಆದ್ಯತಾಸೂಚಿ ಪಟ್ಟಿಯಲ್ಲಿ ಒಂದೇ ಅನುಚ್ಛೇದದಲ್ಲಿರುವ ಹುದ್ದೆಗಳ ನಡುವೆ ಆದ್ಯತೆ ನೀಡುವಾಗ ಲೋಕಸಭಾ ಸದಸ್ಯರ ನಂತರ ರಾಜ್ಯಸಭಾ ಸದಸ್ಯರು ಹಾಗೂ ವಿಧಾನ ಸಭಾ ಸದಸ್ಯರ ನಂತರ ವಿಧಾನ ಪರಿಷತ್ತು ಸದಸ್ಯರು ಎಂಬ ಎರಡು ವಿಂಗಡನೆಗಳಾಗಿ ಮಾಡಿಕೊಳ್ಳದೇ ಯಾವ ವ್ಯಕ್ತಿಗಳು ಒಂದಕ್ಕಿಂತ

ಹೆಚ್ಚು ಅವಧಿಗೆ ಸತತವಾಗಿ ಅದೇ ಸ್ಥಾನದಲ್ಲಿ ಮುಂದುವರೆದಿರುತ್ತಾರೋ ಅಂತಹವರಿಗೆ ಪರಸ್ಪರ ಆದ್ಯತೆಯನ್ನು ನಿಗದಿಪಡಿಸುವಾಗ ಮೇಲಿನ ಸ್ಥಾನವನ್ನು ನಿಗದಿಪಡಿಸುವುದು.

ಟಿಪ್ಪಣಿ

ಜಿಲ್ಲಾ ಮಟ್ಟದ ಹಾಗೂ ರಾಜ್ಯ ಮಟ್ಟದ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, ಕಾರ್ಯಕ್ರಮ ನಡೆಯುವ ಸ್ಥಳದ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸದರನ್ನು ಮೊದಲಿಗೆ ಹಾಕುವುದು. ತದನಂತರ ಉಳಿದ ಸಂಸದರುಗಳನ್ನು (ಲೋಕಸಭಾ ಮತ್ತು ರಾಜ್ಯ ಸಭಾ ಸಂಸದರನ್ನೊಳಗೊಂಡಂತೆ) ಆದ್ಯತಾ ಪಟ್ಟಿಯ ಪ್ರಕಾರ ನಮೂದು ಮಾಡುವುದು.

13. ಸರ್ಕಾರದ ಸಮಾರಂಭಗಳ ಆಮಂತ್ರಣ ಪತ್ರಿಕೆಯಲ್ಲಿ ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯ ಸದಸ್ಯರ ಹೆಸರುಗಳನ್ನು ನಮೂದು ಮಾಡುವ ಸಂದರ್ಭಗಳಲ್ಲಿ "ಶಾಸಕರು (ವಿಧಾನ ಪರಿಷತ್ತು) ಮತ್ತು ಶಾಸಕರು (ವಿಧಾನ ಸಭೆ) ಎಂದು ಹಾಗೂ ಲೋಕಸಭಾ ಸದಸ್ಯರ ಮತ್ತು ರಾಜ್ಯಸಭಾ ಸದಸ್ಯರ ಹೆಸರುಗಳನ್ನು ನಮೂದು ಮಾಡುವ ಸಂದರ್ಭಗಳಲ್ಲಿ ಸಂಸದರು (ಲೋಕಸಭೆ) ಮತ್ತು ಸಂಸದರು (ರಾಜ್ಯಸಭೆ) ಎಂದು ನಮೂದು ಮಾಡುವುದು

14. ಜಿಲ್ಲೆಯಲ್ಲಿ ಯಾವುದೇ ಸರ್ಕಾರಿ ಸಮಾರಂಭ ಏರ್ಪಡಿಸುವ ಮುನ್ನ ಆಹ್ವಾನ ಪತ್ರಿಕೆಗೆ ಆಯಾ ಜಿಲ್ಲಾಧಿಕಾರಿಗಳ / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆಯಬೇಕು

15. ಸರ್ಕಾರದ ಸಮಾರಂಭವನ್ನು ಏರ್ಪಡಿಸುವ ಎಲ್ಲಾ ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲಾಧಿಕಾರಿಗಳು ಸಂಸತ್ತಿನ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ತಪ್ಪದೇ ಆಹ್ವಾನ ಪತ್ರಿಕೆಗಳನ್ನು ಕಳುಹಿಸುವ ವ್ಯವಸ್ಥೆ ಮಾಡತಕ್ಕದ್ದಲ್ಲದೇ, ಇಲಾಖೆಯ ಹಿರಿಯ ಅಧಿಕಾರಿಗಳ ಮುಖಾಂತರ ಅವರುಗಳಿಗೆ ಆಹ್ವಾನ ಪತ್ರಿಕೆಗಳನ್ನು ಖುದ್ದಾಗಿ ತಲುಪಿಸಲು ಏರ್ಪಾಡು ಮಾಡಬೇಕು.

16 ಆಹ್ವಾನ ಪತ್ರಿಕೆಗಳನ್ನು ಮುದ್ರಿಸದಿದ್ದ ಪಕ್ಷದಲ್ಲಿ ಕನಿಷ್ಠ ಪಕ್ಷ ಪತ್ರದ ಮುಖೇನ ಅನೌಪಚಾರಿಕವಾಗಿ ಜವಾಬ್ದಾರಿಯುತ ಅಧಿಕಾರಿಗಳ ಮುಖಾಂತರ ಸಂಸತ್ ಸದಸ್ಯರುಗಳನ್ನು ರಾಜ್ಯ ವಿಧಾನ ಮಂಡಲದ ಸದಸ್ಯರನ್ನು ಹಾಗೂ ಇತರರನ್ನು ಸಮಾರಂಭಕ್ಕೆ ಆಹ್ವಾನಿಸಬೇಕು.

17 ಶಂಕುಸ್ಥಾಪನೆ / ಉದ್ಘಾಟನೆ ಇತ್ಯಾದಿಗಳಿಗೆ ಸಂಬಂಧಪಟ್ಟ ಶಿಲೆಗಳಲ್ಲೂ ಸಹ ಆಹ್ವಾನ ಪತ್ರಿಕೆಯಲ್ಲಿರುವ ಹೆಸರುಗಳನ್ನು ಅದೇ ಆದ್ಯತೆಯಲ್ಲಿ ನಮೂದಿಸಬೇಕು.

<u>ಆಸನ ವ್ಯವಸ್ಥೆ</u>

18. ಆಸನ ವ್ಯವಸ್ಥೆ ಮಾಡುವಾಗಲೂ ರಾಜ್ಯ ಆದ್ಯತಾ ಪಟ್ಟಿಯ ಪ್ರಕಾರವೇ ಗಣ್ಯರಿಗೆ ಸಲ್ಲಬೇಕಾದ ಸ್ಥಾನಮಾನಗಳನ್ನು ಆಯಾ ವರಿಷ್ಠರಿಗೆ ತಪ್ಪದೇ ಸಲ್ಲಿಸಬೇಕು. ಆದ್ದರಿಂದ ಆಹ್ವಾನ ಪತ್ರಿಕೆಯನ್ನು ಆದ್ಯತಾಪಟ್ಟಿಯ ಮೇರೆಗೆ ಮುದ್ರಿಸುವುದರಿಂದ ಆಸನ ವ್ಯವಸ್ಥೆಯನ್ನು ಆಹ್ವಾನ ಪತ್ರಿಕೆಯ ಅನುಗುಣವಾಗಿ ಮಾಡುವುದು.

19 ಸಾಮಾನ್ಯವಾಗಿ ಶಿಷ್ಟಾಚಾರದಂತೆ ಅನುಸರಿಸಬೇಕಾದ ಆಸನ ವ್ಯವಸ್ಥೆಯನ್ನು ಕೆಳಕಂಡಂತೆ ನೀಡಲಾಗಿದೆ.

10	8	6	4	2	1	3	5	7	9	11

ಮೇಲ್ಕಂಡಂತೆ ಕಾರ್ಯಕ್ರಮದ ಆಹ್ವಾನ ಪತ್ರಿಕೆಯ ಪ್ರಕಾರ ಮೊದಲಿಗರೋ ಯಾರೋ ಅವರನ್ನು ಮಧ್ಯದಲ್ಲಿ (ಆಸನ ಸಂಖ್ಯೆ: 1) ಕೂರಿಸಬೇಕು ಅವರ ನಂತರ ಆಹ್ವಾನ ಪತ್ರಿಕೆಯ ಅನುಗುಣವಾಗಿ ಉಳಿದ ಗಣ್ಯರನ್ನು ಬಲ ಮತ್ತು ಎಡ ಭಾಗದಲ್ಲಿ ಮೇಲ್ಕಂಡಂತೆ ಆಸನ ವ್ಯವಸ್ಥೆಯನ್ನು ಮಾಡಬೇಕು.

20. ಕಾರ್ಯಕ್ರಮಗಳಿಗೆ ತಡವಾಗಿ ಬರುವ ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಗೆ

ಆಗುವ ಅನಾನುಕೂಲತೆಗಳನ್ನು ನಿವಾರಿಸುವ ಸಲುವಾಗಿ ಅವರಿಗಾಗಿ ಪ್ರತ್ಯೇಕವಾಗಿರಿಸಿದ ಆಸನಗಳನ್ನು ಸಮಾರಂಭ ಮುಗಿಯುವವರೆಗೂ ಕಾದಿರಿಸತಕ್ಕದ್ದು. ಹಾಗೂ ಆ ಆಸನಗಳು ಖಾಲಿಯಿದ್ದಾಗ್ಯೂ ಅವುಗಳನ್ನು ಇತರರು ಉಪಯೋಗಿಸಿಕೊಳ್ಳತಕ್ಕದಲ್ಲ.

21. ಸರ್ಕಾರಿ ಅಧಿಕಾರಿಗಳು ಸಾಮಾನ್ಯವಾಗಿ ಯಾವುದೇ ಸರ್ಕಾರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸುವುದು ಮತ್ತು ಉದ್ಘಾಟಿಸುವುದನ್ನು ನಿಷೇಧಿಸಿದೆ. ಆದರೆ, ಅನಿವಾರ್ಯ ಸಂದರ್ಭಗಳಲ್ಲಿ ಅಂದರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹೊರತುಪಡಿಸಿ, ಇನ್ನಿತರ ಸರ್ಕಾರಿ ಕಾರ್ಯಕ್ರಮಗಳಾದ ಜಯಂತಿ/ ಉತ್ಸವ/ ಅರಿವು ಮೂಡಿಸುವ ಕಾರ್ಯಕ್ರಮಗಳಲ್ಲಿ ಆಹ್ವಾನ ಪತ್ರಿಕೆಯಲ್ಲಿ ನಮೂದಿಸಿದ ಯಾವುದೇ ಜನಪ್ರತಿನಿಧಿಗಳು ಕಾರ್ಯಕ್ರಮಕ್ಕೆ ಹಾಜರಾಗದೇ ಇದ್ದ ಸಂದರ್ಭದಲ್ಲಿ ಮಾತ್ರ ಅಧ್ಯಕ್ಷತೆ ವಹಿಸಬಹುದು ಮತ್ತು ಉದ್ಘಾಟನೆ ಮಾಡಬಹುದು ಮತ್ತು ಅವಶ್ಯಕತೆಗೆ ಅನುಗುಣವಾಗಿ ಸಂಬಂಧಪಟ್ಟ ಅಧಿಕಾರಿಗಳು ಕಾರ್ಯಕ್ರಮದ ವೇದಿಕೆ ಮೇಲೆ ಉಪಸ್ಥಿತರಿರಬಹುದು.

ವಿಶೇಷ ಸೂಚನೆಗಳು:

22. ನ್ಯಾಯಾಲಯಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಕುರಿತಾಗಿ ಮಾನ್ಯ ಉಚ್ಛ ನ್ಯಾಯಾಲಯದ ನಿರ್ದೇಶನದನ್ವಯ ಕ್ರಮವನ್ನು ಕೈಗೊಳ್ಳುವುದು.

23 ಮಾನ್ಯ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳು ಭಾಗವಹಿಸುವ ಕಾರ್ಯಕ್ರಮಗಳನ್ನು ಮಾನ್ಯ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳ ಕಾರ್ಯಾಲಯದ ಅನುಮೋದನೆಯಂತೆ ನಡೆಸುವುದು.

24. ಕೇಂದ್ರ ಸರ್ಕಾರದ ಸಮಾರಂಭಗಳಿಗೆ ಸಂಸತ್ತು ಸದಸ್ಯರನ್ನು ಆಹ್ವಾನಿಸುವ ರೀತಿಯಲ್ಲಿಯೇ ಸ್ಥಳೀಯ ಚುನಾಯಿತ ಪ್ರತಿನಿಧಿಗಳಾದ ವಿಧಾನಮಂಡಲದ ಸದಸ್ಯರುಗಳನ್ನು ಶಿಷ್ಟಾಚಾರದನ್ವಯ ತಪ್ಪದೇ ಆಹ್ವಾನಿಸುವುದು.

25 ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯ ದಿನಾಚರಣೆ ದಿನಗಳಂದು ಯಾರು ಧ್ವಜಾರೋಹಣ ಮಾಡಬೇಕು ಎನ್ನುವ ಬಗ್ಗೆ ಭಾರತ ಸರ್ಕಾರ ಹೊರಡಿಸಿದ ಸುತ್ತೋಲೆಗಳಲ್ಲಿ ನೀಡಲಾದ ನಿರ್ದೇಶನವನ್ನು ಮುಂದುವರೆಸಿಕೊಂಡು ಹೋಗುವುದು.

26. ಸರ್ಕಾರಿ ಆದೇಶಗಳಲ್ಲಿ ಶಾಸಕರು ಅಥವಾ ಖಾಸಗಿ ಪ್ರಮುಖರ ಅಧ್ಯಕ್ಷತೆಯಲ್ಲಿ ಹಲವು ಸಮಿತಿಗಳನ್ನು ನೇಮಕ ಮಾಡಲಾಗಿದೆ. ಆಯಾ ಸಮಿತಿಯ ಕಾರ್ಯವ್ಯಾಪ್ತಿಗೆ ಒಳಪಟ್ಟು ಸಮೀಕ್ಷಣಾ ಸಭೆಗಳನ್ನು ನಡೆಸಬಹುದು. ಇದನ್ನು ಹೊರತುಪಡಿಸಿ ಶಾಸಕರೇ ಆಗಲೀ ಇತರೇ ಖಾಸಗಿ ಪ್ರಮುಖರೇ ಆಗಲೀ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮೀಕ್ಷಣಾ ಸಭೆಗಳನ್ನು ನಡೆಸುವಂತಿಲ್ಲ. ವಿರೋಧ ಪಕ್ಷದ ನಾಯಕರಿಗೂ ಸಹ ಅಧಿಕಾರಿಗಳ ಸಭೆ ಕರೆಯಲು ಅವಕಾಶವಿರುವುದಿಲ್ಲ ಆದರೆ ಅಗತ್ಯ ಮಾಹಿತಿಯನ್ನು ಸೂಕ್ತವಾಗಿ ಒದಗಿಸಬಹುದಾಗಿದೆ. ಅಂತಹ ಸಭೆಗಳನ್ನು ನಡೆಸಲು ಮಾನ್ಯ ಸಚಿವರು ಮತ್ತು ಅಧಿಕಾರಿಗಳಿಗೆ ಮಾತ್ರ ಅವಕಾಶವಿರುತ್ತದೆ.

27. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಮ್ಮ ಹಂತದಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಶಿಷ್ಟಾಚಾರದ ಬಗ್ಗೆ ಪೂರ್ಣವಾಗಿ ತರಬೇತಿ ನೀಡುವುದು. ಶಿಷ್ಟಾಚಾರ ಲೋಪವಾದ ಪ್ರಕರಣಗಳಲ್ಲಿ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ಸಂಬಂಧಪಟ್ಟವರಿಗೆಲ್ಲ ತಿಳಿಸತಕ್ಕದ್ದು. ಸಂಬಂಧಪಟ್ಟ ಅಧಿಕಾರಿಗಳಲ್ಲದೇ, ಶಿಷ್ಟಾಚಾರ ಪಾಲಿಸುವುದರಲ್ಲಿ ವಿಫಲರಾದ ಹಿರಿಯ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದೆಂದು ಈ ಮೂಲಕ ಸೂಚಿಸಿದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ

ಪ್ರತಿಗಳು:

1) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
3) ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.
4) ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
5) ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ.
6) ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್.
7) ಎಲ್ಲಾ ವಿಭಾಗಾಧಿಕಾರಿಗಳು.
8) ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
9) ಎಲ್ಲಾ ಜಿಲ್ಲಾಧಿಕಾರಿಗಳು.
10) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
11) ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
12) ಪತ್ರಿಕಾ ಪ್ರಕಟಣೆ / ಹೆಚ್ಚುವರಿ ಪ್ರತಿಗಳು.

ಮಾಹಿತಿಗಾಗಿ:

1) ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸು ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ (ರಾಜಕೀಯ)

ಕರ್ನಾಟಕ ವಿಧಾನಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 320
2.	ಸದಸ್ಯರ ಹೆಸರು	: ಶ್ರೀ ಬೆಳ್ಳಿಪ್ರಕಾಶ್
3.	ಉತ್ತರಿಸಬೇಕಾದ ದಿನಾಂಕ	: 14.12.2021
4.	ಉತ್ತರಿಸುವ ಸಚಿವರು	: ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಅಟಲ್ ಭೂಜಲ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ; ಈ ಯೋಜನೆಯನ್ನು ರಾಜ್ಯದ ಯಾವ ಯಾವ ಜಿಲ್ಲೆ/ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ; ಯಾವ ಮಾನದಂಡಗಳ ಆಧಾರದ ಮೇಲೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ;ಅನುಷ್ಠಾನಗೊಳಿಸಲಾಗುತ್ತಿದೆ; ಯಾವ ಮಾನದಂಡಗಳ ಆಧಾರದ ಮೇಲೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ;	ಸರ್ಕಾರದ ಗಮನಕ್ಕೆ ಬಂದಿದೆ. ಅಟಲ್ ಭೂಜಲ ಯೋಜನೆಯನ್ನು ರಾಜ್ಯದ 14 ಜಿಲ್ಲೆಗಳ 41 ತಾಲ್ಲೂಕುಗಳ 1199 ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಭಾರತ ಸರ್ಕಾರದ ಈ ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿ ಗುರುತಿಸಲಾಗಿರುವ ನೀರಿನ ಶೋಷಿತ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಅನುಷ್ಠಾನಗೊಳಿಸುತ್ತಿರುವ ಜಿಲ್ಲೆ ಮತ್ತು ತಾಲ್ಲೂಕುಗಳ ವಿವರ ಅನುಬಂಧ-1ರಲ್ಲಿ ನೀಡಲಾಗಿದೆ.
ಆ	ಅಟಲ್ ಭೂಜಲ ಯೋಜನೆಯ ಉದ್ದೇಶ ಮತ್ತು ರೂಪುರೇಷೆಗಳೇನು; ಈ ಯೋಜನೆಯ ಅನುಷ್ಠಾನಾಧಿಕಾರಿಗಳು/ಇಲಾಖೆ ಹಾಗೂ ಕಛೇರಿಯ ಬಗ್ಗೆ ವಿವರವಾದ ಮಾಹಿತಿ ನೀಡುವುದು;	ಸಮುದಾಯ ಸಹಭಾಗಿತ್ವದ ಸುಸ್ಥಿರ ಅಂತರ್ಜಲ ನಿರ್ವಹಣಾ ಪದ್ಧತಿಗಳ ಮೂಲಕ ಅಂತರ್ಜಲದ ತೀವ್ರ ಕೊರತೆ ಎದುರಿಸುತ್ತಿರುವ ಪ್ರದೇಶಗಳಲ್ಲಿ ಅಂತರ್ಜಲ ಸಂಪನ್ಮೂಲದ ನಿರ್ವಹಣೆಯನ್ನು ಸುಧಾರಿಸುವುದು ಅಟಲ್ ಭೂಜಲ ಯೋಜನೆಯ ಉದ್ದೇಶವಾಗಿದೆ. • ವೈಜ್ಞಾನಿಕ ಮತ್ತು ಸುಸ್ಥಿರ ಅಂತರ್ಜಲ ನಿರ್ವಹಣೆಗಾಗಿ ರಾಜ್ಯಗಳಲ್ಲಿ ಸಾಂಸ್ಥಿಕ ವ್ಯವಸ್ಥೆಯನ್ನು ಬಲಪಡಿಸುವುದು. • ಸಮುದಾಯ ಮತ್ತು ಪಾಲುದಾರರನ್ನು ಅಂತರ್ಜಲ ನಿರ್ವಹಣೆಯಲ್ಲಿ ಭಾಗವಹಿಸಲು ಉತ್ತೇಜಿಸುವುದು. • ಕೇಂದ್ರ/ರಾಜ್ಯ ಸರ್ಕಾರ ಯೋಜನೆಗಳ ಸಮನ್ವಯಗೊಳಿಸುವುದು. • ನೀರಿನ ಬೇಡಿಕೆ (Demand side) ಹಾಗು ನೀರಿನ ಮರು ಪೂರೈಕೆ (Supply side) ಗಾಗಿ ಯೋಜನೆಗಳನ್ನು ರೂಪಿಸಿ ಜಲ ಭದ್ರತಾ ಯೋಜನೆಗಳನ್ನು ತಯಾರಿಸುವುದು. ರಾಜ್ಯದಲ್ಲಿ ಅಟಲ್ ಭೂಜಲ ಯೋಜನೆಯ ಅನುಷ್ಠಾನವನ್ನು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯು ನೋಡಿಕೊಳ್ಳುತ್ತಿದ್ದು ನೋಡಲ್ ಇಲಾಖೆಯನ್ನಾಗಿ ಗುರುತಿಸಲಾಗಿದೆ. ರಾಜ್ಯ ಮಟ್ಟದಲ್ಲಿ ರಾಜ್ಯ ಕಾರ್ಯಕ್ರಮ ನಿರ್ವಹಣಾ ಘಟಕವನ್ನು ಸ್ಥಾಪಿಸಲಾಗಿದೆ. SPMU ನಲ್ಲಿನ ಅಧಿಕಾರಿ/ಸಿಬ್ಬಂಧಿ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.
ಇ	ಈ ಯೋಜನೆಯ ಅನುಷ್ಠಾನಕ್ಕೆ ಕುರಿತಂತೆ ಆರ್ಥಿಕ ನೆರವೂ ಮತ್ತು ಅನುದಾನಗಳ ಬಿಡುಗಡೆ ಕುರಿತು ಪ್ರಾರಂಭದಿಂದ ಇಲ್ಲಿಯವರೆಗೂ ಸಂಪೂರ್ಣ ಮಾಹಿತಿ ನೀಡುವುದು ;	ಅಟಲ್ ಭೂಜಲ ಯೋಜನೆಯನ್ನು ಕೇಂದ್ರ ವಲಯ ಯೋಜನೆಯಡಿ ಕೈಗೊಳ್ಳಲಾಗುತ್ತಿದ್ದು, ಭಾರತ ಸರ್ಕಾರವು ಪೂರ್ಣವೆಚ್ಚವನ್ನು ಭರಿಸಲಿದೆ ಅನುದಾನ ಬಿಡುಗಡೆ ಕುರಿತ ಮಾಹಿತಿಯನ್ನು ಅನುಬಂಧ-3ರಲ್ಲಿ ನೀಡಲಾಗಿದೆ.

ಈ	ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿರುವ ತಾಲ್ಲೂಕುಗಳಲ್ಲಿನ ಕಛೇರಿಯಲ್ಲಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮಂಜೂರಾತಿ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಹುದ್ದೆಗಳ ಮಾಹಿತಿಯೊಂದಿಗೆ ಅವರುಗಳ ಕಾರ್ಯ ಹಂಚಿಕೆ ಮತ್ತು ಕೆಲಸಗಳ ನಿರ್ವಹಣೆ ಕುರಿತು ಪೂರ್ಣ ಮಾಹಿತಿ ನೀಡುವುದು;	ಈ ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಗೊಳಿಸಲು ಜಿಲ್ಲೆಯಲ್ಲಿ, ಜಿಲ್ಲಾ ಕಾರ್ಯಕ್ರಮ ನಿರ್ವಹಣಾ ಘಟಕವನ್ನು ಸ್ಥಾಪಿಸಲಾಗಿದೆ. ವಿವರಗಳನ್ನು ಅನುಬಂಧ-4ರಲ್ಲಿ ನೀಡಲಾಗಿದೆ.
ಉ	ಕಡೂರು ತಾಲ್ಲೂಕಿನಲ್ಲಿ ಈ ಯೋಜನೆಯ ಅನುಷ್ಠಾನದ ಕುರಿತು ಇದುವರೆಗೂ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಈ ಯೋಜನೆಯ ಅನುಷ್ಠಾನದ ಕುರಿತಾಗಿ ಸರ್ಕಾರದಿಂದ ಮಂಜೂರಾಗಿರುವ ಕಛೇರಿ ಅಧಿಕಾರಿ/ಸಿಬ್ಬಂದಿಗಳ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ (NGO ಮೂಲಕ) ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಪೂರ್ಣ ಮಾಹಿತಿಯನ್ನೊಳಗೊಂಡಂತೆ ಬಿಡುಗಡೆಯಾದ ಅನುದಾನಗಳಿಗೆ ಆರ್ಥಿಕ ಮತ್ತು ಬೌತಿಕ ಪ್ರಗತಿಯ ಕುರಿತು ಸಮಗ್ರ ಮಾಹಿತಿ ನೀಡುವುದು; ಈ ಸಿಬ್ಬಂದಿಗಳು/ಅಧಿಕಾರಿಗಳ ಕಾರ್ಯವ್ಯಾಪ್ತಿ/ಯೋಜನೆ ಏನು ಮಾಹಿತಿ ನೀಡುವುದು?	ಕಡೂರು ತಾಲ್ಲೂಕನ್ನು ಅಂತರ್ಜಲ ಅತಿ ಬಳಕೆ ತಾಲ್ಲೂಕು ಎಂದು ಗುರುತಿಸಲಾಗಿದ್ದು, ತಾಲ್ಲೂಕಿನ 57 ಗ್ರಾಮ ಪಂಚಾಯತಿಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕಡೂರು ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ವಿವರ. **ಡಿ.ಪಿ.ಎಂ.ಯು** ನೋಡಲ್ ಅಧಿಕಾರಿ- ಶ್ರೀ ದಯಾ ಶಂಕರ್, ಸಹಾಯಕ ಕಾರ್ಯಪಾಕ ಅಭಿಯಂತರರು. ಡಿ.ಪಿ.ಎಂ.ಯು ಹೊರಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ತಜ್ಞರು. ಕ್ರ.ಸಂ / ಹುದ್ದೆ / ಹೆಸರು 1. / ಜಲ ತಜ್ಞರು, / ಶ್ರೀ ಬಿರೇಶ್ 2. / ಕೃಷಿ ತಜ್ಞರು / ಶ್ರೀಮತಿ ಪ್ರಿಯಾ 3. / IEC ತಜ್ಞರು / ಶ್ರೀ ಉಮಾಪತಿ 1. ಕಡೂರು ತಾಲ್ಲೂಕಿನಲ್ಲಿ ಯೋಜನೆಯನ್ನು ಗ್ರಾಮ ಪಂಚಾಯತಿಯ ಮಟ್ಟದಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಪಾಲುದಾರರಾದ ಸಂಸ್ಥೆ (DIP)ಯಾಗಿ Rural Development Society (R) ಯನ್ನು ಆಯ್ಕೆ ಮಾಡಲಾಗಿರುತ್ತದೆ. ಸದರಿ ಸಂಸ್ಥೆಯು ಯೋಜನೆಯ ಅನುಷ್ಠಾನದ ಎಲ್ಲಾ ಹಂತದಲ್ಲಿ ಗ್ರಾಮ ಪಂಚಾಯತಿ, DPMU, SPMU ರವರ ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಬೇಕಾಗಿರುತ್ತದೆ. 2. ಸಾಂಸ್ಥಿಕ ಬಲವರ್ಧನೆಯಡಿ ಒಟ್ಟು 34 ಅಧ್ಯಯನ ಕೊಳವೆ ಬಾವಿಗಳನ್ನು ರೂ.38,97,570/-ಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. 3. ಅಂತರ್ಜಲ ಮಟ್ಟವನ್ನು ಮಾಪನ ಮಾಡಲು 19 Automatic Water Level Indicator ಗಳನ್ನು ರೂ.3,51,500/-ಗಳ ವೆಚ್ಚದಲ್ಲಿ ಸರಬರಾಜು ಮಾಡಲಾಗಿದೆ. 4. ಕಡೂರು ತಾಲ್ಲೂಕಿನಲ್ಲಿ 4 ಸಮುದಾಯ ಸಹಭಾಗಿತ್ವದ ಗ್ರಾಮ ಪಂಚಾಯತಿ ಮಟ್ಟದ ಜಲ ಭದ್ರತಾ ಯೋಜನೆಗಳನ್ನು ಸಿದ್ಧಪಡಿಸಿ ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸದರಿ ಸಮುದಾಯ ಸಹಭಾಗಿತ್ವದ ಗ್ರಾಮ ಪಂಚಾಯತಿ ಮಟ್ಟದ ಜಲ ಭದ್ರತಾ ಯೋಜನೆಗಳ Module-1ನ್ನು ಪೂರೈಸಿದ್ದು, ಅದರ ವೆಚ್ಚದ ಬಾಬ್ತು ರೂ.4,98,442/-ಗಳನ್ನು DIPಗೆ ಪಾವತಿಸಲಾಗಿದೆ.

ಕಡತ ಸಂಖ್ಯೆ:MID 392 LAQ 2021

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ
ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು.

(1)

ಶ್ರೀ ಬೆಳ್ಳಿಪ್ರಕಾಶ್ ಮಾನ್ಯ ವಿಧಾನಸಭೆ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:320ಕ್ಕೆ

ಅನುಬಂಧ-1

ಅಟಲ್ ಭೂಜಲ ಯೋಜನೆಯಡಿ ಬರುವ ಜಿಲ್ಲೆ ಹಾಗೂ ತಾಲ್ಲೂಕುಗಳ ವಿವರ.

ಕ್ರ.ಸಂ	ಜಿಲ್ಲೆ	ತಾಲೂಕು
1	ಬಾಗಲಕೋಟೆ	ಬಾಗಲಕೋಟೆ, ಬಾದಾಮಿ
2	ಬಳ್ಳಾರಿ	ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ
3	ಬೆಳಗಾವಿ	ಅಥಣಿ, ರಾಮದುರ್ಗ
4	ಚಾಮರಾಜನಗರ	ಗುಂಡ್ಲುಪೇಟೆ
5	ಚಿಕ್ಕಬಳ್ಳಾಪುರ	ಬಾಗೇಪಲ್ಲಿ, ಶಿಡ್ಲಘಟ್ಟ, ಗುಡಿಬಂಡೆ, ಗೌರಿಬಿದನೂರು, ಚಿಕ್ಕಬಳ್ಳಾಪುರ, ಚಿಂತಾಮಣಿ
6	ಚಿತ್ರದುರ್ಗ	ಚಿತ್ರದುರ್ಗ, ಚಳ್ಳಕೆರೆ, ಹೊಳಲ್ಕೆರೆ, ಹೊಸದುರ್ಗ, ಹಿರಿಯೂರು
7	ದಾವಣಗೆರೆ	ಚನ್ನಗಿರಿ, ಜಗಳೂರು
8	ಗದಗ	ಗದಗ, ರೋಣ
9	ಹಾಸನ	ಅರಸೀಕೆರೆ
10	ಕೋಲಾರ	ಕೋಲಾರ, ಮುಳಬಾಗಿಲು, ಬಂಗಾರಪೇಟೆ, ಮಾಲೂರು, ಶ್ರೀನಿವಾಸಪುರ
11	ರಾಮನಗರ	ರಾಮನಗರ, ಕನಕಪುರ
12	ಬೆಂಗಳೂರು ಗ್ರಾಮೀಣ	ಹೊಸಕೋಟೆ, ನೆಲಮಂಗಲ, ದೇವನಹಳ್ಳಿ, ದೊಡ್ಡಬಳ್ಳಾಪುರ
13	ತುಮಕೂರು	ಚಿಕ್ಕನಾಯಕನಹಳ್ಳಿ, ಕೊರಟಗೆರೆ, ಮಧುಗಿರಿ, ಸಿರಾ, ತಿಪಟೂರು, ತುಮಕೂರು
14	ಚಿಕ್ಕಮಗಳೂರು	ಕಡೂರು

(7)

ಶ್ರೀ ಬೆಳ್ಳಿಪ್ರಕಾಶ್ ಮಾನ್ಯ ವಿಧಾನಸಭೆ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:320ಕ್ಕೆ ಅನುಬಂಧ-2

ರಾಜ್ಯ ಕಾರ್ಯಕ್ರಮ ನಿರ್ವಹಣಾ ಘಟಕದ SPMU ನ ಅಧಿಕಾರಿ/ಸಿಬ್ಬಂಧಿ ವಿವರ

List of Core Staff working in SPMU

Sl No	Name	Designation
1	Smt. Sujatha H.L	Joint Director of Agriculture, SPMU, Atal Jal, Karnataka
2	Dr. S Shafeeullah	Sr. Hydrogeologist, SPMU, Atal Jal, Karnataka
3	P Veena	Account Superintendent, SPMU, Atal Jal, Karnataka

List of Experts Working in SPMU

1	Ms. Hema Prasanna	IEC Expert, SPMU, Atal Jal, Karnataka
2	Mr. Ambarish	IT/MIS Expert, SPMU, Atal Jal, Karnataka
3	Ms. Vindhya	Procurement Expert, SPMU, Atal Jal, Karnataka
4	Ms. Sharanya	Groundwater Expert, SPMU, Atal Jal, Karnataka
5	Mr. Kiran Keri	Environement Expert, SPMU, Atal Jal, Karnataka

(3)

ಶ್ರೀ ಬೆಳ್ಳಿಪ್ರಕಾಶ್ ಮಾನ್ಯ ವಿಧಾನಸಭೆ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:320ಕ್ಕೆ ಅನುಬಂಧ-3

ATAL BHUJAL YOJANA, SPMU, KARNATAKA.

Details of Funds Received and Utilised for the year 2020-21.

SL. NO	Particulars of Grant Components	Fund Received Amount in Rs	Utilized Amount in Rs
1	Institutional Strengthening and Capacity Building	121,000,000	49,624,222
2	Release under EAP Component as Incentive Component for achivement of DLI#1	62,800,000	-
3	Release under EAP Component as Incentive Component for achivement of DLI#1	31,400,000	-
	Total	**215,200,000**	**49,624,222**

ATAL BHUJAL YOJANA, SPMU, KARNATAKA.

Details of Funds Received and Utilised from 1.4.2021 to 31.10.2021.

SL. NO	Particulars of Grant Components	Fund Received Amount in Rs	Utilized Amount in Rs
1	Institutional Strengthening and Capacity Building (Balance carried from 2020-21.)	71,375,778	70,177,491
2	Release under EAP Component as Incentive Component for achivement of DLI#1	4,255,392	-
3	Release under Program Component as Incentive Component for achivement of DLI#1	53,024,112	-
	Total	**128,655,282**	**70,177,491**

ಶ್ರೀ ಬೆಳ್ಳಿಪ್ರಕಾಶ್ ಮಾನ್ಯ ವಿಧಾನಸಭೆ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:320ಕ್ಕೆ ಅನುಬಂಧ-4

Details of DPMU Staff in Atal Jal District

Sl No	Name Of District	Nodal Officers	Name		Designation / Expert	Sanctioned/ Vaccant Position
1	Bagalkot	Sri R N Kumbar	Sri. Manjula Joshi	1	IEC	Filled
		8073960433	Sri. Timmanagouda	2	Agriculture	Filled
			Sri. Smarth	3	Water Resource	Filled
2	Belagavi	Sri Shakil Ahmed	Sri. Prahul Hiremath	1	IEC	Filled
		9448644962	Sri.Nelakanteshwar	2	Agriculture	Filled
			Sri. Akshy Patil	3	Water Resource	Filled
3	Bellary	Smt. Rashmi	Sri Mahesh	1	IEC	Filled
		9008542919	Sri Abhishek	2	Agriculture	Filled
			Sri Vinod Chavan	3	Water Resource	Filled
4	Bengaluru Rural	Sri. Venkatesh	Sri. Ranganath C	1	IEC	Filled
		8197218489	Sri. Ammajamma	2	Agriculture	Filled
			Smt. Divya	3	Water Resource	Filled
5	Chamrajnagara	Sri. Shaym Prasad	Sri. Arun Talwar	1	IEC	Filled
		8147016046	Sri. Nischitha Gowda	2	Agriculture	Filled
			Sri. Santhosh	3	Water Resource	Filled
6	Chikballapur	Sri Harish Kumar	Sri Bharat	1	IEC	Filled
		9964142814	Sri Shirkant	2	Agriculture	Filled
			Sri. Umesh	3	Water Resource	Filled
7	Chikkamagaluru	Sri. Dayashankar	Sri. Umapathy	1	IEC	Filled
		9964025090	Smt. Priya	2	Agriculture	Filled
			Sri. Beeresh	3	Water Resource	Filled
8	Chitradurga	Sri Annappa H J.	Sri. Sridhar	1	IEC	Filled
		9480509535	Sri. Ravikumar	2	Agriculture	Filled
			Sri. Ravindra Thippaih	3	Water Resource	Filled
9	Davangere	Sri. Anil	Smt. Arpita	1	IEC	Filled
		7676762502	Sri. Chandra Gowda	2	Agriculture	Filled
			Smt. Shwetha K S	3	Water Resource	Filled
10	Gadag	Sri. Santosh	Sri. Kotresha Hiremath	1	IEC	Filled
		8105587292	Smt. Vidhyashree Pateel	2	Agriculture	Filled
			Sri. Dinesh P	3	Water Resource	Filled
11	Hassan	Sri. Subramanya	Smt Veerndra	1	IEC	Filled
		9448868343	Smt. Prabhakar	2	Agriculture	Filled
		8217083257	Smt. Raksha K	3	Water Resource	Filled
12	Kolar	Sri Basave Gowda	Sri. Sathish	1	IEC	Filled
		9448951091	Sri. Kishan	2	Agriculture	Filled
			Sri. Kiran Kumar	3	Water Resource	Filled
13	Ramanagara	Sri. Ravi Kumar	Sri. Sandeep	1	IEC	Filled
		9482991319	Sri. Bhagyavathi	2	Agriculture	Filled
			Sri. Hunumanthe Gowda	3	Water Resource	Filled
14	Tumakuru	Sri. Ravichandra	Sri. Raghavendra	1	IEC	Filled
		9448433024	Sri. Atal Guru Shiva	2	Agriculture	Filled
			Smt. Shruthi	3	Water Resource	Filled

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 321
2. ಸದಸ್ಯರ ಹೆಸರು : ಶ್ರೀ ಬೆಳ್ಳಿಪ್ರಕಾಶ್ (ಕಡೂರು)
3. ಉತ್ತರಿಸಬೇಕಾದ ದಿನಾಂಕ : 14.12.2021
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಕಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಭದ್ರಾ ಮೇಲ್ದಂಡೆ ಯೋಜನೆಯಡಿ ಕೈಗೊಳ್ಳುತ್ತಿರುವ ಕಾಮಗಾರಿಗಳು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ; ವಿಳಂಬವಾಗಲು ಕಾರಣಗಳೇನು;	ವಿಶ್ವೇಶ್ವರಯ್ಯ ಜಲ ನಿಗಮದಡಿ ಬರುವ ಭದ್ರಾ ಮೇಲ್ದಂಡೆ ಯೋಜನೆಯಡಿ ಕಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ತುಮಕೂರು ಶಾಖಾ ಕಾಲುವೆ ಪ್ಯಾಕೇಜ್– 2, 3, 4 & 5 (ಕಿ.ಮೀ 10 ರಿಂದ 84)ರ ಕಾಮಗಾರಿಗಳನ್ನು ಮತ್ತು ಚಿತ್ರದುರ್ಗ ಶಾಖಾ ಕಾಲುವೆ ಪ್ಯಾಕೇಜ್–4 (ಸರಪಳಿ 11ರಿಂದ13 ಕಿ.ಮೀ.) ವರೆಗಿನ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ. ಕಡೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ ಸರಪಳಿ 10.00 ರಿಂದ 84.00 ಕಿ.ಮೀ. ವರೆಗಿನ ಮತ್ತು ಚಿತ್ರದುರ್ಗ ಶಾಖಾ ಕಾಲುವೆ ಪ್ಯಾಕೇಜ್–4 (ಸರಪಳಿ 11 ರಿಂದ 13 ಕಿ.ಮೀ.) ವರೆಗಿನ ಕಾಮಗಾರಿಯ ವಿಳಂಬಕ್ಕೆ ಕಾರಣಗಳು ಈ ಕೆಳಗಿನಂತಿವೆ; ➢ ಭದ್ರಾ ಮೇಲ್ದಂಡೆ ಯೋಜನೆಯಡಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕಾಲುವೆ ನಿರ್ಮಾಣಕ್ಕಾಗಿ ತರೀಕೆರೆ ಮತ್ತು ಕಡೂರು ತಾಲ್ಲೂಕುಗಳಲ್ಲಿ ಸುಮಾರು 3000ಎಕರೆ ಜಮೀನುಗಳ ಭೂಸ್ವಾಧೀನಪಡಿಸಿಕೊಳ್ಳುವ ಕಾರ್ಯವನ್ನು ನಿರ್ವಹಿಸಲು ಉಪ ವಿಭಾಗಾಧಿಕಾರಿಗಳು ತರೀಕೆರೆ ಇವರಿಗೆ ವಹಿಸಲಾಗಿದ್ದು, ಉಪವಿಭಾಗಾಧಿಕಾರಿಗಳು, ತರೀಕೆರೆ ಇವರು ಕಂದಾಯ ಇಲಾಖೆಯ ಕೆಲಸದ ಜೊತೆಯಲ್ಲಿ ಭೂಸ್ವಾಧೀನ ಪಡಿಸಿಕೊಳ್ಳುವ ಕಾರ್ಯವನ್ನು ನಿರ್ವಹಿಸಬೇಕಾಗಿರುವುದರಿಂದ ಹಾಗೂ ಸರ್ವೆಯರ್ ಮತ್ತು ಸಿಬ್ಬಂದಿಗಳ ಕೊರತೆಯಿರುವುದರಿಂದ. ➢ 2019–2020, 2020–21 & 2021–22ನೇ ಸಾಲಿನಲ್ಲಿ ಕೊರೋನಾ ವೈರಸ್ ಸಾಂಕ್ರಾಮಿಕ ರೋಗದ ಸಂಬಂಧ. ➢ ಮಳೆಗಾಲದಲ್ಲಿ ಅತಿಯಾದ ಮಳೆಯಿಂದಾಗಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿರುವುದರಿಂದ. ➢ ಇತ್ತೀಚೆಗೆ ಶಿವಮೊಗ್ಗ ತಾಲ್ಲೂಕಿನ ಹುಣಸೋಡು ಕಲ್ಲು ಗಣಿಗಾರಿಕೆ ಬಳಿ ಜಿಲೆಟಿನ್ ಕಡ್ಡಿ ಸ್ಫೋಟಗೊಂಡು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆಯಲ್ಲಿ ಜಿಲಡಟಿನ್ ಕಡ್ಡಿ ಸ್ಫೋಟಗೊಂಡು ನಂತರ, ಕಾಲುವೆ ನಿರ್ಮಾಣಕ್ಕೆ ಗಟ್ಟಿಕಲ್ಲಿನ ಅಗೆತಕ್ಕಾಗಿ ಬೇಕಾಗಿರುವ ಸ್ಫೋಟಕ ವಸ್ತುಗಳನ್ನು ಕಾಮಗಾರಿಗಳಲ್ಲಿ ಬಳಸಲು ಸರ್ಕಾರ ನಿರ್ಬಂಧ ವಹಿಸಿರುವುದರಿಂದ.
ಆ)	ಭೂಸ್ವಾಧೀನ ಪ್ರಕ್ರಿಯೆಯು ವಿಳಂಬವಾಗುತ್ತಿರುವುದರಿಂದ ಭದ್ರಾ ಮೇಲ್ದಂಡೆ ಯೋಜನಾ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕಷ್ಟ ಸಾಧ್ಯವಾಗುತ್ತಿರುವುದರಿಂದ ಭೂಸ್ವಾಧೀನ ಪ್ರಕ್ರಿಯೆಯು ವಿಳಂಬವಾಗಲು ಕಾರಣಗಳೇನು;	➢ ಭೂಮಾಲೀಕರು ತಮ್ಮ ಜಮೀನಿಗೆ ಭೂ ಪರಿಹಾರದ ಹಣ ಪಾವತಿಸಿದ ನಂತರ ಕಾಮಗಾರಿ ಕೈಗೆತ್ತಿಕೊಳ್ಳುವಂತೆ ಒತ್ತಾಯಿಸಿ ಕೆಲಸಕ್ಕೆ ಅಡ್ಡಿಪಡಿಸಿ ಸ್ಥಗಿತಗೊಳಿಸಿರುವುದರಿಂದ. ➢ ಕಾವಲ್ ಪ್ರದೇಶ ಕಾಮಗಾರಿ ನಿರ್ವಹಿಸಲು ಪಶುಪಾಲನೆ ಇಲಾಖೆಯಿಂದ ಅನುಮತಿ ಸಿಕ್ಕಿದ್ದರೂ ಕಾವಲ್ ಪ್ರದೇಶ ಸಂಬಂಧ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿರುವುದರಿಂದ. ➢ ಕೆಲವು ಭಾಗಗಳಲ್ಲಿ ಕಾಲುವೆ ಪಂಕ್ತೀಕರಣವು ಅರಣ್ಯ ಪ್ರದೇಶದಲ್ಲಿ

<table>
<tr><th>ಕ್ರ.ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td></td><td></td><td>ಬಂದಿರುವುದರಿಂದ ಅರಣ್ಯ ಇಲಾಖೆಯಿಂದ ತೀರುವಳಿ ಪಡೆಯುವಲ್ಲಿ ಉಂಟಾಗಿರುವ ವಿಳಂಬದಿಂದ.</td></tr>
<tr><td>ಇ)</td><td>ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕಡೂರು ತಾಲ್ಲೂಕಿನ ವಿಶೇಷ ಭೂಸ್ವಾಧೀನಾಧಿಕಾರಿಗಳ ಕಚೇರಿ ಪ್ರಾರಂಭಿಸುವ ಅಥವಾ ಮಂಜೂರಾತಿ ಮಾಡುವ ಕುರಿತು ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ; ಯಾವ ಹಂತದಲ್ಲಿ; ವಿಶೇಷ ಭೂಸ್ವಾಧೀನಾಧಿಕಾರಿಗಳ ಕಚೇರಿ ಮಂಜೂರು ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು; ಮಾಹಿತಿ ನೀಡುವುದು;</td><td>ಚಿಕ್ಕಮಗಳೂರು ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳ ಅನುಷ್ಠಾನದ ಸಲುವಾಗಿ ಒಂದು ವಿಶೇಷ ಭೂಸ್ವಾಧೀನಾಧಿಕಾರಿ ಕಛೇರಿಯನ್ನು ಕಡೂರು ನಗರದಲ್ಲಿ ಹೊಸದಾಗಿ ಪ್ರಾರಂಭಿಸಲು, ಆ ಭಾಗದ ಕಡೂರು ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಬೆಳ್ಳಿ ಪ್ರಕಾಶ್ ಇವರು ಕೋರಿದ್ದರು. ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ಅಡಿಯಲ್ಲಿ ಬರುವ ಕೃಷ್ಣಾ ಮೇಲ್ದಂಡೆ ಯೋಜನೆಯ ವ್ಯಾಪ್ತಿಯ ಬಾಗಲಕೋಟೆ ಜಿಲ್ಲೆಯ ಜಮಖಂಡಿ ನಗರದ ಎರಡು ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿಗಳ ಪೈಕಿ ಒಂದು ಕಚೇರಿಯನ್ನು ಸಿಬ್ಬಂದಿ ಸಮೇತ ಕಡೂರಿಗೆ ಸ್ಥಳಾಂತರಿಸುವಂತೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ವಿ.ಜೆ.ಎನ್.ಎಲ್ ಇವರಿಂದ ಸ್ವೀಕೃತವಾದ ಪ್ರಸ್ತಾವನೆಯ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಅಭಿಪ್ರಾಯ ಕೋರಲಾಗಿತ್ತು.

ವ್ಯವಸ್ಥಾಪಕ ನಿರ್ದೇಶಕರು, ಕೆ.ಬಿ.ಜೆ.ಎನ್.ಎಲ್ ಇವರು ಸಲ್ಲಿಸಿರುವ ವರದಿಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ವ್ಯಾಪ್ತಿಯಲ್ಲಿ ಬಾಗಲಕೋಟೆ ಜಿಲ್ಲೆಯ ಜಮಖಂಡಿ ನಗರದಲ್ಲಿರುವ ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿಗಳಲ್ಲಿ ಸಾಕಷ್ಟು ಕೆಲಸಗಳಿರುವುದರಿಂದ ನಿಗಮದ ಹಿತದೃಷ್ಟಿಯಿಂದ ಸದರಿ ಕಚೇರಿಗಳನ್ನು ಹಾಲಿ ಜಮಖಂಡಿಯಲ್ಲಿಯೇ ಮುಂದುವರೆಸುವಂತೆ ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ ಜಮಖಂಡಿಯ ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿಯನ್ನು ಸ್ಥಳಾಂತರಿಸಲು ಸಾಧ್ಯವಾಗುವುದಿಲ್ಲವೆಂಬ ಅಂಶವನ್ನು ವ್ಯವಸ್ಥಾಪಕ ನಿರ್ದೇಶಕರು, ವಿಜೆಎನ್ಎಲ್ ಇವರಿಗೆ ತಿಳಿಸಿ ಕಡೂರಿನಲ್ಲಿ ಹೊಸದಾಗಿ ವಿಶೇಷ ಭೂಸ್ವಾಧೀನಾಧಿಕಾರಿ ಕಛೇರಿಯನ್ನು ಪ್ರಾರಂಭಿಸಲು ಸೂಕ್ತ ಬದಲಿ ವ್ಯವಸ್ಥೆಯೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಕೋರಲಾಗಿದೆ.</td></tr>
<tr><td>ಈ)</td><td>ರಾಜ್ಯದಲ್ಲಿ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ವಿಶೇಷ ಭೂಸ್ವಾಧೀನಾಧಿಕಾರಿಗಳ ಕಚೇರಿಗಳು ಎಲ್ಲೆಲ್ಲಿ ಕಾರ್ಯ ನಿರ್ವಹಿಸುತ್ತಿವೆ; ಕಡಿಮೆ ಕಾರ್ಯ ಒತ್ತಡವಿರುವ ಹಾಗೂ ಯೋಜನೆಗಳು ಪೂರ್ಣಗೊಂಡಿರುವ ಕಡೆ ವಿಶೇಷ ಭೂಸ್ವಾಧೀನಾಧಿಕಾರಿಗಳ ಕಚೇರಿಯನ್ನು ಗುರುತಿಸಿ ಕಡೂರು ತಾಲ್ಲೂಕಿಗೆ ಸ್ಥಳಾಂತರಿಸಬಹುದಲ್ಲವೆ; ಹಾಗಿದ್ದಲ್ಲಿ; ಪ್ರಸ್ತಕ ಸಾಲಿನಲ್ಲಿ ಸ್ಥಳಾಂತರಿಸಲಾಗುವುದೇ; ಈ ಸರ್ಕಾರದ ನಿಲುವೇನು; ಸಂಪೂರ್ಣ ಮಾಹಿತಿ ನೀಡುವುದು.</td><td>ವಿಶ್ವೇಶ್ವರಯ್ಯ ಜಲ ನಿಗಮದ ವ್ಯಾಪ್ತಿಯಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಯೋಜನೆಗಳ ವ್ಯಾಪ್ತಿಯಲ್ಲಿನ ವಿಶೇಷ ಭೂಸ್ವಾಧೀನಾಧಿಕಾರಿಗಳ ಕಚೇರಿಯ ವಿವರ ಈ ಕೆಳಕಂಡಂತಿವೆ:
<table>
<tr><th>ಕ್ರ.ಸಂ.</th><th>ಯೋಜನೆಯ ಹೆಸರು</th><th>ಕಚೇರಿಯ ಹೆಸರು</th><th>ಕಾರ್ಯ ನಿರ್ವಹಿಸುತ್ತಿರುವ ಸ್ಥಳ ತಾಲ್ಲೂಕು ಮತ್ತು ಜಿಲ್ಲೆ</th></tr>
<tr><td>1</td><td rowspan="3">ಎತ್ತಿನಹೊಳೆ ಯೋಜನೆ</td><td>ವಿಶೇಷ ಭೂಸ್ವಾಧೀನಾಧಿಕಾರಿ, ವಿಜನಿನಿ, ಹಾಸನ</td><td>ಹಾಸನ</td></tr>
<tr><td>2</td><td>ವಿಶೇಷ ಭೂಸ್ವಾಧೀನಾಧಿಕಾರಿ, ವಿಜನಿನಿ, ತುಮಕೂರು</td><td>ತುಮಕೂರು</td></tr>
<tr><td>3</td><td>ವಿಶೇಷ ಭೂಸ್ವಾಧೀನಾಧಿಕಾರಿ, ವಿಜನಿನಿ, ದೊಡ್ಡಬಳ್ಳಾಪುರ.</td><td>ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ</td></tr>
</table></td></tr>
</table>

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು			
		4	ಭದ್ರಾ ಮೇಲ್ದಂಡೆ ಯೋಜನೆ	ವಿಶೇಷ ಭೂಸ್ವಾಧೀನಾಧಿಕಾರಿ, ವಿಜನಿನಿ, ಚಿತ್ರದುರ್ಗ	ಚಿತ್ರದುರ್ಗ
		5		ಉಪವಿಭಾಗಾಧಿಕಾರಿಗಳ ು ಹಾಗೂ ಭೂಸ್ವಾಧೀನಾಧಿಕಾರಿ, ತರೀಕೆರೆ ಉಪವಿಭಾಗ, ತರೀಕೆರೆ	ತರೀಕೆರೆ ಚಿಕ್ಕಮಗಳೂರು
		ಕಡಿಮೆ ಕಾರ್ಯ ಒತ್ತಡವಿರುವ ಹಾಗೂ ಯೋಜನೆಗಳು ಪೂರ್ಣಗೊಂಡಿರುವ ಕಡೆ ವಿಶೇಷ ಭೂಸ್ವಾಧೀನಾಧಿಕಾರಿಗಳ ಕಚೇರಿಯನ್ನು ಗುರುತಿಸಿ ಕಡೂರು ತಾಲ್ಲೂಕಿಗೆ ಸ್ಥಳಾಂತರಿಸುವ ಬಗ್ಗೆ ನಿಗಮದ ಹಂತದಲ್ಲಿ ಪರಿಶೀಲನೆಯಲ್ಲಿದೆ.			

ಸಂಖ್ಯೆ: ಜಸಂಇ 112 ಡಬ್ಲ್ಯೂಎಲ್ಎ 2021

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	322
2.	ಮಾನ್ಯ ಸದಸ್ಯರ ಹೆಸರು	ಶ್ರೀ ಬೆಳ್ಳಿಪ್ರಕಾಶ್ (ಕಡೂರು)
3.	ಉತ್ತರಿಸಬೇಕಾದ ದಿನಾಂಕ	14/12/2021
4.	ಉತ್ತರಿಸುವವರು	ಮಾನ್ಯ ಕಾರ್ಮಿಕ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಕಾರ್ಮಿಕ ನಿರೀಕ್ಷಕರು ಕಛೇರಿಯಲ್ಲಿ ಸಿಬ್ಬಂದಿಗಳಿಲ್ಲದೇ ಇಲಾಖೆಯಿಂದ ದೊರೆಯುವ ಸೌಲಭ್ಯಗಳು ಕಾರ್ಮಿಕರಿಗೆ ಸಕಾಲದಲ್ಲಿ ಸಿಗದೇ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ; ಈ ಕಛೇರಿಗೆ ಮಂಜೂರಾಗಿರುವ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ಹುದ್ದೆಗಳ ಪೂರ್ಣ ಮಾಹಿತಿ ನೀಡುವುದು;	ಹೌದು. ಕಡೂರು ತಾಲ್ಲೂಕಿನ ಕಾರ್ಮಿಕ ನಿರೀಕ್ಷಕರ ಕಛೇರಿಗೆ ಸಂಬಂಧಿಸಿದಂತೆ ಕಾರ್ಮಿಕ ನಿರೀಕ್ಷಕರು ಮತ್ತು 1 ಅಕ್ಷರಸ್ಥ ಸಹಾಯಕ ಹುದ್ದೆ ಮಂಜೂರಾಗಿದ್ದು, ಪ್ರಸ್ತುತ ಕಾರ್ಮಿಕ ನಿರೀಕ್ಷಕ ಹುದ್ದೆಯು ಭರ್ತಿಯಾಗಿದ್ದು, ಅಕ್ಷರಸ್ಥ ಸಹಾಯಕ ಹುದ್ದೆಯು ಖಾಲಿ ಇರುತ್ತದೆ. ಇನ್ನುಳಿದಂತೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಹೊರಗುತ್ತಿಗೆ ಆಧಾರದ ಮೇರೆಗೆ ಒಬ್ಬರು ಡಾಟಾ ಎಂಟ್ರಿ ಆಪರೇಟರ್ ಕಾರ್ಯನಿರ್ವಹಿಸುತ್ತಿದ್ದಾರೆ.
ಆ)	ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಖಾಲಿ ಇರುವ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡು ಕಾರ್ಮಿಕರಿಗೆ ಸಕಾಲದಲ್ಲಿ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ; ಈ ಕುರಿತು ಸರ್ಕಾರದ ನಿಲುವೇನು; ಮಾಹಿತಿ ನೀಡುವುದು;	ಹೌದು. ಪ್ರಸ್ತುತ ಕಾರ್ಮಿಕ ನಿರೀಕ್ಷಕರು ಕಡೂರು ತಾಲ್ಲೂಕಿನಲ್ಲಿ 1 ಅಕ್ಷರಸ್ಥ ಸಹಾಯಕರ ಹುದ್ದೆ ಖಾಲಿ ಇರುತ್ತದೆ. ಕಾರ್ಮಿಕ ನಿರೀಕ್ಷಕರ ಸಹಾಯಕ್ಕಾಗಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಲ್ಯಾಣ ಮಂಡಳಿಯಿಂದ ಒಬ್ಬ ಡೇಟಾ ಎಂಟ್ರಿ ಆಪರೇಟರ್ ರವರನ್ನು ನೇಮಕ ಮಾಡಲಾಗಿದೆ. ಖಾಲಿಯಿರುವ 1 ಅಕ್ಷರಸ್ಥ ಸಹಾಯಕರ ಹುದ್ದೆಯನ್ನು ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.
ಇ)	ಇಲಾಖೆಯಿಂದ ಹಾಗೂ ವಿವಿಧ ಮಂಡಳಿ/ನಿಗಮಗಳಿಂದ ಕಾರ್ಮಿಕರಿಗೆ ಸಿಗುವ ಸೌಲಭ್ಯಗಳೇನು; ಸೌಲಭ್ಯಗಳ ಕುರಿತು ಇಲಾಖೆ/ಮಂಡಳಿ/ನಿಗಮವಾರು ಸಂಪೂರ್ಣ ಮಾಹಿತಿ ನೀಡುವುದು;	ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ವಿವಿಧ ಕಾರ್ಮಿಕ ಮಂಡಳಿಗಳಲ್ಲಿ ಕಾರ್ಮಿಕರಿಗೆ ದೊರಕುವ ಸೌಲಭ್ಯಗಳ ವಿವರಗಳು ಈ ಕೆಳಗಿನಂತಿರುತ್ತದೆ. **ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ** ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಮತ್ತು ಅವರ ಅವಲಂಭಿತರಿಗೆ ರೂಪಿಸಿರುವ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ವಿವರವನ್ನು **ಅನುಬಂಧ-1ರಲ್ಲಿ** ಲಗತ್ತಿಸಿದೆ.

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಈ ಕೆಳಕಂಡ ಯೋಜನೆಗಳನ್ನು ಜಾರಿಗೊಳಿಸುತ್ತಿದೆ.

(1) **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-** ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಯೋಜನೆಯಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

(ಅ) **ಅಪಘಾತ ಪರಿಹಾರ ಸೌಲಭ್ಯ** : ಯೋಜನೆಯಡಿ, ಅಪಘಾತದಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ರೂ. 5 ಲಕ್ಷದ ಪರಿಹಾರ, ಸಂಪೂರ್ಣ ಶಾಶ್ವತ ದುರ್ಬಲತೆ ಪ್ರಕರಣಗಳಲ್ಲಿ ರೂ.2 ಲಕ್ಷದ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದವರಿಗೆ ರೂ.1 ಲಕ್ಷದವರೆಗೆ ಚಿಕಿತ್ಸಾ ವೆಚ್ಚದ ಮರುಪಾವತಿ ನೀಡಲಾಗುತ್ತಿದೆ.

(ಆ) **ಶೈಕ್ಷಣಿಕ ಧನ ಸಹಾಯ** : ಅಪಘಾತದಿಂದ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ರೂ.10,000/-ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ.

(2) **ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-**

ಈ ಯೋಜನೆಯಡಿ 11 ಅಸಂಘಟಿತ ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"ರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದೆ.

(3) **ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿ:-**ಕರ್ನಾಟಕ ರಾಜ್ಯ ಸರ್ಕಾರವು, ಖಾಸಗಿ ವಲಯದ ಸಂಸ್ಥೆ/ಕಾರ್ಖಾನೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ನೇಮಕಾತಿಯನ್ನು ಉತ್ತೇಜಿಸಲು, "ಆಶಾದೀಪ ಯೋಜನೆ"ಯನ್ನು ಜಾರಿಗೆ ತಂದಿದ್ದು, ಸದರಿ ಯೋಜನೆಯಡಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ:-

ಅ) ಮಾಲೀಕರು ಪಾವತಿಸುವ ಇ.ಎಸ್.ಐ. ಮತ್ತು ಇ.ಪಿ.ಎಫ್. ವಂತಿಕೆ ಮರುಪಾವತಿ:- ಖಾಸಗಿ ವಲಯದ ಸಂಸ್ಥೆಗಳಲ್ಲಿ ಹೊಸದಾಗಿ ನೇಮಿಸಿಕೊಳ್ಳುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯೋಗಿಗಳಿಗೆ ಮಾಲೀಕರು/ ಉದ್ಯೋಗದಾತರು ಕಡ್ಡಾಯವಾಗಿ ಪಾವತಿಸಿದ ಶಾಸನಬದ್ಧ ಭವಿಷ್ಯನಿಧಿ ಹಾಗೂ ಇ.ಎಸ್.ಐ. ವಂತಿಗೆಯನ್ನು ರಾಜ್ಯ ಸರ್ಕಾರದಿಂದ ಮಾಲೀಕರು/ ಉದ್ಯೋಗದಾತರಿಗೆ ಎರಡು ವರ್ಷಗಳ ಅವಧಿಯವರೆಗೆ ಮಾಸಿಕ ಗರಿಷ್ಠ ತಲಾ ರೂ.3000/-ಗಳ ಮಿತಿಯೊಳಗೆ ಮರುಪಾವತಿ ಮಾಡಲಾಗುತ್ತದೆ.

		ಆ) ಅಪ್ರೆಂಟಿಸ್ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳ ಶಿಷ್ಯವೇತನ (Stipend) ಮರುಪಾವತಿ:- ಒಂದು ವರ್ಷದ ಅವಧಿಯ ಸಾಮಾನ್ಯ (Normal) ಹಾಗೂ ಎರಡು ವರ್ಷಗಳ ಅವಧಿಯ ಸಮಗ್ರ (Comprehensive) ಅಪ್ರೆಂಟಿಸ್ ತರಬೇತಿ ಪಡೆಯುತ್ತಿರುವ ಪ.ಜಾತಿ ಮತ್ತು ಪ.ಪಂಗಡದ ಅಭ್ಯರ್ಥಿಗಳಿಗೆ ಅಪ್ರೆಂಟಿಸ್ ಕಾಯ್ದೆ, 1961 ರನ್ವಯ ಪಾವತಿಸಬೇಕಾದ ಮಾಸಿಕ ಶಿಷ್ಯವೇತನ (Stipend) ಮೊತ್ತದಲ್ಲಿ 2/3 ರಷ್ಟು ಮೊತ್ತವನ್ನು ಮಾಸಿಕ ತಲಾ ರೂ.5000/- ಗಳ ಮಿತಿಯೊಳಗೆ ಮರುಪಾವತಿ ಮಾಡಲಾಗುತ್ತದೆ. **ಇ) ಅಪ್ರೆಂಟಿಸ್ ನಂತರ ಖಾಯಂ ಮಾಡಿದಲ್ಲಿ ವೇತನ ಮರುಪಾವತಿ**:- ಅಪ್ರೆಂಟಿಸ್ ತರಬೇತಿ ಪಡೆದ ಪ.ಜಾತಿ ಮತ್ತು ಪ.ಪಂಗಡದ ಅಭ್ಯರ್ಥಿಗಳನ್ನೇ ಖಾಯಂ ಹುದ್ದೆಗಳಲ್ಲಿ ನೇಮಕಾತಿ ಮಾಡಿಕೊಂಡಲ್ಲಿ, ಅಂತಹ ನೌಕರರಿಗೆ ಆಯಾ ಹುದ್ದೆಗಳಿಗೆ ಸರ್ಕಾರ ನಿಗದಿಪಡಿಸಿದ ಕನಿಷ್ಠ ವೇತನ ದರದಲ್ಲಿ ಶೇ.50 ರಷ್ಟು ಮೊತ್ತವನ್ನು ಮಾಸಿಕ ಗರಿಷ್ಠ ತಲಾ ರೂ. 7000/- ಗಳ ಮಿತಿಯೊಳಗೆ ಉದ್ಯೋಗದಾತರಿಗೆ ಒಂದು ವರ್ಷದ ಅವಧಿಗೆ ಮರುಪಾವತಿ ಮಾಡಲಾಗುತ್ತದೆ. **ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ** ಕಾರ್ಮಿಕ ಇಲಾಖೆ ಅಧೀನದಲ್ಲಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯು ಕಾರ್ಯ ನಿರ್ವಹಿಸುತ್ತಿದ್ದು 20:40 ರ ಅನುಪಾತದಲ್ಲಿ ವಂತಿಗೆ ಪಾವತಿಸುವ ಸಂಘಟಿತ ಕಾರ್ಮಿಕರಿಗೆ ಮಂಡಳಿ ವತಿಯಿಂದ ಕಲ್ಯಾಣ ಯೋಜನೆಗಳಡಿ ಧನಸಹಾಯ ನೀಡಲಾಗುವುದು. ಕಲ್ಯಾಣ ಯೋಜನೆಗಳ ವಿವರ ಈ ಕೆಳಕಂಡಂತಿದೆ. **1) ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ** **2) ಕಾರ್ಮಿಕರಿಗೆ ವೈದ್ಯಕೀಯ ನೆರವು** **3) ಕಾರ್ಮಿಕರಿಗೆ ಅಪಘಾತ ಧನ ಸಹಾಯ** **4) ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ** **5) ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ** **6) ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ** **7) ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ** ಈ ಇಲಾಖೆಯಿಂದ ವಿಮಾ ಕಾರ್ಮಿಕರಿಗೆ ರಾಜ್ಯದಾದ್ಯಂತ 07 ಕಾ.ರಾ.ವಿ. ಆಸ್ಪತ್ರೆ, 02 ರೋಗ ಪತ್ತೆ ಹಚ್ಚುವ ಕೇಂದ್ರ ಮತ್ತು 113 ಕಾ.ರಾ.ವಿ. ಚಿಕಿತ್ಸಾಲಯಗಳು ಪೂರ್ಣ ಪ್ರಮಾಣದ ವೈದ್ಯಕೀಯ ಸೇವೆಯನ್ನು ಒದಗಿಸಲಾಗುತ್ತಿದೆ. ಹಾಗೂ ಲಭ್ಯವಿಲ್ಲದ ವೈದ್ಯಕೀಯ ಸೇವೆಯನ್ನು 122 ಹೊಂದಾಣಿಕೆ ಮಾಡಿಕೊಂಡ ಸರ್ಕಾರಿ / ಖಾಸಗಿ ಆಸ್ಪತ್ರೆಗಳ ಮೂಲಕ ವಿಸ್ತರಿಸಲಾಗುತ್ತಿದೆ.

ಈ)	ಸರ್ಕಾರದಿಂದ ಕಾರ್ಮಿಕರಿಗೆ ಸಿಗುವ ಸೌಲಭ್ಯಗಳ ಬಗ್ಗೆ ಕಾರ್ಮಿಕರಿಗೆ ಮಾಹಿತಿ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಮಾಹಿತಿ ನೀಡುವುದು:	ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ಸಾಮಾಜಿಕ ಭದ್ರತಾ ಯೋಜನೆಗಳಡಿ ಎಲ್ಲಾ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಲು ಅರಿವು ಮೂಡಿಸುವ ಸಲುವಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:
		➢ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದೊಂದಿಗೆ ಅರಿವು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ➢ ದಿನ ಪತ್ರಿಕೆಗಳಲ್ಲಿ ಜಾಹೀರಾತು, ಕರಪತ್ರ, ಬ್ಯಾನರ್ಸ್ ಹಾಗೂ ಹೋರ್ಡಿಂಗ್ಸ್‌ಗಳ ಮೂಲಕ ಸಂವಹನ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ. ➢ ಕಾರ್ಮಿಕ ಇಲಾಖೆಯಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಕುರಿತು ಮಾಹಿತಿ ನೀಡಲು ಹಾಗೂ ಸಹಾಯ ಒದಗಿಸಲು ರಾಜ್ಯದ ಬಹುತೇಕ ತಾಲ್ಲೂಕು ಕೇಂದ್ರಗಳಲ್ಲಿ ಕಾರ್ಮಿಕ ಸೇವಾ ಕೇಂದ್ರಗಳನ್ನು ತೆರೆಯಲಾಗಿದೆ ಹಾಗೂ ಉಚಿತ ಕಾರ್ಮಿಕ ಸಹಾಯವಾಣಿ 155214 (24*7) ಸ್ಥಾಪಿಸಲಾಗಿದೆ. **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ** ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಈ ಕೆಳಕಂಡ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. (3) **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-** ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಯೋಜನೆಯಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ. (ಅ) **ಅಪಘಾತ ಪರಿಹಾರ ಸೌಲಭ್ಯ** : ಯೋಜನೆಯಡಿ, ಅಪಘಾತದಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ರೂ. 5 ಲಕ್ಷದ ಪರಿಹಾರ, ಸಂಪೂರ್ಣ ಶಾಶ್ವತ ದುರ್ಬಲತೆ ಪ್ರಕರಣಗಳಲ್ಲಿ ರೂ.2 ಲಕ್ಷದ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದವರಿಗೆ ರೂ.1 ಲಕ್ಷದವರೆಗೆ ಚಿಕಿತ್ಸಾ ವೆಚ್ಚದ ಮರುಪಾವತಿ ನೀಡಲಾಗುತ್ತಿದೆ. (ಆ) **ಶೈಕ್ಷಣಿಕ ಧನ ಸಹಾಯ** : ಅಪಘಾತದಿಂದ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ರೂ.10,000/-ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ.

		ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಸಂಘಟಿತ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಮಂಡಳಿ ವತಿಯಿಂದ ಅನುಷ್ಠಾನಗೊಳಿಸಿರುವ ಕಲ್ಯಾಣ ಯೋಜನೆಗಳಿಗೆ ಅರ್ಹ ಕಾರ್ಮಿಕರಿಂದ ಅರ್ಜಿಗಳು ಬಂದಾಗ ಅವುಗಳನ್ನು ಪರಿಶೀಲಿಸಿ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ನೇರವಾಗಿ (ಡಿ.ಬಿ.ಟಿ) ಮೂಲಕ ಧನ ಸಹಾಯದ ಮೊತ್ತವನ್ನು ವರ್ಗಾಯಿಸಲಾಗುವುದು. ಕಾರ್ಮಿಕರಿಗೆ ಮಾಹಿತಿ ನೀಡಲು, 24/7 ಕಾರ್ಮಿಕ ಸಹಾಯವಾಣಿ ಸಂಖ್ಯೆ: 9777777684 Toll free Helpline No. 155214 **E-mail ID:Labourhelpline.karnataka.govt@gmail. Com**
ಉ)	ಕಡೂರು ಮತ್ತು ತರೀಕೆರೆ ಕ್ಷೇತ್ರದಲ್ಲಿ ನೋಂದಣೀಯಾಗಿರುವ ಒಟ್ಟು ಕಾರ್ಮಿಕರ ಸಂಖ್ಯೆ ಎಷ್ಟು; ಕಾರ್ಮಿಕರಿಗೆ ಇ.ಎಸ್.ಐ ಅಸ್ಪತ್ರೆಯ ಸೌಲಭ್ಯವಿಲ್ಲದೇ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಹೊಸದಾಗಿ ಇ.ಎಸ್.ಐ ಅಸ್ಪತ್ರೆ ಮಂಜೂರು ಮಾಡಲು ಸರ್ಕಾರ ನಿಗದಿ ಪಡಿಸಿರುವ ಮಾನದಂಡಗಳೇನು; ಮಾಹಿತಿ ನೀಡುವುದು?	ಇಲಾಖೆಯ ವತಿಯಿಂದ ಕಾರ್ಮಿಕರ ಸಂಖ್ಯೆ ತಿಳಿಯಲು ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ ಆದರೆ ವಿವಿಧ ಕಾರ್ಮಿಕ ಕಾಯ್ದೆಗಳಡಿ ಪಡೆದಿರುವ ನೊಂದಣಿ ಹಾಗೂ ಮಂಡಳಿಗಳಲ್ಲಿ ಸೌಲಭ್ಯಕ್ಕಾಗಿ ನೊಂದಣಿಯಾಗಿರುವ ಕಾರ್ಮಿಕರ ವಿವರವನ್ನು ಈ ಕೆಳಗೆ ನೀಡಲಾಗಿದೆ.

	ನೋಂದಣಿಯಾದ ಕಟ್ಟಡ ಕಾರ್ಮಿಕರು	ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ	ಮೋಟರ್ ಸಾರಿಗೆ ಕಾಯ್ದೆ
ಕಡೂರು	16463	1482	180
ತರೀಕೆರೆ	25200	1836	145
ಒಟ್ಟು	41663	3318	325

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ನೋಂದಾಯಿತರಾದ ಅಸಂಘಟಿತ ಕಾರ್ಮಿಕರ ಕ್ಷೇತ್ರವಾರು ವಿವರ ಲಭ್ಯವಿರುವುದಿಲ್ಲ ಆದರೆ, ತಾಲ್ಲೂಕುವಾರು ಸಂಖ್ಯೆ ಲಭ್ಯವಿದ್ದು ಕಡೂರು ಮತ್ತು ತರೀಕೆರೆ ತಾಲ್ಲೂಕಿಗೆ ಸಂಬಂಧಿಸಿದ ವಿವರ ಈ ಕೆಳಕಂಡಂತಿದೆ:

ಕ್ರ. ಸಂ.	ಯೋಜನೆ ಹೆಸರು	ಕಾರ್ಮಿಕರ ಸಂಖ್ಯೆ	
		ಕಡೂರು	ತರೀಕೆರೆ
1	ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ	552	1127
2	ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ	838	233
3	ಕೋವಿಡ್-19ರ ವಿಶೇಷ ಪ್ಯಾಕೇಜ್‌ಗಳಡಿ ನೆರವು ಕೋರಿ ಅರ್ಜಿ ಸಲ್ಲಿಸಿದ ಕಾರ್ಮಿಕರು	7207	2242

ಇ)	ಖಾತಾ ಮೇಳ ಕಾರ್ಯಕ್ರಮವನ್ನು ಏರ್ಪಡಿಸುವ ಮೂಲಕ ಹೊಸ ಆಸ್ತಿಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ಸೇರಿಸಿಕೊಳ್ಳುವ ಹಾಗೂ ಮಹದೇವಪುರ, ಬೊಮ್ಮನಹಳ್ಳಿ, ಯಲಹಂಕ ವಲಯಗಳಿಂದ ಹೊಸ ಆಸ್ತಿ ತೆರಿಗೆಗೆ ಒಳಪಡುವ ಆಸ್ತಿಗಳನ್ನು ಸೇರ್ಪಡೆಗೊಳಿಸುವ ಮೂಲಕ ತೆರಿಗೆ ವ್ಯಾಪ್ತಿಗೆ ಸೇರದ ಆಸ್ತಿಗಳನ್ನು ಸೇರ್ಪಡೆಗೊಳಿಸಲು ಸರ್ಕಾರದ ಕ್ರಮಗಳು ಯಾವುವು?	ಪಾಲಿಕೆ ವ್ಯಾಪ್ತಿಯಲ್ಲಿರುವ ಬೃಹತ್ ಕಟ್ಟಡಗಳ ಸಂಕೀರ್ಣದಲ್ಲಿ ಮೇಳವನ್ನು ಆಯೋಜಿಸಿ ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡದೇ ಇರುವ ಸ್ವತ್ತುಗಳನ್ನು ಆಸ್ತಿತೆರಿಗೆ ವ್ಯಾಪ್ತಿಗೆ ಒಳಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಸ್ವತ್ತುಗಳ ಸರ್ವೆ ಕಾರ್ಯ ಕೈಗೊಂಡು ಆಸ್ತಿತೆರಿಗೆ ವ್ಯಾಪ್ತಿಗೆ ಒಳಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ನಅಇ 381 ಎಂಎಸ್‌ಯು 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	:	378
2. ಸದಸ್ಯರ ಹೆಸರು	:	ಡಾ: ರಂಗನಾಥ್. ಹೆಚ್.ಡಿ.
3. ಉತ್ತರಿಸಬೇಕಾದ ದಿನಾಂಕ	:	14-12-2021
4. ಉತ್ತರಿಸುವ ಸಚಿವರು	:	ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು.

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕುಣಿಗಲ್ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅಂತರ್ಜಲ ಕುಸಿತದಿಂದಾಗಿ ಕೆರೆ ಕಟ್ಟೆಗಳು ಹಾಗೂ ಕೊಳವೆ ಬಾವಿಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತಿದ್ದು, ಜನ-ಜಾನುವಾರುಗಳಿಗೆ ಕುಡಿಯುವ ನೀರಿಗೆ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಹೌದು, ಕುಣಿಗಲ್ ತಾಲ್ಲೂಕಿನಲ್ಲಿ ಅಂತರ್ಜಲ ಕುಸಿತದಿಂದಾಗಿ ಕೆರೆ ಕಟ್ಟೆಗಳಲ್ಲಿ ಮತ್ತು ಕೊಳವೆಬಾವಿಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ. ಮತ್ತು ಇದರಿಂದಾಗಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಅಂತರ್ಜಲ ನಿರ್ದೇಶನಾಲಯದಿಂದ ಪ್ರತಿ ಮಾಹೆಯಾನ ದಾಖಲಿಸಿದ ಕೊಳವೆಬಾವಿಗಳ ಅಂತರ್ಜಲ ಸ್ಥಿರ ಜಲಮಟ್ಟ ಮಾಪನದಂತೆ 05 ವರ್ಷಗಳ (2017 ರಿಂದ 2021ರವರೆಗಿನ) ವಾರ್ಷಿಕ ಸರಾಸರಿ ಅಂತರ್ಜಲ ಸ್ಥಿರಮಟ್ಟದ ವ್ಯತ್ಯಾಸದಂತೆ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನಲ್ಲಿ 1.88 ಗಳಷ್ಟು ಕುಸಿತ ಬಂದಿರುತ್ತದೆ.
ಅಂತರ್ಜಲ ಮಟ್ಟದ ವಿವರಗಳು (ಮೀ.ಗಳಲ್ಲಿ)
<table>
<tr><th>2017</th><th>2018</th><th>2019</th><th>2020</th><th>2021</th><th>ಏರಿಕೆ</th><th>ಇಳಿಕೆ</th></tr>
<tr><td>33.11</td><td>21.85</td><td>36.65</td><td>40.89</td><td>34.99</td><td></td><td>-
1.88</td></tr>
</table>
</td></tr>
<tr><td>ಆ</td><td>ತಾಲ್ಲೂಕಿನಾದ್ಯಂತ ಅಂತರ್ಜಲ ಹೆಚ್ಚಿಸಲು ಸರ್ಕಾರ ಯಾವ ರೀತಿಯ ಕ್ರಮವನ್ನು ಕೈಗೊಂಡಿದೆ;</td><td>ಕುಣಿಗಲ್ ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟವನ್ನು ಅಭಿವೃದ್ಧಿಪಡಿಸಲು ಸಣ್ಣ ನೀರಾವರಿ ಇಲಾಖೆಗೆ ಒದಗಿಸಲಾಗುವ ಅನುದಾನದ ಲಭ್ಯತೆ ಮೇರೆಗೆ ಚೆಕ್ ಡ್ಯಾಂ, ಇಂಗುಕೆರೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.</td></tr>
<tr><td>ಇ</td><td>ಅಂತರ್ಜಲ ಹೆಚ್ಚಿಸುವ ಸಂಬಂಧ ತಾಲ್ಲೂಕಿನಾದ್ಯಂತ ಸರ್ಕಾರ ಈವರೆವಿಗೂ ಎಷ್ಟು ಚೆಕ್‌ಡ್ಯಾಂಗಳನ್ನು ನಿರ್ಮಿಸಿದೆ ಹಾಗೂ ಕೆರೆಗಳಿಗೆ ನೀರು ಸರಾಗವಾಗಿ ಹರಿದು ಬರಲು ಎಷ್ಟು ಕಾಲುವೆಗಳನ್ನು ನಿರ್ಮಿಸಿದೆ.</td><td>ಚೆಕ್ ಡ್ಯಾಂ ಕಾಮಗಾರಿಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಕೆರೆಗಳಿಗೆ ನೀರು ಸರಾಗವಾಗಿ ಹರಿದು ಬರಲು ಕಾಲುವೆಗಳನ್ನು ಇಲಾಖೆಯಿಂದ ನಿರ್ಮಿಸಿರುವುದಿಲ್ಲ.</td></tr>
<tr><td>ಈ</td><td>ಸರ್ಕಾರ ಎಷ್ಟು ಚೆಕ್ ಡ್ಯಾಂ ಹಾಗೂ ಕಾಲುವೆಗಳನ್ನು ನಿರ್ಮಿಸಲು ಉದ್ದೇಶಿಸಿದೆ. ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು?</td><td>ಅಂತರ್ಜಲ ಮಟ್ಟ ಅಭಿವೃದ್ಧಿಪಡಿಸಲು ವೈಜ್ಞಾನಿಕವಾಗಿ ಪರಿಶೀಲಿಸಿ ತಾಂತ್ರಿಕ ಶಕ್ಯತೆ ಹೊಂದಿರುವ ಸ್ಥಳಗಳನ್ನು ಗುರುತಿಸಿ, ಚೆಕ್ ಡ್ಯಾಂ ಕಾಮಗಾರಿಗಳನ್ನು ಕೈಗೊಳ್ಳಲು ಹಾಗೂ ಕೆರೆಗಳಿಗೆ ನೀರು ಹರಿದು ಬರಲು ಪೋಷಕ ಕಾಲುವೆ ಅಭಿವೃದ್ಧಿ ಕಾಮಗಾರಿಗಳನ್ನು ಅನುದಾನದ ಲಭ್ಯತೆಯನುಸಾರ ಕೈಗೊಳ್ಳಲು ಪರಿಶೀಲಿಸಲಾಗುವುದು.</td></tr>
</table>

ಸಂಖ್ಯೆ: **MID 421 LAQ 2021.**

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ
ರಚನೆ ಮತ್ತು ಸಣ್ಣ ನೀರಾವರಿ ಸಚಿವರು.

ಶ್ರೀ ಡಾ. ರಂಗನಾಥ್ ಹೆಚ್.ಡಿ , ಮಾನ್ಯ ವಿಧಾನ ಸಭಾ ಸದಸ್ಯರು (ಕುಣಿಗಲ್) ಇವರ ಚುಕ್ಕೆ ಗುರುತಿನ/ಗುರುತಿಲ್ಲದ ಪ್ರಶ್ನೆ ಸಂಖ್ಯೆ:378 ಕ್ಕೆ ಅನುಬಂಧ

ಕುಣಿಗಲ್ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಸಣ್ಣ ನೀರಾವರಿ ಇಲಾಖೆಯಿಂದ ಅಂತರ್ಜಲ ಹೆಚ್ಚಿಸಲು ನಿರ್ಮಿಸಲಾದ ಚೆಕ್‌ಡ್ಯಾಂ ವಿವರ.

(ರೂ.ಲಕ್ಷಗಳಲ್ಲಿ)

ಕ್ರ.ಸಂ	ವರ್ಷ	ಜಿಲ್ಲೆ	ತಾಲ್ಲೂಕು	ಲೆಕ್ಕ ಶೀರ್ಷಿಕೆ	ಕಾಮಗಾರಿ ಹೆಸರು	ಅಂದಾಜು ಮೊತ್ತ	ಅನುದಾನ	ವೆಚ್ಚ	ಕಾಮಗಾರಿ ಹಂತ		ಷರಾ
									ಪೂರ್ಣಗೊಂಡಿದೆ	ಪ್ರಗತಿಯಲ್ಲಿದೆ	
1	2	3	4	5	6	7	8	9	10	11	12
1	2018–19	ತುಮಕೂರು	ಕುಣಿಗಲ್	4702–ಅಣೆಕಟ್ಟುಗಳ ಮತ್ತು ಬಂಡಾರುಗಳ ನಿರ್ಮಾಣ	ಕುಣಿಗಲ್ ತಾಲ್ಲೂಕು ಹುಲಿಯೂರುದುರ್ಗ ಹೋಬಳಿ ಕಾಚಿಹಳ್ಳಿ ಕೆರೆ ಕೋಡಿ ಹಳ್ಳಕ್ಕೆ ಚೆಕ್ ಡ್ಯಾಂ ಕಂ ಕಾಸವೇ ನಿರ್ಮಾಣ	50.00	50.00	31.55	ಕಾಮಗಾರಿ ಪೂರ್ಣಗೊಂಡಿದೆ		
2	2018–19	ತುಮಕೂರು	ಕುಣಿಗಲ್	4702–ಅಣೆಕಟ್ಟುಗಳ ಮತ್ತು ಬಂಡಾರುಗಳ ನಿರ್ಮಾಣ	ಕುಣಿಗಲ್ ತಾಲ್ಲೂಕು ಕೊತ್ತಗೆರೆ ಹೋಬಳಿ ಚಿಕ್ಕಮಳಲವಾಡಿ ಗ್ರಾಮದ ಹತ್ತಿರ ಜಂಗ್ಲಿ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ	35.00	35.00	26.65	ಕಾಮಗಾರಿ ಪೂರ್ಣಗೊಂಡಿದೆ		
3	2018–19	ತುಮಕೂರು	ಕುಣಿಗಲ್	4702–ಅಣೆಕಟ್ಟುಗಳ ಮತ್ತು ಬಂಡಾರುಗಳ ನಿರ್ಮಾಣ	ಮಂಗಳ ಗ್ರಾಮದ ಸ.ನಂ 137ರಲ್ಲಿ ಶ್ರೀ ವೆಂಕಟೇಶ್ ಕುಮಾರ್.ಎನ್ ರವರ ಜಮೀನಿನಲ್ಲಿ ಚೆಕ್ ಡ್ಯಾಂ	20.00	20.00	15.15	ಕಾಮಗಾರಿ ಪೂರ್ಣಗೊಂಡಿದೆ		
4	2018–19	ತುಮಕೂರು	ಕುಣಿಗಲ್	4702–ಅಣೆಕಟ್ಟುಗಳ . ಮತ್ತು ಬಂಡಾರುಗಳ ನಿರ್ಮಾಣ	ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಹುತ್ರಿದುರ್ಗ ಹೋಬಳಿ ಹುತ್ರಿದುರ್ಗ ಗ್ರಾಮದ ಸ.ನಂ.129/6 ಜಮೀನಿನಲ್ಲಿ ಚೆಕ್ ಡ್ಯಾಂ ಕಂ ಪೈಪ್ ಕಲ್ವರ್ಟ್ ನಿರ್ಮಾಣ	50.00	50.00	54.28	ಕಾಮಗಾರಿ ಪೂರ್ಣಗೊಂಡಿದೆ		
5	2018–19	ತುಮಕೂರು	ಕುಣಿಗಲ್	4702–ಅಣೆಕಟ್ಟುಗಳ ಮತ್ತು ಬಂಡಾರುಗಳ ನಿರ್ಮಾಣ	ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಹುತ್ರಿದುರ್ಗ ಹೋಬಳಿ ಹುತ್ರಿದುರ್ಗ ಗ್ರಾಮದ ಸ.ನಂ.124ರ ಜಮೀನಿನಲ್ಲಿ ಚೆಕ್ ಡ್ಯಾಂ ನಿರ್ಮಾಣ	30.00	30.00	38.84	ಕಾಮಗಾರಿ ಪೂರ್ಣಗೊಂಡಿದೆ		
6	2018–19	ತುಮಕೂರು	ಕುಣಿಗಲ್	4702– ಎಸ್. ಸಿ.ಪಿ	ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಹುತ್ರಿದುರ್ಗ ಹೋಬಳಿ, ನಿಟ್ಟೂರು ಗ್ರಾಮದ ಸ.ನಂ 10 ರ ಕೊರಮರಪಾಳ್ಯದ ಮದ್ದೂರಯ್ಯನವರ ಜಮೀನಿನಲ್ಲಿ ಚೆಕ್ ಡ್ಯಾಂ ನಿರ್ಮಾಣ.	10.00	10.00	34.61	ಕಾಮಗಾರಿ ಪೂರ್ಣಗೊಂಡಿದೆ		
7	2018–19	ತುಮಕೂರು	ಕುಣಿಗಲ್	4702– ಎಸ್. ಸಿ.ಪಿ	ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಹುತ್ರಿದುರ್ಗ ಹೋಬಳಿ, ಇಪ್ಪಾಡಿ ಗ್ರಾಮದ ಸ.ನಂ 282 ರ ಕಾಳಿತಿಮ್ಮಯ್ಯನ ಜಮೀನಿನಲ್ಲಿ ಚೆಕ್ ಡ್ಯಾಂ ನಿರ್ಮಾಣ	10.00	10.00				
8	2018–19	ತುಮಕೂರು	ಕುಣಿಗಲ್	4702– ಎಸ್. ಸಿ.ಪಿ	ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಹುಲಿಯೂರುದುರ್ಗ ಹೋಬಳಿ, ಹಿತ್ತಲಪುರ ಗ್ರಾಮದ ಸ.ನಂ 144/1 ರ ರಾಜಯ್ಯ ಬಿನ್ ಹಿಟ್ಟಮೇಥಯ್ಯನವರ ಜಮೀನಿನಲ್ಲಿ ಚೆಕ್ ಡ್ಯಾಂ ನಿರ್ಮಾಣ.	10.00	10.00				
9	2018–19	ತುಮಕೂರು	ಕುಣಿಗಲ್	4702– ಎಸ್. ಸಿ.ಪಿ	ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಹುಲಿಯೂರುದುರ್ಗ ಹೋಬಳಿ, ಎಲೆಕಡಕಲು ಗ್ರಾಮದ ಸ.ನಂ 50 ರ ವೈಕೆ ದೊಡ್ಡ ಬೋರಮಂಚಯ್ಯನವರ ಜಮೀನಿನಲ್ಲಿ ಚೆಕ್ ಡ್ಯಾಂ ನಿರ್ಮಾಣ.	10.00	10.00				
10	2018–19	ತುಮಕೂರು	ಕುಣಿಗಲ್	4702– ಎಸ್. ಸಿ.ಪಿ	ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಕಸಬಾ ಹೋಬಳಿ, ಗೋಕುಲ ಸ.ನಂ 12 ರ ಕಂಬಯ್ಯ ಬಿನ್ ಕಂಬಯ್ಯನವರ ಜಮೀನಿನಲ್ಲಿ ಚೆಕ್ ಡ್ಯಾಂ ನಿರ್ಮಾಣ.	10.00	10.00				
						235.00	**235.00**	**201.08**			

2019–20 ರಿಂದ 2020–21 ನೇ ಸಾಲಿನಲ್ಲಿ ಯಾವುದೇ ಚೆಕ್‌ಡ್ಯಾಂ ಕಾಮಗಾರಿಗಳು ಅನುಮೋದನೆಯಾಗಿರುವುದಿಲ್ಲ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 379
2. ಸದಸ್ಯರ ಹೆಸರು : ಡಾ॥ ರಂಗನಾಥ್ ಹೆಚ್.ಡಿ.
3. ಉತ್ತರಿಸಬೇಕಾದ ದಿನಾಂಕ : 14-12-2021

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಕುಣಿಗಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮಾರ್ಕೋನಹಳ್ಳಿ ಜಲಾಶಯ ಕೋಡಿ ಗೇಟ್‌ಗಳ ಬಳಿ ಎಫ್.ಆರ್.ಎಲ್ ಗಿಂತ 1.50 ಮೀ. ಕೆಳಮಟ್ಟದಲ್ಲಿ ಸಂಪರ್ಕ ಕಾಲುವೆ ನಿರ್ಮಿಸಿ ಹೆಚ್ಚುವರಿ ನೀರನ್ನು ಮಂಗಳಾ ಜಲಾಶಯಕ್ಕೆ ಹರಿಸಲು ಯೋಜನೆಯನ್ನು ರೂಪಿಸಲು ಸರ್ಕಾರ ಈವರೆವಿಗೂ ಕೈಗೊಂಡಿರುವ ಕ್ರಮಗಳೇನು;	ಮಾರ್ಕೋನಹಳ್ಳಿ ಜಲಾಶಯದ FRL 731.57 ಮೀ. ಇದ್ದು, ಮಂಗಳಾ ಜಲಾಶಯದ FRL 728.65 ಮೀ. ಆಗಿರುತ್ತದೆ. ಹೇಮಾವತಿ ಜಲಾಶಯದ ಕಾಲುವೆಗಳಾದ ತುಮಕೂರು ಶಾಖಾ ನಾಲೆ ಮತ್ತು ನಾಗಮಂಗಲ ಶಾಖಾ ನಾಲೆಗಳ ಮತ್ತು ಅವುಗಳ ವಿತರಣಾ ನಾಲೆಗಳ ಬೀಳು ನೀರು ಶಿಂಷಾ ಮತ್ತು ವೀರವೈಷ್ಣವಿ ನದಿ ಪಾತ್ರಗಳಿಗೆ ಹರಿದು ಬರುವ ಕಾರಣ ಮಾರ್ಕೋನಹಳ್ಳಿ ಜಲಾಶಯಕ್ಕೆ ನೀರಿನ ನಿರಂತರ ಒಳಹರಿವು ಇರುತ್ತದೆ. ಮಂಗಳಾ ಜಲಾಶಯಕ್ಕೆ ನೀರಿನ ಒಳಹರಿವು ಕಡಿಮೆಯಾಗಿರುವುದರಿಂದ ಈ ಜಲಾಶಯದ ಅಚ್ಚುಕಟ್ಟು ಭಾಗದ ರೈತರು ಹಾಗೂ ಜನಪ್ರತಿನಿಧಿಗಳು, ಮಾರ್ಕೋನಹಳ್ಳಿ ಜಲಾಶಯ ತುಂಬಿ ಕೋಡಿ ಮತ್ತು ಗೇಟ್‌ಗಳ ಮೂಲಕ ನದಿ ಪಾತ್ರಕ್ಕೆ ಹರಿದು ಹೋಗುವ ಹೆಚ್ಚುವರಿ ನೀರನ್ನು ಮಂಗಳಾ ಜಲಾಶಯಕ್ಕೆ ಹರಿಸಲು ಕೋರಿದ್ದು, ಮಾರ್ಕೋನಹಳ್ಳಿ ಜಲಾಶಯದ ಕೋಡಿ ಗೇಟ್‌ಗಳ ಬಳಿ ಎಫ್.ಆರ್.ಎಲ್. ಗಿಂತ 1.50 ಮೀ. ಕೆಳಮಟ್ಟದಲ್ಲಿ ಸಂಪರ್ಕ ಕಾಲುವೆಯನ್ನು ನಿರ್ಮಿಸಿ ಹೆಚ್ಚುವರಿ ನೀರನ್ನು ಮಂಗಳಾ ಜಲಾಶಯಕ್ಕೆ ಹರಿಸುವ ಯೋಜನೆಯ ಅಂದಾಜು ಪಟ್ಟಿಯನ್ನು ಕಾವೇರಿ ನೀರಾವರಿ ನಿಗಮದ ವತಿಯಿಂದ ತಯಾರಿಸಲಾಗುತ್ತಿದ್ದು, ನಿಗಮದ ಪರಿಶೀಲನೆಯಲ್ಲಿದೆ.
ಆ	ಸಂಪರ್ಕ ಕಾಲುವೆ ನಿರ್ಮಾಣಕ್ಕಾಗಿ ಅಂದಾಜುಪಟ್ಟಿ ತಯಾರಿಸಲಾಗಿದೆಯೇ;	
ಇ	ಸಂಪರ್ಕ ಕಾಲುವೆ ನಿರ್ಮಾಣ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು ಈ ಕಾಮಗಾರಿಗೆ ಅದಕ್ಕಿರುವ ಅನುದಾನವನ್ನು ಮೀಸಲಿರಿಸಲಾಗಿದೆಯೇ;	
ಈ	ಅನುದಾನ ಬಿಡುಗಡೆ ಯಾವಾಗ ಮಾಡಲಾಗುವುದು ?	

ಸಂಖ್ಯೆ:ಜಸಂಇ 185 ಎನ್‌ಎಲ್‌ಎ 2021

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	380
2.	ಮಾನ್ಯ ಸದಸ್ಯರ ಹೆಸರು	ಶ್ರೀ ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ)
3.	ಉತ್ತರಿಸಬೇಕಾದ ದಿನಾಂಕ	14/12/2021
4.	ಉತ್ತರಿಸುವವರು	ಮಾನ್ಯ ಕಾರ್ಮಿಕ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ವಿಜಯಪುರ ಜಿಲ್ಲೆಯಲ್ಲಿರುವ ಒಟ್ಟು ಕಟ್ಟಡ ಕಾರ್ಮಿಕರು ಸೇರಿದಂತೆ ಇತರ ಕಾರ್ಮಿಕರ ಸಂಖ್ಯೆ ಎಷ್ಟು;	ವಿಜಯಪುರ ಜಿಲ್ಲೆಯಲ್ಲಿ ಇತರ ಕಾರ್ಮಿಕರ ಸಂಖ್ಯೆಯನ್ನು ಅಂದಾಜಿಸಲು ಮಂಡಳಿಯಿಂದ ಯಾವುದೇ ಸಮೀಕ್ಷೆಯನ್ನು ನಡೆಸಲಾಗಿರುವುದಿಲ್ಲ. ಆದಾಗ್ಯೂ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ವಿಜಯಪುರ ಜಿಲ್ಲೆಯಲ್ಲಿ ಒಟ್ಟು 78,168 ಕಾರ್ಮಿಕರು ನೋಂದಣಿಯಾಗಿರುತ್ತಾರೆ.
ಆ)	ಈ ಕಾರ್ಮಿಕರಲ್ಲಿ ಲೇಬರ್ ಕಾರ್ಡ್ ಹೊಂದಿರುವವರ ಸಂಖ್ಯೆ ಎಷ್ಟು; ಕಳೆದ ಮೂರು ವರ್ಷಗಳಲ್ಲಿ ಲೇಬರ್ ಕಾರ್ಡ್ ಕೋರಿ ಬಂದಿರುವ ಅರ್ಜಿಗಳೆಷ್ಟು; ಅದರಲ್ಲಿ ವಿಲೇವಾರಿಯಾದ ಅರ್ಜಿಗಳೆಷ್ಟು; ಬಾಕಿ ಇರುವ ಅರ್ಜಿಗಳು ಎಷ್ಟು;	ನೋಂದಣಿಯಾದ ಎಲ್ಲಾ ಕಾರ್ಮಿಕರಿಗೆ ತಂತ್ರಾಂಶದ ಮೂಲಕ ಗುರುತಿನ ಚೀಟಿಯನ್ನು ನೀಡಲಾಗುತ್ತದೆ. ಕಳೆದ ಮೂರು ವರ್ಷಗಳಲ್ಲಿ ನೋಂದಣಿಗಾಗಿ ಕಾರ್ಮಿಕರಿಂದ ಸ್ವೀಕೃತಗೊಂಡಿರುವ, ಮಂಜೂರು ಮಾಡಲಾಗಿರುವ ಹಾಗೂ ವಿಲೇವಾರಿ ಮಾಡಲಾಗಿರುವ ಅರ್ಜಿಗಳ ಮಾಹಿತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.
ಇ)	ಕಾರ್ಮಿಕರ ಕಲ್ಯಾಣಕ್ಕಾಗಿ ಇರುವ ಸರ್ಕಾರದ ಯೋಜನೆಗಳಾವುವು; ಕಳೆದ ಮೂರು ವರ್ಷದಲ್ಲಿ ಇದರ ಪ್ರಯೋಜನ ಪಡೆದ ಫಲಾನುಭವಿಗಳು ಎಷ್ಟು;	ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನೋಂದಾಯಿತ ಫಲಾನುಭವಿಗಳು ಮತ್ತು ಅವರ ಅವಲಂಬಿತರಿಗೆ 19 ರೀತಿಯ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ನೀಡಲಾಗುತ್ತಿದ್ದು ವಿವರಗಳನ್ನು **ಅನುಬಂಧ-2ರಲ್ಲಿ** ಲಗತ್ತಿಸಿದೆ. ಈ ಸೌಲಭ್ಯಗಳಡಿ ಸಹಾಯಧನ ಪಡೆದ ಫಲಾನುಭವಿಗಳ ಸಂಖ್ಯೆ 4978.
ಈ)	ಕೋವಿಡ್ ಸಂದರ್ಭದಲ್ಲಿ ಕಾರ್ಮಿಕರಿಗೆ ಸರ್ಕಾರದಿಂದ ನೀಡಲಾದ ಸೌಲಭ್ಯಗಳಾವುವು; ನಾಗಠಾಣ ಮತಕ್ಷೇತ್ರಕ್ಕೆ ನೀಡಲಾದ ಫುಡ್‌ಕಿಟ್‌ಗಳ ಸಂಖ್ಯೆ ಎಷ್ಟು?	ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಕೋವಿಡ್-19ರ ಮೊದಲ ಅಲೆ ಮತ್ತು ಎರಡನೇ ಅಲೆಯ ಸಂದರ್ಭದಲ್ಲಿ ಸಂದರ್ಭದಲ್ಲಿ ಕೈಗೊಂಡ ಕ್ರಮಗಳು ಈ ಕೆಳಗಿನಂತಿವೆ. **ಮೊದಲನೇ ಅಲೆ** 1. ಮಾನ್ಯ ಮುಖ್ಯಮಂತ್ರಿಗಳ ಘೋಷಣೆಯಂತೆ 16,48,431 ಮಂಡಳಿಯ ಫಲಾನುಭವಿಗಳಿಗೆ ತಲಾ ರೂ.5,000/- ಗಳಂತೆ ಒಟ್ಟು ರೂ. 824.21ಕೋಟಿ ಸಹಾಯಧನವನ್ನು ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗಿರುತ್ತದೆ.

2. ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ 7.15 ಲಕ್ಷ ಆಹಾರ ಸಾಮಾಗ್ರಿಗಳ ಕಿಟ್ ಗಳನ್ನು ತಯಾರಿಸಿ ವಿತರಿಸಲಾಗಿರುತ್ತದೆ.
3. ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ ಲಾಕ್‌ಡೌನ್ ಅವಧಿಯಲ್ಲಿ 89.87 ಲಕ್ಷ ಸಿದ್ಧಪಡಿಸಿದ ಆಹಾರದ ಪ್ಯಾಕೆಟ್ ಗಳನ್ನು ವಿತರಿಸಲಾಗಿರುತ್ತದೆ.

ಎರಡನೇ ಅಲೆಯ ಸಂದರ್ಭದಲ್ಲಿ

1. ತಲಾ ರೂ.3,000/- ಗಳಂತೆ ಸುಮಾರು **19,02,018** ಕಾರ್ಮಿಕರಿಗೆ ಒಟ್ಟು ರೂ.**570.60** ಕೋಟಿ ಮೊತ್ತವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ (DBT) ಮೂಲಕ ಜಮಾ ಮಾಡಲಾಗಿದೆ. ಉಳಿದ ಫಲಾನುಭವಿಗಳಿಗೆ ಬ್ಯಾಂಕ್ ಖಾತೆಗೆ ರೂ. 3,000/- ಗಳನ್ನು ಜಮಾ ಮಾಡಲು ಕ್ರಮವಹಿಸಲಾಗುತ್ತಿದೆ.
2. ಮಂಡಳಿಯ ವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಆಹಾರ ಸಮಸ್ಯೆಯನ್ನು ನೀಗಿಸಲು ರಾಜ್ಯಾದ್ಯಂತ 23.42 ಲಕ್ಷ ಕಾರ್ಮಿಕರಿಗೆ ಆಹಾರ ಸಾಮಾಗ್ರಿಗಳ ಕಿಟ್‌ಗಳನ್ನು ವಿತರಿಸಲಾಗಿದೆ.
3. ಮಂಡಳಿಯ ವತಿಯಿಂದ ನೋಂದಾಯಿತ ಅಸಂಘಟಿತ ಕಾರ್ಮಿಕರ ಆಹಾರ ಸಮಸ್ಯೆಯನ್ನು ನೀಗಿಸಲು ರಾಜ್ಯಾದ್ಯಂತ 3.80 ಲಕ್ಷ ಕಾರ್ಮಿಕರಿಗೆ ಆಹಾರ ಸಾಮಾಗ್ರಿಗಳ ಕಿಟ್‌ಗಳನ್ನು ವಿತರಿಸಲಾಗಿದೆ.
4. ನೋಂದಾಯಿತ ಅರ್ಹ 21.07 ಲಕ್ಷ ಕಾರ್ಮಿಕರಿಗೆ ಸುರಕ್ಷತಾ ಮತ್ತು ನೈರ್ಮಲ್ಯ ಕಿಟ್‌ಗಳನ್ನು ವಿತರಿಸಲಾಗಿದೆ.

ನಾಗಠಾಣ ಮತ ಕ್ಷೇತ್ರಕ್ಕೆ 2ನೇ ಅಲೆಯ ಸಂದರ್ಭದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ 4000 ಫುಡ್‌ಕಿಟ್ ಮತ್ತು ಅಸಂಘಟಿತ ವಲಯದ ಕಾರ್ಮಿಕರಿಗೆ 350 ಫುಡ್‌ಕಿಟ್‌ಗಳನ್ನು ನೀಡಲಾಗಿದೆ.

ಕಾಇ 520 ಎಲ್‌ಇಟಿ 2021

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

ಅನುಬಂಧ-01

ವಿಜಯಪುರ ಜಿಲ್ಲೆಯಲ್ಲಿ ನೋಂದಣಿಗಾಗಿ ಸ್ವೀಕೃತವಾದ, ವಿಲೇವಾರಿಯಾದ ಮತ್ತು ಬಾಕಿ ಇರುವ ಅರ್ಜಿಗಳ ವಿವರ

	Financial Year	Received	Approved	Rejected	Pending	Total
ಬಸವನಬಾಗೇವಾಡಿ	2019-2020	1172	662	195	315	2344
	2020-2021	5722	4507	836	379	11444
	2021-2022	1632	1438	190	4	3264

	Financial Year	Received	Approved	Rejected	Pending	Total
ಬಿಜಾಪುರ	2019-2020	2551	1789	254	508	5102
	2020-2021	14002	12613	500	889	28004
	2021-2022	3968	3811	153	4	7936

	Financial Year	Received	Approved	Rejected	Pending	Total
ಇಂಡಿ	2019-2020	434	260	84	90	868
	2020-2021	3200	2124	757	319	6400
	2021-2022	958	774	176	8	1916

	Financial Year	Received	Approved	Rejected	Pending	Total
ಮುದ್ದೆಬಿಹಾಳ	2019-2020	663	361	169	133	1326
	2020-2021	11519	8499	483	2537	23038
	2021-2022	1779	1220	28	531	3558

	Financial Year	Received	Approved	Rejected	Pending	Total
ಸಿಂದಗಿ	2019-2020	372	152	106	114	744
	2020-2021	4871	3815	766	290	9742
	2021-2022	1972	1813	153	6	3944

ಅನುಬಂಧ-02

ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಸಿಗುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳು

1. **ಪಿಂಚಣಿ ಸೌಲಭ್ಯ:** ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆಮಾಸಿಕ ರೂ.2,000/-
2. **ಕುಟುಂಬ ಪಿಂಚಣಿ ಸೌಲಭ್ಯ:** ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ ರೂ.1000/-
3. **ದುರ್ಬಲತೆ ಪಿಂಚಣಿ:** ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃಅಂಗವಿಕಲತೆ ಹೊಂದಿದ್ದರೆ ಮಾಸಿಕ **ರೂ.2,000/-** ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ **ರೂ.2,00,000/-** ದವರೆಗೆಅನುಗ್ರಹ ರಾಶಿ ಸಹಾಯಧನ.
4. **ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ** ಮರುಪಾವತಿ ಸೌಲಭ್ಯ(ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)
5. **ಟ್ರೈನಿಂಗ್-ಕಮ್-ಟೂಲ್‌ಕಿಟ್‌ಸೌಲಭ್ಯ (ಶ್ರಮ ಸಾಮರ್ಥ್ಯ) : ರೂ.30,000/- ವರೆಗೆ**
6. **ಶ್ರಮ ಸಂಸಾರ ಸಾಮರ್ಥ್ಯತರಬೇತಿ ಸೌಲಭ್ಯ:** ನೋಂದಾಯಿತ ಫಲಾನುಭವಿಯಅವಲಂಭಿತರಿಗೆ(ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)
7. **ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ): ರೂ.2,00,000/-** ದವರೆಗೆ ಮುಂಗಡ ಸೌಲಭ್ಯ
8. **ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್):** ಮಹಿಳಾ ಫಲಾನುಭವಿಯ ಮೊದಲ ಎರಡು ಮಕ್ಕಳಿಗೆ ಹೆಣ್ಣು ಮಗುವಿನ ಜನನಕ್ಕೆರೂ. 30,000/- ಮತ್ತುಗಂಡು ಮಗುವಿನ ಜನನಕ್ಕೆರೂ.20,000/-
9. **ಶಿಶು ಪಾಲನಾ ಸೌಲಭ್ಯ:**
10. **ಅಂತ್ಯಕ್ರಿಯೆ ವೆಚ್ಚ : ರೂ.4,000/-** ಹಾಗೂ ಅನುಗ್ರಹ ರಾಶಿ **ರೂ.50,000/-**ಸಹಾಯಧನ
11. **ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ):** ಫಲಾನುಭವಿಯಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:

ಕ್ರ.ಸಂ	ತರಗತಿ (ಉತ್ತೀರ್ಣಕ್ಕೆ)	ವಾರ್ಷಿಕ ಸಹಾಯಧನ	
		ಗಂಡು	ಹೆಣ್ಣು
1.	ನರ್ಸರಿ	3,000	4,000
2.	1 ರಿಂದ 4ನೇ ತರಗತಿ	3,000	4,000
3.	5 ರಿಂದ 8ನೇ ತರಗತಿ	5,000	6,000
4.	9 ಹಾಗೂ 10ನೇ ತರಗತಿ	10,000	11,000
5.	ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ	10,000	14,000
6.	ಐಟಿಐ	12,000	15,000
7.	ಪದವಿ ಪ್ರತಿ ವರ್ಷಕ್ಕೆ	15,000	20,000
8.	ಸ್ನಾತಕೋತ್ತರ ಪದವಿ ಸೇರ್ಪಡೆಗೆ	20,000	20,000
	ಪ್ರತಿ ವರ್ಷಕ್ಕೆ	20,000	25,000
9.	ಇಂಜನಿಯರಿಂಗ್‌ಕೋರ್ಸ್ ಬಿಇ/ ಬಿ.ಟೆಕ್ ಸೇರ್ಪಡೆಗೆ	25,000	25,000
	ಪ್ರತಿ ವರ್ಷಕ್ಕೆ	25,000	30,000
10.	ವೈದ್ಯಕೀಯಕೋರ್ಸ್‌ಗೆ ಸೇರ್ಪಡೆಗೆ	30,000	30,000
	ಪ್ರತಿ ವರ್ಷಕ್ಕೆ	40,000	50,000
11.	ಡಿಪ್ಲೋಮಾ	15,000	20,000
12.	ಎಂ.ಟೆಕ್ / ಎಂ.ಇ	30,000	35,000

13.	ಎಂ.ಡಿ (ವೈದ್ಯಕೀಯ)	45,000	55,000
14.	ಪಿಹೆಚ್‌ಡಿ (ಪ್ರತಿ ವರ್ಷಕ್ಕೆ) ಗರಿಷ್ಠ ೦3 ವರ್ಷ	25,000	30,000

12. **ವೈದ್ಯಕೀಯ ಸಹಾಯಧನ (ಕಾರ್ಮಿಕಆರೋಗ್ಯ ಭಾಗ್ಯ):** ನೋಂದಾಯಿತ ಫಲಾನುಭವಿ ಹಾಗೂ ಅವರಅವಲಂಭಿತರಿಗೆ**ರೂ.300/- ರಿಂ**ದ**ರೂ.10,000/-ವರೆಗೆ**
13. **ಅಪಘಾತ ಪರಿಹಾರ:** ಮರಣ ಹೊಂದಿದ್ದಲ್ಲಿ**ರೂ.5,00,000/-**, ಸಂಪೂರ್ಣ ಶಾಶ್ವತದುರ್ಬಲತೆಯಾದಲ್ಲಿ **ರೂ.2,00,000/- ಮತ್ತು**ಭಾಗಶಃ ಶಾಶ್ವತದುರ್ಬಲತೆಯಾದಲ್ಲಿ **ರೂ.1,00,000/-**
14. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕಚಿಕಿತ್ಸಾ ಭಾಗ್ಯ):** ಹೃದ್ರೋಗ, ಕಿಡ್ನಿಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದತೊಂದರೆಗೆ ಸಂಬಂಧಿತಚಿಕಿತ್ಸೆ, ಮೂತ್ರ ಪಿಂಡದಲ್ಲಿನಕಲ್ಲುತೆಗೆಯುವಚಿಕಿತ್ಸೆ, ಮೆದುಳಿನ ರಕ್ತಸ್ರಾವದಚಿಕಿತ್ಸೆ, ಅಲ್ಸರ್‌ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತುಶಸ್ರ್ತಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್‌ಚಿಕಿತ್ಸೆ, ಇತರೆಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ **ರೂ.2,00,000/-**ವರೆಗೆ
15. **ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್):** ಫಲಾನುಭವಿ ಅಥವಾಅವರಇಬ್ಬರು ಮಕ್ಕಳ ಮದುವೆಗೆತಲಾ **ರೂ.50,000/-**
16. **ಫಲಾನುಭವಿಗಳ ಮಕ್ಕಳುಐಎಎಸ್ / ಕೆಎಎಸ್ ಪರೀಕ್ಷೆಗಳಲ್ಲಿ ಭಾಗವಹಿಸಲು ತರಭೇತಿ**
17. **ಬಿಎಂಟಿಸಿ ಬಸ್ ಪಾಸ್ ಸೌಲಭ್ಯ:** ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತ್‌ಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತಕಟ್ಟಡಕಾರ್ಮಿಕರಿಗೆ
18. **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ:** ರಾಜ್ಯದಾದ್ಯಂತ ವಿದ್ಯಾಭ್ಯಾಸದಲ್ಲಿತೊಡಗಿರುವ ನೋಂದಾಯಿತಕಾರ್ಮಿಕರಇಬ್ಬರು ಮಕ್ಕಳಿಗೆ (ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)
19. **ತಾಯಿ ಮಗು ಸಹಾಯ ಹಸ್ತ:** ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ**ರೂ.6,000/-** ಗಳ ಸಹಾಯಧನ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 381

ಸದಸ್ಯರ ಹೆಸರು : **ಶ್ರೀ ದೇವಾನಂದ್ ಫುಲಸಿಂಗ್ ಚವಾಣ್** (ನಾಗಠಾಣ)

ಉತ್ತರಿಸಬೇಕಾದ ದಿನಾಂಕ : 14.12.2021.

ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರಸ	ಪ್ರಶ್ನೆ	ಉತ್ತರ
ಅ	ನಾಗಠಾಣ ಮತಕ್ಷೇತ್ರ ವ್ಯಾಪ್ತಿಯ ನಗರ ಗ್ರಾಮಂತರ ಪ್ರದೇಶಗಳು ಸೇರಿದಂತೆ ಕ್ಷೇತ್ರಕ್ಕೆ ಹೊಂದಿಕೊಂಡಿರುವ ಮಹಾರಾಷ್ಟ್ರ ಗಡಿಭಾಗ ಪ್ರದೇಶಗಳಲ್ಲಿ ದಿನನಿತ್ಯ ಅಕ್ರಮ ಚಟುವಟಿಕೆಗಳು (ಅಕ್ರಮ ಮದ್ಯ ಮಾರಾಟ, ಶಸ್ತ್ರಾಸ್ತ್ರ, ಕಳ್ಳಸಾಗಾಣಿಕೆ ಮಾನವ ಕಳ್ಳ ಸಾಗಾಣಿಕೆ ಮಾವಾ ಹಾಗೂ ಗುಟಕ ತಯಾರಿಕೆ ಮತ್ತು ಮಾರಾಟ) ನಿರಂತರವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಅಕ್ರಮ ಚಟುವಟಿಕೆಗಳನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು; ಕಳೆದ ಮೂರು ವರ್ಷಗಳಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿದೆ.	ನಾಗಠಾಣ ಮತಕ್ಷೇತ್ರ ವ್ಯಾಪ್ತಿಯ ನಗರ ಗ್ರಾಮಾಂತರ ಪ್ರದೇಶಗಳು ಸೇರಿದಂತೆ ಕ್ಷೇತ್ರಕ್ಕೆ ಹೊಂದಿಕೊಂಡಿರುವ ಮಹಾರಾಷ್ಟ್ರ ಗಡಿಭಾಗ ಪ್ರದೇಶಗಳಲ್ಲಿ ದಿನನಿತ್ಯ ಅಕ್ರಮ ಚಟುವಟಿಕೆಗಳನ್ನು ಹತ್ತಿಕ್ಕಲು ಕಾನೂನಿನ ಅಡಿಯಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 2018 ರಿಂದ 2021 ಇಲ್ಲಿಯವರೆಗೆ ದಾಖಲಾದ ಅಕ್ರಮ ಮದ್ಯ ಮಾರಾಟ, ಆಯುಧ ಕಾಯ್ದೆ ಮತ್ತು ಕೊಪ್ಪಾ ಕಾಯ್ದೆ ಪ್ರಕರಣಗಳ ವರ್ಷವಾರು ವಿವರ ಕೆಳಗಿನಂತಿದೆ. (see table below) ದಾಖಲಾದ ಪ್ರಕರಣಗಳ ಮಾಹಿತಿಯನ್ನು **ಅನುಬಂಧದಲ್ಲಿ** ಲಗತ್ತಿಸಿದೆ.
ಆ	ಚಡಚಣ ತಾಲ್ಲೂಕಿನ ಭೀಮಾನದಿ ತೀರ ಪ್ರದೇಶದಲ್ಲಿ ನಿರಂತರವಾಗಿ ಅಕ್ರಮ ಮರಳು ಸಾಗಾಣಿಕೆ ನಡೆಯುತ್ತಿದ್ದು, ಇದನ್ನು ತಡೆಯಲು ಪೊಲೀಸ್ ಇಲಾಖೆ ಕೈಗೊಂಡ ಕ್ರಮಗಳೇನು; ಹಾಗೂ ಅಕ್ರಮ ಮರಳು ಗಣಿಗಾರಿಕೆಯಲ್ಲಿ ಇಲಾಖೆಯ ಅಧಿಕಾರಿಗಳು ಭಾಗಿಯಾಗಿರುವ ಕುರಿತು ಸಾಕ್ಷ್ಯಾಧಾರಗಳನ್ನು ಒದಗಿಸಿದ್ದರೂ ಸಹ ಇಲಾಖೆಯ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲು ವಿಳಂಬವಾಗಲು ಕಾರಣಗಳೇನು;	ಚಡಚಣ ತಾಲ್ಲೂಕಿನ ಭೀಮಾನದಿ ತೀರ ಪ್ರದೇಶದಲ್ಲಿ ಮರಳುಗಾರಿಕೆಯನ್ನು ಸಂಪೂರ್ಣವಾಗಿ ನಿಷೇಧ ಮಾಡಲಾಗಿದೆ. ಪ್ರಸ್ತುತ ಯಾವುದೇ ಅಕ್ರಮ ಮರಳುಗಾರಿಕೆ ನಡೆದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಶೀರ್ಷಿಕೆ	2018	2019	2020	2021 (02/12/21)
ಅಕ್ರಮ ಮದ್ಯ ಮಾರಾಟ ಪ್ರಕರಣಗಳು	20	21	31	45
ಆಯುಧ ಕಾಯ್ದೆ ಪ್ರಕರಣಗಳು	6	2	1	0
ಕೊಪ್ಪಾ ಕಾಯ್ದೆ	4	1	2	2
ಒಟ್ಟು	**30**	**24**	**34**	**47**

ಇ	ವಿಜಯಪುರ ಜಿಲ್ಲೆಯ ಪ್ರಮುಖ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಚಿಕ್ಕ ಮಕ್ಕಳನ್ನು ಕದ್ದು ಅವರಿಗೆ ಮತ್ತು ಬರುವ ಔಷಧ ನೀಡಿ ಬಿಕ್ಷಾಟನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು;	ಬಂದಿರುವುದಿಲ್ಲ ಆದಾಗ್ಯೂ ವಿಜಯಪುರ ಜಿಲ್ಲೆಯಲ್ಲಿ ಮಾನವ ಕಳ್ಳಸಾಗಾಣೆ ನಿಷೇಧ ಘಟಕ ಮತ್ತು ಮಕ್ಕಳ ಕಲ್ಯಾಣ ಸಮಿತಿಗಳನ್ನು ರಚಿಸಿ, ಈ ಬಗ್ಗೆ ನಿಗಾ ವಹಿಸಲಾಗಿದೆ. ಮುಂಜಾಗ್ರತೆಯಾಗಿ ಆಯಾ ಪೊಲೀಸ್ ಠಾಣೆಗಳ ವ್ಯಾಪ್ತಿಯ ನಗರ ಹಾಗೂ ಪಟ್ಟಣಗಳ ಶಾಲೆ ಮತ್ತು ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ ಮತ್ತು ಈ ರೀತಿಯ ಪ್ರಕರಣಗಳು ನಡೆಯದಂತೆ ಎಚ್ಚರಿಕೆ ವಹಿಸಲು ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.
ಈ	ವಿಜಯಪುರ ನಗರದ ಮಧ್ಯ ಭಾಗದಲ್ಲಿ ಹಾಯ್ದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 52ನ್ನು ಸಂಪರ್ಕಿಸುವ ಪ್ರಮುಖ ಸಂಪರ್ಕಗಳಲ್ಲಿ ಸಂಚಾರಿ ನಿಯಮ ಫಲಕಗಳು ರಸ್ತೆ ಸುರಕ್ಷತಾ ಕ್ರಮಗಳು ಹಾಗೂ ಸಿಗ್ನಲ್‌ಗಳನ್ನು ಅಳವಡಿಸದೇ ಇರುವುದರಿಂದ ಅಪಘಾತಗಳಾಗಿ ಪ್ರತಿನಿತ್ಯ ಸಾವು ನೋವುಗಳನ್ನು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ;	ಬಂದಿರುತ್ತದೆ. ರಸ್ತೆ ಅಪಘಾತಗಳನ್ನು ನಿಯಂತ್ರಿಸಲು ರಾಷ್ಟ್ರೀಯ ಹೆದ್ದಾರಿ 52 ಅನ್ನು ಸಂಪರ್ಕಿಸುವ ಪ್ರಮುಖ ಸಂಪರ್ಕಗಳಲ್ಲಿ ರಸ್ತೆ ಅಪಘಾತಗಳನ್ನು ಕಡಿಮೆ ಮಾಡಲು ಈ ಕೆಳಕಂಡಂತೆ ಕ್ರಮವನ್ನು ಕೈಗೊಳ್ಳಲಾಗಿರುತ್ತದೆ. 1. ರಾಷ್ಟ್ರೀಯ ಹೆದ್ದಾರಿ 52ರ ರಸ್ತೆಯಲ್ಲಿ ಕಾಮಗಾರಿ ನಡೆಯುತ್ತಿರುವುದರಿಂದ ಪ್ರತಿ ನಿತ್ಯ ಸುಗಮ ಸಂಚಾರ ಸಲುವಾಗಿ ಸಿಬ್ಬಂದಿಯವರನ್ನು ಕರ್ತವ್ಯಕ್ಕೆ ನೇಮಿಸಲಾಗುತ್ತಿದೆ. 2. ಸಾರ್ವಜನಿಕರಲ್ಲಿ ಸಂಚಾರ ರಸ್ತೆ ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸುವಂತೆ ಮೇಲಿಂದ ಮೇಲೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ. 3. ಅಪಘಾತವಾದ ಸಮಯದಲ್ಲಿ ಗೋಲ್ಡನ್ ಅವರ್ಸ್‌ನಲ್ಲಿ ಹೆದ್ದಾರಿ ಗಸ್ತು ವಾಹನಗಳ ಮತ್ತು ಆಂಬುಲೆನ್ಸ್ ಮೂಲಕ ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗುತ್ತಿದೆ 4. ಎನ್.ಹೆಚ್-52ನೇ ರಸ್ತೆಯಲ್ಲಿ ಸದ್ಯ ಕಾಮಗಾರಿ ನಡೆಯುತ್ತಿರುವುದರಿಂದ ಹೆದ್ದಾರಿ ಪ್ರಾಧಿಕಾರದೊಂದಿಗೆ, ರಸ್ತೆಯ ಕಾಮಗಾರಿಯನ್ನು ತುರ್ತಾಗಿ ಮುಕ್ತಾಯಗೊಳಿಸುವ ಸಲುವಾಗಿ ಪತ್ರ ವ್ಯವಹಾರವನ್ನು ಮಾಡಲಾಗಿರುತ್ತದೆ. 5. ಸಾರ್ವಜನಿಕರಲ್ಲಿ ಹೆಲ್ಮೆಟ್ ರಹಿತ ವಾಹನ ಚಾಲನೆ ಮಾಡದಂತೆ ತಮ್ಮ ಅಮೂಲ್ಯ ಜೀವವನ್ನು ಕಾಪಾಡಿ ಕೊಳ್ಳುವಂತೆ ಮತ್ತು ಸಂಚಾರಿ ನಿಯಮಗಳನ್ನು ಕಟ್ಟು ನಿಟ್ಟಾಗಿ ಪಾಲಿಸಲು ಪ್ರತಿ ವರ್ಷ ಆಚರಣೆ ಮಾಡುವ ರಸ್ತೆ ಸುರಕ್ಷತಾ ಸಪ್ತಾಹದಲ್ಲಿ ಸಾರ್ವಜನಿಕರಿಗೆ ತಿಳುವಳಿಕೆ ನೀಡಲಾಗುತ್ತದೆ.
ಉ	ಯಾವ ಕಾಲಮಿತಿಯಲ್ಲಿ ರಸ್ತೆ ಸುರಕ್ಷತಾ ಕ್ರಮಗಳನ್ನು ಅಳವಡಿಸಲಾಗುವುದು?	ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಡಿಯಲ್ಲಿ ರಾಷ್ಟ್ರೀಯ ಹೆದ್ದಾರಿ-52 ರ ರಸ್ತೆ ಕಾಮಗಾರಿಯು ಚಾಲನೆಯಲ್ಲಿದ್ದು, ಕಾಮಗಾರಿ ಮುಗಿದ ನಂತರ ಕೂಡಲೇ ರಸ್ತೆ ಸುರಕ್ಷತಾ ಕ್ರಮಗಳನ್ನು ಅಳವಡಿಸಲು ಅಗತ್ಯ ಕ್ರಮಕೈಗೊಳ್ಳಲಾಗುವುದು.

ಹೆಚ್‌ಡಿ 444 ಎಸ್‌ಎಸ್‌ಟಿ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಅನುಬಂಧ

ವರ್ಷ	ಶೀರ್ಷಿಕೆ	ಕ್ರಸ	ಪೊಲೀಸ್ ಠಾಣೆ	ಪ್ರಕರಣದ ಸಂಖ್ಯೆ ಮತ್ತು ಕಲಂ
2018	ಅಕ್ರಮ ಮದ್ಯ ಮಾರಾಟ ಪ್ರಕರಣಗಳು	1.	ವಿಜಯಪುರ ಗ್ರಾಮೀಣ ಪಿಎಸ್	59/2018 U/S 32,34 ಕೆ.ಇ.ಆಕ್ಟ
		2.	ವಿಜಯಪುರ ಗ್ರಾಮೀಣ ಪಿಎಸ್	108/2018 U/S 32,34 ಕೆ.ಇ.ಆಕ್ಟ
		3.	ವಿಜಯಪುರ ಗ್ರಾಮೀಣ ಪಿಎಸ್	109/2018 U/S 32,34 ಕೆ.ಇ.ಆಕ್ಟ
		4.	ವಿಜಯಪುರ ಗ್ರಾಮೀಣ ಪಿಎಸ್	110/2018 U/S 32,34 ಕೆ.ಇ.ಆಕ್ಟ
		5.	ವಿಜಯಪುರ ಗ್ರಾಮೀಣ ಪಿಎಸ್	111/2018 U/S 32,34 ಕೆ.ಇ.ಆಕ್ಟ
		6.	ವಿಜಯಪುರ ಗ್ರಾಮೀಣ ಪಿಎಸ್	118/2018 U/S 32,34 ಕೆ.ಇ.ಆಕ್ಟ
		7.	ವಿಜಯಪುರ ಗ್ರಾಮೀಣ ಪಿಎಸ್	199/2018 U/S 32,34 ಕೆ.ಇ.ಆಕ್ಟ
		8.	ವಿಜಯಪುರ ಗ್ರಾಮೀಣ ಪಿಎಸ್	200/2018 U/S 32,34 ಕೆ.ಇ.ಆಕ್ಟ
		9.	ವಿಜಯಪುರ ಗ್ರಾಮೀಣ ಪಿಎಸ್	214/2018 U/S 15(A)&32(3), ಕೆ.ಇ.ಆಕ್ಟ
		10.	ವಿಜಯಪುರ ಗ್ರಾಮೀಣ ಪಿಎಸ್	215/2018 U/S 15(A)&32(3), ಕೆ.ಇ.ಆಕ್ಟ
		11.	ವಿಜಯಪುರ ಗ್ರಾಮೀಣ ಪಿಎಸ್	216/2018 U/S 15(A) & 32(3 ಕೆ.ಇ.ಆಕ್ಟ
		12.	ಚಡಚಣ ಪೊಲೀಸ್ ಠಾಣೆ	43/2018 ಕಲಂ:32,34 ಕೆ.ಇ.ಆಕ್ಟ
		13.	ಚಡಚಣ ಪೊಲೀಸ್ ಠಾಣೆ	44/2018 ಕಲಂ:32(3),15(ಎ) ಕೆ.ಇ.ಆಕ್ಟ
		14.	ಚಡಚಣ ಪೊಲೀಸ್ ಠಾಣೆ	76/2018 ಕಲಂ:32,34 ಆಕ್ಟ
		15.	ಚಡಚಣ ಪೊಲೀಸ್ ಠಾಣೆ	77/2018 ಕಲಂ:32,34 ಆಕ್ಟ
		16.	ಚಡಚಣ ಪೊಲೀಸ್ ಠಾಣೆ	82/2018 ಕಲಂ:32,34 ಆಕ್ಟ
		17.	ಗೋಲಗುಮ್ಮಜ್ ಠಾಣೆ	09/2018 ಕಲಂ:32,34 ಆಕ್ಟ
		18.	ಗೋಲಗುಮ್ಮಜ್ ಠಾಣೆ	37/2018 ಕಲಂ:32,34 ಆಕ್ಟ
		19.	ಗೋಲಗುಮ್ಮಜ್ ಠಾಣೆ	51/2018 ಕಲಂ:32,34 ಆಕ್ಟ
		20.	ಆದರ್ಶನಗರ ಠಾಣೆ	28/2018 ಕಲಂ:32,34 ಆಕ್ಟ
2019	ಅಕ್ರಮ ಮದ್ಯ ಮಾರಾಟ ಪ್ರಕರಣಗಳು	1.	ವಿಜಯಪುರ ಗ್ರಾಮೀಣ ಪಿಎಸ್	25/2019 U/S 32,34 ಕೆ.ಇ.ಆಕ್ಟ
		2.	ವಿಜಯಪುರ ಗ್ರಾಮೀಣ ಪಿಎಸ್	68/2019 U/S 32,34 ಕೆ.ಇ.ಆಕ್ಟ
		3.	ವಿಜಯಪುರ ಗ್ರಾಮೀಣ ಪಿಎಸ್	73/2019 U/S 32,34 ಕೆ.ಇ.ಆಕ್ಟ
		4.	ವಿಜಯಪುರ ಗ್ರಾಮೀಣ ಪಿಎಸ್	118/2019 U/S 32,34 ಕೆ.ಇ.ಆಕ್ಟ
		5.	ವಿಜಯಪುರ ಗ್ರಾಮೀಣ ಪಿಎಸ್	201/2019 U/S 32,34 ಕೆ.ಇ.ಆಕ್ಟ
		6.	ವಿಜಯಪುರ ಗ್ರಾಮೀಣ ಪಿಎಸ್	235/2019 U/S 32,34 ಕೆ.ಇ.ಆಕ್ಟ
		7.	ವಿಜಯಪುರ ಗ್ರಾಮೀಣ ಪಿಎಸ್	236/2019 U/S 32,34 ಕೆ.ಇ.ಆಕ್ಟ
		8.	ಹೋರ್ತಿ ಪೊಲೀಸ್ ಠಾಣೆ	17/2019 U/S 32,34 ಕೆ.ಇ.ಆಕ್ಟ
		9.	ಹೋರ್ತಿ ಪೊಲೀಸ್ ಠಾಣೆ	105/2019 U/S 32,34 ಕೆ.ಇ.ಆಕ್ಟ
		10.	ಚಡಚಣ ಪೊಲೀಸ್ ಠಾಣೆ	05/2019 ಕಲಂ:32,34 ಕೆ.ಇ.ಆಕ್ಟ
		11.	ಚಡಚಣ ಪೊಲೀಸ್ ಠಾಣೆ	14/2019 ಕಲಂ:15(ಎ),32(3) ಕೆ.ಇ.ಆಕ್ಟ
		12.	ಚಡಚಣ ಪೊಲೀಸ್ ಠಾಣೆ	32/2019 ಕಲಂ:15(ಎ),32(3) ಕೆ.ಇ.ಆಕ್ಟ
		13.	ಚಡಚಣ ಪೊಲೀಸ್ ಠಾಣೆ	37/2019 ಕಲಂ:15(ಎ),32(3) ಕೆ.ಇ.ಆಕ್ಟ
		14.	ಚಡಚಣ ಪೊಲೀಸ್ ಠಾಣೆ	38/2019 ಕಲಂ:15(ಎ),32(3) ಕೆ.ಇ.ಆಕ್ಟ
		15.	ಚಡಚಣ ಪೊಲೀಸ್ ಠಾಣೆ	39/2019 ಕಲಂ:15(ಎ),32(3) ಕೆ.ಇ.ಆಕ್ಟ
		16.	ಚಡಚಣ ಪೊಲೀಸ್ ಠಾಣೆ	40/2019 ಕಲಂ:15(ಎ),32(3) ಕೆ.ಇ.ಆಕ್ಟ

		17.	ಚಡಚಣ ಪೊಲೀಸ್ ಠಾಣೆ	88/2019 ಕಲಂ:15(ಎ),32(3) ಕೆ.ಇ.ಆಕ್ಟ
		18.	ಚಡಚಣ ಪೊಲೀಸ್ ಠಾಣೆ	113/2019 ಕಲಂ:32,34 ಕೆ.ಇ.ಆಕ್ಟ
		19.	ಗೋಲಗುಮ್ಮಜ್ ಠಾಣೆ	75/2019 ಕಲಂ:32,34 ಕೆ.ಇ.ಆಕ್ಟ
		20.	ಗೋಲಗುಮ್ಮಜ್ ಠಾಣೆ	04/2019 ಕಲಂ:32,34 ಕೆ.ಇ.ಆಕ್ಟ
		21.	ಆದರ್ಶನಗರ ಠಾಣೆ	24/2019 ಕಲಂ:32,34 ಕೆ.ಇ.ಆಕ್ಟ
2020	ಅಕ್ರಮ ಮದ್ಯ ಮಾರಾಟ ಪ್ರಕರಣಗಳು	1.	ವಿಜಯಪುರ ಗ್ರಾಮೀಣ ಪಿಎಸ್	4/2020 U/S 15(A) & 32(3), ಕೆ.ಇ.ಆಕ್ಟ
		2.	ವಿಜಯಪುರ ಗ್ರಾಮೀಣ ಪಿಎಸ್	10/2020 U/S 15(A) & 32(3), ಕೆ.ಇ.ಆಕ್ಟ
		3.	ವಿಜಯಪುರ ಗ್ರಾಮೀಣ ಪಿಎಸ್	22/2020 U/S 15(A) & 32(3), ಕೆ.ಇ.ಆಕ್ಟ
		4.	ವಿಜಯಪುರ ಗ್ರಾಮೀಣ ಪಿಎಸ್	28/2020 U/S 15(A) & 32(3), ಕೆ.ಇ.ಆಕ್ಟ
		5.	ವಿಜಯಪುರ ಗ್ರಾಮೀಣ ಪಿಎಸ್	45/2020 U/S 15(A) & 32(3), ಕೆ.ಇ.ಆಕ್ಟ
		6.	ವಿಜಯಪುರ ಗ್ರಾಮೀಣ ಪಿಎಸ್	54/2020 U/S 15(A) & 32(3), ಕೆ.ಇ.ಆಕ್ಟ
		7.	ವಿಜಯಪುರ ಗ್ರಾಮೀಣ ಪಿಎಸ್	66/2020 U/S 15(A) & 32(3), ಕೆ.ಇ.ಆಕ್ಟ
		8.	ವಿಜಯಪುರ ಗ್ರಾಮೀಣ ಪಿಎಸ್	83/2020 U/S 15(A) & 32(3), ಕೆ.ಇ.ಆಕ್ಟ
		9.	ವಿಜಯಪುರ ಗ್ರಾಮೀಣ ಪಿಎಸ್	94/2020 U/S 32 34 ಕೆ.ಇ.ಆಕ್ಟ
		10.	ವಿಜಯಪುರ ಗ್ರಾಮೀಣ ಪಿಎಸ್	97/2020 U/S 328 188 IPC & 32 34 ಕೆ.ಇ.ಆಕ್ಟ
		11.	ವಿಜಯಪುರ ಗ್ರಾಮೀಣ ಪಿಎಸ್	99/2020 U/S 328 188 IPC & 32 34 ಕೆ.ಇ.ಆಕ್ಟ
		12.	ವಿಜಯಪುರ ಗ್ರಾಮೀಣ ಪಿಎಸ್	101 /2020 U/S 328 188 IPC & 32 34 ಕೆ.ಇ.ಆಕ್ಟ
		13.	ವಿಜಯಪುರ ಗ್ರಾಮೀಣ ಪಿಎಸ್	102/2020 U/S 328 188 IPC & 32 34 ಕೆ.ಇ.ಆಕ್ಟ
		14.	ವಿಜಯಪುರ ಗ್ರಾಮೀಣ ಪಿಎಸ್	114/2020 U/S 15(A) & 32(3), ಕೆ.ಇ.ಆಕ್ಟ
		15.	ವಿಜಯಪುರ ಗ್ರಾಮೀಣ ಪಿಎಸ್	123/2020 U/S 188 IPC 15(A) & 32(3), ಕೆ.ಇ.ಆಕ್ಟ
		16.	ವಿಜಯಪುರ ಗ್ರಾಮೀಣ ಪಿಎಸ್	133/2020 U/S 15(A) & 32(3), ಕೆ.ಇ.ಆಕ್ಟ
		17.	ವಿಜಯಪುರ ಗ್ರಾಮೀಣ ಪಿಎಸ್	154/2020 U/S 15(A) & 32(3), ಕೆ.ಇ.ಆಕ್ಟ
		18.	ವಿಜಯಪುರ ಗ್ರಾಮೀಣ ಪಿಎಸ್	158/2020 U/S 15(A) & 32(3 ಕೆ.ಇ.ಆಕ್ಟ
		19.	ಹೊರ್ತಿ ಪೊಲೀಸ್ ಠಾಣೆ	35/2021 U/S 32,34 ಕೆ.ಇ.ಆಕ್ಟ
		20.	ಚಡಚಣ ಪೊಲೀಸ್ ಠಾಣೆ	02/2020 ಕಲಂ:32,34 ಕೆ.ಇ.ಆಕ್ಟ
		21.	ಚಡಚಣ ಪೊಲೀಸ್ ಠಾಣೆ	38/2020 ಕಲಂ: 15(ಎ),32(3) ಕೆ.ಇ.ಆಕ್ಟ
		22.	ಚಡಚಣ ಪೊಲೀಸ್ ಠಾಣೆ	43/2020 ಕಲಂ: 15(ಎ),32(3) ಕೆ.ಇ.ಆಕ್ಟ
		23.	ಚಡಚಣ ಪೊಲೀಸ್ ಠಾಣೆ	49/2020 ಕಲಂ: 15(ಎ),32(3) ಕೆ.ಇ.ಆಕ್ಟ
		24.	ಚಡಚಣ ಪೊಲೀಸ್ ಠಾಣೆ	53/2020 ಕಲಂ: 15(ಎ),32(3) ಕೆ.ಇ.ಆಕ್ಟ
		25.	ಚಡಚಣ ಪೊಲೀಸ್ ಠಾಣೆ	54/2020 ಕಲಂ: 15(ಎ),32(3) ಕೆ.ಇ.ಆಕ್ಟ
		26.	ಚಡಚಣ ಪೊಲೀಸ್ ಠಾಣೆ	55/2020 ಕಲಂ: 15(ಎ),32(3) ಕೆ.ಇ.ಆಕ್ಟ
		27.	ಚಡಚಣ ಪೊಲೀಸ್ ಠಾಣೆ	56/2020 ಕಲಂ: 15(ಎ),32(3) ಕೆ.ಇ.ಆಕ್ಟ
		28.	ಚಡಚಣ ಪೊಲೀಸ್ ಠಾಣೆ	77/2020 ಕಲಂ: 32.38(ಎ) ಕೆ.ಇ.ಆಕ್ಟ
		29.	ಚಡಚಣ ಪೊಲೀಸ್ ಠಾಣೆ	79/2020 ಕಲಂ: 15(ಎ),32(3) ಕೆ.ಇ.ಆಕ್ಟ
		30.	ಚಡಚಣ ಪೊಲೀಸ್ ಠಾಣೆ	85/2020 ಕಲಂ: 15(ಎ),32(3) ಕೆ.ಇ.ಆಕ್ಟ
		31.	ಚಡಚಣ ಪೊಲೀಸ್ ಠಾಣೆ	38/2020 ಕಲಂ: 15(ಎ),32(3) ಕೆ.ಇ.ಆಕ್ಟ

2021	ಅಕ್ರಮ ಮದ್ಯ ಮಾರಾಟ ಪ್ರಕರಣಗಳು	1	ವಿಜಯಪುರ ಗ್ರಾಮೀಣ ಪಿಎಸ್	50/2021 U/S 15(A) & 32(3), ಕೆ.ಇ.ಆಕ್ಟ
		2	ವಿಜಯಪುರ ಗ್ರಾಮೀಣ ಪಿಎಸ್	63/2021 U/S 15(A) & 32(3), ಕೆ.ಇ.ಆಕ್ಟ
		3	ವಿಜಯಪುರ ಗ್ರಾಮೀಣ ಪಿಎಸ್	64/2021 U/S 15(A) & 32(3), ಕೆ.ಇ.ಆಕ್ಟ
		4	ವಿಜಯಪುರ ಗ್ರಾಮೀಣ ಪಿಎಸ್	65/2021 U/S 15(A) & 32(3), ಕೆ.ಇ.ಆಕ್ಟ
		5	ವಿಜಯಪುರ ಗ್ರಾಮೀಣ ಪಿಎಸ್	84/2021 U/S 15(A) & 32(3), ಕೆ.ಇ.ಆಕ್ಟ
		6	ವಿಜಯಪುರ ಗ್ರಾಮೀಣ ಪಿಎಸ್	85/2021 U/S 15(A) & 32(3), ಕೆ.ಇ.ಆಕ್ಟ
		7	ವಿಜಯಪುರ ಗ್ರಾಮೀಣ ಪಿಎಸ್	92/2021 U/S 15(A) & 32(3), ಕೆ.ಇ.ಆಕ್ಟ
		8	ವಿಜಯಪುರ ಗ್ರಾಮೀಣ ಪಿಎಸ್	94/2021 U/S 15(A) & 32(3), ಕೆ.ಇ.ಆಕ್ಟ
		9	ವಿಜಯಪುರ ಗ್ರಾಮೀಣ ಪಿಎಸ್	125/2021 U/S 188 269 IPC 15(A) & 32(3), ಕೆ.ಇ.ಆಕ್ಟ
		10	ವಿಜಯಪುರ ಗ್ರಾಮೀಣ ಪಿಎಸ್	10] 127/2021 U/S 188 269 IPC 15(A) & 32 34 ಕೆ.ಇ.ಆಕ್ಟ
		11	ವಿಜಯಪುರ ಗ್ರಾಮೀಣ ಪಿಎಸ್	140/2021 U/S 188 269 IPC 15(A) & 32 34 ಕೆ.ಇ.ಆಕ್ಟ
		12	ವಿಜಯಪುರ ಗ್ರಾಮೀಣ ಪಿಎಸ್	142/2021 U/S 188 269 IPC 15(A) & 32 34 ಕೆ.ಇ.ಆಕ್ಟ
		13	ವಿಜಯಪುರ ಗ್ರಾಮೀಣ ಪಿಎಸ್	165/2021 U/S 32,34 ಕೆ.ಇ.ಆಕ್ಟ
		14	ವಿಜಯಪುರ ಗ್ರಾಮೀಣ ಪಿಎಸ್	203/2021 U/S 15(A) & 32(3), ಕೆ.ಇ.ಆಕ್ಟ
		15	ವಿಜಯಪುರ ಗ್ರಾಮೀಣ ಪಿಎಸ್	204/2021 U/S 15(A) & 32(3 ಕೆ.ಇ.ಆಕ್ಟ
		16	ವಿಜಯಪುರ ಗ್ರಾಮೀಣ ಪಿಎಸ್	205/2021 U/S 15(A) & 32(3), ಕೆ.ಇ.ಆಕ್ಟ
		17	ವಿಜಯಪುರ ಗ್ರಾಮೀಣ ಪಿಎಸ್	213/2021 U/S 15(A) & 32(3), ಕೆ.ಇ.ಆಕ್ಟ
		18	ವಿಜಯಪುರ ಗ್ರಾಮೀಣ ಪಿಎಸ್	219/2021 U/S 15(A) & 32(3), ಕೆ.ಇ.ಆಕ್ಟ
		19	ವಿಜಯಪುರ ಗ್ರಾಮೀಣ ಪಿಎಸ್	225/2021 U/S 32,34 ಕೆ.ಇ.ಆಕ್ಟ
		20	ವಿಜಯಪುರ ಗ್ರಾಮೀಣ ಪಿಎಸ್	226/2021 U/S 15(A) & 32(3), ಕೆ.ಇ.ಆಕ್ಟ
		21	ವಿಜಯಪುರ ಗ್ರಾಮೀಣ ಪಿಎಸ್	227/2021 U/S 15(A) & 32(3), ಕೆ.ಇ.ಆಕ್ಟ
		22	ವಿಜಯಪುರ ಗ್ರಾಮೀಣ ಪಿಎಸ್	228/2021 U/S 15(A) & 32(3), ಕೆ.ಇ.ಆಕ್ಟ
		23	ವಿಜಯಪುರ ಗ್ರಾಮೀಣ ಪಿಎಸ್	229/2021 U/S 15(A) & 32(3), ಕೆ.ಇ.ಆಕ್ಟ
		24	ವಿಜಯಪುರ ಗ್ರಾಮೀಣ ಪಿಎಸ್	245/2021 U/S 32(3), ಕೆ.ಇ.ಆಕ್ಟ
		25	ವಿಜಯಪುರ ಗ್ರಾಮೀಣ ಪಿಎಸ್	287/2021 U/S 15(A) & 32(3), ಕೆ.ಇ.ಆಕ್ಟ
		26	ವಿಜಯಪುರ ಗ್ರಾಮೀಣ ಪಿಎಸ್	288/2021 U/S 15(A) & 32(3), ಕೆ.ಇ.ಆಕ್ಟ
		27	ವಿಜಯಪುರ ಗ್ರಾಮೀಣ ಪಿಎಸ್	289/2021 U/S 15(A) & 32(3), ಕೆ.ಇ.ಆಕ್ಟ
		28	ವಿಜಯಪುರ ಗ್ರಾಮೀಣ ಪಿಎಸ್	297/2021 U/S 32,34 ಕೆ.ಇ.ಆಕ್ಟ
		29	ವಿಜಯಪುರ ಗ್ರಾಮೀಣ ಪಿಎಸ್	319/2021 U/s 15(A) & 32(3), K E ACT
		30	ಚಡಚಣ ಪೊಲೀಸ್ ಠಾಣೆ	04/2021 ಕಲಂ: 32(3),38(ಎ) ಕೆ.ಇ.ಆಕ್ಟ
		31	ಚಡಚಣ ಪೊಲೀಸ್ ಠಾಣೆ	18/2021 ಕಲಂ: 15(ಎ),32(3) ಕೆ.ಇ.ಆಕ್ಟ
		32	ಚಡಚಣ ಪೊಲೀಸ್ ಠಾಣೆ	23/2021 ಕಲಂ: 38(ಎ),32(3) ಕೆ.ಇ.ಆಕ್ಟ
		33	ಚಡಚಣ ಪೊಲೀಸ್ ಠಾಣೆ	28/2021 ಕಲಂ: 15(ಎ),32(3) ಕೆ.ಇ.ಆಕ್ಟ
		34	ಚಡಚಣ ಪೊಲೀಸ್ ಠಾಣೆ	33/2021 ಕಲಂ: 15(ಎ),32(3) ಕೆ.ಇ.ಆಕ್ಟ
		35	ಚಡಚಣ ಪೊಲೀಸ್ ಠಾಣೆ	44/2021 ಕಲಂ: 15(ಎ),32(3) ಕೆ.ಇ.ಆಕ್ಟ

		36	ಚಡಚಣ ಪೊಲೀಸ್ ಠಾಣೆ	59/2021 ಕಲಂ: 15(ಎ),32(3) ಕೆ.ಇ.ಆಕ್ಟ
		37	ಚಡಚಣ ಪೊಲೀಸ್ ಠಾಣೆ	66/2021 ಕಲಂ: 15(ಎ),32(3) ಕೆ.ಇ.ಆಕ್ಟ
		38	ಚಡಚಣ ಪೊಲೀಸ್ ಠಾಣೆ	90/2021 ಕಲಂ: 32,34 ಕೆ.ಇ.ಆಕ್ಟ
		39	ಚಡಚಣ ಪೊಲೀಸ್ ಠಾಣೆ	91/2021 ಕಲಂ: 15(ಎ),32(3) ಕೆ.ಇ.ಆಕ್ಟ
		40	ಚಡಚಣ ಪೊಲೀಸ್ ಠಾಣೆ	92/2021 ಕಲಂ: 32,34 ಕೆ.ಇ.ಆಕ್ಟ
		41	ಚಡಚಣ ಪೊಲೀಸ್ ಠಾಣೆ	96/2021 ಕಲಂ: 32,34 ಕೆ.ಇ.ಆಕ್ಟ
		42	ಚಡಚಣ ಪೊಲೀಸ್ ಠಾಣೆ	97/2021 ಕಲಂ: 32,34 ಕೆ.ಇ.ಆಕ್ಟ
		43	ಚಡಚಣ ಪೊಲೀಸ್ ಠಾಣೆ	98/2021 ಕಲಂ: 32,34 ಕೆ.ಇ.ಆಕ್ಟ
		44	ಆದರ್ಶನಗರ ಠಾಣೆ	79/2021 ಕಲಂ: 32, (3) 15(ಎ) ಕೆಇ ಆಕ್ಟ್
		45	ಎಪಿಎಮ್‌ಸಿ ಠಾಣೆ	40/2021 ಕಲಂ: 188, 269, 328 ಐಪಿಸಿ & 32, 34 ಕೆಇ ಆಕ್ಟ್
2018	ಆಯುಧ ಕಾಯ್ದೆ	1.	ಚಡಚಣ ಪೊಲೀಸ್ ಠಾಣೆ	ಗುನ್ನಾನಂ: 50/2018 ಕಲಂ: 307, 332, 333, 353 ಐಪಿಸಿ & 25, 27 ಭಾರತೀಯ ಆಯುಧ ಕಾಯಿದೆ
		2.	ಚಡಚಣ ಪೊಲೀಸ್ ಠಾಣೆ	ಗುನ್ನೆ ನಂ: 71/2018 ಕಲಂ: 25(1) (a), 25(1-B)(a), 25(1-B), (C), 29(a), 29(b) ಭಾರತೀಯ ಆಯುಧ ಕಾಯಿದೆ
		3.	ಚಡಚಣ ಪೊಲೀಸ್ ಠಾಣೆ	ಗುನ್ನೆ ನಂ: 103/2018 ಕಲಂ: 25(1)(ಬಿ) ಭಾರತೀಯ ಆಯುಧ ಕಾಯಿದೆ
		4.	ಚಡಚಣ ಪೊಲೀಸ್ ಠಾಣೆ	ಗುನ್ನೆ ನಂ: 118/2018 ಕಲಂ: 25(1)(a), 25(1-B)(a), 25(1-B)(C), 29(a), 29(b) ಭಾರತೀಯ ಆಯುಧ ಕಾಯಿದೆ
		5.	ಚಡಚಣ ಪೊಲೀಸ್ ಠಾಣೆ	ಗುನ್ನೆ ನಂ: 119/2018 ಕಲಂ: 25(1)(a), 25(1-B)(a), 25(1-B)(C), 29(a), 29(b) ಭಾರತೀಯ ಆಯುಧ ಕಾಯಿದೆ
		6.	ಚಡಚಣ ಪೊಲೀಸ್ ಠಾಣೆ	ಗುನ್ನೆ.ನಂ: 110/2019 ಕಲಂ: 25[1B][a] 27[1], 30 ಭಾರತೀಯ ಆಯುಧ ಕಾಯಿದೆ
2019	ಆಯುಧ ಕಾಯ್ದೆ	1.	ಚಡಚಣ ಪೊಲೀಸ್ ಠಾಣೆ	ಗುನ್ನೆ.ನಂ: 110/2019 ಕಲಂ: 25[1B][a] 27[1], 30 ಭಾರತೀಯ ಆಯುಧ ಕಾಯಿದೆ
		2.	ಚಡಚಣ ಪೊಲೀಸ್ ಠಾಣೆ	ಗುನ್ನೆ.ನಂ: 110/2019 ಕಲಂ: 25[1B][a] 27[1], 30 ಭಾರತೀಯ ಆಯುಧ ಕಾಯಿದೆ
2020	ಆಯುಧ ಕಾಯ್ದೆ	1.	ವಿಜಯಪುರ ಗ್ರಾಮೀಣ ಪಿಎಸ್	323/2020 U/s ಭಾರತೀಯ ಆಯುಧ ಕಾಯಿದೆ
2021	ಆಯುಧ ಕಾಯ್ದೆ	1.	NIL	----
2018	ಕೊಪ್ಪಾ ಕಾಯ್ದೆ	1.	ಚಡಚಣ ಪೊಲೀಸ್ ಠಾಣೆ	140/2018 ಕಲಂ:272, 273 ಐಪಿಸಿ ಮತ್ತು 20(2), 24 ಕೊಪ್ಪಾ ಆಕ್ಟ
		2.	ಚಡಚಣ ಪೊಲೀಸ್ ಠಾಣೆ	146/2018 ಕಲಂ:272,273 ಐಪಿಸಿ ಮತ್ತು 20(2), 24 ಕೊಪ್ಪಾ ಆಕ್ಟ
		3.	ಚಡಚಣ ಪೊಲೀಸ್ ಠಾಣೆ	147/2018 ಕಲಂ:272,273 ಐಪಿಸಿ ಮತ್ತು

				20(2), 24 ಕೊಪ್ಟಾ ಆಕ್ಟ
		4.	ಚಡಚಣ ಪೊಲೀಸ್ ಠಾಣೆ	149/2018 ಕಲಂ:272,273 ಐಪಿಸಿ ಮತ್ತು 20(2), 24 ಕೊಪ್ಟಾ ಆಕ್ಟ
2019	ಕೊಪ್ಟಾ ಕಾಯ್ದೆ	1.	ಚಡಚಣ ಪೊಲೀಸ್ ಠಾಣೆ	72/2019 ಕಲಂ:272,273 ಐಪಿಸಿ ಮತ್ತು 20(2), 24 ಕೊಪ್ಟಾ ಆಕ್ಟ
2020	ಕೊಪ್ಟಾ ಕಾಯ್ದೆ	1.	ಚಡಚಣ ಪೊಲೀಸ್ ಠಾಣೆ	64/2020 ಕಲಂ:272,273 ಐಪಿಸಿ ಮತ್ತು 20(2), 24 ಕೊಪ್ಟಾ ಆಕ್ಟ
		2.	ಚಡಚಣ ಪೊಲೀಸ್ ಠಾಣೆ	66/2020 ಕಲಂ:272,273 ಐಪಿಸಿ ಮತ್ತು 20(2),24 ಕೊಪ್ಟಾ ಆಕ್ಟ
2021	ಕೊಪ್ಟಾ ಕಾಯ್ದೆ	1.	ಚಡಚಣ ಪೊಲೀಸ್ ಠಾಣೆ	09/2021 ಕಲಂ:272,273 ಐಪಿಸಿ ಮತ್ತು 20(2),24 ಕೊಪ್ಟಾ ಆಕ್ಟ
		2.	ಚಡಚಣ ಪೊಲೀಸ್ ಠಾಣೆ	25/2021, ಕಲಂ:272,273 ಐಪಿಸಿ ಮತ್ತು 20(2),24 ಕೊಪ್ಟಾ ಆಕ್ಟ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.	382
ಮಾನ್ಯ ಸದಸ್ಯರ ಹೆಸರು	ಶ್ರೀ ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ)
ಉತ್ತರಿಸಬೇಕಾದ ದಿನಾಂಕ	14-12-2021
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿರುವ ಒಟ್ಟು ಬಾರ್ & ರೆಸ್ಟೋರೆಂಟ್‌ಗಳು ಮತ್ತು ವೈನ್ ಸ್ಟೋರ್‌ಗಳು ಹಾಗೂ ಎಂ.ಎಸ್.ಐ.ಎಲ್ ಮಳಿಗೆಗಳ ಸಂಖ್ಯೆ ಎಷ್ಟು; (ವಿವರವಾದ ಮಾಹಿತಿಯನ್ನು ನೀಡುವುದು)	ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿರುವ ಬಾರ್ & ರೆಸ್ಟೋರೆಂಟ್‌ಗಳು, ವೈನ್ ಸ್ಟೋರ್‌ಗಳು ಹಾಗೂ ಎಂ.ಎಸ್.ಐ.ಎಲ್ ಮಳಿಗೆಗಳ ಸಂಖ್ಯೆ ಕೆಳಕಂಡಂತಿದೆ. ವಿವರವನ್ನು ಅನುಬಂಧದಲ್ಲಿ ಇರಿಸಿದೆ.

ಸನ್ನದಿನ ವಿಧ	ಸಂಖ್ಯೆ
ಸಿಎಲ್-2	11
ಸಿಎಲ್-4	1
ಸಿಎಲ್-7	5
ಸಿಎಲ್-9	0
ಸಿಎಲ್-11(ಸಿ)	8
ವೈನ್ ಬೋಟಿಕ್	1
ಒಟ್ಟು	**26**

೯೩)	ಹೊಸ ಬಾರ್ & ರೆಸ್ಟೋರೆಂಟ್/ ವೈನ್‌ಸ್ಟೋರ್ ಮತ್ತು ಎಂ.ಎಸ್.ಐ.ಎಲ್‌ಗಳನ್ನು ತೆರೆಯಲು ಅನುಮತಿ ನೀಡುವ ಪೂರ್ವದಲ್ಲಿ ಇಲಾಖೆಯು ಅನುಸರಿಸುವ ಮಾರ್ಗಸೂಚಿಗಳೇನು? (ಮಾರ್ಗಸೂಚಿಗಳ ಪ್ರತಿ ನೀಡುವುದು)	1992ನೇ ಸಾಲಿನಿಂದ ಹೊಸದಾಗಿ ಸಿಎಲ್-2, ಸಿಎಲ್-9 ಸನ್ನದನ್ನು ನೀಡಲು ನಿರ್ಬಂಧವಿರುವುದರಿಂದ ಅಬಕಾರಿ ಇಲಾಖೆಯಿಂದ ಯಾವುದೇ ಹೊಸ ಸಿಎಲ್-2 ಮತ್ತು ಸಿಎಲ್-9 ಸನ್ನದಿಗೆ ಮಂಜೂರಾತಿ ನೀಡಲಾಗುತ್ತಿಲ್ಲ. ರಾಜ್ಯದಲ್ಲಿ ಎಂ.ಎಸ್.ಐ.ಎಲ್ ಸನ್ನದುಗಳನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾರ್ಗಸೂಚಿಗಳು ಕೆಳಕಂಡಂತಿವೆ: ಎಂ.ಎಸ್.ಐ.ಎಲ್ ಮಳಿಗೆಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ-3(11-ಸಿ), 8, 8(ಎ) ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5ರ ಪ್ರಕಾರ ನಿಬಂಧನೆಗಳನ್ನು ಪಾಲಿಸಿ ಮಂಜೂರು ಮಾಡಲು ಪೂರ್ವಾನುಮತಿ ನೀಡಲಾಗುವುದು. ಸರ್ಕಾರದ ಪತ್ರ ಸಂಖ್ಯೆ:ಎಫ್‌ಡಿ 07 ಇಎಫ್‌ಎಲ್ 2008 ದಿನಾಂಕ: 03.07.2009 ರಲ್ಲಿ ಪ್ರತಿ ತಾಲ್ಲೂಕಿಗೆ ಕನಿಷ್ಟ 2 ರಂತೆ 352 ಸನ್ನದುಗಳು, ಜಿಲ್ಲಾ ಕೇಂದ್ರಸ್ಥಾನಕ್ಕೆ 2 ರಂತೆ 58 ಸನ್ನದುಗಳು ಹಾಗೂ ಎಂಎಸ್‌ಐಎಲ್ ಸಂಸ್ಥೆ ಪ್ರಾದೇಶಿಕ ಬೇಡಿಕೆ ಅಧ್ಯಯನ ಆಧರಿಸಿ ಕೋರಿಕೆ ಸಲ್ಲಿಸುವ ಸ್ಥಳಗಳಿಗೆ 53 ಸನ್ನದುಗಳಂತೆ ಒಟ್ಟು 463 ಸನ್ನದುಗಳನ್ನು ಹಂಚಿಕೆ ಮಾಡಲಾಗಿದೆ. ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 15 ಇಎಫ್‌ಎಲ್ 2015 ದಿ:23.09.2016 ರಲ್ಲಿ ಕೆಳಕಂಡ ಷರತ್ತುಗಳ ಮೇಲೆ ಎಂ.ಎಸ್.ಐ.ಎಲ್ ಸಂಸ್ಥೆಗೆ ಒಟ್ಟು 900 ಸನ್ನದುಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಲು ಅನುಮೋದನೆ ನೀಡಲಾಗಿದೆ. i. ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು. ii. ಈ ರೀತಿ ಗುರುತಿಸುವ ಸ್ಥಳಗಳು ಸರ್ಕಾರವು ತಿಳಿಸಿರುವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲೇ ಇರಬೇಕು ಹಾಗೂ ನಿಗದಿಪಡಿಸಿರುವ ಸಂಖ್ಯೆಯ

		3. ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಅಬಕಾರಿ ಇಲಾಖೆಗೆ ಸಲ್ಲಿಸಿದ ನಂತರ ಅಂತಹ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ ೫ ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೆ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳತಕ್ಕದ್ದು. ಸರ್ಕಾರದ ಸುತ್ತೋಲೆ ಸಂಖ್ಯೆ: ಎಫ್‌ಡಿ 65 ಇಡಬ್ಲ್ಯೂಪಿ 2020, ದಿನಾಂಕ: 09-10-2020ರನ್ವಯ ವಿಧಿಸಿರುವ ಈ ಕೆಳಕಂಡ ಷರತ್ತುಗಳನ್ನು ದೃಢೀಕರಿಸಿಯೇ ಪ್ರಸ್ತಾವನೆಗಳನ್ನು ಸಲ್ಲಿಸಬೇಕಾಗಿ ಸರ್ಕಾರವು ಸೂಚಿಸಿರುತ್ತದೆ. 1. ಎಂ.ಎಸ್.ಐ.ಎಲ್ ಸಂಸ್ಥೆಯು ಸಿಎಲ್-11ಸಿ ಸನ್ನದಿಗಾಗಿ ಅರ್ಜಿಯನ್ನು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 2ರನ್ವಯ ಮತ್ತು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ ೪(೧)(ಬಿ)ರ ನಮೂನೆ ಸಿಎಲ್-೧ಎ ರಲ್ಲಿಯೇ ಸಲ್ಲಿಸತಕ್ಕದ್ದು. 2. ಎಂ.ಎಸ್.ಐ.ಎಲ್ ಸಂಸ್ಥೆಯ ವತಿಯಿಂದ ಸಿಎಲ್-11 ಸಿ ಸನ್ನದಿಗಾಗಿ ಅರ್ಜಿ ಸಲ್ಲಿಸುವ ವ್ಯಕ್ತಿಯು ಎಂ.ಎಸ್ .ಐ.ಎಲ್ ಸಂಸ್ಥೆಯ ನಿರ್ದೇಶಕ ಮಂಡಳಿಯಿಂದ ಅಧಿಕರಿಸಲ್ಪಟ್ಟಿರತಕ್ಕದ್ದು ಮತ್ತು ಅರ್ಜಿಯನ್ನು ನಮೂನೆ-ಸಿಎಲ್-1ಎರಲ್ಲಿ ಮತ್ತು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ ೪ರ ಘೋಷಣೆಯನ್ವಯ ಸಲ್ಲಿಸತಕ್ಕದ್ದು. 3. ಈ ರೀತಿಯಾಗಿ ಅಧೀಕರಿಸಲ್ಪಟ್ಟ ವ್ಯಕ್ತಿಯು ಸನ್ನದಿಗಾಗಿ ಅರ್ಜಿಯನ್ನು ಸಕ್ಷಮ ಪ್ರಾಧಿಕಾರಿಯಾದ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.
ಇ)	ಹೊಸ ಬಾರ್ & ರೆಸ್ಟೋರೆಂಟ್ /ವೈನ್ ಸ್ಟೋರ್‌ಗಳನ್ನು ತೆರೆಯಲು ಸ್ಥಳಾಂತರಿಸುವ ಸಂಬಂಧ ಆಯಾ	1992ನೇ ಸಾಲಿನಿಂದ ಹೊಸದಾಗಿ ಸಿಎಲ್-2, ಸಿಎಲ್-9 ಸನ್ನದನ್ನು ನೀಡಲು ನಿರ್ಬಂಧವಿರುವುದರಿಂದ ಅಬಕಾರಿ ಇಲಾಖೆಯಿಂದ ಯಾವುದೇ ಹೊಸ ಸಿಎಲ್-2 ಮತ್ತು ಸಿಎಲ್-

ಮಿತಿಯಲ್ಲೇ ಇರಬೇಕು.

iii. ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ ವ್ಯಾಪ್ತಿಗೆ ವರ್ಗಾವಣೆ ಆಗದಂತೆ ನೋಡಿಕೊಳ್ಳತಕ್ಕದ್ದು.

iv. ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ ನಂತರ ಅಂತಹ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೆ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳುವುದು.

ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 08 ಇಎಫ್‌ಎಲ್ 2020 ದಿ:08.09.2020 ರಲ್ಲಿ ಈಗಾಗಲೇ ಮಂಜೂರು ಮಾಡಿರುವ ಒಟ್ಟು 900 ಸನ್ನದುಗಳ ಪೈಕಿ ಬಾಕಿ ಉಳಿದಿರುವ 441 ಸನ್ನದುಗಳನ್ನು ಕೆಳಕಂಡ ಷರತ್ತುಗಳ ಮೇಲೆ ಪ್ರಾರಂಭಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

1. ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು.
2. ಸಿಎಲ್-೧೧(ಸಿ) ಕೋಟಾದಲ್ಲಿನ ಬಾಕಿ ಇರುವ 441 ಚಿಲ್ಲರೆ ಮದ್ಯ ಮಾರಾಟ ಸನ್ನದುಗಳ ಪೈಕಿ ಯಾವುದಾದರೂ ಸನ್ನದನ್ನು ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ವರ್ಗಾವಣೆ ಮಾಡುವುದಾದಲ್ಲಿ ಅದೇ ಜಿಲ್ಲೆಯ ಬೇರೆ ಯಾವುದಾದರೂ ಅಗತ್ಯವಿರುವ ವಿಧಾನಸಭಾ ಕ್ಷೇತ್ರಕ್ಕೆ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5ರನ್ವಯ ಆಕ್ಷೇಪಣಾ ರಹಿತ ಸ್ಥಳಕ್ಕೆ ದಿನಾಂಕ:31.12.2020 ರೊಳಗೆ ವರ್ಗಾವಣೆ ಮಾಡಿಕೊಳ್ಳತಕ್ಕದ್ದು.

	ಪ್ರದೇಶದ ಸ್ಥಳೀಯ ಜನಪ್ರತಿನಿಧಿಗಳ ಅಭಿಪ್ರಾಯವನ್ನು ಪರಿಗಣಿಸಲಾಗುತ್ತಿದೆಯೇ? ಇಲ್ಲದಿದ್ದಲ್ಲಿ ಶಾಸಕರ ಹಕ್ಕನ್ನು ಉಲ್ಲಂಘಿಸಿದಂತಾಗುವುದಿಲ್ಲವೆ:	9 ಸನ್ನದಿಗೆ ಮಂಜೂರಾತಿ ನೀಡಲಾಗುತ್ತಿಲ್ಲ. ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಹಾಗೂ ಈ ಹಿಂದೆ ಮಂಜೂರಾಗಿರುವ ಸನ್ನದುಗಳನ್ನು ಸ್ಥಳಾಂತರಿಸಲು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯಮ 23 ರೀತ್ಯಾ ಇರುವ ಅವಕಾಶಗಳ ಮೇರೆಗೆ ಅಬಕಾರಿ ಉಪ ಆಯುಕ್ತರ ಹಂತದಲ್ಲಿ ಸ್ಥಳಾಂತರಗೊಳಿಸಲಾಗುತ್ತಿದೆ. ಈ ಸ್ಥಳಾಂತರಕ್ಕೆ ಸ್ಥಳೀಯ ಜನಪ್ರತಿನಿಧಿಗಳ ಅಭಿಪ್ರಾಯವನ್ನು ಪಡೆಯಲಾಗುತ್ತಿಲ್ಲ. ಆದರೆ ಈ ಪ್ರಕ್ರಿಯೆಯನ್ನು ಕೈಗೊಳ್ಳುವಾಗ ಸ್ಥಳೀಯ ಜನಪ್ರತಿನಿಧಿಗಳ ಆಕ್ಷೇಪಣೆಗಳು ಇಲಾಖೆಯಲ್ಲಿ ಸ್ವೀಕೃತವಾದಲ್ಲಿ, ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಕ್ರಮದಿಂದ ಮಾನ್ಯ ಶಾಸಕರ ಹಕ್ಕನ್ನು ಉಲ್ಲಂಘಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.
ಈ)	ನಾಗಠಾಣ ಮತಕ್ಷೇತ್ರದ ಗ್ರಾಮಾಂತರ ಪ್ರದೇಶದ ಎಲ್ಲಾ ಪೆಟ್ಟಿಗೆ ಅಂಗಡಿಗಳಲ್ಲಿ ಮದ್ಯವನ್ನು ಅನಧಿಕೃತವಾಗಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಯಾವುದೇ ಪರವಾನಗಿ ಇಲ್ಲದೇ ಮಾರಾಟ ಮಾಡುತ್ತಿರುವ ಈ ದಂಧೆಯನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ನಾಗಠಾಣ ಮತಕ್ಷೇತ್ರದ ಗ್ರಾಮಾಂತರ ಪ್ರದೇಶದ ಕೆಲವು ಕಿರಾಣಿ ಅಂಗಡಿಗಳಲ್ಲಿ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿರುವು ಸರ್ಕಾರದ ಗಮನಕ್ಕೆ ಬಂದಿದೆ. ಕಳೆದ ಎರಡು ವರ್ಷಗಳಲ್ಲಿ ಒಟ್ಟು 18 ಪ್ರಕರಣಗಳು ದಾಖಲಾಗಿವೆ. ಅಕ್ರಮ ಮದ್ಯ ಮಾರಾಟವನ್ನು ತಡೆಗಟ್ಟಲು ಅಬಕಾರಿ ಕಾಯ್ದೆ ಮತ್ತು ತತ್ಸಂಬಂಧ ನಿಯಮಗಳ ಜಾರಿಗೊಳಿಸುವಿಕೆ ಕ್ರಮಗಳನ್ನು ಚುರುಕುಗೊಳಿಸಲಾಗಿದೆ. ಅಲ್ಲದೆ ಈ ಕುರಿತು ಪೊಲೀಸ್ ಇಲಾಖೆಯೂ ಸಹ ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದು, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ 2 ತಿಂಗಳಿಗೊಮ್ಮೆ ನಡೆಯುವ ಸಮನ್ವಯ ಸಮಿತಿ ಸಭೆಯಲ್ಲೂ ಅಬಕಾರಿ ಅಕ್ರಮ ಕುರಿತು ಅಗತ್ಯ ನಿರ್ದೇಶನಗಳನ್ನು ನೀಡಲಾಗುತ್ತಿದೆ. ಅಬಕಾರಿ ಇಲಾಖೆಯ ಸಿಬ್ಬಂದಿಯು ಸದಾ ಕಾಲ ಜಾಗೃತರಾಗಿದ್ದು ನಿರಂತರ ದಾಳಿ ಕಾರ್ಯ ನಡೆಸಿ, ಅಕ್ರಮ ಮದ್ಯ ಮಾರಾಟವಾಗದಂತೆ ಎಚ್ಚರಿಕೆ ವಹಿಸುವಂತೆ ನಿರ್ದೇಶಿಸಲಾಗುತ್ತಿದ್ದು, ಅಕ್ರಮ ಮದ್ಯ ಮಾರಾಟ ಮಾಡುವವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ಕಿರಾಣಿ ಅಂಗಡಿಗಳಲ್ಲಿ ಮದ್ಯ ಮಾರಾಟ ಮಾಡಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ. ಇಂತಹ ಅಕ್ರಮ ಕೃತ್ಯದಲ್ಲಿ ತೊಡಗಿರುವವರ ವಿರುದ್ಧ ಮಾಹಿತಿ ಕಲೆ ಹಾಕಿ ಅಬಕಾರಿ ದಾಳಿ ನಡೆಸಿ ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಅಲ್ಲದೇ, ಪಾಯಿಂಟ್ ಪುಸ್ತಕಗಳನ್ನು ಗ್ರಾಮಗಳಲ್ಲಿ ಇಡಲಾಗಿದ್ದು ನಿರಂತರ ರಸ್ತೆಗಾವಲು/ಗಸ್ತು ಮೂಲಕ

		ಅಕ್ರಮವನ್ನು ನಿಯಂತ್ರಿಸಲಾಗುತ್ತಿದೆ. ಗ್ರಾಮ ಸಭೆಗಳ ಮೂಲಕ ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ.

ಆಇ 122 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)

ಅಬಕಾರಿ ಸಚಿವರು

ಅನುಬಂಧ

ಕ್ರ.ಸಂ	ಸನ್ನದುವಿಧ	ಸನ್ನದುದಾರರ ಹೆಸರು	ಸನ್ನದು ವಿಳಾಸ
1	ಸಿಎಲ್ 2	ಮೆ/ ಪಾಟೀಲ ವೈನ್ಸ್	ಪ್ರಾಪರ್ಟಿನಂ:1008ಎ ಕನ್ನೂರು
2	ಸಿಎಲ್ -2	ಶ್ರೀ ವೈ.ಜೆ.ತೊರಗಲ್ (ಮಹಾದೇವ ಬೀರ್ ಬ್ರಾಂಡಿ)	ಮಹಾದೇವ ಬೀರ್ ಬ್ರಾಂಡಿ ,4*1B ಹಿಟ್ನಳ್ಳಿ ತಾ;ವಿಜಯಪುರ
3	ಸಿಎಲ್ 2	ಶ್ರೀ ಸುಂದರ ಪದ್ದು ಸಾಲಿಯಾನ	ಯುವರಾಜ ವೈನ್ಸ್ , ಸಿಟಿಎಸ್ ನಂ.1287/5ಎ/4, ವಿಜಯಪುರ
4	ಸಿಎಲ್ 2	ಮೆ/ ಬಾಲಾಜಿ ಲಿಕ್ಕರ್ಸ್ ಟ್ರೇಡರ್ಸ	ಸರ್ವೆನಂ.223ಹಿಸ್ಸಾನಂ.25ಸಿಂದಗಿರೋಡ,
5	ಸಿಎಲ್ 2	ಶ್ರೀ ವಾಸವಿ ಚಂದ್ರಕಾಂತ ಗುತ್ತೇದಾರ	ಸತ್ಯಂ ವೈನ್ಸ್ ,ಸಿಟಿಎಸ್ ನಂ. 1973/ಎ/28, ನಿಯರ್ ರೇಲ್ವೆಸ್ಟೇಷನ್, ವಿಜಯಪುರ
6	ಸಿಎಲ್ 2	ಶ್ರೀ ಆರ್ ಎಸ್ ಗಚ್ಚಿನಕಟ್ಟಿ	ಸರ್ವೆನಂ.01*1ಎ ಆಹೇರಿ ರೋಡ ಜಂಬಗಿ ಗ್ರಾಮ
7	ಸಿಎಲ್ 2	ಶ್ರೀ ಪ್ರಕಾಶ ಮರಿಯಪ್ಪ ಕಟ್ಟಿಮನಿ	ಸಂಗಮ ವೈನ್ ಶಿವಣಗಿ ಗ್ರಾಮದ ಸರ್ವೆ ನಂ :496/ಎ-2
8	ಸಿಎಲ್-2	ಶ್ರೀ ಆರ್ ಬಿ ಗುತ್ತೇದಾರ	ಬ್ಲಾಕ ನಂ;3518,3519 ಚಡಚಣ
9	ಸಿಎಲ್-2	ಶ್ರೀ ಎಂ ಜೆ ತೊರಗಲ್	ಸರ್ವೆ ನಂ:112, ಹಿಸ್ಸಾ ನಂ:01 ಧೂಳಖೇಡ
10	ಸಿಎಲ್-2	ಮೆ!! ಮಹೇಶ್ವರಿ ವೈನ್ಸ್	ಪ್ರಾಪರ್ಟಿ ನಂ:1905 ಚಡಚಣ
11	ಸಿಎಲ್-2	ಶ್ರೀ ಆದಿತ್ಯ ಗುತ್ತೇದಾರ	ಸಿಟಿಎಸ್ ನಂ:2388/2389 ಚಡಚಣ
12	ಸಿಎಲ್-4	ಇಂಡಸ್ಟ್ರಿಯಲ್ ಓನರ್ಸ್ ಅಸೋಸಿಯೇಶನ್ ಅಲಿಯಾಬಾದ	ವಿಜಯಪುರ ತಾಲ್ಲೂಕಿನ ಅಲಿಯಾಬಾದ ಗ್ರಾಮದ ವ್ಯಾಪ್ತಿಯಲ್ಲಿ ರಿ ಸಂ.229 ಸಿ ಎ ಪ್ಲಾಟ ನಂ.87 ಬ್ಲಾಕ್-2 ರಲ್ಲಿ
13	ಸಿಎಲ್-7	ಶ್ರೀ ಸುಂದರ ಪದ್ದು ಸಾಲಿಯಾನ	ಸಿಟಿಎಸ್ ನಂ. 1908ಬಿಮತ್ತು 1908/ಸಿ, 1908/ಎ, 1908 ಇ1, 1908 ಇ2, ವಿಜಯಪುರ
14	ಸಿಎಲ್-7	ಮೆ/ ಹೊಟೇಲ ಹೆರಿಟೇಜ್	ಸಿಟಿಎಸ್ ನಂ.1915/7ಎ/1ಬಿ, ಸ್ಟೇಷನರೋಡವಿಜಯಪುರ
15	ಸಿಎಲ್-7	ಮೆ/ ಹೊಟೇಲ್ ರಮಾಮಂಗಲ	1911/ಎ/2ಬಿ, ಸ್ಟೇಷನರೋಡವಿಜಯಪುರ
16	ಸಿಎಲ್-7	ಶ್ರೀ ದೊಂಡಿರಾಮ ಸೇವು ರಾಠೋಡ	ಆರ್.ಎಸ್ ನಂ:339/11 ಇಂಚಗೇರಿ
17	ಸಿಎಲ್-7	ರಂಗು ಚಂದು ರಾಠೋಡ	ಆರ್.ಎಸ್.ನಂ:95/6 ಜೀಗಜೀವಣಿ
18	ಸಿಎಲ್-11(ಸಿ)	ಎಂ.ಡಿ.ಎಂ.ಎಸ್.ಐ.ಎಲ್	ಪ್ರಾಪರ್ಟಿ ನಂ:2036 ಕೆನಾಲ ರೋಡ ನಾಗಠಾಣ
19	ಸಿಎಲ್-11(ಸಿ))	ಎಂ.ಡಿ.ಎಂ.ಎಸ್.ಐ.ಎಲ್	ಸಿಂದಗಿ ರಸ್ತೆ ಸಿಟಿಎಸ್ ನಂ:1287/5ಎ/5ಬಿ ಪ್ಲಾಟ ನಂ:141/3 ವಿಜಯಪುರ
20	ಸಿಎಲ್-11(ಸಿ)	ಎಂ.ಡಿ.ಎಂ.ಎಸ್.ಐ.ಎಲ್	ಕನ್ನೂರು ಗ್ರಾಮದ ಆಸ್ತಿ ನಂ.1221

21	ಸಿಎಲ್-11(ಸಿ)	ಎಂ.ಡಿ.ಎಂ.ಎಸ್.ಐ.ಎಲ್	ಸರ್ವೆ ನಂ137/* ಇಂಡಿ ರೋಡ್ ಡಂಪಿಂಗ್ ಯಾರ್ಡ ಎದುರಿಗೆ ವಿಜಯಪುರ
22	ಸಿಎಲ್ -11(C)	ಎಂ.ಡಿ.ಎಂ.ಎಸ್.ಐ.ಎಲ್	ಪ್ರಾಪರ್ಟಿ ನಂ:701 ಜೀಗಜೀವಣಿ
23	ಸಿಎಲ್ -11(C)	ಎಂ.ಡಿ.ಎಂ.ಎಸ್.ಐ.ಎಲ್	ಸರ್ವೆ ನಂ:639 ರೇವತಗಾಂವ
24	ಸಿಎಲ್ -11(C)	ಎಂ.ಡಿ.ಎಂ.ಎಸ್.ಐ.ಎಲ್	ಪ್ರಾಪರ್ಟಿ ನಂ:261/3 ಹಲಸಂಗಿ
25	ಸಿಎಲ್ -11(C)	ಎಂ.ಡಿ.ಎಂ.ಎಸ್.ಐ.ಎಲ್	ಪ್ರಾಪರ್ಟಿ ನಂ:2231/2 ಪ್ಲಾಟ ನಂ;121 ಚಡಚಣ
26	ಎಲ್ ಎಫ್ ಡಬ್ಲ್ಯೂ-3	ಶ್ರೀ ವಿಠ್ಠಲ ರಾಮು ಮೋರೆ	ಪ್ರಾಪರ್ಟಿ ನಂ:89 ದ್ಯಾಬೇರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 383
ಸದಸ್ಯರ ಹೆಸರು	: ಶ್ರೀ ದೇವಾನಂದ ಫುಲಸಿಂಗ್ ಚವಾಣ್ (ನಾಗಠಾಣ)
ಉತ್ತರಿಸುವ ದಿನಾಂಕ	: 14.12.2021
ಉತ್ತರಿಸುವ ಸಚಿವರು	: ಜಲ ಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ವಿಜಯಪುರ ಜಿಲ್ಲೆಯ ಚಡಚಣ ತಾಲ್ಲೂಕು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು, ಇಲ್ಲಿನ ರೈತರು ಜನ ಜಾನುವಾರುಗಳು, ಭೀಮಾ ನದಿ ನೀರನ್ನು ಅವಲಂಬಿಸಿ ಜೀವನ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಪ್ರತಿ ವರ್ಷ ಭೀಮಾ ನದಿ ತೀರವು ಮಹಾರಾಷ್ಟ್ರದ ರಾಜ್ಯವನ್ನು ಅವಲಂಭಿಸಿರುವುದರಿಂದ ರೈತರ ಜೀವನ ಕಷ್ಟಕರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಸಮಸ್ಯೆಗೆ ಪರಿಹಾರವನ್ನು ರಾಜ್ಯ ಸರ್ಕಾರವು ಮಹಾರಾಷ್ಟ್ರ ಸರ್ಕಾರದೊಂದಿಗೆ ಶಾಶ್ವತ ಒಡಂಬಡಿಕೆ ಮಾಡಿಕೊಳ್ಳುವ ಯೋಜನೆ ಇದೆಯೇ;	ಮಹಾರಾಷ್ಟ್ರ ರಾಜ್ಯದೊಂದಿಗೆ ಶಾಶ್ವತ ಪರಿಹಾರಕ್ಕಾಗಿ ಯಾವುದೇ ಒಡಂಬಡಿಕೆ ಇರುವುದಿಲ್ಲ. ಆದಾಗ್ಯೂ, ಭೀಮಾ ನದಿ ಪಾತ್ರದಲ್ಲಿ ಮಹಾರಾಷ್ಟ್ರದ ಜಲಾಶಯಗಳಿಂದ ತೀವ್ರ ಬರಗಾಲದ ಸನ್ನಿವೇಶಗಳಲ್ಲಿ ಅವಶ್ಯಕವಿದ್ದಾಗ ರಾಜ್ಯದಲ್ಲಿನ ನದಿ ಪಾತ್ರಕ್ಕೆ ನೀರು ಹರಿಸಲು ಕೋರಲಾಗುತ್ತಿದೆ.
ಇ)	ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳುತ್ತಿರುವ ಕ್ರಮಗಳೇನು;	
ಈ)	ವಿಜಯಪುರ ಹಾಗೂ ಚಡಚಣ ತಾಲ್ಲೂಕಿನಲ್ಲಿ ಅನುಷ್ಠಾನಗೊಳ್ಳುತ್ತಿರುವ ಏತ ನೀರಾವರಿ ಹಾಗೂ ಕೆರೆ ತುಂಬುವ ಯೋಜನೆಗಳೆಷ್ಟು; ಯಾವಾಗಿನಿಂದ ಈ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ; ಈ ಕಾಮಗಾರಿಗಳು ಯಾವ ಯಾವ ಹಂತದಲಿವೆ; (ಆರ್ಥಿಕ ಹಾಗೂ ಭೌತಿಕ ಪ್ರಗತಿಯ ವಿವರಗಳನ್ನು ಒದಗಿಸುವುದು)	ವಿಜಯಪೂರ ಜಿಲ್ಲೆಯ ಹಾಗೂ ಚಡಚಣ ತಾಲೂಕಿನಡಿ ಅನುಷ್ಠಾನಗೊಳಿಸುತ್ತರುವ ನೀರಾವರಿ ಯೋಜನೆ, ಕೆರೆ ತುಂಬುವ ಯೋಜನೆ ಮತ್ತು ಇವುಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರಗಳನ್ನು **ಅನುಬಂಧ–1** ರಲ್ಲಿ ನೀಡಲಾಗಿದೆ.
ಉ)	ನಾಗಠಾಣ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮುಖ್ಯ ಕಾಲುವೆಗಳಿಂದ ಉಪ ಕಾಲುವೆಗಳು ಸಂಪೂರ್ಣವಾಗಿ ಹಾಳಾಗಿದ್ದು, ರೈತರ ಜಮೀನುಗಳಿಗೆ ನೀರು ಪೂರೈಕೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವುಗಳ ಮುರಸ್ತಿಗೆ ಕೈಗೊಂಡಿರುವ ಕ್ರಮಗಳೇನು?	ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–1 ಮತ್ತು 2 ರಡಿ ಒಟ್ಟು 172.00 ಕಿ.ಮೀ ಉದ್ದದ ಇಂಡಿ ಶಾಖಾ ಕಾಲುವೆ ನಿರ್ಮಾಣ ಮಾಡಲಾಗಿದ್ದು, ಈ ಪೈಕಿ ಪೈಕಿ ನಾಗಠಾಣ ಮತಕ್ಷೇತದ ವ್ಯಾಪ್ತಿಯಡಿ ಇಂಡಿ ಶಾಖಾ ಕಾಲುವೆ ಕಿ.ಮೀ. 133.00 ರಿಂದ 172.00 ರವರೆಗೆ ಹಾಗೂ ವಿತರಣಾ ಕಾಲುವೆ–27 ರಿಂದ 46 ರವರೆಗಿನ ಕಾಲುವೆ ಜಾಲ ಒಳಗೊಂಡಿದೆ. ಇಂಡಿ ಶಾಖಾ ಕಾಲುವೆ ಕಿ.ಮೀ. 64.00 ರಿಂದ 172.00 ಕಿ.ಮೀ ರವರೆಗೆ ಮುಖ್ಯ ಕಾಲುವೆ ಮತ್ತು ವಿತರಣಾ ಕಾಲುವೆ ಜಾಲಗಳ ಸಮಗ್ರ ಆಧುನೀಕರಣಕ್ಕಾಗಿ ರೂ.1240.85 ಕೋಟಿ ಮೊತ್ತದ ಅಂದಾಜು ಪ್ರಸ್ತಾವನೆ ತಯಾರಿಸಿದ್ದು, ಕೃಷ್ಣಾ ಭಾಗ್ಯ ಜಲ ನಿಗಮದ ಪರಿಶೀಲನೆ ಹಂತದಲ್ಲಿರುತ್ತದೆ.

ಸಂಖ್ಯೆ: ಜಸಂಇ 123 ಡಬ್ಲ್ಯೂಬಿಎಂ 2021

(ಗೋವಿಂದ ಎಂ.ಕಾರಜೋಳ)

ಜಲಸಂಪನ್ಮೂಲ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 383ಕ್ಕೆ ಅನುಬಂಧ-1

ರೂ. ಲಕ್ಷಗಳಲ್ಲಿ

ಕ್ರ.ಸಂ.	ತಾಲೂಕು	ಯೋಜನೆ	ಕಾಮಗಾರಿ ಪ್ರಾರಂಭದ ದಿನಾಂಕ	ಕಾಮಗಾರಿಯ ಹಂತ		ಷರಾ
				ಭೌತಿಕ ಪ್ರಗತಿ	ಆರ್ಥಿಕ ಪ್ರಗತಿ	
1	ಚಡಚಣ	ಚಡಚಣ ಏತ ನೀರಾವರಿ ಯೋಜನೆಯ ಮುಖ್ಯ ಸ್ಥಾವರ ಕಾಮಗಾರಿ	26.10.2017	ಸ್ಥಾವರ ಹಾಗೂ ಕೊಳವೆ ಜೋಡಿಸುವ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿರುತ್ತವೆ. ವಿದ್ಯುತ್ ಕಾಮಗಾರಿಯು ಪ್ರಗತಿಯಲ್ಲಿದೆ.	8752.79	ಕಾಮಗಾರಿಯು ಪ್ರಗತಿಯಲ್ಲಿದೆ.
2	ಚಡಚಣ	ಚಡಚಣ ಏತ ನೀರಾವರಿ ಯೋಜನೆಯ ಕಾಲುವೆ ಜಾಲದ ಕಾಮಗಾರಿ	31.10.2018	ಕಾಮಗಾರಿ ಮುಕ್ತಾಯಗೊಂಡಿದೆ	16934.42	ಕಾಮಗಾರಿ ಮುಕ್ತಾಯಗೊಂಡಿದೆ, ಕಾಮಗಾರಿಯ ನಿರ್ವಹಣೆ ಹಂತದಲ್ಲಿರುತ್ತದೆ.
3	ಚಡಚಣ	ಉಮ್ರಾಣಿ ಬ್ಯಾರೇಜ್	04.01.2021	ಕಾಮಗಾರಿ ಪ್ರಗತಿಯಲ್ಲಿದೆ	5540.95	ಕಾಮಗಾರಿಯು ಪ್ರಗತಿಯಲ್ಲಿದೆ.
4	ಚಡಚಣ	ಸಂಖ ಏತ ನೀರಾವರಿ ಯೋಜನೆ	19.08.2016	ಕಾಮಗಾರಿ ಮುಕ್ತಾಯಗೊಂಡಿದೆ	4764.00	ಕಾಮಗಾರಿ ಮುಕ್ತಾಯಗೊಂಡಿದೆ ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ.
5	ವಿಜಯಪುರ	ಚಿಮ್ಮಲಗಿ ಏತ ನೀರಾವರಿ ಯೋಜನೆಯಡಿ ನಾಗಠಾಣ ಶಾಖಾ ಕಾಲುವೆ ಮುಖಾಂತರ ಆಹೇರಿ-ಜಂಬಗಿ ಕೆರೆ ತುಂಬುವ ಕಾಮಗಾರಿ	2016	ಕಾಮಗಾರಿ ಮುಕ್ತಾಯಗೊಂಡಿದೆ	50.39	

****

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 384
2. ಸದಸ್ಯರ ಹೆಸರು : ಶ್ರೀ ದೇವಾನಂದ್ ಫುಲಸಿಂಗ್ ಚವಾಣ್
3. ಉತ್ತರಿಸಬೇಕಾದ ದಿನಾಂಕ : 14.12.2021
4. ಉತ್ತರಿಸುವ ಸಚಿವರು : ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ನಾಗಠಾಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯಡಿಯಲ್ಲಿ ಬರುವ ಕೆರೆಗಳು ಯಾವುವು; (ಕೆರೆಗಳ ಸರ್ವೇ ನಂ. ವಿಸ್ತೀರ್ಣ ಮತ್ತು ನೀರಾವರಿಯಾಗುವ ಕ್ಷೇತ್ರಗಳ ವಿವರ ನೀಡುವುದು)	ನಾಗಠಾಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯಡಿಯಲ್ಲಿ ಬರುವ ಕೆರೆಗಳ ಸರ್ವೇ ನಂ. ವಿಸ್ತೀರ್ಣ ಮತ್ತು ನೀರಾವರಿಯಾಗುವ ಕ್ಷೇತ್ರಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಆ	ಸಣ್ಣ ನೀರಾವರಿ ಇಲಾಖೆಯಡಿಯಲ್ಲಿ ಬರುವ ಬ್ರಿಡ್ಜ್ ಕಂ ಬಾಂದಾರಗಳೆಷ್ಟು;	ಸಣ್ಣ ನೀರಾವರಿ ಇಲಾಖೆಯಡಿಯಲ್ಲಿ ನಾಗಠಾಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ 11 ಬ್ರಿಡ್ಜ್ ಕಂ ಬಾಂದಾರಗಳಿರುತ್ತವೆ.
ಇ	ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಅವುಗಳ ಅಭಿವೃದ್ಧಿಗಾಗಿ ವಿವಿಧ ಲೆಕ್ಕಶೀರ್ಷಿಕೆಗಳಲ್ಲಿ ಕ್ಷೇತ್ರದ ಯಾವ ಯಾವ ಗ್ರಾಮಗಳಲ್ಲಿ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ;	ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಅವುಗಳ ಅಭಿವೃದ್ಧಿಗಾಗಿ ವಿವಿಧ ಲೆಕ್ಕಶೀರ್ಷಿಕೆಗಳಲ್ಲಿ ಕೈಗೊಳ್ಳಲಾದ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ
ಈ	ಅವುಗಳಿಗೆ ಒದಗಿಸಿರುವ ಪ್ರತ್ಯೇಕ ಅನುದಾನ ಎಷ್ಟು; ಅವುಗಳಲ್ಲಿ ಪ್ರಗತಿಯಲ್ಲಿರುವ ಹಾಗೂ ಪೂರ್ಣಗೊಂಡಿರುವ ಇನ್ನು ಆರಂಭವಾಗದಿರುವ ಕಾಮಗಾರಿಗಳು ಯಾವುವು;	ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.
ಉ	ಕಾಮಗಾರಿಗಳು ಈವರೆಗೂ ಆರಂಭವಾಗದಿರುವುದಕ್ಕೆ ಕಾರಣಗಳೇನು? (ವರ್ಷವಾರು, ಕಾಮಗಾರಿಗಳು ಹಾಗೂ ಲೆಕ್ಕಶೀರ್ಷಿಕೆವಾರು ಮಾಹಿತಿಯನ್ನು ಒದಗಿಸುವುದು)	ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಕಡತ ಸಂಖ್ಯೆ:MID 397 LAQ 2021

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ
ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು.

ಶ್ರೀ ದೇವಾನಂದ್ ಫುಲಸಿಂಗ್ ಚವಾಣ್, ಮಾನ್ಯ ವಿಧಾನಸಭಾ ಸದಸ್ಯರು ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:384 ಕ್ಕೆ ಅನುಬಂಧ –1

ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿನ ಕೆರೆಗಳ ವಿವರ

ಕ್ರ. ಸಂ.	ತಾಲ್ಲೂಕು	ಕೆರೆಯ ಹೆಸರು	ಸರ್ವೆ ನಂಬರ್	ಕೆರೆ ಅಂಗಳದ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)	ಅಚ್ಚುಕಟ್ಟು (ಹೆಕ್ಟೇರ್‌ಗಳಲ್ಲಿ)	ಷರಾ
1	2	3	4	5	6	7
1	ವಿಜಯಪುರ	ನಾಗಠಾಣ ಮಧ್ಯಮ ನೀರಾವರಿ ಕೆರೆ	469,473,476,475,477,43,46,471,470,430,431,442,428,420,75,74,72,71,69 ,68,67,47,45,48,66,65,49,63,50,34,35	129.50	650.00	
2	ವಿಜಯಪುರ	ಮಖಣಾಪೂರ ಕೆರೆ	385, 349, 348, 346, 344, 342, 341, 331, 329, 197, 196, 195, 194, 193, 191, 184, 122, 87, 85, 70, 69, 71	97.06	435.00	
3	ವಿಜಯಪುರ	ಕಗ್ಗೋಡ ಕೆರೆ	Honnutagi-74, 59, 71, 72, 75, 76, 68, Kaulagi-96, 29, 89, 87, 102, 101, 84, 86, 76, 78, 100, 98, 94, ಹಡಗಲಿ 40/1J,41,	31.85	221.00	
4	ವಿಜಯಪುರ	ಬೊಮ್ಮನಹಳ್ಳಿ ಕೆರೆ	Bommanahalli 31,32,34,33,3,4,30,29,27,28, Tidagundi 33,35,34,36,37,39,38	80.90	519.00	
5	ವಿಜಯಪುರ	ಕೌಲಗಿ ಆಹೇರಿ ಕೆರೆ	ಹೊನ್ನುಟಗಿ-74, 59, 71, 72, 75, 76, 68, ಕೌಲಗಿ-96, 29, 89, 87, 102, 101, 84, 86, 76, 78, 100, 98, 94,	53.28	319.00	
6	ವಿಜಯಪುರ	ದ್ಯಾಬೇರಿ ಕೆರೆ	ದ್ಯಾಬೇರಿ–115, 117, 108, 109, 114, 118, 119, 122, 120, 121, 125, 126, 127, ಮದಭಾವಿ-121	29.95	161.00	
7	ವಿಜಯಪುರ	ಕುಮಟಗಿ ಕೆರೆ (ಹಳೆ)	ಕುಮಟಗಿ-300, 294, 292, 293, 283, 282, 306, 309, 310, 311, 317, 316, 320, 322, 290, 288	22.00	60.00	
8	ವಿಜಯಪುರ	ಕುಮಟಗಿ ಕೆರೆ (ಹೊಸ)	ಕುಮಟಗಿ-100, 101, 102, 99, 98, 87, 86, 85, 84, 83, 82, 80, 7, 97, 96, 93, ಕಗ್ಗೋಡ-228	23.06	106.00	
9	ವಿಜಯಪುರ	ಡೊಮನಾಳ ಕೆರೆ	148, 149, 150, 151, 152, 153, 154, 185, 145, 144	36.42	190.00	
10	ವಿಜಯಪುರ	ಅಂಕಲಗಿ ಕೆರೆ	66, 60, 101, 108, 95, 106	34.19	156.00	
11	ವಿಜಯಪುರ	ಆಹೇರಿ–ಜಂಬಗಿ (ವಿಶ್ವಬ್ಯಾಂಕ)	217, 213, 214, 207, 216, 215, 206, 205, 204, 202, 201, 203, 236, 235 Aheri 453, 454, 26, 27, 29, 30, 451	67.00	330.00	
12	ವಿಜಯಪುರ	ಹುಣಶ್ಯಾಳ ಜಿನುಗು ಕೆರೆ	Hunshyal50,51,53,58,59, jambagi 399,398,397	26.10	361.00	

2

ಕ್ರ. ಸಂ.	ತಾಲ್ಲೂಕು	ಕೆರೆಯ ಹೆಸರು	ಸರ್ವೆ ನಂಬರ್	ಕೆರೆ ಅಂಗಳದ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)	ಅಚ್ಚುಕಟ್ಟು (ಹೆಕ್ಟೇರ್‌ಗಳಲ್ಲಿ)	ಷರಾ
1	2	3	4	5	6	7
13	ವಿಜಯಪುರ	ಹುಣಶ್ಯಾಳ ಕೆರೆ	ಹುಣಶ್ಯಾಳ-53, 79, 76, 168, 166, 108, 106, 94, 80, 50, 51, 54, 58, 59	14.00	67.00	
14	ವಿಜಯಪುರ	ಆಹೇರಿ ಕೆರೆ	ಆಹೇರಿ-125, 103, 114, 133, 163, 112, 12, 152, 151, 122, 121, 120, 100, 124	26.75	138.00	
15	ವಿಜಯಪುರ	ಅಲಿಯಾಬಾದ ಜಿನುಗುಕೆರೆ	67, 68, 47, 48, 66, 470	12.99	45.00	
16	ಚಡಚಣ	ಜಿಗಜಿವಣಗಿ ಕೆರೆ	593, 594, 590, 583, 600, 623, 624, 625, 626, 627, 636, 637, 665, 668, 671, 673, 675, 690	166.00	967.00	
17	ಚಡಚಣ	ಚಡಚಣ ಕೆರೆ	353,354,360	33.50	120.00	
18	ಚಡಚಣ	ಗೋಡಿಹಾಳ ಕೆರೆ(ವಿಶ್ವ ಬ್ಯಾಂಕ)	Godihal-212, Baradol-773, 774, 775, 776, 777, 778, 779, 780, 784, 28/2, 34/1, 35/1, 41	42.57	250.00	
19	ಚಡಚಣ	ಇಂಚಗೇರಿ ಕೆರೆ	231, 232, 272	15.39	56.00	
20	ಚಡಚಣ	ಜಿಗಜೀವಣಗಿ ಜಿನುಗು ಕೆರೆ	123/1,2,3,124/1, 124/2,125/1,2,3, 126/1,2, 127/A1,A2, 127/B, 114/1A,1B,114/2,121,122	4.00	45.00	
21	ಚಡಚಣ	ಹಾಲಳ್ಳಿ ಇಂಗು ಕೆರೆ ಸೈಟ್-1	211, 216, 215/1, 215/2, 215/3	5.33	40.00	
22	ಚಡಚಣ	ಶಿರಾಡೋಣ ಜಿನುಗುಕೆರೆ	143,144 ,136	9.71	40.00	
23	ಚಡಚಣ	ಗೋಡಿಹಾಳ ಜಿನುಗುಕೆರೆ	38,39,40/1, 40/2, 41, 42/1, 42/2, 43/3	3.52	41.00	
24	ಚಡಚಣ	ಹಾಲಳ್ಳಿ ಇಂಗು ಕೆರೆ ಸೈಟ್-2	34/2B, 34/2F, 34/2A, 34/2E, 34/2C, 35/1A, 35/1B, 35/2A	5.33	40.00	
25	ಚಡಚಣ	ಜಿಗಜೀವಣಗಿ ಸಣ್ಣ ನೀರಾವರಿ ಕೆರೆ	180, 181, 183, 184, 185, 198, 199, 200, 201, 222, 223, 226	24.43	154.00	
26	ಚಡಚಣ	ಸಾತಲಗಾಂವ ಜಿನುಗುಕೆರೆ	117, 118, 133	6.09	57.00	
			ಒಟ್ಟು		**5568.00**	

3

ಶ್ರೀ ದೇವಾನಂದ್ ಫುಲಸಿಂಗ್ ಚವಾಣ್, ಮಾನ್ಯ ವಿಧಾನ ಸಭಾ ಸದಸ್ಯರು ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:384 ಕ್ಕೆ ಅನುಬಂಧ-2

ಕಳೆದ 3 ವರ್ಷಗಳಲ್ಲಿ ನಾಗಠಾಣ ಮತಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕೈಗೊಳ್ಳಲಾದ ಕೆರೆಗಳ ಮತ್ತು ಬ್ರಿಡ್ಜ್ ಕಂ ಬಾಂದಾರಗಳ ಅಭಿವೃದ್ಧಿ ಕಾಮಗಾರಿಗಳ ವಿವರ

ರೂ.ಲಕ್ಷಗಳಲ್ಲಿ

ಕ್ರ. ಸಂ.	ವರ್ಷ	ಲೆಕ್ಕಶೀರ್ಷಿಕೆ	ತಾಲ್ಲೂಕು	ಗ್ರಾಮ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಒಟ್ಟು ವೆಚ್ಚ	ಕಾಮಗಾರಿಯ ಹಂತ			ಪ್ರಾರಂಭವಾಗದಿರಲು ಕಾರಣ
								ಪೂರ್ಣಗೊಂಡಿದೆ	ಪ್ರಗತಿಯಲ್ಲಿದೆ	ಪ್ರಾರಂಭಿಸಬೇಕಾಗಿದೆ	
1	2	3	4	5	6	7	8	9	10	11	12
1	2018-19	ಪ್ರಧಾನ ಕಾಮಗಾರಿಗಳು	ಇಂಡಿ	ಗೋಡಿಹಾಳ	ಗೋಡಿಹಾಳ ಸಣ್ಣ ನೀರಾವರಿ ಕೆರೆ ಸುಧಾರಣೆ	200.00	199.42	ಪೂರ್ಣಗೊಂಡಿದೆ			
2	2018-19	ಪ್ರಧಾನ ಕಾಮಗಾರಿಗಳು	ವಿಜಯಪುರ	ಅಹೇರಿ-ಜಂಬಗಿ	ಆಹೇರಿ ಜಂಬಗಿ ಸಣ್ಣ ನೀರಾವರಿ ಕೆರೆ ಸುಧಾರಣೆ	200.00	216.82	ಪೂರ್ಣಗೊಂಡಿದೆ			
3	2018-19	ಪ್ರಧಾನ ಕಾಮಗಾರಿಗಳು	ಚಡಚಣ	ಹಾವಿನಾಳ	ಹಾವಿನಾಳ ಸೈಟ್-2 ಬಿ.ಸಿ.ಬಿ. ನಿರ್ಮಾಣ ಕಾಮಗಾರಿ	310.00	240.32	ಪೂರ್ಣಗೊಂಡಿದೆ			
4	2018-19	ಪ್ರಧಾನ ಕಾಮಗಾರಿಗಳು	ಚಡಚಣ	ಉಮರಾಣಿ-ಲವಂಗಿ	ವಿಜಯಪುರ ಜಿಲ್ಲೆ, ಇಂಡಿ ತಾಲ್ಲೂಕಿನ ಭೀಮಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಉಮರಾಣಿ-ಲವಂಗಿ ಬ್ಯಾರೇಜ್‌ಗೆ ಹೊಸ ಗೇಟ್ ಅಳವಡಿಸಿ ಸುಧಾರಣೆ ಕಾಮಗಾರಿ.	125.00	122.40		ಪ್ರಗತಿಯಲ್ಲಿದೆ		
5	2018-19	ಪ್ರಧಾನ ಕಾಮಗಾರಿಗಳು	ಚಡಚಣ	ಚಣೇಗಾಂವ-ಬರೂರ	ಇಂಡಿ ತಾಲೂಕಿನ ಚನೇಗಾಂವ-ಬರೂರ ಗ್ರಾಮದ ಹತ್ತಿರ ಭೀಮಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಬ್ಯಾರೇಜ ಸುಧಾರಣೆ ಕಾಮಗಾರಿ. (ಹೊಸ ಗೇಟುಗಳು ಅಳವಡಿಸುವುದು)	200.00	78.91		ಪ್ರಗತಿಯಲ್ಲಿದೆ		
6	2018-19	ಪ್ರಧಾನ ಕಾಮಗಾರಿಗಳು	ಚಡಚಣ	ಉಮರಾಣಿ	ಇಂಡಿ ತಾಲೂಕಿನ ಉಮರಾಣಿ ಗ್ರಾಮದ ಹತ್ತಿರ ಭೀಮಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಬ್ಯಾರೇಜ ಸುಧಾರಣೆ ಕಾಮಗಾರಿ. (ಹೊಸ ಏಪ್ರಾನ ಅಳವಡಿಸುವುದು)	100.00	0.00		ಪ್ರಗತಿಯಲ್ಲಿದೆ		
7	2018-19	ಪ್ರಧಾನ ಕಾಮಗಾರಿಗಳು	ಚಡಚಣ	ಹತ್ತಳ್ಳಿ	ಇಂಡಿ ತಾಲೂಕಿನ ಹತ್ತಳ್ಳಿ ಗ್ರಾಮದ ಹತ್ತಿರ ನಿರ್ಮಿಸಿರುವ ಬ್ಯಾರೇಜ ಸುಧಾರಣೆ ಕಾಮಗಾರಿ. (ಹೊಸ ಗೇಟುಗಳು ಅಳವಡಿಸುವುದು)	75.00	64.63	ಪೂರ್ಣಗೊಂಡಿದೆ			
					ಒಟ್ಟು	**1210.00**	**922.50**				
1	2019-20	ಕೆರೆಗಳ ಆಧುನೀಕರಣ	ಇಂಡಿ	ಉಮರಾಣಿ-ಲವಂಗಿ	ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ ಭೀಮಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಉಮ್ರಾಣಿ-ಲವಂಗಿ ಬ್ಯಾರೇಜಿಗೆ ಹೊಸ ಗೇಟ್ ಅಳವಡಿಸಿ ಸುದಾರಣೆ ಕಾಮಗಾರಿ.	125.00	122.40	ಪೂರ್ಣಗೊಂಡಿದೆ			
2	2019-20	ಕೆರೆಗಳ ಆಧುನೀಕರಣ	ವಿಜಯಪುರ	ಆಹೇರಿ-ಅಂಕಲಗಿ	ವಿಜಯಪುರ ಜಿಲ್ಲೆ ವಿಜಯಪುರ ತಾಲೂಕಿನ ಆಹೇರಿ-ಅಂಕಲಗಿ ಸಣ್ಣ ನೀರಾವರಿ ಕೆರೆ ಸುಧಾರಣೆ.	100.00	45.06	ಪೂರ್ಣಗೊಂಡಿದೆ			
3	2019-20	ಕೆರೆಗಳ ಆಧುನೀಕರಣ	ಇಂಡಿ	ಚಣೇಗಾಂವ-ಬರೂರ	ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ ಭೀಮಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಚಣೆಗಾಂವ-ಬರೂರ ಹತ್ತಿರ ಬ್ಯಾರೇಜಿಗೆ ಹೊಸ ಗೇಟ್ ಅಳವಡಿಸಿ ಸುದಾರಣೆ ಕಾಮಗಾರಿ.	200.00	78.91	ಪೂರ್ಣಗೊಂಡಿದೆ			
4	2019-20	ಕೆರೆಗಳ ಆಧುನೀಕರಣ	ಇಂಡಿ	ಉಮರಾಣಿ	ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ ಉಮ್ರಾಣಿ ಗ್ರಾಮದ ಹತ್ತಿರ ಭೀಮಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಬ್ಯಾರೇಜ್ ಸುದಾರಣೆ ಕಾಮಗಾರಿ.	100.00	42.55	ಪೂರ್ಣಗೊಂಡಿದೆ			

ಕ್ರ ಸಂ.	ವರ್ಷ	ಲೆಕ್ಕಶೀರ್ಷಿಕೆ	ತಾಲ್ಲೂಕು	ಗ್ರಾಮ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಒಟ್ಟು ವೆಚ್ಚ	ಕಾಮಗಾರಿಯ ಹಂತ			ಪ್ರಾರಂಭವಾಗದಿರಲು ಕಾರಣ
								ಪೂರ್ಣಗೊಂಡಿದೆ	ಪ್ರಗತಿಯಲ್ಲಿದೆ	ಪ್ರಾರಂಭಿಸಬೇಕಾಗಿದೆ	
1	2	3	4	5	6	7	8	9	10	11	12
5	2019-20	ಕೆರೆಗಳ ಆಧುನೀಕರಣ	ಇಂಡಿ	ಹತ್ತಳ್ಳಿ	ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ ಹತ್ತಳ್ಳಿ ಗ್ರಾಮದ ಹತ್ತಿರ ನಿರ್ಮಿಸಿರುವ ಬ್ಯಾರೇಜ್ ಸುಧಾರಣೆ ಕಾಮಗಾರಿ (ಹೊಸ ಗೇಟ್‌ಗಳನ್ನು ಅಳವಡಿಸುವುದು)	75.00	64.63	ಪೂರ್ಣಗೊಂಡಿದೆ			
6	2019-20	ಕೆರೆಗಳ ಆಧುನೀಕರಣ	ಇಂಡಿ	ಹುಣಶ್ಯಾಳ	ವಿಜಯಪುರ ಜಿಲ್ಲೆ ವಿಜಯಪುರ ತಾಲೂಕಿನ ಹುಣಶ್ಯಾಳ ಹೊಸ ಕೆರೆ ಟೋವಾಲ್ ನಿರ್ಮಾಣ ಹಾಗೂ ಪಿಚಿಂಗ್ ಸುಧಾರಣೆ ಕಾಮಗಾರಿ.	20.00	13.21	ಪೂರ್ಣಗೊಂಡಿದೆ			
ಆ)	ಬೆಳಗಾವಿ ನಗರದಲ್ಲಿ ಹರಿಯುವ ಬಳ್ಳಾರಿ ನಾಲೆ, ಲೆಂಡಿನಾಲೆ, ನಾಗಝುರಿ ನಾಲೆಗಳನ್ನು ಅಭಿವೃದ್ಧಿಪಡಿಸದೇ ಇರುವುದರಿಂದ ಪ್ರತಿಬಾರಿ ಬೆಳಗಾವಿ ನಗರವು ಜಲಾವೃತಗೊಳ್ಳುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಯಾವ ಕ್ರಮ ಕೈಗೊಂಡಿದೆ;	ಬಂದಿದೆ. ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅತಿವೃಷ್ಟಿ/ಪ್ರವಾಹದಿಂದ ಬೆಳಗಾವಿ ನಗರವು ಜಲಾವೃತವಾಗುವುದನ್ನು ತಡೆಗಟ್ಟಲು ಕೊನವಾಳ ಗಲ್ಲಿನಾಲ ಮತ್ತು ಅಶೋಕನಗರ ನಾಲೆಗಳನ್ನು ಈಗಾಗಲೇ ದುರಸ್ತಿಪಡಿಸಲಾಗಿದೆ. ಮುಂದುವರೆದು, ಬಳ್ಳಾರಿ ನಾಲೆ, ಲೆಂಡಿನಾಲೆ ಹಾಗೂ ನಾಗಝುರಿ ನಾಲೆಗಳನ್ನು ಅಭಿವೃದ್ಧಿಪಡಿಸಲು ರೂ.71.81ಕೋಟಿಗಳ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಸಧ್ಯಕ್ಕೆ ಅನುದಾನದ ಕೊರತೆಯಿಂದಾಗಿ ಮೇಲ್ಕಂಡ ನಾಲಾಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಮುಂದಿನ ದಿನಗಳಲ್ಲಿ ಅನುದಾನ ಲಭ್ಯತೆ ಆಧರಿಸಿ ನಾಲೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು.
ಇ)	ಪ್ರತಿ ಬಾರಿ ಅತಿವೃಷ್ಟಿಯಿಂದ ಆಗುವ ಹಾನಿಯನ್ನು ತಪ್ಪಿಸಲು ಬೆಳಗಾವಿ ನಗರದಲ್ಲಿ ಹರಿಯುವ ನಾಲೆಗಳ ಅಭಿವೃದ್ಧಿಗಾಗಿ ಮಾಡಿರುವ ಪ್ರಸ್ತಾವನೆಯು ಯಾವ ಹಂತದಲ್ಲಿದೆ;	
ಈ)	ನಾಲೆಗಳ ಅಭಿವೃದ್ಧಿಯ ಯೋಜನೆಗೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿದೆಯೇ; ಹಾಗಿದ್ದಲ್ಲಿ, ಎಷ್ಟು ಮೊತ್ತವನ್ನು ನಿಗದಿಪಡಿಸಲಾಗಿದೆ; ಇಲ್ಲವಾದಲ್ಲಿ ವಿಳಂಬಕ್ಕೆ ಕಾರಣಗಳೇನು?	

ಕಡತ ಸಂಖ್ಯೆ: ನಅಇ 56 ಎಸಿಬಿ 2021(ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 523
2. ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ)
3. ಉತ್ತರಿಸುವ ದಿನಾಂಕ : 14.12.2021
4. ಉತ್ತರಿಸುವ ಸಚಿವರು : ಗೃಹ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಬೆಳಗಾವಿ ಆಯುಕ್ತಾಲಯದ ವ್ಯಾಪ್ತಿಗೆ ಗಾಂಜಾ, ಅಫೀಮು, (ಡ್ರಗ್) ಮಟ್ಕಾ ಹಾಗೂ ಕಳ್ಳಬಟ್ಟಿ ಮಾದಕ ದ್ರವ್ಯಗಳ ಬಳಕೆ, ಜಮೀನುಗಳನ್ನು ಅನಧಿಕೃತವಾಗಿ ಕಬಜಾ ಪಡೆಯುತ್ತಿರುವುದು ಮುಂತಾದ ವಿವಿಧ ಬಗೆಯ ಅಪರಾಧ ಪ್ರಕರಣಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ನಿಯಂತ್ರಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು;	ಬೆಳಗಾವಿ ಪೊಲೀಸ್ ಆಯುಕ್ತಾಲಯದ ವ್ಯಾಪ್ತಿಯಲ್ಲಿ ಮಾದಕ ದ್ರವ್ಯಗಳ ಪ್ರಕರಣಗಳು, ಕಳ್ಳಭಟ್ಟಿ ಮತ್ತು ಮಟ್ಕಾ ಪ್ರಕರಣಗಳು ವರದಿಯಾಗಿರುತ್ತವೆ. ಜಮೀನುಗಳನ್ನು ಅನಧಿಕೃತವಾಗಿ ಕಬಜಾ ಪಡೆಯುತ್ತಿರುವ ಕುರಿತು ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. **<u>ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳು</u>** ಬೆಳಗಾವಿ ನಗರದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗಾಂಜಾ/ಅಫೀಮು(ಡ್ರಗ್), ಮಟ್ಕಾ ಹಾಗೂ ಕಳ್ಳಭಟ್ಟಿ, ಮಾದಕ ದ್ರವ್ಯಗಳ ಬಳಕೆ, ಜಮೀನುಗಳನ್ನು ಅನಧಿಕೃತವಾಗಿ ಕಬ್ಜಾ ಅಪರಾಧ ಪ್ರಕರಣಗಳ ಮುನ್ನಚ್ಚರಿಕೆಯ ದೃಷ್ಟಿಯಿಂದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಕಟ್ಟು ನಿಟ್ಟಿನ ಸೂಕ್ತ ಸಲಹೆ ಸೂಚನೆಗಳನ್ನು ನೀಡಲಾಗುತ್ತಿದೆ. ಮಾದಕ ದ್ರವ್ಯ ಸೇವನೆ ಮಾಡುವವರ ಬಗ್ಗೆ ಹಾಗೂ ಮಾರಾಟ ಮಾಡುವವರ ಬಗ್ಗೆ ಅಧೀನ ಪೊಲೀಸ್ ಠಾಣೆಗಳ ಅಧಿಕಾರಿಗಳು ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವುದು ಮತ್ತು ಬಾತ್ಮೀದಾರರ ಮುಖಾಂತರ ಬಾತ್ಮೀ ತಿಳಿಸುವ ವ್ಯವಸ್ಥೆ ಇಡಲಾಗಿದೆ. ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಕುರಿತು ಸಭೆ ಏರ್ಪಡಿಸಿ ಮಾದಕ ವಸ್ತುಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ. ಮಾದಕ ವಸ್ತುಗಳ ಮಾರಾಟದ ಬಗ್ಗೆ ಅಧೀನ ಪೊಲೀಸ್ ಅಧಿಕಾರಿಗಳು ಕಟ್ಟು ನಿಟ್ಟಿನ ಕ್ರಮ ಕೈಗೊಂಡಿದ್ದು, ಅಲ್ಲದೇ ಮಾದಕ ವಸ್ತುಗಳ ಮಾರಾಟ ಹಾಗೂ ಅವುಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ತಡೆಗಟ್ಟುವ ಸಲುವಾಗಿ ಮಾಸಿಕ ಅಪರಾಧ ಸಭೆಗಳಲ್ಲಿ ಪೊಲೀಸ್ ಅಧಿಕಾರಿಗಳಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಲಾಗಿದೆ. ಮೋಹಲ್ಲಾ/ಗ್ರಾಮ ಸಭೆ ಹಾಗೂ ಪರಿಶಿಷ್ಟ ವರ್ಗದ ಬಡಾವಣೆಗಳಿಗೆ ಭೇಟಿ ನೀಡಿದ ಸಮಯದಲ್ಲಿ ಜನರಿಗೆ ಸೂಕ್ತ ತಿಳುವಳಿಕೆ ನೀಡಲಾಗುತ್ತಿದೆ.
ಆ	ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಪ್ರಕರಣಗಳು ಎಷ್ಟು; (ಠಾಣೆವಾರು ವರ್ಷವಾರು ಮಾಹಿತಿ ನೀಡುವುದು)	ಪೊಲೀಸ್ ಆಯುಕ್ತಾಲಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಪ್ರಕರಣಗಳ ಮಾಹಿತಿಯನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.

ಇ	ಅಪರಾಧಿಗಳನ್ನು ಇಲಾಖೆಯವರು ಪತ್ತೆ ಹಚ್ಚಿದ್ದಾರೆಯೇ; ಹಾಗಿದ್ದಲ್ಲಿ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ;	ಅಪರಾಧಿಗಳನ್ನು ಪತ್ತೆ ಹಚ್ಚಿ, ಅವರುಗಳ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಿ, ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತಿದೆ.
ಈ	ಬೆಳಗಾವಿ ಪೊಲೀಸ್ ಆಯುಕ್ತಾಲಯದ ವ್ಯಾಪ್ತಿಗೆ ಬರುವ ಪೊಲೀಸ್ ಠಾಣೆಗಳು ಎಷ್ಟು; ಅಲ್ಲಿ ಹುದ್ದೆಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ, ಯಾವ ಯಾವ ಠಾಣೆಗಳಲ್ಲಿ ಯಾವ ಯಾವ ಹುದ್ದೆಗಳ ಕೊರತೆ ಇದೆ; ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಉದ್ದೇಶವು ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ, ಯಾವಾಗ ಮಾಡಿಕೊಳ್ಳಲಾಗುವುದು?	ಬೆಳಗಾವಿ ಪೊಲೀಸ್ ಆಯುಕ್ತಾಲಯದ ವ್ಯಾಪ್ತಿಯಲ್ಲಿ ಒಟ್ಟು 16 ಪೊಲೀಸ್ ಠಾಣೆಗಳು ಇರುತ್ತವೆ. ಈ ಠಾಣೆಗಳಲ್ಲಿ ಒಟ್ಟು 122 ಸಿಪಿಸಿ ಹುದ್ದೆಗಳು ಖಾಲಿ ಇದ್ದು ಸದರಿ ಖಾಲಿ ಹುದ್ದೆಗಳಲ್ಲಿ 35 ಹುದ್ದೆಗಳು ಪ್ರಸ್ತುತ ನೇಮಕಾತಿ ಹಂತದಲ್ಲಿದ್ದು ಬಾಕಿ ಉಳಿದ ಹುದ್ದೆಗಳು ಮತ್ತು 18 ಸಿಪಿಸಿ ರವರುಗಳು ಬುನಾದಿ ತರಬೇತಿ ಪಡೆಯುತ್ತಿದ್ದು, ಸದರಿಯವರ ತರಬೇತಿ ಮುಕ್ತಾಯಗೊಂಡ ನಂತರ ಠಾಣೆಗಳಿಗೆ ನಿಯುಕ್ತಿಗೊಳಿಸಲಾಗುವುದು, 2019-20 ಮತ್ತು 2020-21ನೇ ಸಾಲಿನ ನೇಮಕಾತಿಯಲ್ಲಿ ಆಯ್ಕೆಯಾದ ಸಿಪಿಸಿ ರವರುಗಳು ಸ್ವ-ಇಚ್ಛೆಯಿಂದ ಸಿಪಿಸಿ ಹುದ್ದೆಗೆ ಸೇರಲು ಇಚ್ಛೆಯಿಲ್ಲವೆಂದು ಮತ್ತು ನೇಮಕಾತಿ ಆದೇಶ ಹೊರಡಿಸಿದ ನಂತರ ಪರಿತ್ಯಜಿಸಿದ್ದು ಮತ್ತು ಅನ್ಯ ಘಟಕಗಳಿಗೆ ನಿಯೋಜನೆಯಿಂದ ಸಿಪಿಸಿ ಹುದ್ದೆಗಳ ರಿಕ್ತಸ್ಥಾನ ಉಳಿದಿದ್ದು ಮುಂಬರುವ ನೇಮಕಾತಿಯಲ್ಲಿ ಎಲ್ಲ ಹುದ್ದೆಗಳ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು. ಅಧಿಕಾರಿ/ಸಿಬ್ಬಂದಿಗಳ ಬಲಾಬಲದ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.

ಒಇ 29 ಪಿಎಸ್‌ಡಿ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಅನುಬಂಧ-1

ಬೆಳಗಾವಿ ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ವಿವಿದ ಪ್ರಕರಣಗಳ ಸಂಖ್ಯೆ ಮತ್ತು ಪತ್ತೆ ಹಚ್ಚಿ, ಬಂಧಿಸಿದ ಆರೋಪಿಗಳ ಸಂಖ್ಯೆಗಳ ವಿವರಗಳು (ಠಾಣಾವಾರು, ವರ್ಷವಾರು ಮಾಹಿತಿ)

ಅ ನಂ	ಪೊಲೀಸ್ ಠಾಣೆಯ ಹೆಸರು	ದಾಖಲಾಗಿರುವ ವಿವಿಧ ಪ್ರಕರಣಗಳ ಸಂಖ್ಯೆ				ಪತ್ತೆ ಹಚ್ಚಿ, ಬಂಧಿಸಿದ ಆರೋಪಿಗಳ ಸಂಖ್ಯೆ			
		2018	2019	2020	2021 (30.11.2021)	2018	2019	2020	2021 (30.11.2021
1	ಮಾಳಮಾರುತಿ ಪಿಎಸ್	179	167	142	109	244	207	139	126
2	ಮಾರ್ಕೆಟ್ ಪಿಎಸ್	233	159	102	174	276	219	197	150
3	ಎಪಿಎಂಸಿ ಪಿಎಸ್	125	118	81	123	167	140	55	118
4	ಶಹಾಪೂರ ಪಿಎಸ್	104	95	68	71	156	168	207	69
5	ಖಡೇಬಜಾರ ಪಿಎಸ್	107	91	61	83	183	143	95	87
6	ಕ್ಯಾಂಪ್ ಪಿಎಸ್	93	78	50	75	54	45	41	65
7	ತಿಲಕವಾಡಿ ಪಿಎಸ್	110	81	83	88	121	112	183	68
8	ಉದ್ಯಮಭಾಗ ಪಿಎಸ್	99	101	47	50	229	145	63	61
9	ಬೆಳಗಾವಿ ಗ್ರಾಮೀಣ ಪಿಎಸ್	192	178	146	146	220	208	185	244
10	ಕಾಕತಿ ಪಿಎಸ್	283	234	213	171	459	280	286	209
11	ಮಾರಿಹಾಳ ಪಿಎಸ್	167	147	118	120	316	215	149	193
12	ಹಿರೇಬಾಗೇವಾಡಿ ಪಿಎಸ್	134	114	89	98	195	162	168	127
13	ಸಿಇಎನ್ ಪಿಎಸ್	27	38	61	44	33	75	30	58
14	ಮಹಿಳಾ ಪಿ ಎಸ್	74	94	54	81	99	177	108	105
	ಒಟ್ಟು	1927	1695	1315	1433	2752	2296	1906	1680

ಅನುಬಂಧ-2

ಠಾಣೆಗಳಲ್ಲಿನ ಅಧಿಕಾರಿ/ಸಿಬ್ಬಂದಿಗಳ ಬಲಾಬಲದ ವಿವರ					
ಕ್ರಸಂ	ಪೊಲೀಸ್ ಠಾಣೆ	ಹುದ್ದೆ	ಮಂಜೂರಾತಿ ಬಲ	ಹಾಲಿ ಬಲ	ರಿಕ್ತ ಸ್ಥಾನ
01	ಮಾರ್ಕೆಟ್	ಪಿಐ	01	01	–
		ಪಿಎಸ್ಐ	04	04	–
		ಎಎಸ್ಐ	10	10	–
		ಸಿಎಚ್‌ಸಿ	24	24	–
		ಸಿಪಿಸಿ	55	44	11
02	ಶಹಾಪೂರ	ಪಿಐ	01	01	–
		ಪಿಎಸ್ಐ	02	02	–
		ಎಎಸ್ಐ	07	07	–
		ಸಿಎಚ್‌ಸಿ	18	18	–
		ಸಿಪಿಸಿ	46	46	–
03	ಎಪಿಎಂಸಿ	ಪಿಐ	01	01	–
		ಪಿಎಸ್ಐ	02	02	–
		ಎಎಸ್ಐ	08	08	–
		ಸಿಎಚ್‌ಸಿ	25	25	–
		ಸಿಪಿಸಿ	53	46	07
04	ಮಾಳಮಾರುತಿ	ಪಿಐ	01	01	–
		ಪಿಎಸ್ಐ	04	04	–
		ಎಎಸ್ಐ	07	07	–
		ಸಿಎಚ್‌ಸಿ	25	25	–
		ಸಿಪಿಸಿ	51	40	11
05	ಖಡೇಬಜಾರ	ಪಿಐ	01	01	–
		ಪಿಎಸ್ಐ	02	02	–
		ಎಎಸ್ಐ	10	10	–
		ಸಿಎಚ್‌ಸಿ	24	24	–
		ಸಿಪಿಸಿ	59	52	07
06	ಉದ್ಯಮಬಾಗ್	ಪಿಐ	01	01	–
		ಪಿಎಸ್ಐ	02	02	–
		ಎಎಸ್ಐ	07	07	–
		ಸಿಎಚ್‌ಸಿ	18	18	–
		ಸಿಪಿಸಿ	38	27	11
07	ಕ್ಯಾಂಪ್	ಪಿಐ	01	01	–
		ಪಿಎಸ್ಐ	02	02	–
		ಎಎಸ್ಐ	06	06	–
		ಸಿಎಚ್‌ಸಿ	20	20	–
		ಸಿಪಿಸಿ	62	56	06
08	ಟಿಳಕವಾಡಿ	ಪಿಐ	01	01	–
		ಪಿಎಸ್ಐ	02	02	–
		ಎಎಸ್ಐ	06	06	–
		ಸಿಎಚ್‌ಸಿ	18	18	–
		ಸಿಪಿಸಿ	50	39	11

09	ಮಹಿಳಾ	ಪಿಐ	01	01	–
	ಪೊಲೀಸ್ ಠಾಣೆ	ಪಿಎಸ್ಐ	02	02	–
		ಎಎಸ್ಐ	06	06	–
		ಸಿಎಚ್‌ಸಿ	12	12	–
		ಸಿಪಿಸಿ	33	21	12
10	ಸಂಚಾರಿ ದಕ್ಷಿಣ	ಪಿಐ	01	01	–
		ಪಿಎಸ್ಐ	02	02	–
		ಎಎಸ್ಐ	07	07	–
		ಸಿಎಚ್‌ಸಿ	23	23	–
		ಸಿಪಿಸಿ	45	36	09
11	ಸಂಚಾರಿ ಉತ್ತರ	ಪಿಐ	01	01	–
		ಪಿಎಸ್ಐ	02	02	–
		ಎಎಸ್ಐ	07	07	–
		ಸಿಎಚ್‌ಸಿ	23	23	–
		ಸಿಪಿಸಿ	45	37	08
12	ಬೆಳಗಾವಿ	ಪಿಐ	01	01	–
	ಗ್ರಾಮೀಣ	ಪಿಎಸ್ಐ	02	02	–
		ಎಎಸ್ಐ	08	08	–
		ಸಿಎಚ್‌ಸಿ	16	16	–
		ಸಿಪಿಸಿ	38	30	08
13	ಕಾಕತಿ	ಪಿಐ	01	01	–
		ಪಿಎಸ್ಐ	02	02	–
		ಎಎಸ್ಐ	07	07	–
		ಸಿಎಚ್‌ಸಿ	16	16	–
		ಸಿಪಿಸಿ	31	30	01
14	ಹಿರೇಬಾಗೇ	ಪಿಐ	01	01	–
	ವಾಡಿ	ಪಿಎಸ್ಐ	02	02	–
		ಎಎಸ್ಐ	06	06	–
		ಸಿಎಚ್‌ಸಿ	17	17	–
		ಸಿಪಿಸಿ	33	28	05
15	ಮಾರಿಹಾಳ	ಪಿಐ	01	01	–
		ಪಿಎಸ್ಐ	02	02	–
		ಎಎಸ್ಐ	07	07	–
		ಸಿಎಚ್‌ಸಿ	18	18	–
		ಸಿಪಿಸಿ	32	28	04
16	ಸಿಇಎನ್	ಪಿಐ	01	01	–
		ಪಿಎಸ್ಐ	02	02	–
		ಎಎಸ್ಐ	–	–	–
		ಸಿಎಚ್‌ಸಿ	07	07	–
		ಸಿಪಿಸಿ	18	07	11

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.	524
ಮಾನ್ಯ ಸದಸ್ಯರ ಹೆಸರು	ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ)
ಉತ್ತರಿಸಬೇಕಾದ ದಿನಾಂಕ	14-12-2021
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆಯಲ್ಲಿರುವ ಎಮ್‌ಎಸ್‌ಐಎಲ್ / ಮದ್ಯದ ಅಂಗಡಿಗಳ ಸಂಖ್ಯೆ ಎಷ್ಟು; (ಮತಕ್ಷೇತ್ರವಾರು / ಗ್ರಾಮವಾರು ವಿವರ ನೀಡುವುದು)	ಬೆಳಗಾವಿ ಜಿಲ್ಲೆಯಲ್ಲಿ 79 ಎಂ.ಎಸ್.ಐ.ಎಲ್ ಅಂಗಡಿಗಳ (ಸಿಎಲ್-11ಸಿ) ಮತ್ತು 273 ಮದ್ಯದ ಅಂಗಡಿಗಳು (ಸಿಎಲ್-2) ಇವೆ. ಮತಕ್ಷೇತ್ರವಾರು / ಗ್ರಾಮವಾರು ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ.
ಆ)	ಈ ಅಂಗಡಿಗಳನ್ನು ತೆರೆಯಲು ಇರುವ ಮಾನದಂಡಗಳೇನು	1992ನೇ ಸಾಲಿನಿಂದ ಹೊಸದಾಗಿ ಸಿಎಲ್-2 ಸನ್ನದನ್ನು ನೀಡಲು ನಿರ್ಬಂಧವಿರುವುದರಿಂದ ಅಬಕಾರಿ ಇಲಾಖೆಯಿಂದ ಯಾವುದೇ ಹೊಸ ಸಿಎಲ್-2 ಸನ್ನದಿಗೆ ಮಂಜೂರಾತಿ ನೀಡಲಾಗುತ್ತಿಲ್ಲ. ರಾಜ್ಯದಲ್ಲಿ ಎಂ.ಎಸ್.ಐ.ಎಲ್ ಸನ್ನದುಗಳನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾರ್ಗಸೂಚಿಗಳು ಕೆಳಕಂಡಂತಿವೆ: ಎಂ.ಎಸ್.ಐ.ಎಲ್ ಮಳಿಗೆಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ-3(11-ಸಿ), 8, 8(ಎ) ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5ರ ಪ್ರಕಾರ ನಿಬಂಧನೆಗಳನ್ನು ಪಾಲಿಸಿ ಮಂಜೂರು ಮಾಡಲು ಪೂರ್ವಾನುಮತಿ ನೀಡಲಾಗುವುದು. ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 07 ಇಎಫ್‌ಎಲ್ 2008 ದಿನಾಂಕ: 03.07.2009 ರಲ್ಲಿ ಪ್ರತಿ ತಾಲ್ಲೂಕಿಗೆ ಕನಿಷ್ಟ 2 ರಂತೆ 352 ಸನ್ನದುಗಳು, ಜಿಲ್ಲಾ ಕೇಂದ್ರಸ್ಥಾನಕ್ಕೆ 2 ರಂತೆ 58 ಸನ್ನದುಗಳು ಹಾಗೂ ಎಂಎಸ್‌ಐಎಲ್ ಸಂಸ್ಥೆ ಪ್ರಾದೇಶಿಕ ಬೇಡಿಕೆ ಅಧ್ಯಯನ ಆಧರಿಸಿ ಕೋರಿಕೆ ಸಲ್ಲಿಸುವ ಸ್ಥಳಗಳಿಗೆ 53 ಸನ್ನದುಗಳಂತೆ ಒಟ್ಟು 463 ಸನ್ನದುಗಳನ್ನು

ಹಂಚಿಕೆ ಮಾಡಲಾಗಿದೆ.

ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 15 ಇಎಫ್‌ಎಲ್ 2015 ದಿ:23.09.2016 ರಲ್ಲಿ ಕೆಳಕಂಡ ಷರತ್ತುಗಳ ಮೇಲೆ ಎಂ.ಎಸ್.ಐ.ಎಲ್ ಸಂಸ್ಥೆಗೆ ಒಟ್ಟು 900 ಸನ್ನದುಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಲು ಅನುಮೋದನೆ ನೀಡಲಾಗಿದೆ.

i. ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು.

ii. ಈ ರೀತಿ ಗುರುತಿಸುವ ಸ್ಥಳಗಳು ಸರ್ಕಾರವು ತಿಳಿಸಿರುವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲೇ ಇರಬೇಕು ಹಾಗೂ ನಿಗದಿಪಡಿಸಿರುವ ಸಂಖ್ಯೆಯ ಮಿತಿಯಲ್ಲೇ ಇರಬೇಕು.

iii. ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ ವ್ಯಾಪ್ತಿಗೆ ವರ್ಗಾವಣೆ ಆಗದಂತೆ ನೋಡಿಕೊಳ್ಳತಕ್ಕದ್ದು.

iv. ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ ನಂತರ ಅಂತಹ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೆ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳುವುದು.

ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 08 ಇಎಫ್‌ಎಲ್ 2020 ದಿ:08.09.2020ರಲ್ಲಿ ಈಗಾಗಲೇ ಮಂಜೂರು ಮಾಡಿರುವ ಒಟ್ಟು 900 ಸನ್ನದುಗಳ ಪೈಕಿ ಬಾಕಿ ಉಳಿದಿರುವ 441 ಸನ್ನದುಗಳನ್ನು ಕೆಳಕಂಡ ಷರತ್ತುಗಳ ಮೇಲೆ ಪ್ರಾರಂಭಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

1. ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ

	ಸ್ಥಳಗಳನ್ನು ಗುರುತಿಸುವುದು. 2. ಸಿಎಲ್-11(ಸಿ) ಕೋಟಾದಲ್ಲಿನ ಬಾಕಿ ಇರುವ 441 ಚಿಲ್ಲರೆ ಮದ್ಯ ಮಾರಾಟ ಸನ್ನದುಗಳ ಪೈಕಿ ಯಾವುದಾದರೂ ಸನ್ನದನ್ನು ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ವರ್ಗಾವಣೆ ಮಾಡುವುದಾದಲ್ಲಿ ಅದೇ ಜಿಲ್ಲೆಯ ಬೇರೆ ಯಾವುದಾದರೂ ಅಗತ್ಯವಿರುವ ವಿಧಾನಸಭಾ ಕ್ಷೇತ್ರಕ್ಕೆ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳಕ್ಕೆ ದಿನಾಂಕ:31.12.2020 ರೊಳಗೆ ವರ್ಗಾವಣೆ ಮಾಡಿಕೊಳ್ಳತಕ್ಕದ್ದು. 3. ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಅಬಕಾರಿ ಇಲಾಖೆಗೆ ಸಲ್ಲಿಸಿದ ನಂತರ ಅಂತಹ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೆ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳತಕ್ಕದ್ದು. ಸರ್ಕಾರದ ಸುತ್ತೋಲೆ ಸಂಖ್ಯೆ: ಎಫ್‌ಡಿ 65 ಇಡಬ್ಲ್ಯೂಪಿ 2020, ದಿನಾಂಕ: 09-10-2020 ರನ್ವಯ ವಿಧಿಸಿರುವ ಈ ಕೆಳಕಂಡ ಷರತ್ತುಗಳನ್ನು ದೃಢೀಕರಿಸಿಯೇ ಪ್ರಸ್ತಾವನೆಗಳನ್ನು ಸಲ್ಲಿಸಬೇಕಾಗಿ ಸರ್ಕಾರವು ಸೂಚಿಸಿರುತ್ತದೆ. 1. ಎಂ.ಎಸ್.ಐ.ಎಲ್ ಸಂಸ್ಥೆಯು ಸಿಎಲ್-11 ಸಿ ಸನ್ನದಿಗಾಗಿ ಅರ್ಜಿಯನ್ನು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 2 ರನ್ವಯ ಮತ್ತು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 4(1)(ಬಿ) ರ ನಮೂನೆ ಸಿಎಲ್-1ಎ ರಲ್ಲಿಯೇ ಸಲ್ಲಿಸತಕ್ಕದ್ದು. 2. ಎಂ.ಎಸ್.ಐ.ಎಲ್ ಸಂಸ್ಥೆಯ ವತಿಯಿಂದ ಸಿಎಲ್-11 ಸಿ ಸನ್ನದಿಗಾಗಿ ಅರ್ಜಿ ಸಲ್ಲಿಸುವ ವ್ಯಕ್ತಿಯು ಎಂ.ಎಸ್.ಐ.ಎಲ್ ಸಂಸ್ಥೆಯ ನಿರ್ದೇಶಕ ಮಂಡಳಿಯಿಂದ ಅಧಿಕರಿಸಲ್ಪಟ್ಟಿರತಕ್ಕದ್ದು ಮತ್ತು ಅರ್ಜಿಯನ್ನು ನಮೂನೆ-ಸಿಎಲ್-1ಎ ರಲ್ಲಿ ಮತ್ತು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ 4ರ

		ಘೋಷಣೆಯನ್ವಯ ಸಲ್ಲಿಸತಕ್ಕದ್ದು. 3. ಈ ರೀತಿಯಾಗಿ ಅಧೀಕರಿಸಲ್ಪಟ್ಟ ವ್ಯಕ್ತಿಯು ಸನ್ನದಿಗಾಗಿ ಅರ್ಜಿಯನ್ನು ಸಕ್ಷಮ ಪ್ರಾಧಿಕಾರಿಯಾದ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.
ಇ)	ಶಾಲಾ ಕಾಲೇಜುಗಳ ಹತ್ತಿರ/ವಸತಿ ಪ್ರದೇಶಗಳ ಹತ್ತಿರ, ದೇವಸ್ಥಾನಗಳ ಹತ್ತಿರ ಸಾರಾಯಿ ಅಂಗಡಿಗಳನ್ನು ತೆರೆಯಲು ನಿಯಮ ಇದೆಯೇ; ಇಲ್ಲವಾದಲ್ಲಿ, ಬೆಳಗಾವಿ ನಗರದಲ್ಲಿ ಇಂತಹ ಪ್ರದೇಶಗಳಲ್ಲಿಯೇ ಈ ಅಂಗಡಿಗಳಿಗೆ ಪರವಾನಿಗಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವುಗಳ ತೆರವಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ವಿವರ ನೀಡುವುದು;	ಹೊಸದಾಗಿ ಸನ್ನದು ಮಂಜೂರು ಮಾಡಲು ಉದ್ದೇಶಿತ ಸ್ಥಳವು ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯಮ 5ರಂತೆ ಆಕ್ಷೇಪಣಾ ಸ್ಥಳಗಳಿಂದ ಮುಕ್ತವಾಗಿರಬೇಕಾಗಿರುತ್ತದೆ. ಸರ್ಕಾರದ ಆದೇಶ ಸಂ.ಎಫ್‌ಡಿ 11 ಪಿಇಎಸ್ 2015, ಬೆಂಗಳೂರು, ದಿನಾಂಕ 19-05-2017ರಲ್ಲಿ ದಿನಾಂಕ 01-07-2016ಕ್ಕೆ ಅಥವಾ ಅದಕ್ಕಿಂತ ಮುಂಚಿತವಾಗಿ ಅಸ್ತಿತ್ವದಲ್ಲಿದ್ದ ಅಬಕಾರಿ ಸನ್ನದು ಸ್ಥಳದಿಂದ 100 ಮೀಟರ್ ಅಂತರದಲ್ಲಿ ಯಾವುದೇ ಧಾರ್ಮಿಕ ಸ್ಥಳಗಳು ಅಥವಾ ಶೈಕ್ಷಣಿಕ ಸಂಸ್ಥೆಗಳು ಅಥವಾ ಆಸ್ಪತ್ರೆಗಳು ಅಥವಾ ಯಾವುದೇ ಕೇಂದ್ರ ಸರಕಾರ ಅಥವಾ ರಾಜ್ಯ ಸರಕಾರದ ಕಛೇರಿಗಳು ಅಥವಾ ಸ್ಥಳೀಯ ಸಂಸ್ಥೆಗಳ ಕಛೇರಿಗಳು ಇದ್ದಲ್ಲಿ ಅಂತಹ ಸನ್ನದುಗಳಿಗೆ ವಿನಾಯಿತಿ ನೀಡಿರುತ್ತದೆ. ಹೀಗೆ ವಿನಾಯಿತಿ ಪಡೆದಿರುವ ಸನ್ನದುಗಳನ್ನು ಹೊರತುಪಡಿಸಿ ಬೆಳಗಾವಿ ನಗರದಲ್ಲಿ ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯಮ 5 ನ್ನು ಉಲ್ಲಂಘಿಸಿ ಯಾವುದೇ ಆಕ್ಷೇಪಣಾ ಸ್ಥಳದಲ್ಲಿ ಸನ್ನದು ಮಂಜೂರಾತಿ ನೀಡಿರುವುದಿಲ್ಲ. ಹೀಗಾಗಿ ಸನ್ನದುಗಳನ್ನು ತೆರವುಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.
ಈ)	ಬೆಳಗಾವಿ ತಾಲ್ಲೂಕಿನಲ್ಲಿ ಕಾನೂನು ಬಾಹಿರ ಅಂಗಡಿಗಳ ತೆರವಿಗೆ ಅಧಿಕಾರಿಗಳು ವಿಳಂಬ ಮಾಡುತ್ತಿರಲು ಕಾರಣವೇನು; ವಿಳಂಬ ಮಾಡಿರುವ ಪ್ರಕರಣಗಳು ಎಷ್ಟು; ಅವರ ಮೇಲೆ ಕೈಗೊಂಡಿರುವ ಕ್ರಮಗಳೇನು?	ಬೆಳಗಾವಿ ತಾಲ್ಲೂಕಿನಲ್ಲಿ ಕಾನೂನು ಬಾಹಿರವಾಗಿ ಯಾವುದೇ ಸನ್ನದುಗಳಿಗೆ ಮಂಜೂರಾತಿ ನೀಡಿರುವುದಿಲ್ಲವಾದ್ದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆಇ 123 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು

ಅನುಬಂಧ

ಮತಕ್ಷೇತ್ರ	ನಗರ/ಪಟ್ಟಣ/ ಗ್ರಾಮ ಹೆಸರು	ಎಂ.ಎಸ್.ಐ.ಎಲ್ ಸನ್ನದುಗಳ ಸಂಖ್ಯೆ	ಸಿಎಲ್-2 ಸನ್ನದುಗಳ ಸಂಖ್ಯೆ
1	2	3	4
ಬೆಳಗಾವಿ ಉತ್ತರ ಮತಕ್ಷೇತ್ರ	ಬೆಳಗಾವಿ ಶಹರ	5	34
ಬೆಳಗಾವಿ ಗ್ರಾಮೀಣ ಮತಕ್ಷೇತ್ರ	ಸಾಂಬ್ರಾ	-	2
	ಹಿರೇಬಾಗೇವಾಡಿ	-	3
	ಮಾರಿಹಾಳ	-	1
	ಹಿಂಡಲಗಾ	-	3
	ಉಚಗಾಂವ	-	2
	ಮೊದಗಾ	1	-
	ಮಚ್ಛೆ	-	1
	ಬೆಳಗುಂದಿ	-	1
	ಬೆಳಗಾವಿ ಶಹರ	-	-
ಯಮಕನಮರಡಿ ಮತಕ್ಷೇತ್ರ	ಕಾಕತಿ	-	1
	ಹೊನಗಾ	-	1
	ಹತ್ತರಗಿ	-	2
	ದಾದಬಾನಟ್ಟಿ	-	2
	ಪಾಶ್ಚಾಪೂರ	-	1
	ಅಲದಾಳ	-	1
	ಕೋಚರಿ	-	1
ಬೆಳಗಾವಿ ದಕ್ಷಿಣ ಮತಕ್ಷೇತ್ರ	ಬೆಳಗಾವಿ ಶಹರ	1	18
	ಬೆಳಗಾವಿ ಶಹರ	1	10
ಸವದತ್ತಿ	ಸವದತ್ತಿ ಶಹರ	1	6
	ಯರಗಟ್ಟಿ	-	2
	ರೈನಾಪೂರ	1	-
	ಮುನವಳ್ಳಿ	-	2
	ಇನಾಂಹೊಂಗಲ್	1	1
	ತಲ್ಲೂರ	-	1
	ಶಿರಸಂಗಿ	1	-
	ಕಲ್ಲಾಪೂರ (ಶಿರಸಂಗಿ)	-	1
	ಉಗರಗೋಳ	-	1
	ಬೆನಕಟ್ಟಿ	1	-

	ಕೆ ಶಿವಾಪೂರ	-	1
	ಯರಝುರವಿ	-	1
	ಹೂಲಿ	1	-
ಬೈಲಹೊಂಗಲ	ಮುರಗೋಡ	-	1
	ಚಚಡಿ	1	-
	ಅಸುಂಡಿ	1	-
	ಬೆಳವಡಿ	-	2
	ದೊಡವಾಡ	-	1
	ಸಂಗೊಳ್ಳಿ	1	-
	ಬೈಲಹೊಂಗಲ	1	4
ಕಿತ್ತೂರ	ಸಂಪಗಾಂವ	-	2
	ನೇಸರಗಿ	-	1
	ದೇಶನೂರ	1	-
	ಎಂ.ಕೆ ಹುಬ್ಬಳ್ಳಿ	-	4
	ಕಿತ್ತೂರ	1	4
	ತಿಗಡಿ	1	-
	ದೇಗಾಂವ	-	1
	ಅಂಬಡಗಟ್ಟಿ	1	-
	ಇಟಗಿಕ್ರಾಸ	-	1
ಖಾನಾಪೂರ	ಖಾನಾಪೂರ	1	4
	ಜಾಂಬೋಟಿ	1	1
	ರುಮೇವಾಡಿ	-	1
	ನಂದಗಡ	-	2
	ಕಸಬಾ ನಂದಗಡ	-	1
	ಬೀಡಿ	-	2
	ಕಕ್ಕೇರಿ	1	-
	ಗಂದಿಗವಾಡ	1	-
	ಇಟಗಿ	-	1
	ಪಾರಿಶ್ವಾಡ	-	1
	ದೇವಲತ್ತಿ	1	-
	ಇದ್ದಲಹೊಂಡ	1	-
	ಲೋಂಡಾ	-	1
ರಾಮದುರ್ಗ	ರಾಮದುರ್ಗ ಶಹರ	1	7
	ತುರನೂರು	1	-
	ರಂಕಲಕೊಪ್ಪ	1	-
	ಹಲಗತ್ತಿ	1	-
	ಸಾಲಾಪೂರ	1	-
	ಚಿಕ್ಕೋಪ್ಪ	1	1

	ಕಟಕೋಳ	1	1
	ಸಾಲಹಳ್ಳಿ	-	1
	ಹೊಸಕೋಟೆ	-	1
	ಸುರೇಬಾನ	-	2
	ಚಂದರಗಿ	-	1
ಹುಕ್ಕೇರಿ	ಸಂಕೇಶ್ವರ	1	5
	ಹುಕ್ಕೇರಿ	1	4
	ಅಕ್ಕಿವಾಟ	1	0
	ಕಣಗಲಾ	-	1
	ನಾಗನೂರ ಕೆ ಎಸ್	-	1
	ಯಾದಗೂಡ	-	1
	ಶಿಂಧಿಹಟ್ಟಿಡ್ಯಾಂ	-	1
	ಬೆಲ್ಲದಬಾಗೇವಾಡಿ	-	1
	ಸಾರಾಪೂರ	-	1
ಚಿಕ್ಕೋಡಿ-ಸದಲಗಾ	ಚಿಕ್ಕೋಡಿ	1	6
	ಅಂಕಲಿ	0	2
	ಎಕ್ಸ್ಂಬಾ	0	2
	ಕೇರೂರ	1	1
	ಇಂಗಳಿ	1	0
	ಸದಲಗಾ	0	1
	ಪಟ್ಟಣಕುಡಿ	1	0
	ಖಡಕಲಾಟ	1	1
	ಮಾಂಜರಿ	0	1
	ಶಿರಗಾಂವ	0	1
	ಶಮನೆವಾಡಿ	0	1
ನಿಪ್ಪಾಣಿ	ನಿಪ್ಪಾಣಿ	1	10
	ಕೂಗನೊಳ್ಳಿ	0	1
	ಅಕ್ಕೋಳ	0	1
	ಗಳತಗಾ	0	1
	ಭೋಜ	0	1
	ಕಸನಾಳ	0	1
	ಭೊರಗಾಂವ	0	2
	ಬೇಡಕಿಹಾಳ	0	1
	ಸೌಂದಲಗಾ	0	1
	ಮಾಣಕಾಪುರ	0	1
	ಶಿರಗುಪ್ಪಿ	1	0
	ಅಪ್ಪಾಚಿವಾಡಿ	1	0
ಗೋಕಾಕ	ಗೋಕಾಕ	2	8

	ಮಾಣಿಕವಾಡಿ	0	1
	ಕೋಣ್ಣುರ	0	1
	ಘಟಪ್ರಭಾ	1	2
	ಶಿಂಧಿಕುರಬೆಟ	0	1
	ಅಜ್ಜನಕಟ್ಟಿ	0	1
	ಖನಗಾಂವ	0	2
	ಅಂಕಲಗಿ	1	1
	ಬೆಣಚಿಮರಡಿ	1	0
	ದಂಡಾಪೂರ	1	0
	ಕೌಜಲಗಿ	0	2
ಅರಬಾವಿ	ಮೂಡಲಗಿ	1	4
	ಸಂಗನಕೇರಿ	1	1
	ಕಲ್ಲೋಳ್ಳಿ	0	1
	ತುಕಾನಟ್ಟಿ	0	1
	ವಡೆರಹಟ್ಟಿ	0	1
	ಕುಲಗೋಡ	0	1
	ನಾಗನೂರ	0	1
	ಯಾದವಾಡ	1	1
	ಸುಣದೋಳಿ	1	0
	ಬಿಸನಕೊಪ್ಪ	1	0
ಕಾಗವಾಡ	ಶಿರಗುಪ್ಪಿ	1	-
	ಶಹಾಪೂರ	-	2
	ಉಗಾರ ಬಿಕೆ	-	1
	ಶೆಡಬಾಳ	-	1
	ಉಗಾರ ಖುರ್ದ	1	1
	ಐನಾಪೂರ	-	1
	ಮಂಗಸೂಳಿ	-	1
	ಕಾಗವಾಡ	1	2
	ಖಿಳೆಗಾಂವ	1	-
	ಅನಂತಪೂರ	1	1
	ಮದಬಾವಿ	1	1
ಅಥಣಿ	ದರೂರ	-	1
	ಯಲ್ಲಮವಾಡಿ	-	1
	ಕೋಕಟನೂರ	-	1
	ಕೂಹಳ್ಳಿ	1	-
	ಬುರ್ಲಟ್ಟಿ	1	-
	ಹುಲಗಬಾಳ	1	-
	ರಡೆರಟ್ಟಿ	1	-

	ಸಂಕೊನಟ್ಟಿ	-	1
	ತೆಲಸಂಗ	-	1
	ಕೊಟ್ಟಲಗಿ	-	1
	ಅಥಣಿ ಗ್ರಾಮೀಣ		1
	ಅಥಣಿ ಪಟ್ಟಣ	1	6
ರಾಯಬಾಗ	ಕಂಕಣವಾಡಿ	1	2
	ನಂದಿಕುರಳಿ	-	1
	ನಿಪನಾಳ	-	1
	ಮೇಖಳಿ	-	1
	ಯಡ್ರಾಂವ	-	1
	ಬೆಂಡವಾಡ	1	-
	ಬೂದಿಹಾಳ	1	-
	ರಾಯಬಾಗ ಗ್ರಾಮೀಣ	1	-
	ಜಾಗನೂರ	1	0
	ಕರೋಶಿ	0	1
	ಕಬ್ಬೂರ	0	2
	ಚಿಂಚಲಿ	1	-
ಕುಡಚಿ	ಹಾರೂಗೇರಿ	1	3
	ಅಳಗವಾಡಿ	-	1
	ನಿಡಗುಂದಿ	-	1
	ಹಿಡಕಲ್	-	1
	ಮುಗಳಖೋಡ	1	2
	ಪರಮಾನಂದವಾಡಿ	-	1
	ಕುಡಚಿ	-	1
	ಅಲಖನೂರ	1	-
	ಕುಡಚಿ ಗ್ರಾಮೀಣ	1	-
	ಇಟ್ನಾಳ	1	-
ಜಿಲ್ಲೆಯ ಒಟ್ಟು		**79**	**273**

ಆಇ 123 ಇಎಲ್‌ಕ್ಯೂ 2021

ಕರ್ನಾಟಕ ವಿಧಾನ ಸಭೆ

1	ಮಾನ್ಯ ಸದಸ್ಯರ ಹೆಸರು	: ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ)
2	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 525
3	ಉತ್ತರಿಸಬೇಕಾದ ದಿನಾಂಕ	: 14-12-2021
4	ಉತ್ತರಿಸಬೇಕಾದವರು	: ಕಾರ್ಮಿಕ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಬೆಳಗಾವಿ ತಾಲ್ಲೂಕಿನ ಮಚ್ಚೆ ಗ್ರಾಮದ ಪರಿಸರದಲ್ಲಿ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆಯನ್ನು ಆರಂಭಿಸುವ ಹಿನ್ನೆಲೆಯಲ್ಲಿ ಶಾಸಕರೇ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆಯೇ; ಸಲ್ಲಿಸಿದ್ದಲ್ಲಿ, ಯಾರು ಸಲ್ಲಿಸಿದ್ದಾರೆ; ಅದರ ಸಂಪೂರ್ಣ ವಿವರ ನೀಡುವುದು, ಈ ಕುರಿತು ಕ್ರಮ ಕೈಗೊಳ್ಳಲು ವಿಳಂಬ ಮಾಡುತ್ತಿರಲು ಕಾರಣವೇನು; (ಪ್ರಸ್ತುತ ಹಂತದ ವಿವರ ನೀಡುವುದು)	ಬೆಳಗಾವಿ ತಾಲ್ಲೂಕಿನ ಮಚ್ಚೆ ಗ್ರಾಮದ ಪರಿಸರದಲ್ಲಿ ಹೆಚ್ಚಿನ ಸಂಖ್ಯೆಯ ವಿವಿಧ ಬಗೆಯ ಕಾರ್ಖಾನೆಗಳಿದ್ದು, ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಆರೋಗ್ಯ ಸೌಲಭ್ಯವನ್ನು ಕಲ್ಪಿಸುವ ದೃಷ್ಟಿಯಿಂದ 100 ಹಾಸಿಗೆಗಳ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆಯನ್ನು ನಿರ್ಮಿಸಲು ಮಚ್ಚೆ ಗ್ರಾಮದ ಸರ್ವೆ ನಂ.489/2 ರಲ್ಲಿ ಬಾಕಿ ಉಳಿದ 5 ಎಕರೆ 33 ಗುಂಟೆಯಷ್ಟು ಜಮೀನನ್ನು ಕಾರ್ಮಿಕ ಇಲಾಖೆಗೆ ವರ್ಗಾಯಿಸಲು ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಶ್ರೀ ಅಭಯ್ ಪಾಟೀಲ್, ಶಾಸಕರು (ಬೆಳಗಾವಿ ದಕ್ಷಿಣ) ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ಶಾಸಕರ ಮನವಿಯಲ್ಲಿನ ಕೋರಿಕೆಯ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಸದರಿ ಜಾಗವನ್ನು ಇ.ಎಸ್.ಐ.ಎಸ್ ಆಸ್ಪತ್ರೆಗೆ ಕಾಯ್ದಿರಿಸುವ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಬೆಳಗಾವಿ, ಜಿಲ್ಲಾಧಿಕಾರಿಯವರಿಗೆ ದಿನಾಂಕ.27-02-2019, 24-03-2021, 08-02-2022 ರಂದು ಪತ್ರವನ್ನು ಬರೆಯಲಾಗಿದೆ. ದಿನಾಂಕ.31-01-2022 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸದರಿ ಆಸ್ಪತ್ರೆಗೆ ಸಮಾಜ ಕಲ್ಯಾಣ ಇಲಾಖೆಯ ಅಧೀನಕ್ಕೆ ಬರುವ ನಿರಾಶ್ರಿತರ ಪರಿಹಾರ ಕೇಂದ್ರ, ಮಚ್ಚೆ -ಬೆಳಗಾವಿ, ಇಲ್ಲಿ 5 ಎಕರೆ ಜಮೀನನ್ನು ಕಾರ್ಮಿಕ ಇಲಾಖೆಯ 100 ಹಾಸಿಗೆಯುಳ್ಳ ಆಸ್ಪತ್ರೆ ನಿರ್ಮಾಣಕ್ಕಾಗಿ ಮಂಜೂರು ಮಾಡಲು ನಿರ್ಣಯಿಸಲಾಗಿರುತ್ತದೆಯೆಂದು ಬೆಳಗಾವಿ ಜಿಲ್ಲಾಧಿಕಾರಿಯವರು ತಿಳಿಸಿರುತ್ತಾರೆ. ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆಯ ನಿರ್ಮಾಣವು ಕಾರ್ಮಿಕ ರಾಜ್ಯ ವಿಮಾ ನಿಗಮಕ್ಕೆ ಸಂಬಂಧಿಸಿರುತ್ತದೆ. ಕಾರ್ಮಿಕ ರಾಜ್ಯ ವಿಮಾ

		ಆಸ್ಪತ್ರೆಯನ್ನು ಪ್ರಾರಂಭಿಸಲು ಕಾರ್ಮಿಕ ರಾಜ್ಯ ವಿಮಾ ನಿಗಮದ ನಾರಮ್ಸ್ ಈ ಕೆಳಕಂಡಂತಿದೆ (ಪ್ರತಿ ಲಗತ್ತಿಸಿದೆ) (1) 30 ಹಾಸಿಗೆ ಸಾಮರ್ಥ್ಯದ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆಯನ್ನು ಪ್ರಾರಂಭಿಸಲು ಕನಿಷ್ಠ 20,000 ಹಾಗೂ 100 ಹಾಸಿಗೆ ಸಾಮರ್ಥ್ಯದ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆ ಪ್ರಾರಂಭಿಸಲು ಕನಿಷ್ಠ 50,000 ನೊಂದಾಯಿತ ವಿಮಾದಾರರು ಇರಬೇಕು. (2) ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆಯಿಂದ ಕನಿಷ್ಠ 50 ಕಿ.ಮೀ. ಅಂತರದಲ್ಲಿ ಮತ್ತೊಂದು ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆಯನ್ನು ಪ್ರಾರಂಭಿಸಲು ಅವಕಾಶವಿರುವುದಿಲ್ಲ. (3) ಈಗಾಗಲೇ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆ, ಅಶೋಕನಗರ, ಬೆಳಗಾವಿಯಿಂದ ಮಚ್ಛೆ ಗ್ರಾಮವು 31.2 ಕಿ.ಮೀ. ಅಂತರದಲ್ಲಿರುತ್ತದೆ. ಬೆಳಗಾವಿ ವಲಯದಲ್ಲಿ ವಿಮಾದಾರರ ಅನುಕೂಲಕ್ಕಾಗಿ ಪ್ರಸ್ತುತ, ಉದ್ಯಮಭಾಗ, ಪೀರನವಾಡಿ, ಆನಂದವಾಡಿ, ಗೋಕಾಕ್, ಕೊಣ್ಣೂರು, ಕೊತ್ವಾಲಗಲ್ಲಿ, ಯಮುನಾಪುರ ಹಾಗೂ ನಿಪ್ಪಾಣಿ ಇಲ್ಲಿ ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯಗಳು ಕಾರ್ಯ ನಿರ್ವಹಿಸುತ್ತಿವೆ ಹಾಗೂ 06 ಖಾಸಗಿ ಆಸ್ಪತ್ರೆಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. **ದಿನಾಂಕ:22.03.2021ರಂದು ನಡೆದ ಸಭೆಯ ನಡವಳಿಯಲ್ಲಿ ಬೆಳಗಾವಿಯ ಉದ್ಯಮ್ ಭಾಗದಲ್ಲಿ 30 ಹಾಸಿಗೆ ಸಾಮರ್ಥ್ಯದ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆ ನಿರ್ಮಾಣದ ಬಗ್ಗೆ ಪ್ರಸ್ತಾಪಿಸಲಾಗಿರುತ್ತದೆ.**
(ಆ)	ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ಜಾಗದಲ್ಲಿ ಆಸ್ಪತ್ರೆಯನ್ನು ನಿರ್ಮಿಸಲು ಪ್ರಸ್ತಾವನೆಯನ್ನು ಸಲ್ಲಿಸಿದ್ದಾಗೂ ಈ ಕುರಿತು ಈವರೆವಿಗೆ ಕ್ರಮ ಕೈಗೊಳ್ಳದಿರಲು ಕಾರಣವೇನು; ವಿಳಂಬಕ್ಕೆ ಕಾರಣಗಳೇನು; (ಮಾಹಿತಿ ನೀಡುವುದು)	ಸಮಾಜ ಕಲ್ಯಾಣ ಅಧೀನದಲ್ಲಿ ಬರುವ ಕೇಂದ್ರ ಪರಿಹಾರ ಸಮಿತಿಯ ಆಡಳಿತ ವ್ಯಾಪ್ತಿಗೆ ಬರುವ ಬೆಳಗಾವಿ ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಸೇರಿದ ಜಮೀನಿನಲ್ಲಿ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆಯನ್ನು ಪ್ರಾರಂಭಿಸುವ ಕುರಿತಾದ ಯಾವುದೇ ಪ್ರಸ್ತಾವನೆಯು ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಜಿಲ್ಲಾಧಿಕಾರಿಗಳು, ಬೆಳಗಾವಿ ರವರು ನಿರಾಶ್ರಿತರ ಪರಿಹಾರ ಕೇಂದ್ರದ ಅಧ್ಯಕ್ಷರಾಗಿದ್ದು, ಬೆಳಗಾವಿ ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಸೇರಿದ ಜಮೀನು ಜಿಲ್ಲಾಧಿಕಾರಿಗಳ ಹೆಸರಿನಲ್ಲಿದ್ದು, ಕಾರ್ಮಿಕ ಇಲಾಖೆಯ ರಾಜ್ಯ ವಿಮಾ ಆಸ್ಪತ್ರೆಯನ್ನು ನಿರ್ಮಾಣ ಮಾಡುವ ಸಲುವಾಗಿ ದಿನಾಂಕ:31.01.2022ರಂದು ಜಿಲ್ಲಾಧಿಕಾರಿಗಳು, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿದ್ದು, (ಪ್ರತಿ ಲಗತ್ತಿಸಿದೆ). ಸದರಿ ಸಭೆಯಲ್ಲಿನ ನಡವಳಿಯಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ

		ಪರಿಶೀಲಿಸಲಾಗುವುದೆಂದು ಸಮಾಜ ಕಲ್ಯಾಣ ಇಲಾಖೆಯು ತಿಳಿಸಿದೆ.
(ಇ)	ಬೆಳಗಾವಿ ತಾಲ್ಲೂಕ್ಕು ವ್ಯಾಪ್ತಿಯಲ್ಲಿ ಎಷ್ಟು ವಿಧಗಳ ಕಾರ್ಮಿಕ ಬಾಂಧವರುಗಳು ಇದ್ದಾರೆ, ಅವರಿಗೆ ದೊರೆಯುವ ಸೌಲಭ್ಯಗಳು ಯಾವುವು; ಮತ ಕ್ಷೇತ್ರವಾರು ವಿವರ ನೀಡುವುದು;	ಇಲಾಖಾ ವತಿಯಿಂದ ಕಾರ್ಮಿಕ ಸಂಖ್ಯೆಯ ಬಗ್ಗೆ ಯಾವುದೇ ಸಮೀಕ್ಷೆ ನಡೆದಿರುವುದಿಲ್ಲ. ಇಲಾಖೆಯ ಅಧೀನದಲ್ಲಿ ಬರುವ ವಿವಿಧ ಮಂಡಳಿಗಳಲ್ಲಿ ನೊಂದಾಯಿತರಾಗಿರುವ ಹಾಗೂ ಮಂಡಳಿಗಳಿಂದ ದೊರಕುವ ಸೌಲಭ್ಯದ ವಿವರಗಳು ಈ ಕೆಳಗಿನಂತಿದೆ: ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ: ಈ ಮಂಡಳಿಯಿಂದ ಬೆಳಗಾವಿ ತಾಲ್ಲೂಕಿನಲ್ಲಿ 32,127 ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಫಲಾನುಭವಿಗಳಾಗಿ ನೋಂದಣಿಯಾಗಿರುತ್ತಾರೆ. ಅವರಿಗೆ ಒದಗಿಸಲಾಗುವ ಸೌಲಭ್ಯಗಳು ಅನುಬಂಧ-1ರಲ್ಲಿ ಒದಗಿಸಲಾಗಿರುತ್ತದೆ. ಈ ಸೌಲಭ್ಯಗಳು ಮಂಡಳಿಯಲ್ಲಿ ನೋಂದಾಯಿತರಾಗಿರುವ ಎಲ್ಲಾ ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತದೆ. <u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:</u> ಈ ಮಂಡಳಿಯ ವತಿಯಿಂದ ಅಸಂಘಟಿತ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ ಈವರೆಗೆ ಕಾರ್ಮಿಕ ಇಲಾಖೆಯಿಂದ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ ಹಾಗೂ ಅಂದಾಜಿಸಲಾಗಿರುವುದಿಲ್ಲ. ಆದ್ದರಿಂದ ಅಸಂಘಟಿತ ಕಾರ್ಮಿಕರ ನಿಖರ ಸಂಖ್ಯೆ ಲಭ್ಯವಿರುವುದಿಲ್ಲ. ಪ್ರಸ್ತುತ ಕೇಂದ್ರ ಸರ್ಕಾರದ ಇ-ಶ್ರಮ ಪೋರ್ಟಲ್‌ನಲ್ಲಿ ಈವರೆಗೆ ರಾಜ್ಯದಲ್ಲಿ 44,37,444 ಅಸಂಘಟಿತ ಕಾರ್ಮಿಕರು ನೋಂದಣಿಯಾಗಿದ್ದು, ಬೆಳಗಾವಿಯಲ್ಲಿ 4,17,283 ಅಸಂಘಟಿತ ಕಾರ್ಮಿಕರು ನೋಂದಣಿಯಾಗಿರುತ್ತಾರೆ. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಬೆಳಗಾವಿ ತಾಲ್ಲೂಕಿನಲ್ಲಿ ಮತ ಕ್ಷೇತ್ರವಾರು ನೋಂದಾಯಿತರಾದ ಅಸಂಘಟಿತ ಕಾರ್ಮಿಕರ ಮಾಹಿತಿಯು ಲಭ್ಯವಿರುವುದಿಲ್ಲ. ಆದರೆ ಬೆಳಗಾವಿ ತಾಲ್ಲೂಕಿನಲ್ಲಿ ನೋಂದಣಿಯಾದ ಅಸಂಘಟಿತ ಕಾರ್ಮಿಕರ ಯೋಜನಾವಾರು ವಿವರ ಮತ್ತು ಸದರಿ ಅಸಂಘಟಿತ ಕಾರ್ಮಿಕರಿಗೆ ನೀಡುತ್ತಿರುವ ಸೌಲಭ್ಯಗಳ ವಿವರ ಈ ಕೆಳಗಿನಂತಿದೆ. <u>1. ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:</u> ಸಾರಿಗೆ ಇಲಾಖೆಯು ಒದಗಿಸಿರುವ ದತ್ತಾಂಶದ ಪ್ರಕಾರ ಬೆಳಗಾವಿ ತಾಲ್ಲೂಕಿನಲ್ಲಿ ಊರ್ಜಿತ ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಾಲನ ಪರವಾನಗಿ ಹೊಂದಿರುವ 17625 ಚಾಲಕರು ಇರುವುದಾಗಿ

		ತಿಳಿದುಬಂದಿದ್ದು, ಎಲ್ಲಾ ಚಾಲಕರನ್ನು ಈ ಯೋಜನೆಯಡಿ ಫಲಾನುಭವಿಗಳೆಂದು ಪರಿಗಣಿಸಲಾಗಿದೆ. ಯೋಜನೆಯಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ. (ಅ) ಅಪಘಾತ ಪರಿಹಾರ ಸೌಲಭ್ಯ ಯೋಜನೆಯಡಿ:- ➢ ಅಪಘಾತದಿಂದಾದ ಮರಣ ಪ್ರಕರಣ:- ನಾಮನಿರ್ದೇಶಿತರಿಗೆ ರೂ. 5 ಲಕ್ಷ ಪರಿಹಾರ, ➢ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಪ್ರಕರಣ:- ಫಲಾನುಭವಿಗೆ ರೂ.2 ಲಕ್ಷದವರೆಗೆ ಪರಿಹಾರ, ಮತ್ತು ➢ ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ:- ರೂ.1 ಲಕ್ಷದವರೆಗೂ ಚಿಕಿತ್ಸಾ ವೆಚ್ಚದ ಮರುಪಾವತಿ ಮಾಡಲಾಗುತ್ತಿದೆ. (ಆ) ಶೈಕ್ಷಣಿಕ ಧನ ಸಹಾಯ:-ಅಪಘಾತದ ಕಾರಣ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ರೂ.10,000/-ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ. 2. ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ: "ಸ್ಮಾರ್ಟ್ ಕಾರ್ಡ್": ಯೋಜನೆಯಡಿ 11 ಅಸಂಘಟಿತ ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"ರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದೆ. ಈವರೆಗೆ 2722 ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಲಾಗಿದೆ. 3. ಕೋವಿಡ್-19ರ ಮೊದಲನೇ ಅಲೆಯ ವಿಶೇಷ ಪ್ಯಾಕೇಜ್:- ಕೋವಿಡ್-19ರ, ಮೊದಲನೇ ಅಲೆಯ ಲಾಕ್‌ಡೌನ್ ಸಂದರ್ಭದಲ್ಲಿ ಸರ್ಕಾರದಿಂದ ಘೋಷಿತ ರೂ.5,000/-ಗಳ ಒಂದು ಬಾರಿಯ ಪರಿಹಾರ ಕೋರಿ ಬೆಳಗಾವಿ ತಾಲ್ಲೂಕಿನಲ್ಲಿ, ಅಗಸರು ಮತ್ತು ಕ್ಷೌರಿಕರ ವೃತ್ತಿಯಲ್ಲಿ ತೊಡಗಿರುವ 1018 ಕಾರ್ಮಿಕರು ಅರ್ಜಿ ಸಲ್ಲಿಸಿರುತ್ತಾರೆ. ➢ ಕೋವಿಡ್-19ರ 2ನೇ ಅಲೆಯ ವಿಶೇಷ ಪ್ಯಾಕೇಜ್:-

		ಕೋವಿಡ್-19ರ ಎರಡನೇ ಅಲೆಯ ಲಾಕ್‌ಡೌನ್ ಸಂದರ್ಭದಲ್ಲಿ ಸರ್ಕಾರದಿಂದ ಘೋಷಿತ ರೂ.2000/- ಗಳ ಒಂದು ಬಾರಿಯ ಪರಿಹಾರ ಕೋರಿ ಬೆಳಗಾವಿ ತಾಲ್ಲೂಕಿನಲ್ಲಿ, 11 ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ" ವೃತ್ತಿ ನಿರ್ವಹಿಸುತ್ತಿರುವ 36764 ಕಾರ್ಮಿಕರು ಅರ್ಜಿ ಸಲ್ಲಿಸಿರುತ್ತಾರೆ. **ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ** ಈ ಮಂಡಳಿಯಲ್ಲಿ ಸಂಘಟಿತ ಕಾರ್ಮಿಕರಿಗಾಗಿ ಕಲ್ಯಾಣ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಮಂಡಳಿಗೆ 20:40 ರ ಅನುಪಾತದಲ್ಲಿ ವಂತಿಕೆ ಪಾವತಿಸುವ ಕಾರ್ಮಿಕರಿಗೆ ಕಲ್ಯಾಣ ಯೋಜನೆಗಳಡಿ ಸೌಲಭ್ಯಗಳನ್ನು ನೀಡಲಾಗುವುದು. ಮಂಡಳಿಯಿಂದ ಅನುಷ್ಠಾನಗೊಳಿಸಿರುವ ಕಲ್ಯಾಣ ಯೋಜನೆಗಳು 1) ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ 2) ಕಾರ್ಮಿಕರಿಗೆ ವೈದ್ಯಕೀಯ ನೆರವು 3) ಕಾರ್ಮಿಕರಿಗೆ ಅಪಘಾತ ಧನ ಸಹಾಯ 4) ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ 5) ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ 6) ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ 7) ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ ಕ್ಷೇತ್ರವಾರು ವಿವರಗಳು ಮಂಡಳಿಯಲ್ಲಿ ಲಭ್ಯವಿರುವುದಿಲ್ಲ.
(ಈ)	ಬೆಳಗಾವಿ ದಕ್ಷಿಣ ಮತಕ್ಷೇತ್ರದಲ್ಲಿ ಕಾರ್ಮಿಕರ ಕಾಲೋನಿಯನ್ನು ನಿರ್ಮಿಸಲು ಶಾಸಕರು ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆಯೇ; ಸಲ್ಲಿಸಿದ್ದಲ್ಲಿ, ವಿವರ ನೀಡುವುದು; ಕಾರ್ಮಿಕ ಕಾಲೋನಿ ನಿರ್ಮಿಸುವ ಉದ್ದೇಶವು ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ ಯಾವಾಗ ಮಾಡಲಾಗುವುದು;	ಶ್ರೀ ಅಭಯ ಪಾಟೀಲ, ಮಾನ್ಯ ಶಾಸಕರು, ಬೆಳಗಾವಿ ದಕ್ಷಿಣ ಮತಕ್ಷೇತ್ರ ರವರು ಮಾನ್ಯ ವಸತಿ ಸಚಿವರಿಗೆ ವಿಳಾಸಿಸಿ ಸಲ್ಲಿಸಿರುವ ದಿನಾಂಕ:24.12.2021ರ ಮನವಿ ಪತ್ರದಲ್ಲಿ, ತಮ್ಮ ಮತಕ್ಷೇತ್ರವು ನಗರ ಮತ್ತು ಗ್ರಾಮೀಣ ಪ್ರದೇಶದಿಂದ ಕೂಡಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಬಡನೇಕಾರರು ಮತ್ತು ಕೂಲಿ ಕಾರ್ಮಿಕರು ವಾಸವಾಗಿದ್ದು, ವಸತಿ ಸೌಲಭ್ಯದಿಂದ ವಂಚಿತವಾಗಿದ್ದಾರೆ. ಕಾರಣ, ತಮ್ಮ ಮತಕ್ಷೇತ್ರದ ವ್ಯಾಪ್ತಿಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆಯಲ್ಲಿ (Housing for All) 2,000 ಮನೆಗಳನ್ನು ಒದಗಿಸುವುದಾಗಬೇಕೆಂದು ಕೋರಿರುತ್ತಾರೆ.

		ಸದರಿ ಮನವಿ ಪತ್ರದ ಮೇಲೆ ಅಂದೇ ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ರವರನ್ನು ಉದ್ದೇಶಿಸಿ, ತಕ್ಷಣ ಫಲಾನುಭವಿಗಳ ಮಾಹಿತಿ ಪಡೆದು ಎಷ್ಟು ಮನೆಗಳು ಅವಶ್ಯಕತೆ ಇದೆ ಎಂದು ತಿಳಿದು ಕಡತ ಮಂಡಿಸಲು ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಸೂಚಿಸಿರುತ್ತಾರೆ. ಅದರ ಮೇರೆಗೆ ಸದರಿ ನಿಗಮದ ವತಿಯಿಂದ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ ಜಿಲ್ಲೆ ರವರಿಗೆ ದಿನಾಂಕ:05.01.2022 ರಂದು ಬರೆದ ಪತ್ರದಲ್ಲಿ ಸದರಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಬಡ ನೇಕಾರರು ಕೂಲಿ ಕಾರ್ಮಿಕರಿಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಬಿ.ಎಲ್.ಸಿ. ಯಡಿ ರೂ.1.50 ಲಕ್ಷಗಳ ಪ್ರಯೋಜನವನ್ನು ಪಡೆಯಲು ಅರ್ಹ ಫಲಾನುಭವಿಗಳನ್ನು ಗುರುತಿಸಿ (ಇಚ್ಛಿಸಿದಲ್ಲಿ) ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ ನಿಗಮಕ್ಕೆ ಸಲ್ಲಿಸುವಂತೆ ಕೋರಲಾಗಿರುತ್ತದೆ. ಸದರಿ ಪತ್ರಕ್ಕೆದುರಾಗಿ ಸದರಿ ಕೋಶದಿಂದ ನಿಗಮಕ್ಕೆ ಯೋಜನಾ ವರದಿ/ಪ್ರಸ್ತಾವನೆ ಸಲ್ಲಿಸಲ್ಪಡುವುದನ್ನು ನಿರೀಕ್ಷಿಸಲಾಗುತ್ತಿದೆ. ಇದರಿಂದಾಗಿ ಪ್ರಸ್ತುತ ಕಾರ್ಮಿಕರಿಗಾಗಿಯೇ ಪ್ರತ್ಯೇಕವಾದ ಕಾಲೋನಿಯನ್ನು ಸದರಿ ಮತಕ್ಷೇತ್ರದಲ್ಲಿ ನಿರ್ಮಿಸಲು ವಸತಿ ಇಲಾಖೆಯು ಉದ್ದೇಶಿಸಿರುವುದಿಲ್ಲವೆಂದು ವಸತಿ ಇಲಾಖೆಯು ಮಾಹಿತಿ ನೀಡಿದೆ.
(ಉ)	ವಿವಿಧ ವರ್ಗಗಳಲ್ಲಿ ಕಾರ್ಮಿಕರ ನೋಂದಣಿಗಾಗಿ ಇಲಾಖೆಯು ಯಾವ ಕ್ರಮ ಕೈಗೊಂಡಿದೆ; ನೋಂದಣಿಯ ಸಮಯದಲ್ಲಿ ಸರ್ವರ್ ತೊಂದರೆ, ನೆಟ್‌ವರ್ಕ್‌ಗಳ ಅನಾನುಕೂಲತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ?	**ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ** ಈ ಮಂಡಳಿಯಲ್ಲಿ ನೋಂದಣಿಯನ್ನು ಇ-ಆಡಳಿತ ಇಲಾಖೆಯ ಸೇವಾ ಸಿಂಧು ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದೆ. ಕಾರ್ಮಿಕರಿಗೆ ನೋಂದಣಿ ಮಾಡಿಸಿಕೊಳ್ಳಲು ಯಾವುದೇ ತಾಂತ್ರಿಕ ತೊಂದರೆಯಾದಲ್ಲಿ ಸದರಿ ಅಂಶವನ್ನು ಇ-ಆಡಳಿತ ಇಲಾಖೆಯ ಮೂಲಕ ಸರಿಪಡಿಸಲಾಗುತ್ತದೆ. **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ** ಈ ಮಂಡಳಿಯು ಜಾರಿಗೊಳಿಸುತ್ತಿರುವ "ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ" ಯಡಿ, 11 ವರ್ಗಗಳ ಅಸಂಘಟಿತ ಕಾರ್ಮಿಕರಾದ "ಹಮಾಲರು, ಗೃಹ ಕಾರ್ಮಿಕರು, ಟೈಲರ್ಸ್, ಚಿಂದಿ ಆಯುವವರು, ಮೆಕ್ಯಾನಿಕ್ಸ್, ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿ

		ಕಾರ್ಮಿಕರನ್ನು ನೋಂದಣಿ ಮಾಡಿಕೊಂಡು ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದೆ. ಮೇಲ್ಕಂಡ ವರ್ಗಗಳ ಅಸಂಘಟಿತ ಕಾರ್ಮಿಕರು ನೋಂದಣಿಗಾಗಿ ಸ್ಥಳೀಯ ಹಿರಿಯ/ಕಾರ್ಮಿಕ ನಿರೀಕ್ಷಕರು ಅಥವಾ ಜಿಲ್ಲಾ ಕಾರ್ಮಿಕ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ. ಈ ದಿಸೆಯಲ್ಲಿ ಉಂಟಾಗಬಹುದಾದ ಸರ್ವರ್ ಸಮಸ್ಯೆಗಳು ಮತ್ತು ನೆಟ್‌ವರ್ಕ್ ಸಮಸ್ಯೆಗಳ ನಿವಾರಣೆಗಾಗಿ ಕ್ರಮಕೈಗೊಳ್ಳಲಾಗಿದೆ. **ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ** ಈ ಮಂಡಳಿಯಲ್ಲಿ ಸಂಘಟಿತ ಕಾರ್ಮಿಕರಿಗಾಗಿ ಕಲ್ಯಾಣ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಮಂಡಳಿಗೆ 20:40 ರ ಅನುಪಾತದಲ್ಲಿ ವಂತಿಕೆ ಪಾವತಿಸುವ ಕಾರ್ಮಿಕರಿಗೆ ಕಲ್ಯಾಣ ಯೋಜನೆಗಳಡಿ ಸೌಲಭ್ಯಗಳನ್ನು ನೀಡಲಾಗುವುದು. ಮಂಡಳಿ ವತಿಯಿಂದ ಸಂಘಟಿತ ಕಾರ್ಮಿಕರನ್ನು ನೊಂದಾಯಿಸುವ ವ್ಯವಸ್ಥೆ ಇರುವುದಿಲ್ಲ.

ಕಡತ ಸಂಖ್ಯೆ: LD-LSI/370/2021

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

Normally the staffing pattern of the hospitals are based on bed strength and the speciality services being provided. The cost effectiveness of hospital services requires, that the facilities and staff are provided as per the need and disease profile of the catchment area of the hospital. Following guidelines may be observed for setting up of hospitals.

1.	50 bedded hospital	50,000 IP family units
2.	100 bedded hospital	1,00,000 IP family units
3.	150 bedded hospital	1,50,000 IP family units
4.	200 bedded hospital	2,00,000 IP family units
5.	250 bedded hospital	2,50,000 IP family units
6.	300 bedded hospital	3,00,000 IP family units
7.	400 bedded hospital	4,00,000 IP family units
8.	500 bedded hospital	5,00,000 IP family units
9.	600 bedded hospital	6,00,000 IP family units

Note:- Since 50 bed hospitals are not a viable proposition, as far as possible, the facility provision should aim at Diagnostic Centre with round the clock emergency facilities with well established communication, transport and referral facilities in smaller I.P. family unit areas.

1. The staff norms given for various sizes of hospitals are the minimum basic guidelines for these hospitals. However, additional sanctions for staff in any department may be given based on the workload.
2. Emergency services should be available in all ESI hospitals and in one or more ESI dispensaries in the area depending upon the size of the centre.
3. In case where a hospital is upgraded by addition of beds making the total number of beds in it higher than that for which staff has been sanctioned and no norms are found to have been laid down for such upgraded hospital, the staff may be sanctioned in proportion to the extra beds provided, based on the norms of the staff already prescribed by the Corporation for the next lower/higher bed strength. When the bed strength of any hospital is increased by 50 or 100 beds etc., the minimal additional staff indicated for that size of hospital may be added to the existing staff strength of nursing staff will be worked out as per SIU norms for various areas and care should be taken to see that total number of specialists in other than basic specialities are posted as per workload.
4. Specialists should preferably be recruited on full time basis. Part time specialists should only be recruited when full time specialists are not available.

5. Training reserve of medical and para-medical posts, not exceeding 5% of the regular sanctioned posts in each cadre, may be created for training/higher studies of the incumbents. In addition 5% leave reserve posts may be considered.
6. When an ESI hospital requires House Surgeons/Junior Residents, the appointments of House Surgeons/Junior Residents will be over and above the sanctioned strength of Medical Officers.
7. Posts of Senior Residents can be created in any hospital as per requirement and justifications. However, if GDOs are not available Senior Residents may be posted against the GDMOs till regular GDOs are available.
8. Whenever an additional facility like Dialysis, Trauma Centre, ICU, ICCU, NICU, PICU, Histopathology, Cytopathology, Harmonal assays or any other speciality/subspeciality/ superspeciality etc. is developed in the existing hospital, provision of additional staff should be considered accordingly.
9. One Medical Officer and minimal para-medical staff should be provided in each ESI annexe. A small medical store should be attached to each annexe.
10. Blood bank staff will be provded as per norms and guidelines laid down by the Drug Controller Officers of respective State Govts.
11. For drugs distribution from Hospitals additional Pharmacists may be sanctioned.
12. Various categories of staff when promoted under assured career promotion schemes, will continue to do the same duties.
13. O.T. Technicians/Assistants will also perform duties as plaster technicians/assistants and Manifold Room duties.
14. The number of sweepers/security personnel to be provided shall be decided keeping in view the layout of facilities, area involved and the workload. Thus the number of such staff may vary from Hospital to hospital and dispensary to dispensary.
15. In all ESI Hospitals with 100 or more beds, mechanised laundry should be provided as part of capital construction. In small hospitals, arrangements be made for washing in any steam laundry if available in the area of else dhobi ghat may be provided/local contractual arrangements may be made. for washing linen.
16. Provision may be made in the construcion norms for installation of air coolers/window AC/Central AC in the ESI Hospitals depending on the climatic condition of the area.
17. While constructing the hospitals provision of Central Gas Pipeline must be made
18. Colour Television and Radio sets for Nurses Hostel/Doctors Hostel/Recreation/Common Rooms of hospitals may be provided.

19. Public Address system should be provided in important areas of the hospitals.
20. Necessary modifications can be made in the provision of staff/equipment in critical areas of the hospital like casualty/emergency, operation theatres, laboratories, radiology etc. depending on the workload.
21. Each hospital should have a conference hall and a committee room properly equipped with necessary furniture and audio visual aids. Airconditioners/Coolers should also be provided.
22. One satelite ODC in one major hospital of each State may be developed as per the disease profile of the State.
23. Staff for Nurses Hostel/Doctors Hostel (if provided)-should be given on contractual Basis. Subsidies may be given as per Government of India Rules.
24. The strength in the norms for different departments/specialities are maximum limits and are to be provided keeping in view the occupancy/workload of the hospital, keeping in view the economy measures issued by Govt. of India from time to time.
25. Wherever the norms indicate provision of additional specialists for round the clock facilities, the total strength will be sanctioned when round the clock facilities are established.

— XXX —

Headquarters Office
EMPLOYEES' STATE INSURANCE CORPORATION
Panchdeep Bhawan: C.I.G. Road, New Delhi – 110002
E-mail: [illegible] Website: www.esic.nic.in

No. U/25/11/2/2011-Med.I Dated: 26.03.2019

To,

Principal Secretary,
Labour/Health Department (dealing with ESI Scheme)
Govt. of all States/UTs.

Sub: In principle approval for upgradation of ESI dispensary into 30 bedded ESI Hospital/ setting up of 30 bedded ESIC Hospitals across the country

Madam/Sir,

As you are aware, ESI Corporation in its 167th meeting held on 18.12.2015 granted in principle approval for upgradation of ESI dispensary into 6/30 bedded ESI Hospitals. In this regard, this office also communicated vide a letter of even number dated 24.2.2018 regarding revision of norms for upgradation of ESI dispensaries into 6 bedded unit. However, the norms for 30 bedded ESI Hospital could not be finalized in view of viability issue of such unit.

Accordingly, Hon'ble Chairman, ESIC constituted a sub-committee for reconsideration of policy for upgradation of ESI dispensaries into 30 bedded ESI Hospital. The report of said Sub-Committee was placed in 177th meeting of ESI Corporation held on 19.02.19 and the same has been accorded approval of ESI Corporation.

The salient features of the approved report are, as under:

- Since there is no health care delivery institution from 6 bedded ESI unit to 100 bedded hospital to cater to the health care need of ESI beneficiaries in terms of indoor facilities, upgradation/setting up of 30 bedded ESI Hospital would serve the objective of providing health care at the door step of IP/beneficiaries.
- Such 30 bedded ESI Hospitals, to provide curtailed medical care services to the 20,000 IP population in a plain area or 15,000 IP in North East Region/hilly area, so as to ensure the optimum utilization of infrastructure and manpower.

Yours faithfully

(Dr. Naveen Saxena)
OSD, Medical

Copy to: [illegible]

1. [illegible] to [illegible] Minister of Labour & Employment, Govt. of India.
2. [illegible] to [illegible] Ministry of Labour & Employment, Govt. of India.
3. All Members [illegible] Corporation [illegible] Standing Committee
4. SS4 Section, Ministry of Labour & Employment, Govt. of India.
5. All [illegible] ESIS of State [illegible] Scheme, Govt. of ....
6. All Medical Superintendent, ESI Hospital
7. All RDs/JDs i/c Regional Offices/SROs, ESI Corporation
8. PPS/PS to DG/FC/MCs/ICs/CF/DMCs, ESIC, Hqrs. Office.
9. All Divisional Heads/Branches, Hqrs. Office.
10. WCM with the request to upload in ESIC official website.
11. Rajbhasha Vibhag for translation.

Scanned with CamScanner

ದಿನಾಂಕ:31-01-2022 ರಂದು ಬೆಳಿಗ್ಗೆ 10.30 ಗಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ರವರ ಅಧ್ಯಕ್ಷತೆಯಲ್ಲಿ ಜರುಗಿದ ನಿರಾಶ್ರಿತರ ಪರಿಹಾರ ಕೇಂದ್ರ ಮಚ್ಚೆ-ಬೆಳಗಾವಿ ಜಮೀನನ್ನು, ಕಾರ್ಮಿಕ ಇಲಾಖೆಗೆ 100 ಹಾಸಿಗೆಗಳ ಸಾಮರ್ಥ್ಯದ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆಯ ನಿರ್ಮಾಣಕ್ಕೆ ನೀಡುವ ಸಂಬಂಧ ಜರುಗಿದ ಸಭೆಯ ನಡವಳಿಗಳು

ಸಭೆಗೆ ಹಾಜರಿದ್ದವರು

1. ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ — ಅಧ್ಯಕ್ಷರು
2. ಶ್ರೀಯುತ ಅಭಯ ಪಾಟೀಲ, ಮಾನ್ಯ ಶಾಸಕರು ಬೆಳಗಾವಿ ದಕ್ಷಿಣ
3. ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಳಗಾವಿ
4. ಸಹಾಯಕ ನಿರ್ದೇಶಕರು ಗ್ರೇಡ್-1 ಸಮಾಜ ಕಲ್ಯಾಣ ಇಲಾಖೆ, ಬೆಳಗಾವಿ
5. ತಾಲ್ಲೂಕು ವೈದ್ಯಾಧಿಕಾರಿಗಳು, ಬೆಳಗಾವಿ
6. ಅಧೀಕ್ಷಕರು ನಿರಾಶ್ರಿತರ ಪರಿಹಾರ ಕೇಂದ್ರ ಮಚ್ಚೆ-ಬೆಳಗಾವಿ

ಸಭೆಗೆ ಆಗಮಿಸಿದ ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ, ಶ್ರೀಯುತ ಅಭಯ ಪಾಟೀಲ, ಮಾನ್ಯ ಶಾಸಕರು ಬೆಳಗಾವಿ ದಕ್ಷಿಣ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಜಂಟಿ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಬೆಳಗಾವಿ ರವರು ಸಭೆಗೆ ಸ್ವಾಗತಿಸಿ, ಸಮಾಜ ಕಲ್ಯಾಣ ಇಲಾಖೆ ಅಧೀನದ ನಿರಾಶ್ರಿತರ ಪರಿಹಾರ ಕೇಂದ್ರ ಮಚ್ಚೆ-ಬೆಳಗಾವಿ ಇಲ್ಲಿಯ ಜಮೀನನ್ನು ಕಾರ್ಮಿಕ ಇಲಾಖೆಗೆ ಆಸ್ಪತ್ರೆ ನಿರ್ಮಾಣಕ್ಕಾಗಿ ನೀಡುವ ಸಂಬಂಧ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿ ರವರಲ್ಲಿ ವಿನಂತಿಸಿದ್ದರು.

ಶ್ರೀಯುತ ಅಭಯ ಪಾಟೀಲ, ಮಾನ್ಯ ಶಾಸಕರು ಬೆಳಗಾವಿ ದಕ್ಷಿಣ ರವರು ಮಾತನಾಡುತ್ತಾ ತಮ್ಮ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಉದ್ಯಮಬಾಗ, ಮಚ್ಚೆ, ಅನಗೋಳ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 1000 ಸಾವಿರಕ್ಕಿಂತಲೂ ಹೆಚ್ಚು ಸಂಖ್ಯೆಯ ವಿವಿಧ ಬಗೆಯ ಕಾರ್ಖಾನೆಗಳಿದ್ದು, ಸುಮಾರು 30,000 ಕ್ಕಿಂತಲೂ ಹೆಚ್ಚು ಕಾರ್ಮಿಕ ಬಾಂಧವರುಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

ಅವರ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರು ವಿವಿಧ ಸೌಲಭ್ಯಗಳಿಂದ [illegible] ವಂಚಿತರಾಗಿದ್ದು, ಅವರಿಗೆ ಆರೋಗ್ಯ ಸೌಲಭ್ಯವನ್ನು ಕಲ್ಪಿಸುವ ದೃಷ್ಟಿಯಿಂದ 100 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಯನ್ನು ನಿರ್ಮಿಸುವುದು ಅವಶ್ಯಕವಾಗಿದ್ದು, ಇದರಿಂದ ಕಾರ್ಮಿಕ ಬಾಂಧವರುಗಳಿಗೆ ಹಾಗೂ ಅವರುಗಳ ಕುಟುಂಬದವರಿಗೆ ಇದರಿಂದ ಬಹಳಷ್ಟು ಅನುಕೂಲವಾಗಲಿದೆ. ಈ ಆಸ್ಪತ್ರೆಯ ನಿರ್ಮಾಣಕ್ಕೆ ಸುಮಾರು [illegible] ಎಕರೆ ಜಮೀನಿನ ಅವಶ್ಯಕತೆ ಇದ್ದು, ನಿರಾಶ್ರಿತರ ಪರಿಹಾರ ಕೇಂದ್ರ ಮಚ್ಚೆ-ಬೆಳಗಾವಿ ಕೇಂದ್ರದ ಜಮೀನನ್ನು [illegible] ಎಕರೆ ಜಮೀನು ಒದಗಿಸುವಂತೆ ಮಾನ್ಯ ಶಾಸಕರು ಸಭೆಗೆ ತಿಳಿಸಿದರು.

ಈ ಕುರಿತು ಸಭೆಯಲ್ಲಿ ಹಾಜರಿದ್ದ ಜಂಟಿ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಬೆಳಗಾವಿ ರವರು ಮಾತನಾಡುತ್ತಾ, ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ 41.06 ಎಕರೆ ಇದ್ದು, ಇದರಲ್ಲಿ ಈಗಾಗಲೇ [illegible] ಇಲಾಖೆಗಳಿಗೆ ಹಂಚಿಕೆ ಮಾಡಲಾಗಿದೆ. ನಿರಾಶ್ರಿತರ ಕೇಂದ್ರಕ್ಕೆ 19.21 ಎಕರೆ ಜಮೀನು ಉಳಿದಿದ್ದು, ಜಮೀನಿನ ದಾಖಲೆ ಮತ್ತು ನಕ್ಷೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಮಾನ್ಯ ಶಾಸಕರು ಬೆಳಗಾವಿ ದಕ್ಷಿಣ ರವರ [illegible] ನೀಡಿದರು. ಅಧೀಕ್ಷಕರು ನಿರಾಶ್ರಿತರ ಪರಿಹಾರ ಕೇಂದ್ರ ಮಚ್ಚೆ-ಬೆಳಗಾವಿ ರವರು ಮಾತನಾಡುತ್ತಾ [illegible]

ಶಾಸಕರು ಹಲವಾರು ಬಾರಿ ಈ ಕುರಿತು ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ ಚರ್ಚಿಸಿದ್ದಾರೆ. ಇಲ್ಲಿರುವ ಜಮೀನಿನ ಸರ್ವೆ ನಂ.467 ಮತ್ತು ಸರ್ವೆ ನಂ.489(ಬಿ) ಗಳಲ್ಲಿ ನಿರಾಶ್ರಿತರ ಪರಿಹಾರ ಕೇಂದ್ರದ ಕಟ್ಟಡಗಳಿದ್ದು, ಅದರಲ್ಲಿ ಪುನರ್ವಸತಿ ಚಟುವಟಿಕೆಗಳು ನಡೆಯುತ್ತವೆ ಹಾಗೂ ಇದೇ ಸರ್ವೆ ನಂಬರ ಜಮೀನಿನಲ್ಲಿ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಿರುತ್ತವೆ. ಸರ್ವೆ ನಂ.469 ರಲ್ಲಿ ಒಟ್ಟು 11.12 ಎಕರೆ ಜಮೀನು ಇದ್ದು, ಇದರಲ್ಲಿ 5.00 ಎಕರೆ ಜಮೀನಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳು ಹಾಗೂ ವಸತಿ ಶಾಲೆ ಕಟ್ಟಡಗಳು ಇರುತ್ತವೆ. ಉಳಿದಿರುವ 6.12 ಎಕರೆ ಜಮೀನು ಖಾಲಿ ಇದ್ದು, ಸದರಿ ಜಮೀನು ಸಾರ್ವಜನಿಕ [illegible] ರಸ್ತೆಗೆ ಹೊಂದಿಕೊಂಡತೆ ಇದ್ದು, ಸದರಿ ಜಮೀನನ್ನು ಕಾರ್ಮಿಕ ಇಲಾಖೆಗೆ 100 ಹಾಸಿಗೆಗಳ ಆಸ್ಪತ್ರೆ ನಿರ್ಮಿಸುವ ಸಲುವಾಗಿ ಜಮೀನನ್ನು ಒದಗಿಸಬಹುದಾಗಿದೆ ಎಂದು ಸಭೆಗೆ ತಿಳಿಸಿದರು.

ಶ್ರೀ ಅಭಯ ಪಾಟೀಲ, ಮಾನ್ಯ ಶಾಸಕರು ಬೆಳಗಾವಿ ದಕ್ಷಿಣ ರವರು ಮಾತನಾಡುತ್ತಾ, ಕಾರ್ಮಿಕರ ಹಿತದೃಷ್ಟಿಯಿಂದ ಸುಸಜ್ಜಿತ ಆಸ್ಪತ್ರೆ ನಿರ್ಮಿಸಬೇಕಾಗಿದ್ದು, ಈಗಾಗಲೆ ಜಮೀನು ಹುಡುಕಲು [illegible] ವಿಳಂಬವಾಗಿದ್ದು 5.00 ಎಕರೆ ಜಮೀನನ್ನು ಜಿಲ್ಲಾ ಮಟ್ಟದಲ್ಲಿಯೇ ಕೂಡಲೇ ಮಂಜೂರು ಮಾಡಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳಲ್ಲಿ ಕೋರಿದರು.

ಈ ಕುರಿತು ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ರವರು ಮಾತನಾಡುತ್ತಾ, ಕಾರ್ಮಿಕ ರಾಜ್ಯ ವಿಮಾ ಸಂಸ್ಥೆಯ 100 ಹಾಸಿಗೆ ಸಾಮರ್ಥ್ಯವುಳ್ಳ ಸುಸಜ್ಜಿತ ಆಸ್ಪತ್ರೆ ನಿರ್ಮಾಣಕ್ಕಾಗಿ 5.00 ಎಕರೆ ಜಮೀನನ್ನು ಕಾರ್ಮಿಕ ಇಲಾಖೆಗೆ ಜಿಲ್ಲಾ ಮಟ್ಟದಲ್ಲಿ ನಿಯಮಾನುಸಾರ ಮಂಜೂರಾತಿ ನೀಡುವುದಾಗಿ ಸಭೆಗೆ ತಿಳಿಸಿ, ಈ ಕುರಿತು ಅಗತ್ಯ ಕ್ರಮ ಕೈಕೊಳ್ಳುವಂತೆ ಜಂಟಿ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಬೆಳಗಾವಿ ಹಾಗೂ ಅಧೀಕ್ಷಕರು ನಿರಾಶ್ರಿತರ ಪರಿಹಾರಕೇಂದ್ರ ಮಚ್ಛೆ-ಬೆಳಗಾವಿ ರವರಿಗೆ ಸೂಚಿಸಿದರು.

ಕೊನೆಯಲ್ಲಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಜಿಲ್ಲಾಧಿಕಾರಿಗಳು, ಬೆಳಗಾವಿ

ಸಂಖ್ಯೆ:[illegible]:2021-22

ದಿನಾಂಕ:07/02/2022

ಪ್ರತಿಯನ್ನು:

1) ಮಾನ್ಯ ಶಾಸಕರು ಬೆಳಗಾವಿ ದಕ್ಷಿಣರವರಿಗೆ ಮಾಹಿತಿಗಾಗಿ ಸಲ್ಲಿಸಿದೆ
2) ಕಾರ್ಯದರ್ಶಿಗಳು, ಕೇಂದ್ರ ಪರಿಹಾರ ಸಮಿತಿ ಬೆಂಗಳೂರು ರವರಿಗೆ ಮಾಹಿತಿಗಾಗಿ
3) ಜಂಟಿ ನಿರ್ದೇಶಕರು, ಸಮಾಜಕಲ್ಯಾಣ ಇಲಾಖೆ, ಬೆಳಗಾವಿ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
4) ಸಹಾಯಕ ನಿರ್ದೇಶಕರು ಗ್ರೇಡ್-1 ಸಮಾಜಕಲ್ಯಾಣ ಇಲಾಖೆ, ಬೆಳಗಾವಿ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
5) ತಾಲ್ಲೂಕು ದಂಡಾಧಿಕಾರಿಗಳು, ಬೆಳಗಾವಿ ಇವರಿಗೆ ಮಾಹಿತಿಗಾಗಿ
6) ಅಧೀಕ್ಷಕರು ನಿರಾಶ್ರಿತರ ಪರಿಹಾರಕೇಂದ್ರ ಮಚ್ಛೆ-ಬೆಳಗಾವಿ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ

ಜಿಲ್ಲಾಧಿಕಾರಿಗಳು, ಬೆಳಗಾವಿ

ವಿಧಾನ ಸಭೆ ಮಾನ್ಯ ಸದಸ್ಯರಾದ ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 525 ಕ್ಕೆ ಅನುಬಂಧ-1

ಮಂಡಳಿಯ ನೋಂದಾಯಿತ ಫಲಾನುಭವಿಗಳಿಗೆ ಸಿಗುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳು

1. **ಪಿಂಚಣಿ ಸೌಲಭ್ಯ:** ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆಮಾಸಿಕ ರೂ.2,000/-
2. **ಕುಟುಂಬ ಪಿಂಚಣಿ ಸೌಲಭ್ಯ:** ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ ರೂ.1000/-
3. **ದುರ್ಬಲತೆ ಪಿಂಚಣಿ:** ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃಅಂಗವಿಕಲತೆ ಹೊಂದಿದ್ದರೆ ಮಾಸಿಕ ರೂ.2,000/- ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ.2,00,000/- ದವರೆಗೆಅನುಗ್ರಹ ರಾಶಿ ಸಹಾಯಧನ.
4. **ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ ಮರುಪಾವತಿ ಸೌಲಭ್ಯ**(ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)
5. **ಟ್ರೈನಿಂಗ್-ಕಮ್-ಟೂಲ್‌ಕಿಟ್‌ಸೌಲಭ್ಯ (ಶ್ರಮ ಸಾಮರ್ಥ್ಯ)** : ರೂ.30,000/- ವರೆಗೆ
6. **ಶ್ರಮ ಸಂಸಾರ ಸಾಮರ್ಥ್ಯತರಬೇತಿ ಸೌಲಭ್ಯ:** ನೋಂದಾಯಿತ ಫಲಾನುಭವಿಯಅವಲಂಬಿತರಿಗೆ(ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)
7. **ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ):** ರೂ.2,00,000/- ದವರೆಗೆ ಮುಂಗಡ ಸೌಲಭ್ಯ
8. **ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್):** ಮಹಿಳಾ ಫಲಾನುಭವಿಯ ಮೊದಲ ಎರಡು ಮಕ್ಕಳಿಗೆ ಹೆಣ್ಣು ಮಗುವಿನ ಜನನಕ್ಕೆರೂ. 30,000/- ಮತ್ತುಗಂಡು ಮಗುವಿನ ಜನನಕ್ಕೆರೂ.20,000/-
9. **ಶಿಶು ಪಾಲನಾ ಸೌಲಭ್ಯ:**
10. **ಅಂತ್ಯಕ್ರಿಯೆ ವೆಚ್ಚ** :ರೂ.4,000/- ಹಾಗೂ ಅನುಗ್ರಹ ರಾಶಿ ರೂ.50,000/-ಸಹಾಯಧನ
11. **ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ):** ಫಲಾನುಭವಿಯಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:

ಕ್ರ.ಸಂ	ತರಗತಿ (ಉತ್ತೀರ್ಣಕ್ಕೆ)	ವಾರ್ಷಿಕ ಸಹಾಯಧನ	
		ಗಂಡು	ಹೆಣ್ಣು
1.	ನರ್ಸರಿ	3,000	4,000
2.	1 ರಿಂದ 4ನೇ ತರಗತಿ	3,000	4,000
3.	5 ರಿಂದ 8ನೇ ತರಗತಿ	5,000	6,000
4.	9 ಹಾಗೂ 10ನೇ ತರಗತಿ	10,000	11,000
5.	ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ	10,000	14,000
6.	ಐಟಿಐ	12,000	15,000
7.	ಪದವಿ ಪ್ರತಿ ವರ್ಷಕ್ಕೆ	15,000	20,000
8.	ಸ್ನಾತಕೋತ್ತರ ಪದವಿ ಸೇರ್ಪಡೆಗೆ	20,000	20,000
	ಪ್ರತಿ ವರ್ಷಕ್ಕೆ	20,000	25,000
9.	ಇಂಜನಿಯರಿಂಗ್‌ಕೋರ್ಸ್ ಬಿಇ/ ಬಿ.ಟೆಕ್ ಸೇರ್ಪಡೆಗೆ	25,000	25,000

	ಪ್ರತಿ ವರ್ಷಕ್ಕೆ	25,000	30,000
10.	ವೈದ್ಯಕೀಯಕೋರ್ಸ್‌ಗೆ ಸೇರ್ಪಡೆಗೆ	30,000	30,000
	ಪ್ರತಿ ವರ್ಷಕ್ಕೆ	40,000	50,000
11.	ಡಿಪ್ಲೋಮಾ	15,000	20,000
12.	ಎಂ.ಟೆಕ್ / ಎಂ.ಇ	30,000	35,000
13.	ಎಂ.ಡಿ (ವೈದ್ಯಕೀಯ)	45,000	55,000
14.	ಪಿಹೆಚ್‌ಡಿ (ಪ್ರತಿ ವರ್ಷಕ್ಕೆ) ಗರಿಷ್ಠ 03 ವರ್ಷ	25,000	30,000

12. **ವೈದ್ಯಕೀಯ ಸಹಾಯಧನ (ಕಾರ್ಮಿಕಆರೋಗ್ಯ ಭಾಗ್ಯ):** ನೋಂದಾಯಿತ ಫಲಾನುಭವಿ ಹಾಗೂ ಅವರಅವಲಂಭಿತರಿಗೆರೂ.300/- ರಿಂದರೂ.10,000/-ವರೆಗೆ
13. **ಅಪಘಾತ ಪರಿಹಾರ:** ಮರಣ ಹೊಂದಿದ್ದಲ್ಲಿರೂ.5,00,000/-, ಸಂಪೂರ್ಣ ಶಾಶ್ವತದುರ್ಬಲತೆಯಾದಲ್ಲಿ **ರೂ.2,00,000/- ಮತ್ತುಭಾಗಶಃ** ಶಾಶ್ವತದುರ್ಬಲತೆಯಾದಲ್ಲಿ **ರೂ.1,00,000/-**
14. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕಚಿಕಿತ್ಸಾ ಭಾಗ್ಯ):** ಹೃದ್ರೋಗ, ಕಿಡ್ನಿಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದತೊಂದರೆಗೆ ಸಂಬಂಧಿತಚಿಕಿತ್ಸೆ, ಮೂತ್ರ ಪಿಂಡವಲ್ಲಿನಕಲ್ಲುತೆಗೆಯುವಚಿಕಿತ್ಸೆ, ಮೆದುಳಿನ ರಕ್ತಸ್ರಾವದಚಿಕಿತ್ಸೆ, ಅಲ್ಸರ್‌ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್‌ಚಿಕಿತ್ಸೆ, ಇತರೆಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ **ರೂ.2,00,000/-ವರೆಗೆ**
15. **ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್):** ಫಲಾನುಭವಿ ಅಥವಾಅವರಇಬ್ಬರು ಮಕ್ಕಳ ಮದುವೆಗೆತಲಾ ರೂ.50,000/-
16. **ಫಲಾನುಭವಿಗಳ ಮಕ್ಕಳು ಐಎಎಸ್ / ಕೆಎಎಸ್ ಪರಿಕ್ಷೆಗಳಲ್ಲಿ ಭಾಗವಹಿಸಲು ತರಭೇತಿ**
17. **ಬಿಎಂಟಿಸಿ ಬಸ್ ಪಾಸ್ ಸೌಲಭ್ಯ:** ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತಕಟ್ಟಡಕಾರ್ಮಿಕರಿಗೆ
18. **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ:** ರಾಜ್ಯದಾದ್ಯಂತ ವಿದ್ಯಾಭ್ಯಾಸದಲ್ಲಿತೊಡಗಿರುವ ನೋಂದಾಯಿತಕಾರ್ಮಿಕರಇಬ್ಬರು ಮಕ್ಕಳಿಗೆ (ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)
19. **ತಾಯಿ ಮಗು ಸಹಾಯ ಹಸ್ತ:** ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕರೂ.6,000/- ಗಳ ಸಹಾಯಧನ.

ಆಯುಕ್ತರು
ಕಾರ್ಮಿಕ ಇಲಾಖೆ